ಫೆಬ್ರವರಿ 1998 ಮಾಸ ಪತ್ರಿಕೆ ರೂ. 10

ಬಿಸಿಲ ಬದುಕು

•ವಾಣಿಜ್ಯ •ವಿಕಾಸ •ಮಾಹಿತಿ •ಸಂಪರ್ಕ

ಹೊಸ ಲೇಖನಮಾಲೆ

ನಿಗೂಢ ಜಗತ್ತು!



ಧಾರವಾಡದ ಚಿನ್ನದ ಜಿಂಕೆ

ಣೆಯರ

ಸ ಂದರ್ಯ

MBA



ಬರಲಿದೆ!

ಬಿಸಿಲ ಬದುಕು

ಉಗಾದಿ ವಿಶೇಷಾಂಕ

ಇದು ಎಲ್ಲ ವಿಶೇಷಾಂಕಗಳಂತೆ ಅಲ್ಲ!
ಇದು ಓದುಗರಿಂದ ಓದುಗರಿಗಾಗಿ ರೂಪುಗೊಳ್ಳಲಿರುವ ಓದುಗರ ವಿಶೇಷಾಂಕ!
ಕತೆ, ಕವನ, ಹಾಸ್ಯ ಬರಹಗಳೊಂದಿಗೆ ನಿಜಕ್ಕೂ 'ವಿಶೇಷ' ಲೇಖನಗಳು.
'ಬದುಕು' ಪತ್ರಿಕೆ ಧೋರಣೆಯಂತೆ ಇಲ್ಲಿಯೂ ಮಾಹಿತಿ-ಸ್ಫೂರ್ತಿಗೆ ಆದ್ಯತೆ.
ಹೊಳಪು ಕಾಗದದಲ್ಲಿ ಬಹುವರ್ಣದ ಮುದ್ರಣ, ಮನಸೂರೆಗೊಳ್ಳುವ ವಿನ್ಯಾಸ.

ಬರಹಗಳಿಗೆ ಆಹ್ವಾನ

- ವಿಶೇಷಾಂಕದಲ್ಲಿ ಪ್ರಕಟಣೆಗಾಗಿ ಕಥೆ, ಕವನ, ಲೇಖನ, ಬಿಡಿ ಬರಹಗಳನ್ನು ಕಳಿಸಬಹುದು.
- ನಿಮ್ಮ ಊರಿನ, ತಾಲೂಕಿನ, ಜಿಲ್ಲೆಯ ವೈಶಿಷ್ಟ್ಯ; ಜನಜೀವನದ ರೀತಿ-ರಿವಾಜು; ಉಡುಗೆ, ಅಡುಗೆ, ಮದುವೆ, ಜಾತ್ರೆ, ಹಬ್ಬಗಳ ಬಗ್ಗೆಯೂ ಬಿಡಿಬಿಡಿಯಾಗಿ ಬರೆದು ಕಳಿಸಿ.
- ಇಂತಹದೇ ವಿಷಯವೆಂಬ ನಿರ್ಬಂಧವಿಲ್ಲ. ವಿಶೇಷಾಂಕದಲ್ಲಿ ಏನೆಲ್ಲಾ ಪ್ರಕಟವಾಗಬೇಕೆಂದು ನೀವು ಬಯಸುತ್ತೀರೋ, ಅವೆಲ್ಲವನ್ನೂ ಬರೆದು ಕಳಿಸಿ.

ಮುಚ್ಚಿಟ್ಟ ಪ್ರಸಂಗ

ಪ್ರತಿಯೊಬ್ಬರ ಜೀವನದಲ್ಲಿ ಯಾರಿಗೂ ಹೇಳಲಾಗದ, ಹೇಳಬಾರದ ಘಟನೆಯೊಂದು ನಡೆದಿರುತ್ತದೆ. ಈ ಘಟನೆಗೆ ನೀವೇ ಕಾರಣರಾಗಿ ಮನದಲ್ಲೇ ಪಶ್ಚಾತ್ತಾಪ ಪಡುತ್ತಿರಬಹುದು ಅಥವಾ ಇನ್ನೊಬ್ಬರಿಂದ ಉಂಟಾದ ಇಂಥ ಪ್ರಸಂಗದಿಂದ ನೀವು ನೋವು ಅನುಭವಿಸಿರಬಹುದು. ಇಂಥ ಘಟನೆ ಬಗ್ಗೆ ಅರ್ಧ ಪುಟದಲ್ಲಿ ನಿಮ್ಮ ಮನಸ್ಸು ಬಿಚ್ಚಿಡಲು 'ಮುಚ್ಚಿಟ್ಟ ಪ್ರಸಂಗ'ದಲ್ಲಿ ಅವಕಾಶವಿದೆ. ನೀವು ನಿಮ್ಮ ಹೆಸರು ಊರನ್ನು ತಿಳಿಸುವುದು ಖಡ್ಡಾಯವೇನಲ್ಲ. ಕಾಲ್ಪನಿಕ ಹೆಸರಿನಲ್ಲಿ ಅಥವಾ ಅನಾಮಧೇಯರಾಗಿ ಬರೆಯಬಹುದು. ಸಮಯಾವಕಾಶ ಅತಿ ಕಡಿಮೆ ಇರುವುದರಿಂದ ಮೊದಲು ಬಂದ ಬರಹಗಳಿಗೆ ಮೊದಲ ಆದ್ಯತೆ ನೀಡಲಾಗುವುದು.

ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951, ಬಸವೇಶ್ವರನಗರ, ಬೆಂಗಳೂರು - 560 079

ಫೆಬ್ರವರಿ ೧೯೯೮ ಸಂಪುಟ ೧ ಸಂಚಿಕೆ ೮

ಬಿಸಿಲ ಬದುಕು ಮಾಸಪತ್ರಿಕೆ

• ವಾಣಿಜ್ಯ • ವಿಕಾಸ • ಮಾಹಿತಿ • ಸಂಪರ್ಕ

ಸಂಪಾದಕ
ಚಂದ್ರಕಾಂತ ವಡ್ಡು

ಸಂಪಾದಕೀಯ ನೆರವು
ಎಚ್.ಎಂ. ಪಂಡಿತಾರಾಧ್ಯ

ನಿರ್ವಹಣೆ
ಸಿ.ಪಿ. ಸುರೇಶ್

ಪ್ರಸಾರ
ವೈ.ಬಿ. ವಿಜಯಕುಮಾರ

ಜಾಹೀರಾತು
ಬಿ.ಎಸ್. ತಿಪ್ಪೇಸ್ವಾಮಿ
ಎಸ್. ಕಿರಣ್


ಅಕ್ಷರ ಜೋಡಣೆ
ಜಿ. ಸುರೇಶ್
ಆಶಾ ರಮೇಶ್

ಲೇಖಕರು :
ನಾರಾಯಣ ಎಂ. ಭಟ್
ಡಾ. ಆರತಿ ವೆಂಕಟೇಶ್
ಡಾ. ಟಿ.ಕೆ.ತಾಪಸ್
ಉಷಾ ನವರತ್ನರಾಮ್
ಡಾ. ಎಸ್.ಸಿ. ಶರ್ಮಾ
ಡಾ. ಸುನಂದಾ ಕುಲಕರ್ಣಿ
ಉತ್ತನೂರು ವ್ಯಾನ್ಸ್
ಸೂರ್ಯಕಾಂತ ಗುಣಕಿಮಠ
ಶಂಕರಗೌಡ ವೈ. ಪಾಟೀಲ
ಪುಷ್ಪಾ ಎಂ.ಕಮ್ಮಾರ
ದ.ರಾ. ಪುರೋಹಿತ ಕಲಾದಗಿ
ಮಹಾದೇವಪ್ಪ ಆವಿನ
ಡಾ. ಬಿ. ಶೇಷಾದ್ರಿ
ಟಿ.ಆರ್. ಚಂದ್ರಶೇಖರ
ಚಂದ್ರಕಾಂತ ಎಸ್.ಭಟ್
ವಸಂತ ಮುರ್ಡೇಶ್ವರ
ವೀರೇಶ್ ಯಂಗಟಿ

ಮುಖಪುಟ ಚಿತ್ರ
ಎಂ. ವಿಶ್ವನಾಥ್


ಮುಖಪುಟ ವಿನ್ಯಾಸ
ಚಂದ್ರಶೇಖರ ಗುಬ್ಬಿ

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079





ವಿದ್ಯೆ-ಉದ್ಯೋಗ



ಸ್ಥಿರ ಶೀರ್ಷಿಕೆಗಳು

Printed, Published and Owned by Chandrakanta Vaddu, 473, I Cross, I Block, III Stage, Near Water Tank Bus Stop, Basaveshwaranagar, Bangalore - 560 079. Tel : 080 3358198 Fax : 080 5091136 Pager : 9622 738638 Printed at M.N.S. Enterprises, Bhattarahalli, Old Madras Road, Bangalore - 49 Editor : Chandrakanta Vaddu

ಚಟರ್ಜಿ ಸರಿ

'ಹೇಳುತ್ತೀರಾ?' ಶೀರ್ಷಿಕೆಯಡಿ 'ವಂದೇ ಮಾತರಂ' ಗೀತೆಯ ರಚನೆಕಾರರು ಬಂಕಿಮಚಂದ್ರ ಚಟ್ಟೋಪಧ್ಯಾಯ ಎಂದಾಗಿದೆ. ಅದು ಚಟರ್ಜಿ ಎಂದಾಗಬೇಕಲ್ಲವೇ?

- ಎ.ಎಸ್. ಗೌಡರ, ನಲ್ಲೂರ

[ಹೌದು. - ಸಂ]

◆

ಮಹಿಳೆಯರ ಉಡುಪು

ನೈಟಿ ಪ್ರಿಯರಾದ ಸ್ತ್ರೀಯರಿಗೆ ಲೇಖನ ಪಾಠದಂತಿದೆ.

- ಎಸ್.ಬಿ. ಕಿಲ್ಲೇದಾರ, ಕೊಪ್ಪಳ

◆

'ಮಹಿಳೆಯರ ಉಡುಪು' ಕುರಿತ ಲೇಖನದೊಂದಿಗೆ ನನ್ನ ಪರಿಚಯ ಪ್ರಕಟಿಸಿದ್ದಕ್ಕಾಗಿ ವಂದನೆಗಳು. ಅದರಲ್ಲಿ ಪ್ರಸ್ತಾಪಿಸಿದಂತೆ ನಾನು ಆಯುರ್ವೇದ ವೈದ್ಯಳಲ್ಲ. ನಾನು ಬಿ.ಎಚ್.ಎಂ.ಎಸ್. ಡಿಗ್ರಿ ಮಾಡಿ ಹೋಮಿಯೋಪತಿ ವೈದ್ಯಕೀಯದಲ್ಲಿ ಚಿಕಿತ್ಸೆ ನೀಡುತ್ತಿದ್ದೇನೆ.

- ಡಾ. ಆರತಿ ವೆಂಕಟೇಶ್, ಬೆಂಗಳೂರು

◆

ವ್ಯಂಗ್ಯ ಚಿತ್ರ

ವ್ಯಂಗ್ಯ ಚಿತ್ರಗಳ ವಿಷಯ ಪ್ರಚಲಿತ ಸಂಗತಿ ಕುರಿತಾಗಿದ್ದರೂ ಒಂದು ತಿಂಗಳ ಕಾಲ ಹಳಸದಂತಿರಬೇಕು. IAS+ಮಹಿಳೆಯರ ಉಡುಪು Blend ಹಿತಮಿತವಾಗಿದೆ.

- ಕೆ. ಜಗದೀಶ್, ಬಳ್ಳಾರಿ

ವೈವಿಧ್ಯ - ವಿನ್ಯಾಸ

ಕನ್ನಡದಲ್ಲಿ ಇಂತಹದೊಂದು ಒಳ್ಳೆಯ ಆರೋಗ್ಯಕರ ಮಾಸಪತ್ರಿಕೆ ಹೊರಬರುತ್ತಿರುವುದನ್ನು ನೋಡಿ ಸಂತೋಷ ವಾಯಿತು.ಪತ್ರಿಕೆಯ ವಿನ್ಯಾಸ ಸುಂದರವಾಗಿದ್ದು, ವೈವಿಧ್ಯ ಮಯವಾದ ಲೇಖನಗಳನ್ನು ಹೊಂದಿರುವುದು ಪತ್ರಿಕೆಯ ಯಶಸ್ಸಿಗೆ ಕಾರಣವಾಗಿದೆ. ಇದು ಇತರೆಲ್ಲಾ ಪತ್ರಿಕೆಗಳಿಗಿಂತ ಬೇರೆಯಾಗಿದೆ.

- ಪ್ರೇಮಾ ಭಟ್, ಬೆಂಗಳೂರು

ನನ್ನ ಗೆಳತಿ 'ಬದುಕು' ತಂದುಕೊಟ್ಟಳು. ಭಾವನೆಗಳಿಗೆ ಸ್ಪಂದಿಸುವ ವಸ್ತುವೊಂದು ನಮ್ಮ ಕೈ ಸೇರಿದಂತಾಗಿದೆ.

- ವಿಮಲಾ ಎಸ್. ಕಲಾದಗಿ, ಧಾರವಾಡ

ಈ ಪತ್ರಿಕೆ ಓದಿದ ಮೇಲೆ ನಾನು ಯಾತಕ್ಕಾದರೂ ಇದುವರೆಗೆ 'ಬಿಸಿಲ ಬದುಕು' ಓದಲಿಲ್ಲ ಎನ್ನಿಸುತ್ತಿದೆ.

- ಮೃತ್ಯುಂಜಯ, ಕೊಪ್ಪಳ

ಕೊನೆಯ ಸಾರಿ

ಇದು ಕೊನೆಯ ಸಾರಿ ಪತ್ರ ಬರೆಯುತ್ತಿದ್ದೇನೆ. ಅಕಸ್ಮಾತ್ ನನ್ನ ಹೆಸರು ಪ್ರಕಟವಾಗದಿದ್ದರೆ 'ಬದುಕು' ಓದುವುದನ್ನು ಬಿಡುತ್ತೇನೆ. ಇದು ಗ್ಯಾರೆಂಟಿ.

- ಅನಿಲ್ ಮೇಗಳಗೇರಿ, ಧಾರವಾಡ

ವಿದ್ಯೆ ಮತ್ತು ಉದ್ಯೋಗದ ಬಗ್ಗೆ ಗ್ರಾಮೀಣ ಪ್ರದೇಶದ ಜನರಿಗೆ ಸರಿಯಾದ ಮಾಹಿತಿ ಸಿಗುವುದಿಲ್ಲ. ಈ ದೆಸೆಯಲ್ಲಿ 'ವಿದ್ಯೆ- ಉದ್ಯೋಗ' ನಿಜಕ್ಕೂ ಅಮೋಘ ಕೊಡುಗೆ.

- ಶ್ರೀಶೈಲ ಭಾವಿಕಟ್ಟಿ, ಬ.ಬಾಗೇವಾಡಿ

ನನಗೆ ಪಿ.ಎಸ್.ಐ. ಪರೀಕ್ಷೆ ಬಗ್ಗೆ ವಿವರವಾದ ಮಾಹಿತಿ ಬೇಕಾಗಿದ್ದು, ಸದರಿ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆ ಇತ್ಯಾದಿ ಪ್ರಕಟಿಸಿ.

- ಪ್ರಕಾಶ್ ಎಂ, ಶಿರಾಲಿ

ಕಿಲಕಿಲ

'ಕಿಲಕಿಲ'ದಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದ ಶೈಲಿ ಸಾಹಿತ್ಯ ಪ್ರೇಮಿಗಳ ಹೃದಯ ಗೆದ್ದಿದೆ.

- ಎಸ್. ದೇವರಾಜ, ದೇವರ ಹೊಸಹಳ್ಳಿ

ವ್ಯಕ್ತಿತ್ವ ವಿಕಾಸ

ನನಗೆ ಸ್ವಲ್ಪ ಮುಂಗೋಪ ಇತ್ತು. ಡಿಸೆಂಬರ್ ತಿಂಗಳ ವ್ಯಕ್ತಿತ್ವ ವಿಕಾಸ ಲೇಖನ ಓದಿ ಆದಷ್ಟು ತಾಳ್ಮೆಯಿಂದಿರುವು ದನ್ನು ರೂಢಿಸಿಕೊಂಡಿದ್ದೇನೆ.

- ರತ್ನ ಗಂಗಣ್ಣವರ್, ಶಿವಮೊಗ್ಗ

ಈ ಪತ್ರಿಕೆ ಒಂದು ಜ್ಞಾನಭಂಡಾರವೆಂದು ನನ್ನ ಸ್ನೇಹಿತರೆಲ್ಲಾ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

- ಎಂ. ರಾಮಚಂದ್ರ ಮೂರ್ತಿ, ಬೆಂಗಳೂರು

ಟಪಾಲು

ಐ.ಎ.ಎಸ್.

ನಾನು ಐ.ಎ.ಎಸ್. ಪರೀಕ್ಷೆ ಸಿದ್ಧತೆಗಾಗಿ ಹಲವಾ ಪತ್ರಿಕೆ ಹುಡುಕುತ್ತಿದ್ದೆ. ಈ ಸಲ ನನ್ನ ಅಚ್ಚುಮೆಚ್ಚಿ 'ಬದುಕು' ಸಂಪೂರ್ಣ ಮಾಹಿತಿ ನೀಡಿ ಸ್ಪರ್ಧಾತ್ ಪರೀಕ್ಷೆಯ ಸಿದ್ಧತೆಗೆ ದಾರಿ ಮಾಡಿಕೊಟ್ಟಿದೆ.

- ಹರೀಶ್, ರಾಯಚೂ

ಹೊಸತನ

ಹೊಸವರ್ಷದ ಬದುಕು ಹೊಸತನದಿಂದ ಕೂಡಿದೆ.

- ಸುಶೀಲಾ ರಾಜಶೇಖರ, ಸಾಗ

ಮಾನ್ವಿ ಪಟ್ಟಣ ನಮಗೆ ಹತ್ತಿರ. ಆದರೆ ಅಲ್ಲಿಗೆ 'ಬದುಕು' ಬರುವುದಿಲ್ಲ. ದೂರದ ರಾಯಚೂರಿಗೆ ಹೋಗಿ 'ಬದುಕು' ಕೊಂಡು ತರುತ್ತೇವೆ.

- ಸ್ಫೂರ್ತಿ ಬೆಟ್ಟದೂರು, ಕಪ್ಪಗಲ್ಲು

ಎಷ್ಟು ಚಾರ್ಜು?

ಈ ಹಿಂದೆ ಹನಿಗವನ ಕಳಿಸಿದ್ದೆ. ನೀವು ಪ್ರಕಟಿಸಲ್ಲ ಹಾಗೇನಾದರೂ ಹನಿಗವನ ಪ್ರಕಟಿಸಲು ಚಾರ್ಜ್ ಇದ್ದ ತಿಳಿಸಿ.

- ಐ.ಎಂ. ಕುಂಬಾರ, ಗಂಗಾವ

ಹೊಸವರ್ಷದ ಮೊದಲ ಸಂಚಿಕೆಯೊಂದಿ 'ಬದುಕು' ಪರಿಚಯವಾಯ್ತು. ವರ್ಷವಿಡೀ ಓದುವ ಆ ಮೂಡಿತು.

- ಹಣಮಂತಪ್ಪ ಸೇಡಂಕರ್, ಗುರುಮಠಕ

ಐ.ಎಂ.ಎಫ್ ಕಚೇರಿ

ಬಹು ಆಯ್ಕೆ ರೂಪದ ೩೯ನೇ ಪ್ರಶ್ನೆಗೆ ಉತ್ತರವಾ ಐ.ಎಂ.ಎಫ್. ಪ್ರಧಾನ ಕಚೇರಿ ಇರುವುದು ನ್ಯೂಯಾರ್ಕ್ ನಲ್ಲಿ ಎಂದು ಸೂಚಿಸಲಾಗಿದೆ. 'ಸ್ಪರ್ಧಾ ಪರೀಕ್ಷೆ ಸಿದ್ಧರಾಗಿ' ಎಂಬಲ್ಲಿ ೫೧ನೇ ಪ್ರಶ್ನೆಗೆ 'ವಾಷಿಂಗ್ಟನ್' ಎಂದ ಉತ್ತರಿಸಲಾಗಿದೆ. ಯಾವುದು ಸರಿ?

- ಶೇಖರ್ ಸುರುಪುರು, ಹಾಲಭಾ

[ವಾಷಿಂಗ್ಟನ್ ಸರಿ. -ಸಂ.

ಇಲ್ಲಿ 'ಬದುಕು' ಇಲ್ಲ!

ನಾನು ಕಲಾದಗಿ ನಿವಾಸಿ. ಇಲ್ಲಿ 'ಬದುಕು' ಪತ್ರಿಕೆಗೆ ಏಜೆಂಟರಿಲ್ಲ. ನಾನು ಪತ್ರಿಕೆ ಕೊಳ್ಳಲು ಬಾಗಲಕೋಟೆಗೆ ಬರಬೇಕಾಗುತ್ತದೆ. ಅಲ್ಲಿ ಕೂಡಾ ಪ್ರತಿಗಳು ಬಂದ ದಿನವೇ ಮಾರಾಟವಾಗಿ ಬಿಡುತ್ತವೆ. ಕೆಲಸದ ಒತ್ತಡದಿಂದ ಬಾಗಲಕೋಟೆಗೆ ಹೋಗುವುದು ತಡವಾದರೆ 'ಬದುಕು' ಸಿಗದೆ ಬರಿ 'ಬಿಸಿಲು' ಅನುಭವಿಸುವಂತಾಗುತ್ತದೆ!

- ಸುರೇಶ ಉಡುಪಿ, ಕಲಾದಗಿ

ಹುಸಿ ಭರವಸೆ ಬೇಡ!

ಜನವರಿ ಸಂಚಿಕೆಯಲ್ಲಿ ಎಂ.ಬಿ.ಎ. ಕೋರ್ಸಿ ಪೂರ್ಣ ವಿವರ ನೀಡುವುದಾಗಿ ಪ್ರಕಟಿಸಿದಿರಿ. ಆದರೆ ಈ

ಮಾಹಿತಿ ಒದಗಿಸದೇ ನನ್ನಂತಹ ಗ್ರಾಮೀಣ ಪ್ರದೇಶದ ಎಂ.ಬಿ.ಎ. ಆಕಾಂಕ್ಷಿಗಳಿಗೆ ನಿರಾಶೆ ಮಾಡಿದಿರಿ. ಹೀಗೆ ಹುಸಿ ಭರವಸೆ ನೀಡಬೇಡಿ.

-ಗೀರ್ರ್ಯಾ ನಾಯ್ಕ, ದೂಪದಹಳ್ಳಿ ತಾಂಡ

ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟಿಸಬೇಕಿದ್ದ ಎಂ.ಬಿ.ಎ. ವಿವರಗಳನ್ನು ಜನವರಿ ಸಂಚಿಕೆಯಲ್ಲಿ ಕೊಡುವುದಾಗಿ ನಂಬಿಸಿ ನಮ್ಮನ್ನು ಮತ್ತೆ ನಿರಾಶರನ್ನಾಗಿ ಮಾಡಿದಿರಿ. ಹೀಗೇಕೆ?

-ಇ. ಪದ್ಮಾವತಿ, ಸಿಂಧನೂರು

[ಅನಿವಾರ್ಯ ಕಾರಣಗಳಿಂದ ನಿಮ್ಮನ್ನು ಎರಡು ತಿಂಗಳು ಕಾಯಿಸಿದ್ದಕ್ಕೆ ವಿಷಾದಿಸುತ್ತೇವೆ. -ಸಂ.]

ಮೊನ್ನೆ 'ಬದುಕು' ಕೊಂಡು ಮನೆಗೆ ಹೋದೆ. ಎಲ್ಲರೂ ಓದಿ ಹರ್ಷಗೊಂಡರು. ಪ್ರತಿ ತಿಂಗಳು ಈ ಪತ್ರಿಕೆಯನ್ನೇ ತರುವಂತೆ ಸಲಹೆ ಇತ್ತರು. ನನ್ನ ಅಭಿಪ್ರಾಯದ ಪ್ರಕಾರ ಇನ್ನಷ್ಟು ವಿಜ್ಞಾನ ವಿಷಯ ಮೂಡಿ ಬರಬೇಕು.

-ಶೇಖರ ಕುಂದಗೋಳ, ಗದಗ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನೆರವಾಗುವ ಉತ್ತಮ ಪ್ರಬಂಧಗಳನ್ನು (ರಾಷ್ಟ್ರೀಯ, ಅಂತಾ ರಾಷ್ಟ್ರೀಯ ವಿದ್ಯಮಾನಗಳ ಮೇಲೆ) ಪ್ರಕಟಿಸಿದರೆ ಅಭ್ಯರ್ಥಿಗಳಿಗೆ ಉಪಯೋಗವಾಗುತ್ತದೆ.

-ಎಂ.ಎಸ್. ವೆಂಕಟೇಶ್, ಮಂಡ್ಯ

ರೈತರ ಮೆಚ್ಚುಗೆ

'ಲಾಭದಾಯಕ ಕೃಷಿ' ನೋಡಿ ನಮ್ಮ ಊರಿನ ರೈತರೆಲ್ಲಾ ಅಭಿಮಾನ ವ್ಯಕ್ತಪಡಿಸಿದ್ದಾರೆ.

-ಎಸ್.ಎಸ್. ಸೋಮನಕಟ್ಟಿ, ಜಕ್ಕಲಿ

ಸಾರ್ವತ್ರಿಕ ಚುನಾವಣೆ

ಡಿಸೆಂಬರ್ ೯೭ರ ಸಂಚಿಕೆಯಲ್ಲಿ ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದದ್ದು ೧೯೫೧ರಲ್ಲಿ ಎಂದೂ, ಜನವರಿ ೯೮ರ ಸಂಚಿಕೆಯಲ್ಲಿ ೧೯೫೨ ಎಂದೂ ಮುದ್ರಿಸಿದ್ದೀರಿ. ಯಾವುದು ಸರಿ?

-ಮಲ್ಲಿಕಾರ್ಜುನ ಜವಳಿ, ಬಮ್ಮನಹಳ್ಳಿ

[೧೯೫೧ ಸರಿ. ಮುದ್ರಣ ದೋಷಕ್ಕಾಗಿ ಕ್ಷಮಿಸಿ. - ಸಂ.]

ನಿಮ್ಮ ಪತ್ರಿಕೆ ಅಲ್ಪ ಸಮಯದಲ್ಲಿ ಕನ್ನಡದ ಪ್ರಚಂಡ ಜನಪ್ರಿಯ ಪತ್ರಿಕೆಯಾಗಲಿದೆ. ಇದರಲ್ಲಿ ಸಂಶಯ ಬೇಡ.

-ಸಿ.ಆರ್. ಡಿ. ಹೊಯ್ಸಳ, ಹಾಸನ

ನೀವೇ ತಿಳಿಸಿ

ಅತ್ಯಮೂಲ್ಯ ಮಾಹಿತಿ ಒದಗಿಸಿ, ಅನೇಕ ಸಂದೇಹ ಗಳಿಗೆ ಪರಿಹಾರ ನೀಡಿದ ತಮಗೆ ಯಾವ ರೀತಿ ಅಭಿನಂದನೆ ಸಲ್ಲಿಸಬೇಕೋ ನೀವೇ ತಿಳಿಸಿಬಿಡಿ.

-ಎಲ್.ವಿ. ಕುಮಾರಸ್ವಾಮಿ, ಹಿರಿಯೂರು

'ಬದುಕು' ಓದುಗರಿಗೆ ಅತಿ ಉಪಯುಕ್ತ ಮಾಹಿತಿ ಒದಗಿಸುವುದರಲ್ಲಿ ಸಂದೇಹ ಇಲ್ಲ. ಮುಖ್ಯವಾಗಿ ನಿರುದ್ಯೋಗಿ ಯುವಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅವಶ್ಯಕ ಮಾಹಿತಿ ಒದಗಿಸು ವದರಲ್ಲಿ ಸಫಲ ಪ್ರಯತ್ನ ನಿಮ್ಮದಾಗಿದೆ.

ಜೊತೆಗೆ ಹೆಣ್ಣು ಮಕ್ಕಳಿಗೂ ಉಪಯುಕ್ತ ಮಾಹಿತಿ ಇರುವುದು ನಿಮ್ಮ ಸಂಚಿಕೆಗೆ ವ್ಯಾಪಕತೆ ಬರುವಂತಾಗಿದೆ.

- ಪ್ರೊ. ಬಿ.ಡಿ. ಗಸ್ತಿ, ಹುಬ್ಬಳ್ಳಿ

ಕಿಲಕಿಲ ಕೂಪನ್ ಹಿಂದುಗಡೆ ಪದಬಂಧವನ್ನು ಕೊಟ್ಟಿರುತ್ತೀರಿ. ಕೂಪನ್ ಕತ್ತರಿಸಿದಾಗ ಅಲ್ಲಿ ಅರ್ಧಭಾಗ ಪದಬಂಧ ಉಳಿದಿರುತ್ತದೆ. ಆದ್ದರಿಂದ ಪದಬಂಧ ತುಂಬಲು ಕಷ್ಟವಾಗುತ್ತದೆ. ಕೂಪನ್ ಅಥವಾ ಪದಬಂಧದ ಸ್ಥಳವನ್ನು ಬದಲಾಯಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

- ಎಂ. ಕೋದಂಡರಾಮ, ಬಾದನಹಟ್ಟಿ

ಉಚಿತವಾಗಿ ನೀಡಿರುವ 'ಲಾಭದಾಯಕ ಕೃಷಿ' ಪುಸ್ತಕವು ಬಹು ಉಪಯುಕ್ತಕರವಾಗಿದೆ. ಇದರಲ್ಲಿ ಸ್ವಂತ ಉದ್ಯೋಗ ಮತ್ತು ಸಾಲಸೌಲಭ್ಯದ ಬಗ್ಗೆ ತಿಳಿಯಪಡಿಸಿರುವ ವಿಜಯ್ ಅಂಗಡಿಯವರಿಗೆ ಧನ್ಯವಾದಗಳು.

- ಶ್ರೀಶೈಲ ಕಾಖಂಡಕಿ, ರಬಕವಿ

ಸುಮಾರು ೮೦ ಪುಟಗಳಷ್ಟು ವಿಚಾರ, ವಿವೇಕ, ಮಾಹಿತಿ, ರಂಜನೆ ನೀಡುತ್ತಿರುವ ಪತ್ರಿಕೆಯ ಬೆಲೆ ಕೇವಲ ೧೦ ರೂಪಾಯಿ! ಯೋಗ್ಯವಾಗಿದೆ.

- ಉ.ಶಾ. ಬಸವಣ್ಣಪ್ಪ, ಏಣ್ಗಿಬಸಾಪುರ

ಪತ್ರಿಕೆಗೆ ಕಳಂಕ

ಯಾವುದೇ ರಾಜಕಾರಣಿಯ ಭಾವಚಿತ್ರವನ್ನು (ಸಣ್ಣದಾಗಿಯೂ!) ಮುಖಪುಟಕ್ಕೆ ಹಾಕಿ ಪತ್ರಿಕೆಗೆ ಕಳಂಕ ತರಬೇಡಿ. ಇಂದಿನ ರಾಜಕಾರಣಿಗಳಾರೂ ಶುದ್ಧರಲ್ಲ.

- ಎಂ. ಮಲ್ಲಿಕಾರ್ಜುನಯ್ಯ, ನಾಗರಹಾಳು

ಅರ್ಥ ಅಪಾರ್ಥ

ಹೆಗಡೆ, ಬಂಗಾರಪ್ಪ ಜತೆ **ಹೊಂದಾಣಿಕೆ ಎದುರಿಸಲು** ಕೆಲವು ದಿನಗಳ ಹಿಂದೆಯೇ ಕಾರ್ಯಯೋಜನೆ ಹಾಕಿಕೊಂಡ ಬಿಜೆಪಿ ಅದನ್ನು ಬಹಿರಂಗಪಡಿಸದೆ ವಿಭಿನ್ನ ರೀತಿಯ ಹೇಳಿಕೆಗಳಿಂದ ಇತರ ಪಕ್ಷಗಳ ದಾರಿ ತಪ್ಪಿಸಿತು.

ಕನ್ನಡಪ್ರಭ, ೨೬.೧೨.೯೭

ಹಿಂದೆ ಕ್ಯಾಲೆಂಡರ್‌ಗಳಲ್ಲಿ ನರಕದ ಚಿತ್ರ ಮುದ್ರಿಸುತ್ತಿದ್ದರು ನೋಡಿದ್ದೀರಾ? ಗರಗಸದಲ್ಲಿ ಯಮದೂತರು ಕೊಯ್ಯುವುದು, **ಕುಡಿವ ನೀರಲ್ಲಿ** ಮುಳುಗಿಸುವುದು ಇತ್ಯಾದಿ...

ಸಂಯುಕ್ತ ಕರ್ನಾಟಕ [ಚಿತ್ರಸೌರಭ], ೨೬.೧೨.೯೭

ಶ್ರೀಲತಾಳ ಕಿರುಚಾಟ ಕೇಳಿ ಸೇರಿದ ಅಕ್ಕಪಕ್ಕದ ನಿವಾಸಿಗಳು ಅವರನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಿದರು. ಅಲ್ಲಿ ಅವರು ಮಂಗಳವಾರ ಬೆಳಿಗ್ಗೆ ಮೃತಪಟ್ಟರು. ನಡೆದ ಘಟನೆ ಬಗ್ಗೆ ಶ್ರೀಲತಾ ಪೊಲೀಸರಿಗೆ **ಮರಣೋತ್ತರ** ಹೇಳಿಕೆ ನೀಡಿದ್ದಾರೆ.


ಕನ್ನಡಪ್ರಭ, ೩೧.೧೨.೯೭

ಇದೊಂದು ಹೊಸ ಅಂಕಣ. ನೀವು ಓದುವ ದಿನಪತ್ರಿಕೆಗಳಲ್ಲಿ ವಾಕ್ಯದ ಅರ್ಥವನ್ನೇ ಕಳೆಯುವ ಇಂಥ ಹಲವು ಸಾಲುಗಳು ಆಗಾಗ ನುಸುಳುವುದುಂಟು. ಹೀಗೆ ಉಂಟಾಗುವ ದೋಷಗಳು ಮೇಲ್ನೋಟಕ್ಕೆ ತಮಾಷೆಯಾಗಿ ಕಂಡರೂ ಗಂಭೀರ ಪರಿಣಾಮ ಬೀರಬಲ್ಲವು. ಸ್ಥಳೀಯ ಪತ್ರಿಕೆಗಳಲ್ಲಿ, ರಾಜ್ಯ-ರಾಷ್ಟ್ರ ಮಟ್ಟದ ಪತ್ರಿಕೆಗಳಲ್ಲಿ ಇಂಥ ದೋಷಗಳನ್ನು ಹುಡುಕಿ ನಮಗೆ ಕಳಿಸಿಕೊಡಿ. ನಿಮ್ಮ ಹೆಸರಿನೊಂದಿಗೆ ಪ್ರಕಟಿಸ ಲಾಗುವುದು. ನೀವು ದೋಷ ಗಮನಿಸಿದ ಪತ್ರಿಕೆಯ ಅರ್ಥಾಂತರವಾದ ಭಾಗವನ್ನು ಕತ್ತರಿಸಿ ಕಳಿಸುವುದು ಅತ್ಯಗತ್ಯ. ಪತ್ರಿಕೆಯ ಹೆಸರು, ದಿನಾಂಕವೂ ಇರಬೇಕು.

-ಸಂ.

ನಿಗೂಢ ಜಗತ್ತು

①



ಪಪ್ಪಾಯಿ ಹಣ್ಣೊಳಗೆ ಸೋರೆಕಾಯಿ!
ಎರಡು ತಲೆಯ ಆಮೆ!!
ಗರ್ಭ ಧರಿಸಿದ ಪುರುಷ!!

ಹೀಗೆ ನಿಸರ್ಗ ಹೊಮ್ಮಿಸುವ
ವಿಸ್ಮಯಗಳು ಅನೇಕ.
ಈ ಎಲ್ಲದರ ಹಿಂದೆ ಕೆಲವೊಮ್ಮೆ
ನಿಗೂಢತೆ ಇದ್ದರೆ
ಇನ್ನು ಕೆಲವೊಮ್ಮೆ ಸೃಷ್ಟಿಯ
ನಿಯಮ ಅಡಕವಾಗಿರುತ್ತದೆ.
ಈ ಲೇಖನಮಾಲಿಕೆಯಲ್ಲಿ
ಪ್ರಕೃತಿಯ ಇಂತಹ ಹಲವಾರು
ನಿಗೂಢಗಳತ್ತ ಕುತೂಹಲಕಾರಿ
ದೃಷ್ಟಿಬೀರಿ,
ವೈಜ್ಞಾನಿಕ ಹಿನ್ನೆಲೆಯಲ್ಲಿ
ಅವುಗಳನ್ನು ವಿಶ್ಲೇಷಿಸುವ
ಪ್ರಯತ್ನ ಮಾಡಲಾಗುವುದು.

○ ನಾರಾಯಣ ಎಂ. ಭಟ್
ನಂ. ೧೪೪, ೪ನೇ ಮೇನ್, ಆಂಜನೇಯ ನಗರ,
ಬಿ.ಎಸ್.ಕೆ. ೩ನೇ ಸ್ಟೇಜ್, ಬೆಂಗಳೂರು - ೮೫

ಕಲ್ಲಿನೊಳಗೆ ಕಪ್ಪೆ!

ಈಗ್ಗೆ ಸುಮಾರು ೧೩೦ ವರುಷಗಳ ಹಿಂದಿನ ಮಾತು. ಕಲ್ಲಿದ್ದಲ ಗಣಿ ಅಗಿಯುತ್ತಿದ್ದ ಕೂಲಿಕಾರರಿಗೆ ಒಂದು ಅಚ್ಚರಿ ಕಾದಿತ್ತು. ಕಲ್ಲಿದ್ದಲ ಭಂಡಾರವನ್ನು ಒಡೆಯುತ್ತಿದ್ದಾಗ ಕೆಲವು ಗುಂಡುಗಳ ಒಳಗೆ ಜೀವಂತ ಕಪ್ಪೆ ಮರಿಗಳು!

ಕಲ್ಲುಬಂಡೆಗಳನ್ನು ಒಡೆಯುತ್ತಿದ್ದ ಗಣಿ ಕಾರ್ಮಿಕರಿಗೂ ಸಹ ಬಂಡೆಗಳ ಒಳಗಿನಿಂದ ಚಂಗನೆ ಹಾರುವ ಕಪ್ಪೆಮರಿ ಹಾಗೂ ಕಾಡುಗಪ್ಪೆಗಳನ್ನು ಕಂಡು ವಿಸ್ಮಯವಾಗಿತ್ತು.

ಎಲ್ಲರ ಪ್ರಶ್ನೆಯೂ ಒಂದೇ ಆಗಿತ್ತು. ಕಲ್ಲಿನೊಳಗೆ ಕಪ್ಪೆಗಳು ಹೇಗೆ ಇರಲು ಸಾಧ್ಯ? ಅಂದರೆ ನಿರ್ಜೀವ ವಸ್ತುಗಳ ಒಳಗೆ ಸಜೀವ ವಸ್ತುಗಳು!

ಈ ನಿಸರ್ಗ ರಹಸ್ಯ ಬಹಳ ವರ್ಷಗಳ ಕಾಲ ಎಲ್ಲರನ್ನೂ ಕಾಡಿತ್ತು. ಮೇಲೆ ವಿವರಿಸಿದ ಘಟನೆ ನಡೆದದ್ದು ೧೮ನೇ ಶತಮಾನದ ಕೊನೆಯಲ್ಲಿ. ಆಗ ಇಂತಹ ನಿಗೂಢ ವಿಷಯಗಳು ಜನರನ್ನು ನಿಬ್ಬೆರಗಾಗುವಂತೆ ಮಾಡುತ್ತಿದ್ದವೇ ಹೊರತು ಅವುಗಳ ಬಗ್ಗೆ ವಿಶ್ಲೇಷಣೆ ಮಾಡುವ ಆಸಕ್ತಿ ಇದ್ದವರು ಬಹಳ ವಿರಳವಾಗಿದ್ದರು. ಆದರೂ ಅಲ್ಲೊಬ್ಬ ಇಲ್ಲೊಬ್ಬ ಎಂಬಂತೆ ಕೆಲವು ನಿಸರ್ಗ ವಿಜ್ಞಾನಿಗಳು ಈ ರಹಸ್ಯವನ್ನು ಭೇದಿಸುವ ಛಲ ತೊಟ್ಟಿದ್ದರು.

ಡಾ. ವಿಲಿಯಂ ಬಕ್‌ಲ್ಯಾಂಡ್ ಎಂಬ ವಿಜ್ಞಾನಿ ಕಲ್ಲುಕಪ್ಪೆಗಳ ರಹಸ್ಯ ಭೇದಿಸಲು ಹಲವಾರು ಪ್ರಯೋಗಗಳನ್ನು ನಡೆಸಿದ... ಅವುಗಳಲ್ಲಿ ಕೆಲವಂತೂ ತುಂಬ... ವಿಕೃತವಾಗಿದ್ದವು. ಆತ ಮಾಡಿದ್ದೇನೆಂದರೆ, ತನ... ಪ್ರಯೋಗಕ್ಕಾಗಿ ೨೪ ನೆಲಗಪ್ಪೆ (Toad... ಗಳನ್ನು ಆಯ್ಕೆ ಮಾಡಿಕೊಂಡ. ಅವುಗಳ ಪೈ... ಕೆಲವನ್ನು ಸಣ್ಣ ರಂಧ್ರಗಳಿರುವ ಸುಣ್ಣಕಲ್ಲಿ... ಕಕ್ಷೆಯೊಳಗೆ ಕೂಡಿಟ್ಟ. ಇನ್ನು ಕೆಲವನ್... ಯಾವುದೇ ರಂಧ್ರವಿರದ ಘನ ಕಕ್ಷೆಯೊಳ... ಸೇರಿಸಿ; ಅವುಗಳನ್ನೆಲ್ಲ ಒಂದು ವರ್ಷಗಳ ಕಾ... ಹೂತಿಟ್ಟ!

ಒಂದು ವರುಷದ ನಂತರ ದೊರೆ... ಫಲಿತಾಂಶ ಇಂತಿತ್ತು. ಘನ ಕಕ್ಷೆಯೊಳ... ಬಂಧಿಸಲ್ಪಟ್ಟಿದ್ದ ನೆಲಗಪ್ಪೆಗಳೆಲ್ಲ ಪ್ರಾ... ಬಿಟ್ಟಿದ್ದವು. ಆದರೆ, ರಂಧ್ರಗಳಿದ್ದ ಸುಣ್ಣ... ಕಲ್ಲಿನ ಕಕ್ಷೆಯ ನೆಲಗಪ್ಪೆಗಳು ಗುಟುಕ... ಜೀವದೊಡನೆ ಬದುಕುಳಿದಿದ್ದವು. ಡಾ... ವಿಲಿಯಂನಿಗೆ ಈ ಫಲಿತಾಂಶಗಳಿಂದ ಹೆಚ್ಚಿ... ಸಂತೋಷವೇನೂ ಆಗಿರುವಂತೆ ಕಂಡುಬರು... ದಿಲ್ಲ. ಯಾಕೆಂದರೆ ಆತ ಬದುಕುಳಿದ ನೆಲಗಪ... ಗಳನ್ನು ಮತ್ತೊಂದು ವರ್ಷಕ್ಕೆ ಹೂಳಿಬಿಟ್ಟ! ಅ... ನೆಲಗಪ್ಪೆಗಳೆಲ್ಲ ಆಹಾರವಿಲ್ಲದೇ ಅಸುನೀ... ದವು. ಡಾ. ವಿಲಿಯಂ ನೆಲಗಪ್ಪೆಗಳನ್ನು ಸೇಬಿ... ಮರದ ಕಾಂಡದಲ್ಲಿಯೂ ಹೂತಿಟ್ಟಿದ್ದ! ಪಾ... ಅವುಗಳೂ ಇವನ ವೈಜ್ಞಾನಿಕ ಪ್ರಯೋಗ... ಳಿಗಾಗಿ ಬಲಿಪೀಠ ಏರಬೇಕಾಯಿತು!

ಆದರೆ, ಈ ಮೂಕಪ್ರಾಣಿಗಳ ಬಲಿದಾನ...

ವ್ಯರ್ಥವಾಗಲಿಲ್ಲ. ಡಾ. ವಿಲಿಯಂ ಬಕ್‌ಲ್ಯಾಂಡ್ ತನ್ನ ಪ್ರಯೋಗದ ಫಲಿತಾಂಶಗಳನ್ನು ಹೀಗೆ ವಿವರಿಸಿದ್ದಾನೆ. ''ಕಪ್ಪೆಗಳು ಗಾಳಿ ಇರದ ಜಾಗಗಳಲ್ಲಿ ಒಂದು ವರುಷ ಕಾಲವೂ ಬದುಕುಳಿಯಲಾರವು. ಒಂದು ವೇಳೆ ಗಾಳಿ ಇದ್ದರೂ ಆಹಾರವಿರದೆ ಹೋದರೆ, ಅವುಗಳು ಎರಡು ವರ್ಷಗಳ ಕಾಲ ಬದುಕುವುದಿಲ್ಲ. ಆದ್ದರಿಂದ ಕಪ್ಪೆಗಳು ಕಲ್ಲಿನೊಳಗೆ ಬದುಕುಳಿಯಲು ಸಾಧ್ಯವಾಗಿದೆ ಎಂದರೆ ಅವುಗಳಿಗೆ ಅಲ್ಲಿ ಒಳಗಡೆ ಗಾಳಿ ಮತ್ತು ಆಹಾರದ ಸರಬರಾಜು ಇರಲೇಬೇಕಾಗುತ್ತದೆ''.

ಈ ಸರಬರಾಜಿನ ವ್ಯವಸ್ಥೆಯಾಗುವುದು ಹೇಗೆ ಎಂದು ಅರಿಯಲು ನಾವು ಕಪ್ಪೆಗಳ ಜೀವನ ಕ್ರಮದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯ. ಕಪ್ಪೆಗಳು ಯಾವ ರೀತಿ ಬದುಕುತ್ತವೆ? ಏನನ್ನು ತಿನ್ನುತ್ತವೆ? ಇತ್ಯಾದಿಗಳನ್ನು ಅಭ್ಯಾಸ ಮಾಡಿದಾಗ ಈ ರಹಸ್ಯವನ್ನು ಭೇದಿಸುವ ಮುಖ್ಯ ಕೀಲಿಕೈಯೊಂದು ನಮಗೆ ದಕ್ಕುತ್ತದೆ. ನೆಲಗಪ್ಪೆಗಳು ತಮ್ಮ ಬೆಳವಣಿಗೆಯಲ್ಲಿ 'ತೊಂದ' ಸ್ಥಿತಿಯನ್ನು (Tadpole Stage) ತೊರೆದು ಎಳೆಯ ನೆಲಗಪ್ಪೆಗಳಾಗಿ ಮಾರ್ಪಾಟು ಹೊಂದಿದ ಕೂಡಲೇ ಮಾಡುವ ಪ್ರಥಮ ಕೆಲಸವೆಂದರೆ, ಕಲ್ಲು, ಬಂಡೆ, ಮರ ಮುಂತಾದವುಗಳಲ್ಲಿರುವ ಬಿರುಕು ಮತ್ತು ರಂಧ್ರಗಳಲ್ಲಿ ಸೇರಿಕೊಳ್ಳುವುದು. ಯಾಕೆಂದರೆ, ಈ ಬಿರುಕುಗಳ ಒಳಗೆ ಅವುಗಳಿಗೆ ಯಥೇಚ್ಛವಾಗಿ ಸಣ್ಣಪುಟ್ಟ ಕ್ರಿಮಿ ಕೀಟಗಳು ಸುಲಭವಾಗಿ ನುಂಗಲು ಸಿಗುತ್ತವೆ. ಈ ಕ್ರಿಮಿಕೀಟಗಳು ಸಹ ಈ ಮರಿಗಪ್ಪೆಗಳಂತೆ ಅಲ್ಲಿ ಆಶ್ರಯ ಅಪೇಕ್ಷಿಸಿ ಬಂದಿರುತ್ತವೆ. ಆದರೆ ಪಾಪ ಅವಕ್ಕೇನು ಗೊತ್ತು ಒಳಗಡೆ ಇಂತಹ ನುಂಗಣ್ಣಗಳಿವೆ ಎಂದು! ಈ ರೀತಿ, ನಿರಾಯಾಸವಾಗಿ ಲಭಿಸುವ ಆಹಾರದಿಂದ ಮರಿಕಪ್ಪೆಗಳು ದಿನೇ ದಿನೇ ಕೊಬ್ಬುತ್ತಾ ಹೋಗುತ್ತವೆ. ಹೀಗಾಗಿ ಒಮ್ಮೆ ಒಳಸೇರಿದ ಇವು ಪ್ರೌಢ ಅವಸ್ಥೆ ತಲುಪಿದರೂ ಹೊರಬರಲಾಗದೇ ಅಲ್ಲಿಯೇ ಉಳಿದುಬಿಡುತ್ತವೆ. ಸಣ್ಣರಂಧ್ರದ ಮೂಲಕ ಅವಕ್ಕೆ ಹೊರಬರಲು ಅಸಾಧ್ಯ. ಇದು ಬಹುಶಃ ಅವುಗಳು ಕಲ್ಲಿನೊಳಗೆ ವಾಸವಾಗಿರುವುದನ್ನು ವಿವರಿಸಬಲ್ಲದು. ಇಂತಹ ಕಲ್ಲಿನಲ್ಲಿರಬಹುದಾದ ಸೂಕ್ಷ್ಮರಂಧ್ರ ಅಥವಾ ಬಿರುಕುಗಳನ್ನು ಸಾಮಾನ್ಯರು ಅಂದರೆ ಗಣಿಕೆಲಸಗಾರರು ಗಮನಿಸದೆ ಇರುವ ಸಾಧ್ಯತೆಗಳಿವೆ. ಆದ್ದರಿಂದ ಇದು ಅವರ ಪಾಲಿಗೆ ನೈಸರ್ಗಿಕ ಪವಾಡದಂತೆ ಕಂಡಿದೆ...!

ಇಂದಿಗೂ ಇಂತಹ ಕಲ್ಲಿನ ಕಪ್ಪೆಯ ನಮೂನೆಯೊಂದನ್ನು ಬ್ರಿಟನ್ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು. ಇಲ್ಲಿ ಸಣ್ಣ ಉಂಡೆಯಂತಿರುವ ಕಲ್ಲುಗುಂಡೊಂದರೊಳಗೆ ಸಂರಕ್ಷಿಸಲ್ಪಟ್ಟಿರುವ ನೆಲಗಪ್ಪೆಯನ್ನು ಪ್ರದರ್ಶನಕ್ಕೆ ಇಡಲಾಗಿದೆ. ಈ ಕಲ್ಲನ್ನು ಸೂಕ್ಷ್ಮವಾಗಿ ಗಮನಿಸಿದ ನಂತರವೇ ಅದರ ಕೊನೆಯೊಂದರಲ್ಲಿ ಚಿಕ್ಕರಂಧ್ರವಿರುವುದು ಸ್ಪಷ್ಟವಾಯಿತು.

ಈ ನಿಗೂಢ ವಿಷಯ ಬರೆಯುತ್ತಿರುವಾಗ, ನನಗೊಂದು ಕತೆ ನೆನಪಾಗುತ್ತಿದೆ. ಚಿಕ್ಕಂದಿನಲ್ಲಿ ನಾನು ಕೇಳಿದ ಕತೆ ಅದು. ಒಬ್ಬ ರಾಜನಿಗೆ ಒಂದು ಕಾಣಿಕೆ ಬರುತ್ತದೆ. ಅದೇನೆಂದರೆ ಚಿಕ್ಕ ಬಾಯಿಯಿರುವ ಮಡಿಕೆಯೊಳಗೆ ತುಂಬಾ ದೊಡ್ಡದಾಗಿರುವ ಕುಂಬಳಕಾಯಿ. ರಾಜನಿಗೆ ಆಶ್ಚರ್ಯ! ಇಷ್ಟು ದೊಡ್ಡ ಕುಂಬಳಕಾಯಿಯನ್ನು ಅಷ್ಟು ಚಿಕ್ಕದಾಗಿರುವ ಬಾಯಿಯೊಳಗಿಂದ ತೂರಿಸಿದ್ದಾದರೂ ಹೇಗೆ? ನಿಮಗೇನಾದರೂ ಉತ್ತರ ಹೊಳೆಯಿತೇ? ಯೋಚಿಸಿ ನೋಡಿ.


ನಿಗೂಢ ಜಗತ್ತು

ಪಾಪ ಅವಕ್ಕೇನು ಗೊತ್ತು ಒಳಗಡೆ ಇಂತಹ ನುಂಗಣ್ಣಗಳಿವೆ ಎಂದು!

ಸಂಗೀತ ಹೊಮ್ಮಿಸುವ ಮರಳು!!

''ನಾನು 'ಐಗ್' ದ್ವೀಪದ ಕಡಲ ತೀರದ ಮೇಲೆ ನಡೆಯುತ್ತಿದ್ದೆ. ಆಗ ಒಮ್ಮಿಂದಲೇ ಸಂಗೀತದ ಅಲೆಗಳು ಹೊಮ್ಮತೊಡಗಿದವು. ನಾನು ಹೆಜ್ಜೆ ಇಟ್ಟಂತೆಲ್ಲ, ಮರಳು ಸಂಗೀತ ಹೊಮ್ಮಿಸುತ್ತಿತ್ತು. ...ಮೇಣ ಸವರಿದ ದಾರವನ್ನು ಬಿಗಿಯಾಗಿ ಕಟ್ಟಿ ಬೆರಳಿನಿಂದ ಮೀಟಿದಾಗ ಉಂಟಾಗುವ ಸ್ವರದಂತೆ.... ಸ್ವಲ್ಪ ಹೊತ್ತಿನ ಬಳಿಕ ನನ್ನ ಜೊತೆಗಾರರೂ ನನ್ನನ್ನು ಸೇರಿಕೊಂಡರು. ನಾವೆಲ್ಲ ಮರಳಲ್ಲಿ ನಡೆದಾಡಿ ಒಂದು ಸಣ್ಣ ಸಂಗೀತ ಕಚೇರಿಯನ್ನೇ ನಡೆಸಿಬಿಟ್ಟೆವು! ನಾವು ಮುನ್ನಡೆದಂತೆಲ್ಲ ಮರಳಿನಿಂದ 'ವ್ಯೂವ್‌ss' 'ವ್ಯೂವ್‌ss' ಎನ್ನುವ ಸದ್ದು ನಿರಂತರವಾಗಿ ಬರುತ್ತಿತ್ತು. ಇದನ್ನು ೨೦ರಿಂದ ೩೦ ಯಾರ್ಡ್ ದೂರದವರೆಗೆ ಕೇಳಬಹುದಿತ್ತು....'' ಇದು ಸಂಗೀತ ಹೊಮ್ಮಿಸುವ ಮರಳನ್ನು ಕುರಿತು ೧೯ನೇ ಶತಮಾನದ ಬ್ರಿಟಿಷ್ ಭೂಗರ್ಭಶಾಸ್ತ್ರಜ್ಞ ಎಚ್. ಮಿಲ್ಲರ್ ಎಂಬಾತ ನೀಡಿದ ರೋಚಕ ವಿವರಣೆ.

'ಹಾಡುವ ಮರಳ'ನ್ನು ಕುರಿತು ಹಲವಾರು ನಿಗೂಢಭರಿತ ಕತೆಗಳಿವೆ. ಅವುಗಳ ಪೈಕಿ ಒಂದು



ನಿಗೂಢ ಜಗತ್ತು

ರಾತ್ರಿ ನೀರವತೆ ಎಲ್ಲೆಡೆ ಪಸರಿಸಿರಲು ಒಮ್ಮೆಲೇ ಸ್ವರಗಳು ಜೋರಾಗಿ ಹೊಮ್ಮತೊಡಗಿದವು.

ಕತೆ ಇಂತಿದೆ. 'ಸಿನಾಯ್ ಪೆನಿನ್‌ಸುಲ್'ನ ಮರುಭೂಮಿಯ ಮರಳು ಸಹ 'ಗಂಟೆ' ಬಾರಿಸುವ ಸದ್ದನ್ನು ಮೂಡಿಸುತ್ತದೆ. ಈ ಮರುಭೂಮಿಯಲ್ಲಿ ಪಯಣಿಸುವ ಜನ ಹಾಗೂ ಒಂಟೆಗಳು ಈ ಗಂಟೆಯ ಶಬ್ದ ಕೇಳಿ ಬೆಚ್ಚಿ ಬೀಳುವುದು ಸಾಮಾನ್ಯ. ಈ ಸದ್ದಿನಿಂದಾಗಿ ಯಾರೋ ದೂರದಲ್ಲಿ ಪೂಜೆ ಮಾಡುತ್ತಿರುವ ಭ್ರಮೆ ಉಂಟಾಗುತ್ತದೆ. ಆದರೆ, ಸುತ್ತಮುತ್ತಾ ನೋಡಿದರೆ ಬರಿದಾದ ಮರುಭೂಮಿ ಇರುವುದೇ ಹೊರತು ಯಾವ ಪೂಜಾರಿಯೂ ಕಂಡುಬರುತ್ತಿರಲಿಲ್ಲ! ಹಾಗಾದರೆ, ಈ ಗಂಟೆಸದ್ದು ಮಾಡುತ್ತಿರುವವರು ಯಾರು?

ಬಹಳ ಹಿಂದೆ, ಈ ಮರುಭೂಮಿಯಲ್ಲಿ ಹೂತುಹೋಗಿರುವ 'ಸಂನ್ಯಾಸಿ' ಮಠಗಳಿಂದಲೇ ಈ ಗಂಟೆ ಸದ್ದು ಬರುತ್ತಿದೆ ಎಂದು ಆಗ ಪ್ರಚಲಿತವಾಗಿತ್ತು. ಭೂಮಿಯೊಳಗೆ ಹೂತುಹೋಗಿರುವ ಸಂನ್ಯಾಸಿಗಳು ಪೂಜೆ ಸಮಯದಲ್ಲಿ ಘಂಟೆ ಬಾರಿಸುವುದರಿಂದ ಈ ನಿಗೂಢ ಶಬ್ದಗಳು ಹೊಮ್ಮುತ್ತಿವೆ ಎನ್ನುವುದನ್ನು ಎಲ್ಲರೂ ನಂಬಿಬಿಟ್ಟಿದ್ದರು. ಕೆಲವು 'ಯುರೋಪಿಯನ್' ಯಾತ್ರಿಗಳು ಸಹ ಇಂತಹ ಸದ್ದುಗಳನ್ನು ಕೇಳಿರುವುದಾಗಿ ಪ್ರಮಾಣಿಸಿದ್ದರು. ಹೀಗಾಗಿ ಇಂತಹ ಸಂಗೀತ ಹೊಮ್ಮಿಸುವ ಮರಳು ಪ್ರದೇಶಗಳ ಖ್ಯಾತಿ ವಿಶ್ವದಾದ್ಯಂತ ಹಬ್ಬಿತು.


ಈ ರೀತಿ ಸಂಗೀತ ಹೊಮ್ಮಿಸುವ ಮರಳು ವಿಶ್ವದ ಅನೇಕ ಮರುಭೂಮಿ ಹಾಗೂ ಕರಾವಳಿ ತೀರ ಪ್ರದೇಶಗಳಲ್ಲಿ ಕಂಡುಬರುತ್ತದೆ. ಅಮೇರಿಕದ ಲಾಂಗ್ ಐಲ್ಯಾಂಡ್, ಮೆಸಚೂಸೆಟ್ಸ್‌ನ ಬೇ, ಬ್ರಿಟನ್‌ನ ವೇಲ್ಸ್, ಪಶ್ಚಿಮ ಕರಾವಳಿ, ಡೆನ್‌ಮಾರ್ಕಿನ ಬಾನ್‌ಹೋಮ್ ದ್ವೀಪ, ಆಫ್ರಿಕಾ, ಏಷಿಯಾ ಹಾಗೂ ಮಧ್ಯಪೂರ್ವ ರಾಷ್ಟ್ರಗಳ ಹಲವಾರು ಮರುಭೂಮಿ ಪ್ರದೇಶಗಳು ಇವು ಕೆಲವು ಉದಾಹರಣೆಗಳು.

'ಹವಾಯಿನ' ದ್ವೀಪ ಸಮೂಹಗಳ ಕರಾವಳಿಯ ತೀರ ಪ್ರದೇಶಗಳಲ್ಲಿ ಆಗುವ ಅನುಭವ ಇನ್ನೂ ವಿಚಿತ್ರ. ನೀವು ಮರಳಿನ ಮೇಲೆ ನಡೆಯುತ್ತಿರುವಾಗ ಬೆನ್ನ ಹಿಂದೆ ನಾಯಿಗಳು ಬೊಗಳಿದಂತಾಗುತ್ತದೆ. ಭಯಪಟ್ಟು ಓಡಿದಿರೋ ನಿಮ್ಮ ಕತೆ ಮುಗಿದಂತೆಯೇ! ಓಟ ಹೆಚ್ಚಿದಂತೆ ನಾಯಿಗ
ಹಿಂದೇ ನಿಮ್ಮನ್ನು ಬೊಗಳುತ
ಹಿಂಬಾಲಿಸುತ್ತದೆ. ನಾಯಿ ಕಂಡರೆ ಆಗದವ
ಈ ದ್ವೀಪಗಳಿಗೆ ಹೋಗದಿರುವುದೇ ಲೇಸು.

'ಗೋಬಿ' ಮರಭೂಮಿಯಲ್ಲಿಯೂ
ರೀತಿಯ ಸ್ವರಗಳು ಮೂಡುತ್ತಿದ್ದವು ಎಂದ
ಖ್ಯಾತ 'ಅರೇಬಿಯನ್ ನೈಟ್ಸ್' ಕಥೆಗಳ
ದಾಖಲಾಗಿದೆ.

ಈ 'ಸಂಗೀತದ ಮರಳು' ಕುರಿತ
ನಿಜವಾದ ವೈಜ್ಞಾನಿಕ ಅಧ್ಯಯನ ಪ್ರಾರಂ
ಆದದ್ದು ೧೯೪೦ರ ನಂತರವೇ. ಆರ್.ಎ
ಬ್ಯಾಗ್‌ನಾಲ್ಡ್ ಎನ್ನುವ ಬ್ರಿಟಿಷ್ ಭೌತಶಾಸ್ತ್ರಜ್ಞ
ಈ ವಿದ್ಯಮಾನವನ್ನು ಗಹನವಾಗಿ ಅಭ್ಯಸಿ
ಹೀಗೆ ವರದಿ ಮಾಡಿದ್ದಾನೆ: ಈಜಿಪ್ತ್‌ನಲ್ಲಿ
ರೀತಿಯ 'ಹಾಡುವ ಮರಳು' ಇರುವುದು ನ
ಗಮನಕ್ಕೆ ಬಂದಿದೆ. ಇದರ ಅನುಭವ ನನ
ಎರಡು ಸಲ ಆಯಿತು. ರಾತ್ರಿ ನೀರವತೆ ಎಲ್ಲೆ
ಪಸರಿಸಿರಲು ಒಮ್ಮೆಲೇ ಸ್ವರಗಳು ಜೋರಾ
ಹೊಮ್ಮತೊಡಗಿದವು. ಇವು ಎಷ್ಟು ಜೋರಾ
ದ್ದವೆಂದರೆ ಅಕ್ಕಪಕ್ಕದವರು ಮಾತನಾಡಿದ
ಕೇಳುತ್ತಿರಲಿಲ್ಲ. ಇದು ಕೆಲವು ನಿಮಿಷಗಳ
ನಡೆದು ಕೊನೆಗೆ ಸ್ತಬ್ಧವಾಯಿತು.

ಆರ್.ಎ.ಬ್ಯಾಗ್‌ನಾಲ್ಡ್‌ನು ಈ ರೀತಿಯ
ಮರಳು ತೀರ ಪ್ರದೇಶಗಳಲ್ಲಿ ಮತ್ತು ಮರ
ಭೂಮಿಯ ಇಳಿಜಾರುಗಳಲ್ಲಿ ಇರುವುದನ
ಗಮನಿಸಿದ. ಪ್ರಯೋಗಗಳನ್ನು ಮಾಡಿದಾ
ತೀರ ಪ್ರದೇಶದ ಮರಳು ಹೊಮ್ಮಿಸು
'ಸಿಳ್ಳಿ'ನಂತಹ ಸದ್ದಿನ ತರಂಗಾಂತರ ಪ್ರ
ಸೆಕೆಂಡಿಗೆ ೮೦೦ರಿಂದ ೧೨೦೦ ಆವರ್ತ
(Frequency)ಗಳನ್ನು ಹೊಂದಿತ್ತು. ತೀ
ಪ್ರದೇಶದಲ್ಲಿ, ಮರಳಿನ ಶುಷ್ಕವಾಗಿರು
ಮೇಲ್ಪದರನ್ನು ಅಲುಗಾಡಿಸಿದರೆ, ಅಂದ
ಅದರ ಮೇಲೆ ನಡೆದಾಡಿದಾಗ ಇಲ್ಲವೇ ಕ
ಬಳಿಯುವಂತೆ ಹಸ್ತದಿಂದ ಬಾಚಿದಾಗ ಅಥವ
ಕೋಲನ್ನು ನೇರವಾಗಿ ರಭಸವಾಗಿ ಹೂಳಿದಾ
ಈ ಸ್ವರಗಳು ಹೊಮ್ಮುತ್ತವೆ ಎಂದು ಆತ ಬರೆದ
ಆದರೆ, ಮರುಭೂಮಿಯ ಮರಳಿನ ಮೇ
ಕೈಯಾಡಿಸಿದಾಗ ಅಥವಾ ನಡೆದಾ
ಉಂಟಾಗುವ ಸ್ವರಗಳ ಆವರ್ತನ ಕಮ್ಮಿಯಾ
ರುವುದು ಆತನ ಗಮನಕ್ಕೆ ಬಂತು. ಇಲ್
ಇನ್ನೊಂದು ವಿಷಯವನ್ನು ಆತ ಗಮನಿಸಿದ
ಅದೇನೆಂದರೆ, ಮರುಭೂಮಿ ಮರಳು



ದಿಣ್ಣೆಗಳಿಂದ ಮೇಲಿಂದ ಕೆಳಕ್ಕೆ ಇಳಿಜಾರಿನಲ್ಲಿ ಪ್ರಪಾತದಂತೆ ಬೀಳುತ್ತಿರುವಾಗ ಅವುಗಳಿಂದ ಹೊಮ್ಮುತ್ತಿದ್ದ ಶಬ್ದ ತರಂಗಗಳು ಬಹಳ ಪ್ರಬಲವಾಗಿದ್ದು, ಅಕ್ಕಪಕ್ಕದಲ್ಲಿ ಕಂಪನ ಉಂಟುಮಾಡುತ್ತಿದ್ದವು.

'ಕಲಾಹರಿ' ಮರುಭೂಮಿಯ ಮರಳನ್ನು ಪರೀಕ್ಷೆ ಮಾಡಲೆಂದು ಮುಚ್ಚಳವಿರದ ಡಬ್ಬಗಳಲ್ಲಿ ಇಟ್ಟಾಗ ಅವು ಕೆಲ ಸಮಯದ ನಂತರ ಹಾಡುವುದನ್ನು ನಿಲ್ಲಿಸಿಬಿಟ್ಟಿದ್ದವು! ಆದರೆ, ಗಾಳಿ ಒಳಹೋಗಲು ಅವಕಾಶವಿರದಂತಹ ಡಬ್ಬಗಳಲ್ಲಿ ತುಂಬಿಟ್ಟ 'ಮರಳು' ಮಾತ್ರ ತನ್ನ ಸಂಗೀತ ಪ್ರದರ್ಶನವನ್ನು ಜಾರಿಯಲ್ಲಿಟ್ಟಿತ್ತು! ಇದು ಗಾಳಿಯಲ್ಲಿರುವ ತೇವಾಂಶಕ್ಕೂ ಹಾಗೂ ಮರಳಿನ ಸಂಗೀತದ ಗುಣಕ್ಕೂ ಇರುವ ಸಂಬಂಧವನ್ನು ತೋರಿತು. ಶುಷ್ಕ ಹವೆ ಇದ್ದರೆ ಮಾತ್ರ ಮರಳುಭೂಮಿಯ ಮರಳು ಹಾಡಬಲ್ಲದು ಎಂದು ತೀರ್ಮಾನಕ್ಕೆ ಬರಲಾಯಿತು. ತೇವಾಂಶ ಇದ್ದ ಮರಳನ್ನು 200°C ವರೆಗೆ ಕಾಯಿಸಿದ ನಂತರ ಅವು ಪುನಃ ಹಾಡಲು ಆರಂಭಿಸಿದ್ದು ಈ ತೀರ್ಮಾನಕ್ಕೆ ಇನ್ನಷ್ಟು ಪುಷ್ಟಿ ನೀಡಿತು.

೧೯೭೦ರ ದಶಕದಲ್ಲಿ ನ್ಯೂ ಕಾಸ್ಟಲ್‌ನ ಎ.ಇ. ಬ್ರೌನ್ ಹಾಗೂ ಸಂಗಡಿಗರು ಹಾಡುವ ಮರಳಿನ ಮೇಲೆ ಇನ್ನಷ್ಟು ಸಂಶೋಧನೆ ಮಾಡಿದರು. ಜಗತ್ತಿನ ಎಲ್ಲಾ ಮರಳು ಪ್ರದೇಶಗಳು ಸಂಗೀತ ಹೊಮ್ಮಿಸುವುದಿಲ್ಲ. ಕೇವಲ ಕೆಲವು ಪ್ರದೇಶಗಳಲ್ಲಿ ಮಾತ್ರ ಈ ವಿದ್ಯಮಾನ ಕಂಡುಬರುವುದರಿಂದ, ಅಂತಹ ಪ್ರದೇಶಗಳ ಮರಳಿನ ಸ್ಯಾಂಪಲ್‌ಗಳನ್ನು ತರಿಸಿ ಕೊಂಡರು. ಗುಂಡು ಗುಂಡಾಗಿರುವ ಮರಳಿನ ಕಣಗಳು ಒಂದನ್ನೊಂದು ಉಜ್ಜಿಕೊಂಡಾಗ ಮಾತ್ರವೇ ಈ ಸ್ವರ ಹೊಮ್ಮುತ್ತವೆ ಎನ್ನುವ ವಾದವನ್ನು ಅವರುಗಳು ನಿರಾಕರಿಸಿದರು. ಮರಳ ಕಣಗಳ ಆಕಾರ ಮುಖ್ಯವಲ್ಲ, ಅವುಗಳ ಗಾತ್ರಗಳಲ್ಲಿ ಏಕರೂಪತೆ ಇರಬೇಕಾದ್ದು ಮುಖ್ಯ ಎಂದು ಅವರ ಸಂಶೋಧನೆಯಿಂದ ಸಿದ್ಧವಾಯಿತು. ಮರಳಿನಲ್ಲಿ ಕಸ ಅಥವಾ ಇನ್ನಾವುದೇ ವಸ್ತುವಿನ ಕಲಬೆರಕೆಯಾಗಿದ್ದರೂ ಸಂಗೀತ ಹೊಮ್ಮುವುದು ಸಾಧ್ಯವಿಲ್ಲ ಎಂದು ತೋರಿಸಿಕೊಟ್ಟರು.

ರಶಿಯಾದ ವಿಜ್ಞಾನಿಗಳು ತಮ್ಮ ನಾಡಿನಲ್ಲಿರುವ ಸಂಗೀತ ಹೊಮ್ಮಿಸುವ ಮರಳಿನ ಬಗ್ಗೆ ಸಂಶೋಧನೆ ನಡೆಸಿ ತಮ್ಮ ವಾದ ಸರಣಿಗಳನ್ನು ಮುಂದಿಟ್ಟಿದ್ದಾರೆ. ಕಜಕಿಸ್ಥಾನ ಪ್ರದೇಶದ 'ಇಲ್ಲಿ' ನದಿಯ ಹತ್ತಿರ ಇರುವ ಮರಳು ದಿಣ್ಣೆಯೊಂದು ತನ್ನ ಭಯಾನಕ ಸಂಗೀತದಿಂದ ಜನರನ್ನು ತಲ್ಲಣಗೊಳಿಸುತ್ತದೆ. ಈ ದಿಣ್ಣೆಯ ಮರಳು ಸ್ವಚ್ಛವಾಗಿದ್ದು ಹಳದಿ ಬಣ್ಣದಿಂದ ಕಂಗೊಳಿಸುತ್ತದೆ. ಇದನ್ನು ಹತ್ತಿ ಇಳಿದವರ ಅನುಭವಕ್ಕೆ ಬಂದ ಸಂಗತಿಗಳು ತುಂಬಾ ವಿಸ್ಮಯಕಾರಿಯಾಗಿವೆ. ''ನಾವು ಅದರ ಮೇಲಿಂದ ಕೆಳಕ್ಕೆ ಜಾರುತ್ತಿದ್ದಂತೆ ಪ್ರತಿ ಸೆಕೆಂಡಿಗೂ ವಿಚಿತ್ರ ಹಾಗೂ ಭಯಂಕರ ಶಬ್ದಗಳು ಬರಲು ಪ್ರಾರಂಭ ಆಗುತ್ತವೆ. ನಾವು, ಎರಡು ಕೈಗಳಿಂದ ಪಕ್ಕದ ಮರಳನ್ನು ಜಾರಿಸುತ್ತಿರುವಾಗ, ಶಬ್ದದ ತೀವ್ರತೆ ಹೆಚ್ಚಾಗಿ ವಿಮಾನವೊಂದು ಹಾರುವಾಗ ಉಂಟಾಗುವ ಶಬ್ದದಂತೆ ಕಿವಿಗಡಚಿಕ್ಕಿದ ಅನುಭವವಾಗುತ್ತದೆ. ಇದು ಅನೇಕರ ಅನುಭವ.

ಆದರೆ, ಗಾಳಿ ಬೀಸದ ದಿನ ಹಾಗೂ ಮಳೆಗಾಲದಲ್ಲಿ ಈ ಮರಳು ಸ್ತಬ್ಧವಾಗಿರುವುದು. ಈ ಮರುಭೂಮಿಯ ಮರಳಿನಿಂದ ಸಂಗೀತ ಹೊಮ್ಮಲು, ಮರಳಿನ ಕಣಗಳ ನಡುವೆ ಗಾಳಿಯ ಸಂಚಾರವೇ ಕಾರಣ ಎಂದು ರಶಿಯನ್ ವಿಜ್ಞಾನಿಗಳ ಅಭಿಪ್ರಾಯ. ಮರಳದಿಣ್ಣೆಗಳು ಪ್ರಪಾತದಂತೆ ಕುಸಿದಾಗ ಕಣಗಳ ನಡುವೆ ಇರುವ ಅಂತರ ಮೊದಲಿಗೆ ದೊಡ್ಡದಾಗಿ ನಂತರ ಕಿರಿದಾಗುವುದರಿಂದ 'ಗಾಳಿ'ಯು ಒಮ್ಮೆ ಒಳಕ್ಕೆ ಎಳೆಯಲ್ಪಟ್ಟರೆ ಇನ್ನೊಮ್ಮೆ ಹೊರಕ್ಕೆ ದೂಡಲ್ಪಡುವುದು. ಇದರಿಂದ ಈ ರೀತಿಯ ಶಬ್ದಗಳು ಉಂಟಾಗುತ್ತವೆ ಎಂದು ಅವರ ತರ್ಕ. ಸೋವಿಯತ್ ಭೌತಶಾಸ್ತ್ರಜ್ಞ ವೈ. ವಿ. ರಿಜ್‌ಕೊ ಇನ್ನೊಂದು ವಾದವನ್ನು ಮುಂದಿಟ್ಟ. ಅವನ ಪ್ರಕಾರ, ಮರಳಿನ ಕಣಗಳ ತಿಕ್ಕಾಟದಿಂದ ಅವುಗಳಲ್ಲಿ ವಿದ್ಯುತ್ ಆವೇಶ ಉತ್ಪನ್ನವಾಗುತ್ತದೆ. ಇದರ ಫಲಸ್ವರೂಪ ಅವುಗಳಲ್ಲಿ ಆಕರ್ಷಣೆ ಉಂಟಾಗಿ ಈ ರೀತಿಯ ಸ್ವರಗಳು ಹೊಮ್ಮುತ್ತವೆ.

ಈ ಎಲ್ಲಾ ವಿವರಣೆಗಳು 'ಮರಳು' ಹೇಗೆ ಸಂಗೀತವನ್ನು ಹೊಮ್ಮಿಸಬಲ್ಲದು ಎನ್ನುವುದನ್ನು ವಿವರಿಸುತ್ತವೆಯೇ ಹೊರತು, ಮರಳಿನ ಯಾವ ಗುಣದಿಂದಾಗಿ ಈ ಸ್ವರಗಳು ಮೂಡುತ್ತವೆ ಎನ್ನುವುದನ್ನು ತಿಳಿಸುವುದಿಲ್ಲ. ಇಂದಿಗೂ ನಿಸರ್ಗ ಈ ರಹಸ್ಯವನ್ನು ಬಿಟ್ಟು ಕೊಟ್ಟಿಲ್ಲ! ಮಾನವನೂ ತನ್ನ ಪ್ರಯತ್ನ ನಿಲ್ಲಿಸಿಲ್ಲ. ಆದರೆ ಈ ಯಾವುದರ ಪರಿವೆಯೇ ಇಲ್ಲದಂತೆ ವಿಶ್ವದ ಹಲವಾರು ಪ್ರದೇಶಗಳಲ್ಲಿ ಮರಳು ಇಂದಿಗೂ 'ಹಾಡುತ್ತಾ', 'ಪಿಸುಗುಟ್ಟುತ್ತಾ', 'ಬೊಗಳುತ್ತಾ', 'ಹ್ಲೂಗುಟ್ಟುತ್ತಾ', 'ಸಿಳ್ಳುಹಾಕುತ್ತಾ', 'ಗರ್ಜಿಸುತ್ತಾ' ಎಲ್ಲರನ್ನು ಮೂಕವಿಸ್ಮಿತಗೊಳಿಸುತ್ತಲೇ ಇದೆ. ●

ನಿಗೂಢ ಜಗತ್ತು

ಅವು ಕೆಲ ಸಮಯದ ನಂತರ ಹಾಡುವುದನ್ನು ನಿಲ್ಲಿಸಿಬಿಟ್ಟಿದ್ದವು!

ಮುಂದಿನ ತಿಂಗಳು

ನಿಗೂಢ ಜಗತ್ತಿನ ಇನ್ನೆರಡು ರೋಚಕ ವಿದ್ಯಮಾನಗಳ ಪರಿಚಯ ಮಾಡಲಾಗುವುದು :

- ✧ ಉಲ್ಟಾ ತೂಗಾಡುವ ದ್ವೀಪಗಳು!
- ✧ ಅಲೆಮಾರಿ ಕಣ್ಣುಗಳು!



ಗರ್ಭಿಣಿಯರು ವೈದ್ಯಕೀಯ ಪರೀಕ್ಷೆಗೆ ಏಕೆ ಒಳಗಾಗಬೇಕು?

ಸ್ತ್ರೀಯು ಗರ್ಭವತಿಯಾಗುವುದು ಒಂದು ನೈಸರ್ಗಿಕ ಕ್ರಿಯೆಯಾದರೂ ಅವಳನ್ನು ಮೇಲಿಂದ ಮೇಲೆ ಪರೀಕ್ಷೆ ಮಾಡಬೇಕಾಗುತ್ತದೆ. ಇದು ಕೆಲವರಿಗೆ ಸೋಜಿಗವಾಗಿ ತೋರಬಹುದು. ಈ ತರಹ ತಪಾಸಣೆಯಿಂದ ಗರ್ಭಿಣಿ ಸ್ತ್ರೀ ಹಾಗೂ ಅವಳ ಉದರದಲ್ಲಿ ಬೆಳೆಯುತ್ತಿರುವ ಮಗುವಿಗೆ, ಅವಳನ್ನು ಹೆರಿಗೆಮಾಡುವ ವೈದ್ಯರಿಗೆ, ಕೊನೆಗೆ ಅವರ ಮನೆಯವರಿಗೂ ಸಹ ಹಲವಾರು ಲಾಭಗಳುಂಟು.

○ ಡಾ. ಸುನಂದಾ ಕುಲಕರ್ಣಿ
ಸ್ತ್ರೀ ರೋಗ ಹಾಗೂ ಪ್ರಸೂತಿ ತಜ್ಞರು
ವಾಣಿ ವಿಲಾಸ ಆಸ್ಪತ್ರೆ, ಬೆಂಗಳೂರು

ಗರ್ಭಿಣಿಯರ ತಪಾಸಣೆ ಸ್ತ್ರೀಯು ಗರ್ಭವತಿಯೆಂದು ತಿಳಿದಾಗಿನಿಂದ ಶುರುವಾಗುತ್ತದೆ. ಸ್ತ್ರೀಯು ಮಗುವನ್ನು ಹಡೆದ ನಂತರವೂ ಸಹಿತ ಕೆಲವು ತಪಾಸಣೆಗಳು ಇರುತ್ತವೆ. ಸ್ತ್ರೀಯು ಗರ್ಭವತಿಯಾಗುವುದು ಒಂದು ನೈಸರ್ಗಿಕ ಕ್ರಿಯೆಯಾದರೂ ಅವಳನ್ನು ಮೇಲಿಂದ ಮೇಲೆ ಪರೀಕ್ಷೆ ಮಾಡಬೇಕಾಗುತ್ತದೆ. ಇದು ಕೆಲವರಿಗೆ ಸೋಜಿಗವಾಗಿ ತೋರಬಹುದು. ಈ ತರಹ ತಪಾಸಣೆಯಿಂದ ಗರ್ಭಿಣಿ ಸ್ತ್ರೀ ಹಾಗು ಅವಳ ಉದರದಲ್ಲಿ ಬೆಳೆಯುತ್ತಿರುವ ಮಗುವಿಗೆ, ಅವಳನ್ನು ಹೆರಿಗೆಮಾಡುವ ವೈದ್ಯರಿಗೆ, ಕೊನೆಗೆ ಅವರ ಮನೆಯವರಿಗೂ ಸಹ ಹಲವಾರು ಲಾಭಗಳುಂಟು. ಪ್ರತಿಯೊಬ್ಬ ಸ್ತ್ರೀ ತಾನು ಬಯಸಿ, ನಿರೀಕ್ಷಿಸಿ, ಆಶಿಸಿದ ಗರ್ಭವು ಹೆರಿಗೆಯಲ್ಲಿ ಪರ್ಯವಸಾನಗೊಂಡು, ಆರೋಗ್ಯಯುತ ಮಗು ಪಡೆಯಲು ಬಯಸುತ್ತಾಳೆ. ಇದು ಗರ್ಭಿಣಿಯರ ತಪಾಸಣೆಯ ಉದ್ದೇಶವೂ ಆಗಿದೆ.

ಈ ತಪಾಸಣೆಗೆ ಮೇಲಿಂದ ಮೇಲೆ ಹೋಗುವುದರಿಂದ ವೈದ್ಯರಲ್ಲಿ ಹಾಗು ಗರ್ಭಿಣಿ ಸ್ತ್ರೀಯರಲ್ಲಿ ಬಾಂಧವ್ಯ ಬೆಳೆಯುತ್ತದೆ. ಇದರಿಂದ ಇಬ್ಬರೂ ಪರಿಚಿತರಾಗುವುದರಿಂದ ಹೆರಿಗೆಯ ಸಮಯದಲ್ಲಿ ತಮಗೆ ಗೊತ್ತಿದ್ದ ವೈದ್ಯರೇ ಇರುವುದರಿಂದ ಹೊಸದಾಗಿರುವ ಹೆರಿಗೆಯ ಕೋಣೆಯಾಗಲಿ, ಅಪರಿಚಿತ ದಾದಿಯರಿಂದಾಗಲೀ, ಬಗೆಬಗೆಯ ಉಪಕರಣಗಳಿಂದಾಗಲೀ, ಹೆದರಿಕೆಯಾಗದೇ ಧೈರ್ಯ ಬರುತ್ತದೆ. ವೈದ್ಯರು ಹೇಳಿದ ಹಾಗೆ ಗರ್ಭಿಣಿ ಸ್ತ್ರೀಯು ಮಾಡಲು ತಯಾರಾಗುತ್ತಾಳೆ. ಇದು ಅಲ್ಲದೆ ಗರ್ಭಿಣಿ ಸ್ತ್ರೀಯ ಮನೆಯವರ ಬಗ್ಗೆ, ಅವಳ ಗಂಡನ ಕೆಲಸ, ಮನೆಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ವೈದ್ಯರಿಗೂ ಗೊತ್ತಾಗಿರುವುದರಿಂದ ಅವಳಿಗೆ ಯಾವ ಮಾತ್ರೆ, ಟಾನಿಕ್ಕು ಬರೆಯಬೇಕು, ಯಾವುದನ್ನು ಅವಳು ಕೊಳ್ಳಲು ಶಕ್ತಳು ಎಂಬುದನ್ನು ನಿರ್ಧರಿಸಲು ಅನುಕೂಲವಾಗುತ್ತದೆ.

ಪರಿಚಿತರಾಗಿರುವುದರಿಂದ ವೈದ್ಯರೂ ಸಹಿತ ಹೆಂಗಸಿಗೆ, ಅವಳ ಯಜಮಾನರಿಗೆ ಕುಟುಂಬ ಕಲ್ಯಾಣ ಯೋಜನೆಯ ಬಗ್ಗೆ, ಅದರ ಲಾಭದ ಬಗ್ಗೆ, ಅದರ ಉಪಯೋಗದ ಬಗ್ಗೆ ಹೇಳಬಹುದು. ತದನಂತರ ಹೆಂಗಸೂ ಸಹಿತ ತಿರುಗಿ ತನ್ನ ಗಂಡನೊಡನೆ ಕೂಲಂಕಷವಾಗಿ ಚರ್ಚಿಸಿ ಹೆರಿಗೆಯಾದ ನಂತರ ಯಾವ ತರಹದ ಕುಟುಂಬ ಯೋಜನೆ ಮಾಡಬೇಕು, ಮಾತ್ರೆ ತೆಗೆದುಕೊಳ್ಳಬೇಕೆ; ನಿರೋಧ ಉಪಯೋಗಿಸಬೇಕೆ ಅಥವಾ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕೆ ಎಂಬುದಕ್ಕೆ ಒಂದು ನಿರ್ಧಾರ ಮಾಡಲು ಸಾಕಷ್ಟು ಸಮಯವೂ ಸಿಗುತ್ತದೆ. ಆಕೆ ಹೆರಿಗೆಯ ನಂತರ ಒಂದು ನಿರ್ಣಯ ತೆಗೆದುಕೊಳ್ಳಬಲ್ಲಳು.

ತಿಂಗಳು ತಿಂಗಳು ವೈದ್ಯರು ಸ್ತ್ರೀಯನ್ನು ಪರೀಕ್ಷಿಸುವುದರಿಂದ ಸ್ತ್ರೀಯಲ್ಲಿ ಅವಳಿಮಕ್ಕಳು ಬೆಳೆಯುತ್ತಿವೆಯೇ, ಮಗುವು ಬೆಳೆಯದೇ ಸಣ್ಣದಾಗಿದೆಯೇ, ಅಥವಾ ದೊಡ್ಡದಾಗಿದೆಯೇ, ಇಲ್ಲವೇ ಮಗುವೇ ಇರದೆ ಕೇವಲ ದ್ರಾಕ್ಷಿಯ ಗರ್ಭ ಬೆಳೆಯುತ್ತಿದೆಯೇ ಮುಂತಾದವು ತಿಳಿಯುತ್ತವೆ. ಗರ್ಭವಿದ್ದರೂ ಅದು ಗರ್ಭದಲ್ಲಿ ಬೆಳೆಯುತ್ತಿದೆಯೇ ನಳಿಕೆಯಲ್ಲಿ ಬೆಳೆಯುತ್ತಿದೆಯೇ ಎಂಬುದನ್ನು ಸಹಿತ ಸಂಶಯಬಂದಾಗ

ಶ್ರವಣಾತೀತಯಂತ್ರದ ಸಹಾಯದಿಂದ ಕಂಡು ಹಿಡಿದು ಯೋಗ್ಯ ಸಮಯದಲ್ಲಿ ಚಿಕಿತ್ಸೆ ಮಾಡಿ, ತಾಯಿಯ ಪ್ರಾಣಾಪಾಯವನ್ನು ತಪ್ಪಿಸಲು ಬರುತ್ತದೆ. ಇದೂ ಅಲ್ಲದೆ ತಾಯಿಯು ರಕ್ತಹೀನತೆಯಿಂದ ಬಳಲುತ್ತಿದ್ದಾಳೆಯೇ ಹೃದ್ರೋಗವಿದೆಯೇ, ರಕ್ತದೊತ್ತಡ ಹೆಚ್ಚಿದೆಯೇ ಕಾಲೂತ ಬರುತ್ತಿದೆಯೇ ಮುಂತಾದವುಗಳು ಬೇಗ ಗೊತ್ತಾಗುವುದರಿಂದ ಕೆಲವು ರೋಗಗಳನ್ನು ಪೂರ್ತಿಗುಣಪಡಿಸಲು ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ರಕ್ತಹೀನತೆ. ಇನ್ನು ಕೆಲವು ರೋಗಗಳ ತೀವ್ರತೆಯನ್ನು ಕಡಿಮೆ ಮಾಡಲು ಬರುತ್ತದೆ. ಅವು ಯಾವುವೆಂದರೆ ರಕ್ತದೊತ್ತಡ. ಇದರಿಂದ ಮುಂಬರುವ ಮೂರ್ಛೆರೋಗ ತಪ್ಪಿಸಲು ಬರುತ್ತದೆ. ಇನ್ನು ಕೆಲರೋಗಗಳನ್ನು ಗುರುತಿಸಿ ಚಿಕಿತ್ಸೆಮಾಡಲು ಬರುತ್ತದೆ. ಅವು ಯಾವುವೆಂದರೆ ಮಧುಮೇಹರೋಗ, ಹೃದ್ರೋಗ ಮುಂತಾದವುಗಳು.


ಸ್ತ್ರೀಗೆ ಬಸಿರಿನಲ್ಲಾಗುವ ಅಪಾಯದ ಸಂಕೇತಗಳನ್ನು ವಿವರಿಸಿಹೇಳಿ ಆ ಗರ್ಭಿಣಿಯರು ಅಪಾಯದ ಸಂಕೇತಗಳನ್ನು ಕಂಡ ತಕ್ಷಣ ವೈದ್ಯರ ಹತ್ತಿರ ಹೋಗಿ ಚಿಕಿತ್ಸೆ ಮಾಡಿಸಿ ಕೊಳ್ಳಬಹುದು ಎಂದು ತಿಳಿಹೇಳಲು ಬರುತ್ತದೆ. ಉದಾಹರಣೆಗೆ ನೀರು ಹೋಗುವುದು, ರಕ್ತಸ್ರಾವ, ತಲೆಸುತ್ತು, ರಕ್ತವಾಂತಿ, ಕಾಮಾಲೆ, ಹೊಟ್ಟೆನೋವು ಇವೇ ಮುಂತಾದವುಗಳು.

ಗರ್ಭಿಣಿ ಸ್ತ್ರೀಯರಲ್ಲಿ ಬರುವ ಸಾಮಾನ್ಯ ತೊಂದರೆಗಳಾವುವು, ಅವುಗಳು ಬಂದರೆ ಏನು ಮಾಡಬೇಕು, ಅವು ಹೆಚ್ಚಾದರೆ ಏನು ತೆಗೆದು ಕೊಳ್ಳಬೇಕು ಎಂಬುದರ ಬಗ್ಗೆ ತಿಳುವಳಿಕೆ ನೀಡಲು ಬರುತ್ತದೆ. ಉದಾಹರಣೆಗೆ ಹೇಳುವುದಾದರೆ ಮೊದಲ ತ್ರೈಮಾಸಿಕದಲ್ಲಿ ಬರುವ ವಾಂತಿ, ಬಿಳಿಮುಟ್ಟು, ಬೆನ್ನುನೋವು ಮುಂತಾದುವುಗಳು.

ಗರ್ಭಕಾಲ ಒಟ್ಟು ೨೮೦ ದಿನಗಳವರೆಗೆ ಇರುತ್ತದೆ. ಅಂದರೆ ೧೦ ಚಂದ್ರಮಾಸಿಕ ಇಲ್ಲವೆ ೯ ಕ್ಯಾಲೆಂಡರ್ ತಿಂಗಳ ಮೇಲೆ ೭ ದಿನಗಳು. ಒಟ್ಟು ೯ ತಿಂಗಳನ್ನು ೩ ತ್ರೈಮಾಸಿಕದಂತೆ ಭಾಗಿಸಲಾಗಿದೆ. ಮೊದಲ ೨ ತ್ರೈಮಾಸಿಕದಲ್ಲಿ ಅಂದರೆ ಸುಮಾರು ೭ ತಿಂಗಳವರೆಗೆ ತಿಂಗಳಿಗೊಂದು ಸಲ ನಂತರ ೧೫ ದಿನಗಳಿಗೊಂದು ಸಲ ಕೊನೆಯ ತಿಂಗಳಲ್ಲಿ ಮಾತ್ರ ವಾರಕ್ಕೆ ಒಂದು ಸಲ ತೋರಿಸಲು ಬರಬೇಕಾಗುತ್ತದೆ.

ಸ್ತ್ರೀಯು ಗರ್ಭವತಿಯಿದ್ದಾಗ, ಅವಳ ಮನೆತನದಲ್ಲಿ ಇರುವ ಕೆಲವು ಅನುವಂಶಿಕ ರೋಗಕ್ಕೆ ಮಗುವು ತುತ್ತಾಗಿದೆಯೇ ಎಂಬುದನ್ನು ಸಹ ಗರ್ಭದ್ರವದ ಸಹಾಯದಿಂದ ಕಂಡು ಹಿಡಿಯಲು ಬರುತ್ತದೆ. ಹಾಗೇನಾದರೂ ಅದು ಅಪಾಯದ ಸ್ಥಿತಿಯಲ್ಲಿದ್ದರೆ, ಗರ್ಭವನ್ನು ತೆಗೆಯಬಹುದು.

ಆಸ್ಪತ್ರೆಗೆ ಬಂದನಂತರ ಸ್ತ್ರೀಯ ತೂಕ, ರಕ್ತದೊತ್ತಡ, ಮೂತ್ರ ತಪಾಸಣೆ, ರಕ್ತದ ಗುಣ ಮುಂತಾದವುಗಳನ್ನು ನೋಡುತ್ತಾರೆ. ಇದಲ್ಲದೇ ಒಂದು ಸಲವಾದರೂ ಶ್ರವಣಾತೀತಯಂತ್ರದಲ್ಲಿ ಮಗುವನ್ನು ನೋಡಬೇಕಾಗುತ್ತದೆ. ನಂತರ ರಕ್ತವೃದ್ಧಿಗೆ ಕಬ್ಬಿಣ ಖನಿಜದ ಮಾತ್ರೆಗಳು ಹಾಗು ರಕ್ತವರ್ಧಕಕ್ಕೆ ಅನುಕೂಲವಾಗುವ ಫಾಲಿಕ ಆಸಿಡ್ ಮಾತ್ರೆ, ಮೂಳೆಗಳ ಸಲುವಾಗಿ ಕ್ಯಾಲ್ಸಿಯಂ ಲವಣದ ಮಾತ್ರೆಗಳನ್ನು ಕೊಡುತ್ತಾರೆ. ಮಗುವು ಹುಟ್ಟಿದನಂತರ ಹೊಕ್ಕಳಬಳ್ಳಿಯನ್ನು ಕೊಯ್ದಾಗ ಧನುರ್ವಾತವಾಗದಿರಲೆಂದು



ಚುಚ್ಚುಮದ್ದನ್ನು ಕೊಡುತ್ತಾರೆ. ಈ ಮದ್ದಿನಿಂದ ತಾಯಿಗೂ ಹಾಗೂ ಮಗುವಿಗೂ ಕ್ಷೇಮ.

ಕೆಲವು ಸಲ ಸ್ತ್ರೀಯರಿಗೆ ತಾವು ಮುಟ್ಟಾದ ತಾರೀಖು ನೆನಪಿರುವುದಿಲ್ಲ. ಕಾರಣ ಮೇಲಿಂದ ಮೇಲೆ ಪರೀಕ್ಷೆ, ಪೂರಕ ಪರೀಕ್ಷೆ (Investigations) ಗಳನ್ನು ಮಾಡುವುದರಿಂದ ಮಗುವಿನ ಅಂದಾಜು ವಯಸ್ಸು ತಿಳಿಯಲು ಬರುತ್ತದೆ. ಶ್ರವಣಾತೀತಯಂತ್ರ ಇಂಥ ಸಮಯದಲ್ಲಿ ಬಹಳ ಸಹಾಯ ಮಾಡುತ್ತದೆ. ಅದು ಗರ್ಭವತಿ ಇದ್ದಾಳೆಯೇ, ಇದ್ದರೆ ಗರ್ಭದಲ್ಲಿಯೇ ಮಗುವು ಬೆಳೆಯುತ್ತಿದೆಯೇ, ಬೆಳೆಯುತ್ತಿದ್ದರೆ ಅದರ ವಯಸ್ಸೆಷ್ಟು, ಅದು ಯಾವ ರೀತಿ ಮಲಗಿದೆ, ಆಡುತ್ತಿದೆಯೇ, ಅದರ ಸುತ್ತಲೂ ಸಾಕಷ್ಟು ನೀರಿದೆಯೇ, ಮಾಸು ಸರಿಯಾದ ಸ್ಥಾನದಲ್ಲಿಯೇ, ಮುಂದುಗಡೆಯೇ ಇದೆಯೇ, ಮಗುವು ಸರಿಯಾಗಿ ಬೆಳೆಯುತ್ತಿದೆಯೇ ಮುಂತಾದವುಗಳು ತಿಳಿಯುತ್ತದೆ.

ಮೊದಲ ಮಗುವು ಕಷ್ಟಕರವಾಗಿ ಹುಟ್ಟಿದ್ದರೆ, ಇಲ್ಲವೇ ಸತ್ತೇ ಹುಟ್ಟಿದ್ದರೆ ಅಥವಾ ಶಸ್ತ್ರಕ್ರಿಯೆಯಿಂದ ಹುಟ್ಟಿದ್ದರೆ, ಈ ಸಲ ಹೆರಿಗೆಯನ್ನು ಹೇಗೆ ಮಾಡಬೇಕೆಂಬುದನ್ನು ಮೊದಲೇ ಯೋಚಿಸಲು ಬರುತ್ತದೆ. ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮನೆಯಲ್ಲಿಯೂ ಸಹ ಮಾಡಲು ವ್ಯವಧಾನ ಸಿಗುತ್ತದೆ. ಕೆಲವು ಸಲ ಮಗುವು ದಿನದಾಟಿ ಹುಟ್ಟಬಹುದು, ದಿನ ತುಂಬುವ ಮೊದಲೇ ಹುಟ್ಟಬಹುದು. ಇಲ್ಲವೇ ಸಣ್ಣದಾಗಿ ಬೆಳೆದು ಅದು ಬೇಗ ಹುಟ್ಟಿದೆಯೋ ಅಥವಾ ಸಣ್ಣಗಿರುವುದೋ ಗೊತ್ತಾಗಲಿಕ್ಕಿಲ್ಲ. ತಪಾಸಣೆಯಿಂದ ಈ ತೊಂದರೆ ಗೊತ್ತಾದರೆ, ದಿನದಾಟಿದ (ವೈದ್ಯರು ಕೊಟ್ಟ ಹೆರಿಗೆಯ ದಿನ) ಆ ಸ್ತ್ರೀಗೆ ಹೆರಿಗೆ ನೋವು ತರಿಸಿ ಹೆರಿಗೆಯನ್ನು ಮಾಡಿಸಬಹುದು. ಅಕಾಲದಲ್ಲಿ ಹೆರಿಗೆಯ ನೋವು ಬಂದರೆ, ಆ ನೋವನ್ನು ನಿಲ್ಲಿಸುವ ಮಾತ್ರೆ ಕೊಡಬಹುದು. ಮಗುವೇ ಸಣ್ಣದಾಗಿದ್ದರೆ, ಅದರ ಕಾರಣ ತಿಳಿದು, ತಾಯಿಗೆ ಚಿಕಿತ್ಸೆ ಮಾಡಿ ಮಗುವು ದೊಡ್ಡದಾಗುವಂತೆ ಮಾಡಬಹುದು. ಇದೆಲ್ಲ ಗರ್ಭಿಣಿ ಸ್ತ್ರೀ ತಿಂಗಳು, ತಿಂಗಳು ಪ್ರಸೂತಿಪೂರ್ವ ತಪಾಸಣೆಗೆ ಸರಿಯಾಗಿ ಬಂದರೆ ಮಾತ್ರ ಸಾಧ್ಯ.

ಮೊದಲ ಹೆರಿಗೆ ಶಸ್ತ್ರ ಚಿಕಿತ್ಸೆಯಿಂದ ಆಗಿದೆಯೆಂದು ಇಟ್ಟುಕೊಳ್ಳೋಣ. ಎರಡನೆಯ ಹೆರಿಗೆಯನ್ನು ಶಸ್ತ್ರಕ್ರಿಯೆಯಿಂದಲೇ ಮಾಡಬೇಕೆಂದಿಲ್ಲ. ಈ ಹೆರಿಗೆಯ ನಿರ್ಣಯ, ಮೊದಲ ಹೆರಿಗೆಯನ್ನು ಯಾವ ಕಾರಣಕ್ಕೆ ಮಾಡಿದ್ದಾರೆ ಎಂಬುದನ್ನು ಅವಲಂಬಿಸಿದೆ. ಎರಡನೆಯ ಹೆರಿಗೆಯನ್ನು ಶಸ್ತ್ರಕ್ರಿಯೆಯಿಂದಲೇ ಮಾಡುವುದಾದರೆ, ಅವಳು ನೋವುತಿಂದನಂತರ ಮಾಡುವ ಬದಲು ದಿನ ಗೊತ್ತುಮಾಡಿಕೊಂಡು ಮೊದಲೇ ಮಾಡಬಹುದು. ಇಂಥ ಯೋಜನೆಗಳನ್ನು ಮಾಡಲು, ಯೋಚಿಸಲು, ಕಾರ್ಯಗತಮಾಡಲು ವೇಳೆ, ಜಿಜ್ಞಾಸೆ ವಿಚಾರಶಕ್ತಿ ಬೇಕು. ಅಂತೆಯೇ ಗರ್ಭಿಣಿ ಸ್ತ್ರೀ ಮೊದಲಿನಿಂದಲೂ ವೈದ್ಯರ ಹತ್ತಿರ ಬರುತ್ತಿದ್ದರೆ ಇದಕ್ಕೆಲ್ಲ ಸಾಕಷ್ಟು ಸಮಯ ದೊರೆಯುತ್ತದೆ.

ಹೊಟ್ಟೆಯಲ್ಲಿ ಒಂದು ವೇಳೆ ವಿಕೃತ ಮಗು ಇದೆಯೆಂದು ತಿಳಿದರೆ, ಅದು ಹುಟ್ಟಿ ಎಲ್ಲರನ್ನು ದುಃಖಕ್ಕೀಡುಮಾಡಿ, ಸಮಾಜಕ್ಕೆ ಭಾರ, ಮನೆಯವರ ತಾತ್ಸಾರ ಹಾಗು ಒಡಹುಟ್ಟಿದವರಿಗೆ ಹೊರೆಯಾಗುವುದನ್ನು ತಪ್ಪಿಸಲೂ ಸಹ ಬರುತ್ತದೆ. ಇಂಥ ವಿಕೃತ ಮಗುವನ್ನು ಗರ್ಭದಲ್ಲಿದ್ದಾಗ ಕಂಡುಹಿಡಿಯಲು ಪೂರಕ ಪರೀಕ್ಷೆಗಳನ್ನು ಮಾಡಿ ಕಂಡು ಹಿಡಿದು, ಗರ್ಭಪಾತ ಮಾಡಿ ಮುಂದಾಗುವ ಅನಾಹುತಗಳನ್ನು ತಪ್ಪಿಸಬಹುದು.

ಮೊಲೆಯ ತೊಟ್ಟು ಸರಿಯಾಗಿದ್ದರೆ, ಹುಟ್ಟಿದ ನಂತರ ತಾಯಿ ಮಗುವಿಗೆ ಹಾಲುಣಿಸಬಹುದು. ಇದರಿಂದ ತಾಯಿಗೆ ಎದೆಭಾರ ಕಡಿಮೆಯಾಗಿ, ಮಗುವಿಗೂ ಆಹಾರ ಹೊಟ್ಟೆಯಲ್ಲಿ ಹೋಗಿ ಇಬ್ಬರಿಗೂ ಸಂತೋಷವಾಗುತ್ತದೆ. ಆದರೆ ಈ ತೊಟ್ಟು ಚಪ್ಪಟೆಯಾಗಿದ್ದರೆ, ಮಗುವಿಗೆ ಕುಡಿಯಲು ಬಾರದೇ, ತಾಯಿಯ ಹಾಲು ಗಡ್ಡೆಕಟ್ಟಿ ಕೀವಾಗಿ ಇಬ್ಬರಿಗೂ ತೊಂದರೆಯಾಗುತ್ತದೆ. ಮಗುವು ಹಸಿವೆಯಿಂದ ಚೀರಾಡಿ, ತಾಯಿ ನೋವಿನಿಂದ ಕೂಗಾಡಿ, ವೈದ್ಯರೂ ಆತಂಕದಿಂದ ಒದ್ದಾಡಬೇಕಾಗುತ್ತದೆ. ಮೊಲೆ ಗಡ್ಡೆ ನಂಜಿನಿಂದ ತುಂಬಿ, ಅದನ್ನು ಕೊಯ್ದಾಗ ಹೆರಿಗೆಯ ನೋವೇ ಮೇಲೆಂದು ತಾಯಿಯೂ ಅಳಬಹುದು. ಬಸಿರು ಇರುವಾಗ, ಸರಿಯಾಗಿ ಮೊಲೆಯ ತೊಟ್ಟನ್ನು ತೆಗೆಯುವ ಕೆಲಸಮಾಡಿದ್ದರೆ ಮಾತ್ರ ಸಂತೋಷವಾಗಿರಲು ಸಾಧ್ಯ.

ಮಗುವು ತಾಯಗರ್ಭದಲ್ಲಿ ಅಡ್ಡಡ್ಡವಾಗಿದ್ದರೆ, ಸಾಮಾನ್ಯವಾಗಿ ಶಸ್ತ್ರಕ್ರಿಯೆಯಿಂದಲೇ ತೆಗೆಯಬೇಕಾಗುತ್ತದೆ. ಬಸಿರು ಇರುವಾಗ ಮೊದಲೇ ಗರ್ಭಿಣಿ ಸ್ತ್ರೀ ಬಂದರೆ, ಮಗುವನ್ನು ತಿರುಗಿಸಿ, ತಲೆಕೆಳಗೆ ಬರುವಂತೆ ಮಾಡಿ, ಹೆರಿಗೆಯನ್ನು ಸಲೀಸಾಗಿ ಮಾಡಬಹುದು. ಶಸ್ತ್ರಕ್ರಿಯೆಯನ್ನು ಉಳಿಸಬಹುದು.

ಬಸಿರಾದಾಗಿನಿಂದ ಹೆರಿಗೆಯವರೆಗೆ, ಪೂರ್ವ ತಪಾಸಣೆಯಿಂದ ಸ್ತ್ರೀಯ ಆರೋಗ್ಯ ಸುಧಾರಿಸಿ, ಅವಳು ಮಾನಸಿಕವಾಗಿ, ದೈಹಿಕವಾಗಿ ಹೆರಿಗೆ ಮತ್ತು ಮುಂಬರುವ ಯಾವುದೇ ಆಪತ್ತನ್ನು ಎದುರಿಸಲು ಸಿದ್ಧಳಾಗುತ್ತಾಳೆ. ಅಲ್ಲದೇ ಆರೋಗ್ಯವಂತ ಮಗುವಿನ ತಾಯಿಯೂ ಆಗುತ್ತಾಳೆ. ●

ಗರ್ಭಿಣಿಯರ ಸೌಂದರ್ಯ ರಕ್ಷಣೆ

ಹೆಣ್ಣು ತಾಯಿಯಾದರೆ ಅವಳ ಸೌಂದರ್ಯಕ್ಕೆ ಅಂತ್ಯ ಎಂಬುದು ಹಲವರ ತಪ್ಪು ಕಲ್ಪನೆಯಾಗಿದೆ. ತಾಯ್ತನ ಎನ್ನುವುದು ಪ್ರಕೃತಿ ಹೆಣ್ಣಿಗೆ ನೀಡಿರುವ ಅಪೂರ್ವ ಕೊಡುಗೆ. ತಾಯ್ತನದ ಸೌಂದರ್ಯ ಅರಳಿದ ಹೂವಿನಂತೆ ಮನಸ್ಸಿಗೆ ಆಹ್ಲಾದ ನೀಡುತ್ತದೆ. ನೀವು ಗರ್ಭಿಣಿಯಾದರೆ ನಿಮ್ಮ ಸೌಂದರ್ಯ ನಾಶವಾಯಿತೆಂದು ಖಂಡಿತ ಚಿಂತಿಸದಿರಿ!

○ ಡಾ. ಆರತಿ ವೆಂಕಟೇಶ್

ಹೆಣ್ಣು ತಾಯಿಯಾದರೆ ಅವಳ ಸೌಂದರ್ಯಕ್ಕೆ ಅಂತ್ಯ ಎಂಬುದು ಹಲವರ ತಪ್ಪು ಕಲ್ಪನೆಯಾಗಿದೆ. ತಾಯ್ತನ ಎನ್ನುವುದು ಪ್ರಕೃತಿ ಹೆಣ್ಣಿಗೆ ನೀಡಿರುವ ಅಪೂರ್ವ ಕೊಡುಗೆ. ತಾಯ್ತನದ ಸೌಂದರ್ಯ ಅರಳಿದ ಹೂವಿನಂತೆ ಮನಸ್ಸಿಗೆ ಆಹ್ಲಾದ ನೀಡುತ್ತದೆ. ನೀವು ಗರ್ಭಿಣಿಯಾದರೆ ನಿಮ್ಮ ಸೌಂದರ್ಯ ನಾಶವಾಯಿತೆಂದು ಖಂಡಿತ ಚಿಂತಿಸದಿರಿ! ಒಂಭತ್ತು ತಿಂಗಳು ನಿಮ್ಮ ಮುದ್ದು ಮಗುವನ್ನು ಗರ್ಭದಲ್ಲಿ ಹೊತ್ತ ನೀವು ನಿಮ್ಮ ಶರೀರದಲ್ಲಾಗುವ ಬದಲಾವಣೆಗಳತ್ತ ವಿಶೇಷವಾಗಿ ಗಮನ ಹರಿಸಬೇಕು, ಅದನ್ನು ಸ್ವೀಕರಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಆ ಬದಲಾವಣೆಗಳು ಶಾಶ್ವತವಾಗಿ ನಿಮ್ಮ ಶರೀರದಲ್ಲಿ ಉಳಿಯುವಂಥವು ಎಂಬುದನ್ನು ಒಪ್ಪಿಕೊಳ್ಳಬೇಕು.

ನಿಮ್ಮ ಸೌಂದರ್ಯ ಹಾಗೂ ಆರೋಗ್ಯ ರಕ್ಷಣೆಗಾಗಿ ಮೊದಲು ನಿಮ್ಮ ಆಹಾರದತ್ತ ಗಮನ ಹರಿಸಿ. ಗರ್ಭಿಣಿ ಸ್ತ್ರೀ ಪ್ರತಿದಿನ ಕನಿಷ್ಠ ಪಕ್ಷ ನಾಲ್ಕು ಲೋಟ ಹಾಲು, ಎರಡು ಬಗೆಯ ಹಣ್ಣುಗಳು, ಮೂರು ಬಗೆಯ ತರಕಾರಿಗಳು, (ಹಸಿರು ತರಕಾರಿ ಕಡ್ಡಾಯವಾಗಿ ಸೇರಿರಬೇಕು) ಎರಡು ಚಮಚ ತುಪ್ಪ/ಬೆಣ್ಣೆ ಇವುಗಳನ್ನು ತಪ್ಪದೇ ಸೇವಿಸಬೇಕು. ಆಹಾರದ ಪಟ್ಟಿ ಕಂಡು ಗಾಬರಿಯಾಗಬೇಡಿ! ನಾಳೆ ನಿಮ್ಮ ಮಗುವಿಗೆ ಹಾಲೂಡಲು ನಿಮಗೆ ಇಷ್ಟೆಲ್ಲಾ ಪೋಷಣೆ ಬೇಡವೇ? ನೀವು ಸರಿಯಾದ ಪ್ರಮಾಣದಲ್ಲಿ ಆಹಾರ ಸೇವಿಸದಿದ್ದಲ್ಲಿ ಬೆಳೆಯುವ ಭ್ರೂಣಕ್ಕೂ ಹಾನಿಯಾಗುವ ಸಂಭವವುಂಟು.

ಕೆಲವು ಹೆಂಗಸರು ಗರ್ಭಿಣಿಯರ ಬಯಕೆ ಎನ್ನುವ ನೆಪದಿಂದ ಮಿತಿಮೀರಿ ತಿನ್ನುತ್ತಾರೆ. ಅವಶ್ಯಕತೆಗಿಂತ ಹೆಚ್ಚಾಗಿ ಕೊಬ್ಬಿನಂಶದ ಪದಾರ್ಥಗಳನ್ನು ಸೇವಿಸುವುದರಿಂದ ತಾಯಿಯಾಗಲಿರುವ ಹೆಣ್ಣು ಹೆರಿಗೆಯಾದ ನಂತರ ಸ್ಥೂಲಾಕಾರ ಪಡೆಯುವ ಸಂಭವ ಹೆಚ್ಚು. ಇದರಿಂದ ಸೌಂದರ್ಯದೊಂದಿಗೆ ಆರೋಗ್ಯಕ್ಕೂ ಹಾನಿಕರ. ನೀವು ಸೇವಿಸುವ ಆಹಾರದಲ್ಲಿ ಉಪ್ಪು, ಖಾರ ಕಡಿಮೆಯಿರಲಿ. ಗರ್ಭಿಣಿಯರಿಗೆ ತಿನ್ನುವ ಆಹಾರ ಬೇಗನೆ ಜೀರ್ಣವಾಗುವುದಿಲ್ಲ. ಹೊರಗಡೆ ಹೋಟೆಲ್‌ಗಳಲ್ಲಿ, ಗಾಡಿಯಲ್ಲಿ ಮಾರುವ ತಿಂಡಿಗಳನ್ನು ತಿನ್ನುವ ಚಪಲವಿದ್ದರೆ ಆದಷ್ಟು ತಡೆಗಟ್ಟಿ, ಅಂಥ ಪದಾರ್ಥ ಸೇವಿಸುವುದರಿಂದ ನಿಮಗೆ ಸೋಂಕು ತಗುಲಬಹುದು. ಆ ಸೋಂಕು ಕೆಲವೊಮ್ಮೆ ಗರ್ಭಸ್ಥ ಶಿಶುವಿಗೂ ಅಪಾಯಕಾರಿಯಾಗಿರುತ್ತದೆ ಎನ್ನುವುದನ್ನು ಮರೆಯಬೇಡಿ.

ಗರ್ಭಿಣಿಯರಿಗೆ ಸಾಧಾರಣವಾಗಿ ಮೊದಲ ಮೂರು ತಿಂಗಳಲ್ಲಿ ವಾಕರಿಕೆ, ವಾಂತಿ ಇರುತ್ತದೆ. ಇಂತಹ ಸಮಯದಲ್ಲಿ ಒಂದೇ ಬಾರಿ ಹೊಟ್ಟೆ ತುಂಬಾ ಉಣ್ಣುವ ಬದಲು ದಿನಕ್ಕೆ ಐದಾರು ಬಾರಿ ಕಡಿಮೆ ಪ್ರಮಾಣದಲ್ಲಿ ತಿನ್ನುವುದು ಸೂಕ್ತ. ಬೆಳಿಗ್ಗೆ ಎದ್ದ ಕೂಡಲೇ ಒಂದು ಲೋಟ ನೀರಿಗೆ ನಿಂಬೆರಸ

ಹಿಂಡಿ, ಸಕ್ಕರೆ ಅಥವಾ ಉಪ್ಪು ಎರಡನ್ನೂ ಬೆರೆಸದೇ ಕುಡಿಯುವುದರಿಂದ ನಿಮ್ಮ ಜೀರ್ಣಶಕ್ತಿ ಹೆಚ್ಚಾಗುತ್ತದೆ. ಕೆಲವರಿಗೆ ಗರ್ಭಿಣಿಯಾದಾಗ ಮಲಬದ್ಧತೆ ಬಹಳ ತೊಂದರೆ ಕೊಡುತ್ತದೆ. ಆಹಾರದಲ್ಲಿ ಹಸಿರು ತರಕಾರಿ, ಬೀಟ್‌ರೂಟ್ ಹೆಚ್ಚಾಗಿ ತಿನ್ನಿ. ಪ್ರತಿ ದಿನ ಕಡೆಯ ಪಕ್ಷ ಹತ್ತು ಲೋಟ ನೀರು ಕುಡಿಯುವುದರಿಂದ ಮಲಬದ್ಧತೆ ನಿವಾರಿಸಬಹುದು. ಇದ್ಯಾವುದೂ ಪರಿಣಾಮಕಾರಿ ಯಾಗದಿದ್ದರೆ ನೀವು ಮಲವಿಸರ್ಜನೆಯ ಮಾತ್ರೆ (laxatives) ಸೇವಿಸುವುದು ಉತ್ತಮ. ಮಲಬದ್ಧತೆ ಅಲಕ್ಷಿಸುವುದರಿಂದ ಮುಂದೆ ನೀವು haemorrhoids ಅಥವಾ piles ನಿಂದ ನರಳುವ ಸಾಧ್ಯತೆ ಹೆಚ್ಚಾಗುತ್ತದೆ.

ನಮ್ಮ ದೇಶದಲ್ಲಿ ಶೇಕಡ ೯೯ ಮಹಿಳೆಯರು ರಕ್ತಹೀನತೆ (anaemia) ಯಿಂದ ನರಳುತ್ತಿದ್ದಾರೆ. ಗರ್ಭಿಣಿಯಾದಾಗ ತಪ್ಪದೇ ಆಹಾರದಲ್ಲಿ ಹಸಿರು ತರಕಾರಿ, ಬೆಲ್ಲ, ಹಾಲು ಸೇವಿಸಿ. ವೈದ್ಯರು ಸಲಹೆ ನೀಡುವ ಕಬ್ಬಿಣಾಂಶವಿರುವ ಮಾತ್ರೆಗಳನ್ನು ತಪ್ಪದೇ ತೆಗೆದುಕೊಳ್ಳಬೇಕು.

ಗರ್ಭಿಣಿಯರಿಗೆ ಮೂರು ತಿಂಗಳು ತುಂಬಿದ ನಂತರ ದೇಹದ ಬದಲಾವಣೆ ಹೆಚ್ಚು ಗಮನಾರ್ಹ ವಾಗುತ್ತದೆ. ಮಗುವಿನ ಬೆಳವಣಿಗೆಯಿಂದ ಹೊಟ್ಟೆ ಉಬ್ಬುತ್ತಾ ಬಂದಂತೆ ಕೆಲವರು ಸಂಕೋಚ ಪಡುತ್ತಾರೆ. ಇಂದಿನ ವಿದ್ಯಾವತಿ ತಾಯ್ತನದ ಬದಲಾವಣೆಗಳನ್ನು ಸಹಜವಾಗಿ ಹಾಗೂ ಹೆಮ್ಮೆ ಯಿಂದ ಸ್ವೀಕರಿಸಬೇಕು. ನಿಮಗೆ ಸೀರೆಯುಡಲು ತೊಂದರೆಯಾದರೆ ಈಗಿನ ಮಾರುಕಟ್ಟೆಯಲ್ಲಿ ಲಭ್ಯವಾಗಿರುವ ಬಣ್ಣಬಣ್ಣದ ಲೇಸ್‌ಗಳುಳ್ಳ ಗೌನ್‌ಗಳನ್ನು ಧರಿಸಬಹುದು. ಇದಕ್ಕೆ ಮೆಟರ್ನಿಟಿ ಗೌನ್ ಎಂದು ಕರೆಯುತ್ತಾರೆ. ಇದನ್ನು ಧರಿಸುವು ದರಿಂದ ಹೊಟ್ಟೆ ಉಬ್ಬಿದ್ದು ಹೆಚ್ಚಾಗಿ ಗೋಚರವಾಗದು.

ನೀವು ದುಡಿಯುವ ಮಹಿಳೆಯಾದರೆ ಪ್ರತಿನಿತ್ಯ ಆದಷ್ಟು ಹಗುರವಾದ ಸೀರೆ ಅಥವಾ ಉಡುಪುಗಳನ್ನು ಧರಿಸಿ. ಬೇರೆ ಪೋಷಾಕುಗಳನ್ನು ತಾತ್ಕಾಲಿಕವಾಗಿ ದೂರವಿಡಿ. ಈ ಸಮಯದಲ್ಲಿ ಹೈಹೀಲ್ಡ್ ಚಪ್ಪಲಿಗಳು ನಿಮಗೆ ನಿಷಿದ್ಧ. ಇದರಿಂದ ನೀವು ಬೀಳುವ ಅಪಾಯವೂ ಹೆಚ್ಚು. ಜೊತೆಗೆ ಸೊಂಟನೋವು, ಬೆನ್ನುನೋವು ಬರುವ ಸಾಧ್ಯತೆಯೂ ಹೆಚ್ಚು.

ಕೆಲವು ಹೆಂಗಸರಿಗೆ ಉದ್ಯೋಗದಲ್ಲಿ ಹೆಚ್ಚು ಹೊತ್ತು ನಿಂತು ಅಥವಾ ಕುಳಿತು ಮಾಡುವ ಕಾರ್ಯಗಳಿರುತ್ತದೆ. ಅಂಥ ಸಂದರ್ಭದಲ್ಲಿ ನೀವು ಆಗಾಗ ಕುರ್ಚಿಗೊರಗಿ ಕುಳಿತು ವಿಶ್ರಮಿಸಿಕೊಳ್ಳಿ, ಇನ್ನೂ ಅನುಕೂಲವಿದ್ದರೆ ಕಾಲುಗಳನ್ನು ಎತ್ತರವಿದ್ದ ಸ್ಟೂಲ್ ಮತ್ತು ಬೆಂಚಿನ ಮೇಲೆ ಚಾಚಿಕೊಂಡು ಕೂರಲು ಪ್ರಯತ್ನಿಸಿ. ಈಗ ನಿಮಗೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ವಿಶ್ರಾಂತಿ ಅಗತ್ಯವಿರುವುದರಿಂದ ಅನಗತ್ಯ ಹರಟೆಗೆ ತೊಡಗಬೇಡಿ. ಸಾಧ್ಯವಾದಷ್ಟೂ ಮನಸ್ಸನ್ನು ಪ್ರಶಾಂತವಾಗಿಟ್ಟುಕೊಳ್ಳಿ, ನಿಮ್ಮ ಬಿಡುವಿನ ವೇಳೆಯನ್ನು ಹರಟೆ, ಜಗಳ, ಓಡಾಟಗಳಿಂದ ವ್ಯರ್ಥ ಮಾಡಿಕೊಳ್ಳಬೇಡಿ.

ಗರ್ಭಿಣಿಯರಿಗೆ ಹೊಟ್ಟೆಯ ಮೇಲೆ ಬಿಳಿ ಪಟ್ಟೆಗಳಂತೆ ಕಲೆ ಇರುವುದನ್ನು ಗಮನಿಸುತ್ತೇವೆ. ಅಗತ್ಯಕ್ಕಿಂತ ಹೆಚ್ಚಾಗಿ ಹೊಟ್ಟೆಯ ಪದರ ಉಬ್ಬುವುದರಿಂದ ಮಗು ಜನಿಸಿದ ಮೇಲೆ ಸ್ನಾಯು ಸಡಿಲವಾಗಿ ಆ ಕಲೆಗಳು ಶಾಶ್ವತವಾಗಿ ಉಳಿಯುತ್ತವೆ. ಇದನ್ನು ನಿವಾರಿಸಲು ಹಲವು ಜಾಹೀರಾತುಗಳಲ್ಲಿ ಬಗೆಬಗೆಯ ಎಣ್ಣೆ, ಕ್ರೀಂಗಳನ್ನು ಪ್ರಕಟಿಸುವುದನ್ನು ನೀವೆಲ್ಲಾ ನೋಡಿರಬಹುದು! ಆದರೆ, ಈ ಕಲೆಗಳು ಶಾಶ್ವತವಾಗಿ ದೇಹದ ಮೇಲೆ ಉಳಿಯುತ್ತದೆ ಎಂಬುದನ್ನು ನೆನಪಿಡಿ. ಇವುಗಳನ್ನು ಸಂಪೂರ್ಣ ವಾಗಿ ನಿವಾರಿಸಲು ಯಾವ ರಾಸಾಯನಿಕ ಅಥವಾ ನೈಸರ್ಗಿಕ ವಸ್ತುವಿಗೂ ಸಾಧ್ಯವಿಲ್ಲ. ತಾಯಿ ಯಾಗಲಿರುವ ಗೆಳತಿಯರು ಅದಕ್ಕಾಗಿ ಚಿಂತಿಸಬೇಕಿಲ್ಲ! ನೀವು ಗರ್ಭಿಣಿ ಯಾಗಿರುವಾಗಲೇ ಆದಷ್ಟು ಕಲೆಗಳು ದೇಹದ ಮೇಲೆ ಕಡಿಮೆ ಪ್ರಮಾಣದಲ್ಲಿ ಉಳಿಯುವಂತೆ ನೀವು ಎಚ್ಚರ ವಹಿಸಬಹುದು. ಹೊಟ್ಟೆ ಉಬ್ಬುತ್ತ ಬಂದಂತೆ ಆ ಜಾಗದಲ್ಲಿ ಗರ್ಭಿಣಿಯರಿಗೆ ಸಾಮಾನ್ಯವಾಗಿ ತುರಿಕೆ, ನವೆ ಉಂಟಾಗುತ್ತದೆ. ಆಗ ಉಗುರಿನಿಂದ ಕೆರೆಯಬೇಡಿ. ಅದರಿಂದ ಕಲೆಗಳು ದಟ್ಟವಾಗಿ ಉಳಿಯುತ್ತವೆ. ಅದರ ಬದಲು ಬೆರಳುಗಳಿಂದಲೇ ನಯವಾಗಿ ಆ ಭಾಗ ಸವರಿಕೊಳ್ಳಿ. ಈ ಅಭ್ಯಾಸ ಮೊದಲು ಕಠಿಣವೆನಿಸಿದರೂ ಅದರ ಪರಿಣಾಮವಾಗಿ ಹೆಚ್ಚು ಕಲೆರಹಿತ, ಮೃದುವಾದ ಚರ್ಮ ಉಳಿಯುತ್ತದೆ.

ಗರ್ಭಿಣಿಯರಿಗೆ ಸೌಂದರ್ಯದ ಪೋಷಣೆಯೂ ಅಗತ್ಯ. ಪ್ರತಿದಿನ ಸ್ನಾನ ಮಾಡುವ ಮುನ್ನ ಒಂದು ಚಮಚ ಹಾಲಿನ ಕೆನೆಗೆ ಎರಡು ತೊಟ್ಟು ನಿಂಬೆರಸ ಹಾಗೂ ಅರಿಶಿಣ ಬೆರೆಸಿ ಮುಖ, ಕುತ್ತಿಗೆಗೆ ಲೇಪಿಸಿಕೊಳ್ಳಿ. ಸಂಜೆ ಮುಖ ತೊಳೆಯುವಾಗ ಒಂದು ಚಮಚ ಹುಳಿ ಮೊಸರಿನಲ್ಲಿ ಎರಡು ತೊಟ್ಟು ಬಾದಾಮಿಯೆಣ್ಣೆ,



ನಿಮಗೆ ಸೀರೆಯುಡಲು ತೊಂದರೆಯಾದರೆ ಈಗಿನ ಮಾರುಕಟ್ಟೆಯಲ್ಲಿ ಲಭ್ಯವಾಗಿರುವ ಬಣ್ಣಬಣ್ಣದ ಲೇಸ್‌ಗಳುಳ್ಳ ಗೌನ್‌ಗಳನ್ನು ಧರಿಸಬಹುದು. ಇದಕ್ಕೆ ಮೆಟರ್ನಿಟಿಗೌನ್ ಎಂದು ಕರೆಯುತ್ತಾರೆ. ಇದನ್ನು ಧರಿಸುವುದರಿಂದ ಹೊಟ್ಟೆ ಉಬ್ಬಿದ್ದು ಹೆಚ್ಚಾಗಿ ಗೋಚರವಾಗದು.

ಪನ್ನೀರು ಬೆರೆಸಿ ಹಚ್ಚಿಕೊಂಡು ನಂತರ ಮುಖ ತೊಳೆದುಕೊಳ್ಳಿ, ರಾತ್ರಿ ಮಲಗುವ ಮುನ್ನ ನಾಲ್ಕು ಚಮಚ ಹಾಲಿನ ಕೆನೆಗೆ ತಲಾ ಒಂದು ತೊಟ್ಟು ಬಾದಾಮಿ ಎಣ್ಣೆ, ಸೌತೇಕಾಯಿ ರಸ, ಜೇನುತುಪ್ಪ, ಪನ್ನೀರು, ನಿಂಬೆರಸ ಎಲ್ಲಾ ಮಿಶ್ರಣ ಮಾಡಿ ಮುಖಕ್ಕೆ ಹಚ್ಚಿಕೊಂಡು ಹಾಗೇ ಮಲಗಿ. ಬೆಳಿಗ್ಗೆ ಬೆಚ್ಚಗಿನ ನೀರಿನಲ್ಲಿ ಮುಖ ತೊಳೆದುಕೊಳ್ಳಿ, ಈ ಆರೈಕೆ ತಪ್ಪದೇ ಪಾಲಿಸಿದರೆ ನಿಮ್ಮ ಮುಖ ಪುಟವಿಟ್ಟ ಚಿನ್ನದಂತೆ ಕಾಂತಿಯುಕ್ತ ವಾಗುತ್ತದೆ.

ವಾರಕ್ಕೊಮ್ಮೆ ಹಿಪ್ಪೆ ಎಣ್ಣೆ ಅಥವಾ ಎಳ್ಳೆಣ್ಣೆಯನ್ನು ತಲೆಗೂದಲಿಗೆ ಹಚ್ಚಿ ವರ್ತುಲಾಕಾರವಾಗಿ ತಲೆ ತಿಕ್ಕಿಕೊಂಡು ನಿಮಗೆ ಹೊಂದುವ ಶಾಂಪೂ ಅಥವಾ ಸೀಗೇಕಾಯಿಯಿಂದ ಕೂದಲು ತೊಳೆದುಕೊಳ್ಳಿ, ನಿಮ್ಮ ಚರ್ಮ, ಕಣ್ಣುಗಳು ಆರೋಗ್ಯವಾಗಿರಲು ರಾತ್ರಿ ಒಂಭತ್ತು ಗಂಟೆಗೇ ಮಲಗುವ ಅಭ್ಯಾಸ ಮಾಡಿಕೊಳ್ಳುವುದು ಸೂಕ್ತ. ಬೆಳಿಗ್ಗೆ ಆರು ಗಂಟೆಗೆ ಎದ್ದು ನಿಧಾನವಾಗಿ ಒಂದು ಸುತ್ತು ವಾಕಿಂಗ್ ಹೋಗಿ ಬನ್ನಿ. ಇದರಿಂದ ನಿಮ್ಮ ಮನಸ್ಸು, ದೇಹ ಚಟುವಟಿಕೆಯಿಂದ ಕೂಡಿರುತ್ತದೆ. ನಿಮ್ಮ ಕೈಲಾದಷ್ಟು ಮನೆಗೆಲಸ ಮಾಡಬಹುದು. ಗರ್ಭಿಣಿಯರು ಕಷ್ಟಪಟ್ಟು ಕೆಲಸ ಮಾಡಿದರೆ ಸುಲಭವಾಗಿ ಹೆರಿಗೆಯಾಗುತ್ತದೆ ಎಂಬ ಮಾತು ಸಾಮಾನ್ಯವಾಗಿ ಕೇಳಿ ಬರುತ್ತದೆ. ಗರ್ಭಿಣಿಯರು ಆಲಸಿ, ಸೋಮಾರಿಯಾಗಿರುವುದು ಸರಿಯಲ್ಲ, ನಿಜ. ಆದರೆ ಅನವಶ್ಯಕವಾಗಿ ಭಾರ ಎತ್ತುವುದು, ಮಹಡಿ ಹತ್ತಿ ಇಳಿಯುವುದು, ಆಯಾಸವಾಗುವಷ್ಟು ಕೆಲಸ ಮಾಡುವುದರಿಂದ ಗರ್ಭಪಾತವಾಗುವ ಸಂಭವ ಹೆಚ್ಚು. ಲಘು ವ್ಯಾಯಾಮ ಗರ್ಭಿಣಿಯರಿಗೆ ಸೂಕ್ತ.

ಇದುವರೆಗೂ ಗರ್ಭಿಣಿಯರಿಗೆ ನೀಡಿದ ಸಲಹೆ ಸಂಪೂರ್ಣವಾಗಿ ಆರೋಗ್ಯವಾದ ಗರ್ಭ ಧರಿಸಿರುವ ಮಹಿಳೆಯರಿಗೆ ಮಾತ್ರ ಸೀಮಿತವೆಂದು ಹೇಳಲು ಬಯಸುತ್ತೇನೆ. ಗರ್ಭಿಣಿಯರಲ್ಲಿ ರಕ್ತಹೀನತೆ, ರಕ್ತದೊತ್ತಡ ಮಧುಮೇಹ ಮೊದಲಾದ ತೊಂದರೆಗಳು ಇರಬಹುದು. ಇದಕ್ಕೆಲ್ಲಾ ತಜ್ಞ ವೈದ್ಯರ ಸಲಹೆ, ಸಹಾಯ ಅಗತ್ಯವಾಗಿ ಬೇಕೇ ಬೇಕು. ವೈದ್ಯರ ಸಲಹೆ ಪಾಲಿಸಿ ನಮ್ಮ ಭವ್ಯ ಭಾರತಕ್ಕೆ ಮತ್ತೊಂದು ಹೆಮ್ಮೆಯ ಪ್ರಜೆಯನ್ನು ನೀಡುವುದು ಇಂದಿನ ವಿದ್ಯಾವಂತ, ನಾಗರೀಕ ಮಹಿಳೆಯ ಕರ್ತವ್ಯ ಹಾಗೂ ಭಾದ್ಯತೆ ಎಂಬುದನ್ನು ಸ್ಪಷ್ಟಪಡಿಸುತ್ತೇನೆ. ತಾಯಿಯಾಗಿರುವ ಹಾಗೂ ತಾಯಿಯಾಗಲಿರುವ ಪ್ರತಿಯೊಬ್ಬರಿಗೂ ಅದಕ್ಕಾಗಿ ನನ್ನ ಹಾರ್ದಿಕ ಶುಭಕಾಮನೆಗಳು.

ಹಾನಗಲ್‌ನಲ್ಲಿ ಹಾಯಬಾರದೇ?



ವಿಭಿನ್ನ ಸಂಸ್ಕೃತಿಯ ಎರಡು ಜಿಲ್ಲೆಗಳಿಗೆ (ಕಾರವಾರ, ಶಿವಮೊಗ್ಗ) ತಾಕಿಕೊಂಡಿರುವ ನೂತನ ಹಾವೇರಿ ಜಿಲ್ಲೆಯ ಗಡಿಯೇ ಹಾನಗಲ್. ಐತಿಹಾಸಿಕವಾಗಿ, ಸಾಂಸ್ಕೃತಿಕವಾಗಿ ಭವ್ಯ ಪರಂಪರೆಯ ಹಿನ್ನೆಲೆ ಹಾನಗಲ್‌ಗಿದೆ. ಹುಬ್ಬಳ್ಳಿಯಿಂದ ೭೫ ಕಿ.ಮೀ. ಹಾಗೂ ಹಾವೇರಿಯಿಂದ ೩೫ ಕಿ.ಮೀ. ದೂರದಲ್ಲಿರುವ ಹಾನಗಲ್ ಬತ್ತದ ಕಣಜವೆಂದೇ ಪ್ರಸಿದ್ಧಿ ಹೊಂದಿದ ಊರು. ಬಂದ ಅತಿಥಿಗಳಿಗೆ ರುಚಿ ರುಚಿಯಾದ ಅವಲಕ್ಕಿ ನೀಡಿ ಸಂತೈಸುವುದು ಇಲ್ಲಿನ ಜನರ ಸಂಪ್ರದಾಯ.

ಹಿಂದೆ ಹಾನಗಲ್‌ಗೆ ಪಾಂಚಿಪುರ, ವೈರಾಟಪುರ, ವಿರಾಟಕೋಟೆ, ವಿರಾಟನಗರ, ಪಾನಂಗಲ್ ಮತ್ತು ಹಾನುಂಗಲ್ ಎಂಬ ಹೆಸರುಗಳಿದ್ದವು. ೧೧ರಿಂದ ೧೩ನೆಯ ಶತಮಾನದ ವರೆಗೂ ಕದಂಬರ ರಾಜಧಾನಿಯಾಗಿತ್ತು.

ಕದಂಬರು ಹಾನಗಲ್ ಪ್ರಾಂತ್ಯವನ್ನು ಉತ್ಸಾಹ, ಸದ್ಗುಣ, ಸಾಮರ್ಥ್ಯ, ಧೈರ್ಯ, ಧರ್ಮ, ನಿಷ್ಠೆಗಳಿಂದ ಆಳಿದರು. ಹಾನಗಲ್‌ನ ಕಲೆ, ಸಂಸ್ಕೃತಿಗೆ, ಅಮೋಘ ಕದಂಬ ಆಳ್ವಿಕೆಗೆ ಸಾಕ್ಷಿಯಾಗಿ ತಾರಕೇಶ್ವರ ದೇವಾಲಯ ಹಾಗೂ ಇನ್ನಿತರ ಐತಿಹ್ಯಗಳು ಇಲ್ಲಿವೆ.


ಜಿಲ್ಲೆಯ ದಕ್ಷಿಣಕ್ಕಿರುವ ಹಾನಗಲ್ ತಾಲೂಕು ಮಲೆನಾಡಿನ ಸೆರಗು. ಉತ್ತರಕ್ಕೆ ಶಿಗ್ಗಾಂವ, ಪೂರ್ವಕ್ಕೆ ಹಾವೇರಿ ತಾಲೂಕು ಇವೆ. ಆಗ್ನೇಯದಲ್ಲಿ ಘಾಟದೂರು ಬ್ಯಾಡಗಿ, ದಕ್ಷಿಣದಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ, ಪಶ್ಚಿಮದಲ್ಲಿ ಕಾರವಾರ ಜಿಲ್ಲೆಯ ಮುಂಡಗೋಡ ತಾಲೂಕುಗಳಿಂದ ಸುತ್ತುವರಿದಿದೆ.

ಕುಮಾರಮಹಾಸ್ವಾಮಿಗಳು ಒಲಿದು ಪಾದವನ್ನಿಟ್ಟು ಸುಕ್ಷೇತ್ರವಾಗಿಸಿದ ಈ ಊರು ಅನೇಕ ಕಲಾಕಾರರ ತವರು. ಪದ್ಮಭೂಷಣ ಗಂಗೂಬಾಯಿ ಹಾನಗಲ್, ವಿಶ್ವಾದ್ಯಂತ ಸಂಗೀತ ಸುಧೆಯನ್ನು ಹರಿಸಿದ್ದಾರೆ. ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಹುಟ್ಟು ಕುರುಡರಾದರೂ ತಮ್ಮ ಸಂಗೀತ ಸುಧೆಯಿಂದ ಸಮಾಜದ ಕಣ್ಣು ತೆರೆಸಿದ್ದಾರೆ. ಗದಗಿನಲ್ಲಿ ಸಂಗೀತ ಶಾಲೆ ನಡೆಸುತ್ತ ಅನೇಕ ಸಂಗೀತ ಸಾಧಕರ ಸೃಷ್ಟಿಗೆ ಕಾರಣರಾಗಿದ್ದಾರೆ.

ಇಲ್ಲಿ ರಾಷ್ಟ್ರಮಟ್ಟದ ದನ ಬೆದರಿಸುವ ಕಾರ್ಯಕ್ರಮವು ಜರುಗಿ ದೂರದರ್ಶನದಲ್ಲಿ ಬಿತ್ತರಗೊಂಡು ಜನ ಮೆಚ್ಚುಗೆ ಗಳಿಸಿದೆ.

ಹಿಂದೆ ಹಾನಗಲ್‌ನಲ್ಲಿ ಹಾಯಬಾರದು ಎಂಬ ಮಾತು ಪ್ರಚಲಿತವಾಗಿತ್ತು. ಈಗ ಹಾನಗಲ್‌ನಲ್ಲಿ ಹಾಯ್ದು ಹೋಗಲೇಬೇಕು ಎಂಬಂತಾಗಿದೆ.

○ ರಂಗನಾಥ ಬಿ. ರಾವಳ
ಹಾನಗಲ್



ಕ್ಲಾಸ್ ರೂಂ

ಅಶ್ಲೀಲವೇ?

ನಾನು ಹತ್ತನೆಯ ತರಗತಿಯಲ್ಲಿ ಓದುತ್ತಿರುವಾಗ ಒಂದು ದಿನ ನಮ್ಮ ತರಗತಿಯಲ್ಲಿ ಚಿತ್ರಕಲೆ ಬೋಧಿಸುವ ಶಿಕ್ಷಕಿಯು ಮಾನವನ ಅಂಗಾಂಗಳ ಚಿತ್ರಗಳನ್ನು ಅಂದವಾಗಿ ಕಪ್ಪು ಹಲಗೆಯ ಮೇಲೆ ಬರೆಯುತ್ತಿದ್ದರು. ತರಗತಿಯು ನಿಶ್ಯಬ್ದವಾಗಿ ಇದ್ದಿತು. ಆಗ ಕೀಟಲೆ ಸ್ವಭಾವದ ನನ್ನ ಸ್ನೇಹಿತನೊಬ್ಬನು ಎದ್ದು ನಿಂತು ಅವು ಏನು ಮೇಡಂ ಎಂದು ಕೇಳಿದನು. ಆಗ ನಾನು ತಕ್ಷಣ ಬಾಯಿಗೆ ಬಂದ ಉತ್ತರವನ್ನು ಕೊಟ್ಟೆನು. ನನ್ನ ಉತ್ತರವನ್ನು ಕೇಳಿ ನಮ್ಮ ತರಗತಿಯ ಹುಡುಗಿಯರೆಲ್ಲಾ ಮುಖವನ್ನು ಮುಚ್ಚಿಕೊಂಡು ಕುಳಿತರು. ಹುಡುಗರೆಲ್ಲಾ ಗಂಭೀರವಾಗಿ ಕುಳಿತುಕೊಂಡರು. ಶಿಕ್ಷಕಿಯು ನನ್ನನ್ನು ಶಿಕ್ಷಿಸಬಹುದೆಂದು ತಿಳಿದಿದ್ದರು. ನಾನು ಕೂಡ ಅಕಸ್ಮಾತ್ ನಡೆದ ಅಚಾತುರ್ಯದಿಂದ ಮುಂದೆ ಬೀಳಬಹುದಾದ ಹೊಡೆತಗಳನ್ನು ನೆನೆದು ಗಾಬರಿಗೊಂಡು ಕುಳಿತಿದ್ದೆನು.

ಆದರೆ, ಶಿಕ್ಷಕಿಯು ನನ್ನ ತಪ್ಪನ್ನು ಮನ್ನಿಸಿ, ಮುಗುಳ್ನಗೆ ಬೀರಿ, ತರಗತಿಯಿಂದ ಹೊರ ನಡೆದರು. ಇಷ್ಟಕ್ಕೂ ನಾನು ಹೇಳಿದ ಉತ್ತರವೆಂದರೆ ''ಮನುಷ್ಯನ ಸಾಮಾನುಗಳು!''. ಈಗ ಹೇಳಿ ನಾನು ಹೇಳಿದ್ದು ಹಾಸ್ಯವೋ, ಅಶ್ಲೀಲವೋ?

-ಮೃತ್ಯುಂಜಯ ಆನಿಶೆಟ್ಟರ, ಹುಬ್ಬಳ್ಳಿ

ಜುಟ್ಟೇ ಇಲ್ದಿದ್ರೆ?!

ಕುಡಿತದ ಕೆಡುಕುಗಳ ಬಗ್ಗೆ ತರಗತಿ ನಡೆಯುತ್ತಿತ್ತು. ಕನ್ನಡ ಅಧ್ಯಾಪಕರು ತಮ್ಮ ಹಾಸ್ಯಮಿಶ್ರಿತ ಶೈಲಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಸರಸವಾಗಿ ಮಾತನಾಡುತ್ತಾ ಉಪನ್ಯಾಸ ನೀಡುತ್ತಿದ್ದರು.

ಒಂದೆಡೆ ಅಧ್ಯಾಪಕರು ಸ್ವಲ್ಪ ಗಂಭೀರವಾಗಿ ಹೇಳಿದರು. 'ಕುಡಿತಕ್ಕೆ ಸಂಬಂಧಿಸಿದಂತೆ ಮುಖ್ಯವಾಗಿ ಕಾರ್ಮಿಕ ವರ್ಗದ ಜನರ ಕುಟುಂಬಗಳಲ್ಲಿ ನಿತ್ಯ ಗಲಭೆಯನ್ನು ಕಾಣುತ್ತೇವೆ. ದುಡಿದು ಮತ್ತು ಕುಡಿದು ಬರುವ ಗಂಡ ಮನೆಗೆ ಬಂದು ಕೈಗೆ ಸಿಕ್ಕಿದವರೊಡನೆ ಜಗಳವಾಡ ತೊಡಗುತ್ತಾನೆ. ಯಾರೂ ಸಿಗದಿದ್ದಾಗ ಹೇಗೂ ಬಡಪಾಯಿ ಹೆಂಡತಿಯಂತೂ ಸಿಗಲೇಬೇಕಲ್ಲ, ಅವಳ ಜುಟ್ಟನ್ನೇ ಹಿಡಿದು ಥಳಿಸತೊಡಗುತ್ತಾನೆ....''

ಆಗ ನನ್ನ ಗೆಳೆಯ ರತನ್, ''ಹೆಂಡತಿಗೆ ಜುಟ್ಟೇ ಇಲ್ಲದಿದ್ರೆ?!'' ಎಂದಾಗ ಅಧ್ಯಾಪಕರೂ ಸೇರಿದಂತೆ ತರಗತಿಯೆಲ್ಲಾ ನಗೆ ಗಡಲಲ್ಲಿ ತೇಲಿತು.

- ಚಂದ್ರ ಕೆ. ಹೆಮ್ಮಾಡಿ, ಕುಂದಾಪುರ

ಸಿಂಬಳದ ಉಪ್ಪಿಟ್ಟು!

ನಾನು ಏಳನೇ ತರಗತಿ ಓದುತ್ತಿದ್ದಾಗ ಬಾಲದಂಡಪ್ಪ ಮಾಸ್ತಾರರ ರೂಮಿನ್ಯಾಗೇ ಇರುತ್ತಿದ್ದೆ. ಅವರ ಬಟ್ಟಿ ತೊಳ್ಯಾದು, ಮೈತಿಕ್ಕಾದು, ಅಂಗಿ ಧೋತ್ರ ಇಸ್ತ್ರಿ ಮಾಡಾದು ಮಾಡಿಕೆಂತ ಅವರು ಉಂಡು ಉಳದ ಅನ್ನ ಸಾರು ಉಂಡು ಬದಕತಿದ್ದೆ. ಬಾಲದಂಡಪ್ಪ ಮಾಸ್ತಾರು ನನ್ನನ್ನ ತಮ್ಮ ಜತೀಗೇ ಕರಕೊಂಡು ತಿರಗಾಡತಿದ್ರು.

ಅವಾಗ ಸಾಲ್ಯಾಗ ಉಪ್ಪಿಟ್ಟು ಹಾಕತಿದ್ರು. ನಾನು ಉಳಾಗಡ್ಡಿ ಮೆಣಸಿನಕಾಯಿ ಕೊಯ್ಯತಿದ್ದೆ ಮಾಸ್ತಾರು ಪಾಣಿ ಕೊಡತಿದ್ರು. ಒಮ್ಮಿ ನಮ್ಮ ಸರ್‌ಗೆ ನೆಗಡಿ ಬಂದು ಮೂಗಿನ್ಯಾಗ ಸುಂಬ್ಳ ಕಂಡಾಪಟಿ ಸೋರತಿತ್ತು. ಅವತ್ತ ಉಪ್ಪಿಟ್ಟು ಮಾಡಾಗ ರವಾ ಹಾಕಿ ಸೌಟಿನಿಂದ ಬಗ್ಗಿ ಉಪ್ಪಿಟ್ಟನ್ನ ಗರ ಗರ ತಿರಗಸಾ ಹೊತ್ತಿನ್ಯಾಗ ಅವರ ಮೂಗಿನಿಂದ ಲೊಟ್ಟಿ ಸುಂಬ್ಳ ಬೋಗೊಣ್ಯಾಗ ಬಿತ್ತು. ಅಕಡೆ ಈಕಡೆ ನೋಡಿದ್ರು. ಮುಂದ ಕುಂತ ನಾನು ಬಿದ್ದ ಸುಂಬ್ಳ ನೋಡಿದ್ರೂ, ನೋಡಲಾರದಂಗ ತಲಿ ತಗ್ಗಿಸಿ ಕಡಚಿಗಿ ಒರಸಾಕ ಹತ್ತಿದ್ಯಾ ಗುರುಗಳು ಒಂದು ಕ್ಷಣ ಪರಾಂಬರಿಸಿ ಸುಂಬ್ಳ ತಗದು ಒಗದರ ಮುಂದೆ ಕುಂತ ನನಗ ಗೊತ್ತಾಗಿ ಗಡಬಡ ಆಗತಾದ ಅಂತ ಯೋಚಿಸಿ ಗರ ಗರನೇ ತಿರುವಿ ಸುಂಬಳವನ್ನು ಉಪ್ಪಿಟ್ಟನಲ್ಲಿ ಐಕ್ಯ ಮಾಡಿಬಿಟ್ರು!

- ಬಸವರಾಜ ಪರಸಾಪೂರ, ಸುರಪುರ

ಚೀಸ್ ಮೇಡಂ

ಒಂದು ದಿನ ಹಿಂದಿ ಮೇಡಂ ಕ್ಲಾಸ್ ರೂಮ್‌ಗೆ ಬಂದರು. ಆಗ ಹುಡುಗರೆಲ್ಲಾ ಸೇರಿ ಮೇಡಮ್‌ನನ್ನು ಗೋಳಾಡಿಸಿದರು. ಬೇಸರಗೊಂಡ ಮೇಡಂ 'ಪ್ಲೀಸ್ ನನ್ನ ಚೀಸ್ ಮಾಡಬೇಡ್ರೋ!' ಅಂದ್ರು. ಆಗ ಇಂಗ್ಲಿಷ್ ಚೆನ್ನಾಗಿ ಗೊತ್ತಿದ್ದ ಒಬ್ಬ ಹುಡುಗ ''ಮೇಡಮ್ ಅದು 'ಚೀಸ್' ಅಲ್ಲ, 'ಟೀಸ್''' ಎಂದು ತಿದ್ದಿದ. ಹುಡುಗರಲ್ಲಿ ನಗೆ ಉಕ್ಕಿತು.

ಇಂಗ್ಲಿಷ್‌ನಲ್ಲಿ Cheese ಅಂದರೆ ಗಿಣ್ಣ ಅಥವಾ ಖೋವಾ ಆಗುತ್ತೆ. Tease ಅಂದ್ರೆ ರೇಗಿಸುವುದು ಎಂದರ್ಥ.

- ಮಂಜುನಾಥ ಮೇಟಿ, ಬಳ್ಳಾರಿ

ಶಿಕ್ಷಕರ ಬಕ್ಕ ತಲೆ

ಒಂದು ದಿನ ಸಮಾಜ ಪಾಠ ನೀಡುತ್ತಿದ್ದ ಬಕ್ಕ ತಲೆಯ ಶಿಕ್ಷಕರು ಬಿಸಿಲಿನಲ್ಲಿ ಶಾಲೆಗೆ ಬಂದು ಉಸ್ಸೆಂದು ಕುಳಿತುಕೊಂಡು ವಿದ್ಯಾರ್ಥಿಗಳನ್ನೊಮ್ಮೆ ದಿಟ್ಟಿಸಿದರು. ತುಂಬಾ ಬೆವೆತಿದ್ದ ಶಿಕ್ಷಕರ ಬಕ್ಕ ತಲೆ ಹೊಳೆಯುತ್ತಿತ್ತು. ಅದನ್ನು ಕಂಡ ಕೃಷ್ಣ ಮುಸಿಮುಸಿ ನಗುತ್ತಲಿದ್ದ. ನಾನು ಕಾರಣ ಕೇಳಿದೆ. ಆತ ಹೊಳೆಯುತ್ತಿದ್ದ ತಲೆ ಕಡೆಗೆ ಕಣ್ಸನ್ನೆ ಮಾಡಿದ. ಎಡಬದಿ ಕುಳಿತ ರಂಗ, ''ಬಿಸಿಲಿನ ಈ ದಿನಗಳಲ್ಲಿ ಶಿಕ್ಷಕರ ಬಕ್ಕತಲೆ ಉರಿಯುವದಿಲ್ಲವೆ?'' ಎಂದು ಪ್ರಶ್ನಿಸಿದಾಗ ಬಲಬದಿ ಕುಳಿತ ಸಿದ್ದ, ''ಅದ್ಹೆಂಗೆ ಉರಿಯುತ್ತೋ ಬೆವರಿನ ನೀರು ತಲೆ ಮೇಲಿರುವುದರಿಂದ 'ಕ್ಯೂರಿಂಗ್' ಆಗುತ್ತೆ'' ಎಂದಾಗ ಕೇಳಿಸಿಕೊಂಡವರೆಲ್ಲರೂ ಗೊಳ್ಳೆಂದು ನಕ್ಕರು.

- ಎಚ್.ಆರ್.ಬಾಗವಾನ, ಮುದ್ದೇಬಿಹಾಳ

ಲಕ್ಷ!

ನಾನು ಪ್ರಾಥಮಿಕ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಶಿಕ್ಷಕರು ಕನ್ನಡ ಪಾಠ ಮಾಡುತ್ತಿದ್ದರು. ಮೊದಲಿಗೆ ಅವರು ಮಕ್ಕಳನ್ನು ಉದ್ದೇಶಿಸಿ, ''ಮಕ್ಕಳೇ ಇಂದು ಬಹಳ ಮುಖ್ಯವಾಗಿ ಪಾಠ ಮಾಡುತ್ತೇನೆ. ಎಲ್ಲರೂ 'ಲಕ್ಷ' ಕೊಟ್ಟು ಕೇಳಿರಿ'' ಎಂದು ಹೇಳಿದರು. ಒಬ್ಬ ತುಂಟ ವಿದ್ಯಾರ್ಥಿ, ''ಹೋಗ್ರಿ ಸಾರ್ ಲಕ್ಷ (ರೂಪಾಯಿ) ಕೊಟ್ಟು ಯಾರು ಕೇಳ್ತಾರೆ'' ಎಂದು ಕೈ ಚೀಲ ಹೆಗಲಿಗೆ ಹಾಕಿಕೊಂಡು ಮನೆಗೆ ತೆರಳಿದ!

[ಶಿಕ್ಷಕರು ಲಕ್ಷ್ಯ ಎನ್ನುವುದನ್ನು ಲಕ್ಷ ಎಂದು ಉಚ್ಚರಿಸಿದ್ದರು]

- ರಾಜಾಸಾಬ, ಕಾರಟಗಿ

ಅಮ್ಮೋರು

ನಾನು ನಮ್ಮ ಸಹೋದರಿಯನ್ನು ಕರೆಯಲು ಕಾಲೇಜಿಗೆ ಹೋಗಿದ್ದೆ. ತರಗತಿಯಲ್ಲಿ ಉಪನ್ಯಾಸಕರು ಬೋಧನೆ ಮಾಡುತ್ತಿರುವಾಗ ನಾನು 'ಸರ್, ಸುಧಾಳನ್ನು ಕಳಿಸಿರಿ, ಎಂದು ಕೇಳಿದೆ. ಆಗ ಉಪನ್ಯಾಸಕರು 'ಸುಧಾ ಯಾರು ಹೋಗ್ರಿ' ಎಂದರು. ನಮ್ಮ ಸಹೋದರಿ ಎದ್ದು ತರಗತಿಯಿಂದ ಹೊರ ಬರುತ್ತಿದ್ದಂತೆಯೇ ಉಪನ್ಯಾಸಕರು ನಾನು ಬರೀ 'ಅಪ್ಪೋರು' ಕರೆಯೋಕೆ ಬರುತ್ತಾರೆ ಅಂದು ಕೊಂಡಿದ್ದೆ. ಈಗ 'ಅಮ್ಮೋರು' ಕರೆಯೋಕೆ ಬರ್ತಾರಲ್ಲ ಎಂದರು! ಆಗ ತರಗತಿಯಲ್ಲಿದ್ದವರೆಲ್ಲಾ ನಕ್ಕಿದ್ದೇ ನಕ್ಕಿದ್ದು.

ನನಗೆ ತಲೆ ತಗ್ಗಿಸುವಂತಾಯಿತು.

- ಕೆ. ಸರಸ್ವತಿ, ಹ್ಯಾಳ್ಯಾ

ನೋಬಾಲ್ ಪ್ರಶಸ್ತಿ

ನಾನು ಡಿಪ್ಲೊಮಾ ತೃತೀಯ ವರ್ಷದಲ್ಲಿ ಅಭ್ಯಾಸ ಮಾಡುತ್ತಿದ್ದೆ. ನಮ್ಮ ಎಲೆಕ್ಟ್ರಿಕಲ್ ಪವರ್ ಸಬ್ಜೆಕ್ಟಿನ ಉಪನ್ಯಾಸಕರು ರಜೆ ಹಾಕಿದ್ದರಿಂದ, ಬೇರೊಬ್ಬ ಉಪನ್ಯಾಸಕರು ನಾವು ಖಾಲಿ ಕುಳಿತ್ತಿದ್ದನ್ನು ಗಮನಿಸಿ ಒಳಗೆ ಬಂದರು. ಉಪನ್ಯಾಸಕರು ರಜೆ ಹಾಕಿದ ವಿಷಯ ತಿಳಿದ ಅವರು ಕೆಲವು ಪ್ರಶ್ನೆ ಕೇಳತೊಡಗಿದರು. ''ನೋಬಲ್'' ಪ್ರಶಸ್ತಿ ಯಾರ್ಯಾರಿಗೆ ದೊರೆತಿದೆ ಎಂದು ಕೇಳಿದರು. ಹಿಂದೆ ಕುಳಿತಿದ್ದ ನನ್ನ ಗೆಳೆಯ ಪ್ರಶ್ನೆಯನ್ನು ಸರಿಯಾಗಿ ಕೇಳಿಸಿಕೊಳ್ಳದೆ ''ನೋಬಾಲ್'' ಪ್ರಶಸ್ತಿ ಚೇತನ್ ಶರ್ಮಾರಿಗೆ ದೊರಕಿದೆ ಸಾರ್ ಎನ್ನಬೇಕೆ? ನನ್ನ ಕ್ರಿಕೆಟ್‌ಪ್ರಿಯ ಗೆಳೆಯನಿಗೆ ''ನೋಬಲ್'' ಪದ ''ನೋಬಾಲ್'' ಎಂದು ಕೇಳಿಸಿತ್ತು. ಅವನಿಗೆ ನೋಬಾಲ್, ವೈಡ್‌ಬಾಲ್ ಎಂದೇ ಕರೆಯ ತೊಡಗಿದೆವು.

- ಹಾ.ಶಿ. ಗೌಡ, ಹಗರಿಬೊಮ್ಮನಹಳ್ಳಿ

ಇಂಗ್ಲಿಷ್ ಹೆಣ!

ನನ್ನ ಗೆಳೆಯ ಕೆಟ್ಟ ಇಂಗ್ಲಿಷ್‌ನಲ್ಲಿ ಕಾಗದ ಬರೆಯುತ್ತಿದ್ದ. ಅದನ್ನು ನೋಡಿ ನಾನು ಸಹಿಸಲಾರದೆ, ''ಏಕಯ್ಯಾ, ಹೀಗೆ ಇಂಗ್ಲಿಷ್ ಭಾಷೆಯ ಕೊಲೆ ಮಾಡುತ್ತೀ? ಕನ್ನಡದಲ್ಲಿ ಬರೆಯಬಾರದೆ?'' ಎಂದೆ.

ಅದಕ್ಕೆ ಆ ಹುಡುಗ ''ನನ್ನ ಕನ್ನಡ ಇಂಗ್ಲಿಷ್‌ಗಿಂತ ಅಧ್ವಾನ. ಮಾತೃಭಾಷೆಯನ್ನು ಕೊಲೆ ಮಾಡಿ ಯಾವ ಪಾಪಕ್ಕೆ ಹೋಗಲಿ! ಅದಕ್ಕೇ ಪರ ಭಾಷೆಯ ಹೆಣ ಹಾಕುತ್ತಿದ್ದೇನೆ'' ಎಂದ.

- ಅಶೋಕ ಯ. ಗೌಡರ, ಅಂಬ್ಲಿಕೊಪ್ಪ

ಸರ್ಕಾರಿ ನೌಕರರ ಮುಷ್ಕರ ಮತ್ತು ಚುನಾವಣಾ ನೀತಿ ಸಂಹಿತೆ



○ ಕೋ. ಚೆನ್ನಬಸಪ್ಪ
ನಿವೃತ್ತ ನ್ಯಾಯಾಧೀಶರು
೧೨೭, ಪಶ್ಚಿಮ ಕಾರ್ಡ್ ರಸ್ತೆ,
ಮಹಾಲಕ್ಷ್ಮೀಪುರ, ಬೆಂಗಳೂರು - ೮೬

ಜನವರಿ ೧, ೧೯೯೮ರಂದು ಭಾರತದ ಮುಖ್ಯ ಚುನಾವಣಾ ಆಯುಕ್ತರಾದ ಡಾ. ಎಂ.ಎಸ್.ಗಿಲ್ ಅವರು ದೆಹಲಿಯಲ್ಲಿ ಕಿಕ್ಕಿರಿದು ಸೇರಿದ್ದ ಪತ್ರಿಕಾಕರ್ತರ ಮುಂದೆ, ಫೆಬ್ರವರಿ ೧೬, ೨೨, ೨೮ ಮತ್ತು ಮಾರ್ಚ್ ೭ರಂದು ಲೋಕಸಭಾ ಚುನಾವಣೆಗಳು ನಡೆಯುತ್ತವೆ ಎಂದೂ, ಚುನಾವಣಾ ವೇಳಾಪಟ್ಟಿಯನ್ನು ಕ್ಷಿಪ್ರದಲ್ಲಿಯೆ ಪ್ರಕಟಿಸುವುದಾಗಿ ಸಾರಿದರು. ಅದೇ ದಿನ ಅವರು ದೂರದರ್ಶನಕ್ಕೆ ವಿಶೇಷ ಸಂದರ್ಶನ ನೀಡಿ : 'ಇಂದಿನಿಂದ ತಕ್ಷಣವೆ ಚುನಾವಣಾ ನೀತಿ ಸಂಹಿತೆಯೂ ಜಾರಿಯಲ್ಲಿ ಬರುತ್ತದೆ. ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು' ಎಂದು ಕಟ್ಟೆಚ್ಚರಿಕೆ ನೀಡಿದರು.

ಮಾದರಿ ಚುನಾವಣಾ ನೀತಿ ಸಂಹಿತೆ.

ಸರ್ಕಾರಿ ನೌಕರರನ್ನು ಖುಷಿಯಲ್ಲಿಡುವುದು ಯಾವಾಗಲೂ ಕ್ಷೇಮ. ಚುನಾವಣೆಗಳ ಕಾಲದಲ್ಲಂತೂ ಇದು ಅತ್ಯಗತ್ಯ. ವ್ಯಾವಹಾರಿಕ ! ನಮ್ಮ ಸರ್ಕಾರ ವ್ಯಾವಹಾರಿಕವಾಗಿ ಉಚಿತವಾದುದನ್ನೇ ಮಾಡಿದೆ! ಆದರೆ ಚುನಾವಣಾ ನೀತಿ ಸಂಹಿತೆ ಏನಾಯಿತು?

(Model Code of conduct) ಎಂಬುದು ಚುನಾವಣಾ ಆಯೋಗ ಆರ್ಟಿಕಲ್ ೩೨೪ರ ಕೆಳಗೆ ರೂಪಿಸಿದ ನೀತಿ ನಿಯಮಗಳು. ಆ ನೀತಿ ಸಂಹಿತೆಯ ಮುಖ್ಯ ಉದ್ದೇಶ ಚುನಾವಣೆಗಳು ಅನಿರ್ಬಂಧವಾಗಿ ಮತ್ತು ನ್ಯಾಯಸಮ್ಮತವಾಗಿ (ಮುಕ್ತ ಮತ್ತು ನ್ಯಾಯವಾದ-Free and fair elections) ನಡೆಯಬೇಕೆಂಬುದಾಗಿದೆ. ಆ ನೀತಿ ನಿಯಮಗಳಲ್ಲಿ ಬಹು ಮುಖ್ಯವಾದವು - ಸರ್ಕಾರಿ ಯಂತ್ರವನ್ನು ಆಳುವವರು ಚುನಾವಣಾ ಕೆಲಸಗಳಿಗಾಗಿ ಉಪಯೋಗಿಸತಕ್ಕದ್ದಲ್ಲ. ಆ ಕಾಲಾವಧಿಯಲ್ಲಿ ಸರ್ಕಾರ ಜನರಿಗೆ ಯಾವ ಹೊಸ ಯೋಜನೆಯನ್ನು ಘೋಷಿಸತಕ್ಕದ್ದಲ್ಲ. ಹಾಗೆಯೇ ಸರ್ಕಾರಿ ನೌಕರರನ್ನು ವರ್ಗಾಯಿಸತಕ್ಕದ್ದಲ್ಲ. ನೌಕರರಿಗೆ ಯಾವ ಸೌಲಭ್ಯವನ್ನೂ ಕೊಡತಕ್ಕದ್ದಲ್ಲ. ಹೊಸ ನೇಮಕಾತಿಗಳನ್ನು ಮಾಡತಕ್ಕದ್ದಲ್ಲ. ಸರ್ಕಾರಿ ವಾಹನಗಳನ್ನು ಮಂತ್ರಿಗಳೂ ಪ್ರವಾಸಕ್ಕಾಗಿ ಬಳಸಕೂಡದು.... ಇವು ಕೇವಲ ಒಂದೆರಡು, ಸದ್ಯ ಪ್ರಸ್ತಾಪಿಸಬೇಕೆಂದಿರುವ ವಿಷಯಕ್ಕೆ ಪ್ರಸ್ತುತವಾದವುಗಳು.

ಈ ನೀತಿ ಸಂಹಿತೆಯ ಪ್ರಖರತೆ ಎಲ್ಲಿಯವರೆಗೆ ಹೋಯಿತೆಂದರೆ ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿ ಸುಬ್ರಹ್ಮಣ್ಯಂ ಸೇವೆಯನ್ನು ೧-೧-೯೮ರಿಂದ ೩೧-೩-೯೮ರ ವರೆಗೆ ವಿಸ್ತರಿಸಿದ್ದು ಚುನಾವಣಾ ನೀತಿ ಸಂಹಿತೆಗೆ ವಿರುದ್ಧವಾಗಿರುವುದರಿಂದ ಅವರ ಸೇವೆಯನ್ನು ರದ್ದುಪಡಿಸಬೇಕೆಂದು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಲಿಗೆ ಅರ್ಜಿ ದಾಖಲಿಸಿದರು! ನಮ್ಮ ರಾಜ್ಯದ ಕೇಂದ್ರ ಮಂತ್ರಿಣಿ ರತ್ನಮಾಲಾ ಅವರಿಗೆ ಕೊಟ್ಟಿದ್ದ ಸರ್ಕಾರಿ ಕಾರನ್ನು ಬೆಳಗಾವಿ ಜಿಲ್ಲಾಧಿಕಾರಿ ವಶಪಡಿಸಿಕೊಂಡರು. ಇಷ್ಟೊಂದು ಕಟ್ಟುನಿಟ್ಟಾಗಿ ನೀತಿಸಂಹಿತೆಯನ್ನು ಅನುಸರಿಸುವುದರ ಉದ್ದೇಶ ಸರ್ಕಾರ ಮತದಾರರ ಮನ ಒಲಿಸಲು ಹಾಗೂ ಚುನಾವಣೆ ಕಾರ್ಯ ನಿರ್ವಹಣೆಯಲ್ಲಿ ಭಾಗವಹಿಸುವ ಸರ್ಕಾರಿ ನೌಕರರನ್ನು ಬುಟ್ಟಿಗೆ ಹಾಕಿಕೊಳ್ಳಲು ಯಾವ ಸೌಲಭ್ಯಗಳನ್ನೂ ಕೊಡಬಾರದೆಂಬುದು.

ನೀತಿ ಸಂಹಿತೆಯ ಉದ್ದೇಶ ಮತ್ತು ತೀಕ್ಷ್ಣತೆ ಇಷ್ಟು ಕಠೋರವಾಗಿದ್ದರೂ, ಮುಖ್ಯ ಚುನಾವಣಾ ಆಯುಕ್ತರು ನೀತಿ ಸಂಹಿತೆ ತಕ್ಷಣದಿಂದ ಜಾರಿಯಲ್ಲಿ ಬಂದಿದೆ ಎಂದು ಘೋಷಿಸಿದ ದಿನವೆ ಕರ್ನಾಟಕ ರಾಜ್ಯ ನೌಕರರ ಸಂಘದವರು, ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ನೌಕರರಿಗೆ ಸರಿಸಮಾನ ಸಂಬಳ ಸೌಲಭ್ಯಗಳನ್ನು ತಮ್ಮ ಮೂಲ ವೇತನದ ಶೇ. ೨೦ರಷ್ಟು ಅಧಿಕ ವೇತನವನ್ನು ಕೊಡಬೇಕೆಂದೂ, ಕೊಡದಿದ್ದರೆ ದಿನಾಂಕ ೨-೧-೯೮ರಿಂದ ಅನಿರ್ದಿಷ್ಟ ಮುಷ್ಕರ ಹೂಡುವುದಾಗಿ ಘೋಷಿಸಿ, ಅದರಂತೆ ಶುಕ್ರವಾರದಿಂದ ಮುಷ್ಕರ ಹೂಡಿಯೇಬಿಟ್ಟರು! ವಿಧಾನಸೌಧದ ಬಾಗಿಲಿಗೆ ಅಡ್ಡ ನಿಂತರು. ಉಚ್ಚ ನ್ಯಾಯಾಲಯದ ಬಾಗಿಲು ತೆಗೆಯದಂತೆ ಬಿಗಿ ಕಾವಲು ಹಾಕಿದರು. ಆಸ್ಪತ್ರೆಗಳಲ್ಲಿ ರೋಗಿಗಳನ್ನು ಒಳಗೆ ಬಿಡದಂತೆ ನೋಡಿಕೊಂಡರು.

ಸರ್ಕಾರಿ ನೌಕರರ ಮುಷ್ಕರ ಹೂಡುವ ನಿರ್ಧಾರವನ್ನು ಕುರಿತು ಮುಖ್ಯಮಂತ್ರಿಗಳು ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾ - ಚುನಾವಣಾ ನೀತಿ ಸಂಹಿತೆ ಜಾರಿ ಬಂದಿರುವುದರಿಂದ ರಾಜ್ಯ ಸರ್ಕಾರ ಯಾವ ವೇತನ ಸೌಲಭ್ಯವನ್ನೂ ಮಂಜೂರು ಮಾಡಲು ಬರುವುದಿಲ್ಲ. ಚುನಾವಣೆಗಳು ಆದ ಮೇಲೆ ಅವರ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಗಣಿಸಲಾಗುವುದು. ಮೇಲಾಗಿ, ನಮ್ಮ ರಾಜ್ಯದ ಸರ್ಕಾರಿ ನೌಕರರು ಒಟ್ಟು ಪ್ರಜಾ ಸಂಖ್ಯೆಯಲ್ಲಿ ಶೇಕಡಾ ೧ರಷ್ಟು ಮಾತ್ರ ಇದ್ದಾರೆ. ಈ ಶೇಕಡಾ ೧ರಷ್ಟು ಜನರಿಗೆ, ರಾಜ್ಯ ಸರ್ಕಾರದ ಒಟ್ಟು ಆಯವ್ಯಯದ ಶೇಕಡಾ ೪೩ರಷ್ಟು ಹಣ ಹೋಗುತ್ತಿದೆ. ಶೇಕಡಾ ೯೯ರಷ್ಟು ಜನರಿಗೆ ರಾಜ್ಯದ ಉಳಿದ ಆಯವ್ಯಯದ ಶೇ. ೫೭ರಷ್ಟು ಖರ್ಚಾಗುವುದು ಯಾವ ನ್ಯಾಯ? ಎಂದು ಅವರು ನ್ಯಾಯವಾಗಿಯೆ ಹೇಳಿದರು.

ಮುಷ್ಕರ ಹೂಡುವುದಾಗಿ ಬೆದರಿಸಿದ ದಿನವೆ ನಗರ ಪೊಲೀಸ್ ಕಮಿಷನರ್, ನೌಕರರಿಗೆ ಎಚ್ಚರಿಕೆ ಕೊಟ್ಟು ಅಗತ್ಯ ಸೇವೆಗಳ ರಕ್ಷಣಾ ಕಾಯಿದೆ (Essential Services Maintenance Act) ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಸಿಬ್ಬಂದಿ (ಮುಷ್ಕರ ನಿಷೇಧ) ಕಾಯಿದೆಯನ್ನು ಪ್ರಯೋಗಿಸಲು ಹಿಂಜರಿಯುವುದಿಲ್ಲ ಎಂದು ಸಾರಿದರು. ಈ ಮುಷ್ಕರ ನಿಷೇಧ ಕಾಯಿದೆ ಎಂಬುದು ೧೯೬೬ರಿಂದಲೂ ಜಾರಿಯಲ್ಲಿದೆ. ಈ ೩೦ ವರ್ಷಗಳಲ್ಲಿ ರಾಜ್ಯ ಸರ್ಕಾರಿ ನೌಕರರು ಎಷ್ಟೋ ಸಾರಿ ಮುಷ್ಕರ ಹೂಡಿದ್ದಾರೆ! ಆದರೆ ಆ ಕಾಯಿದೆ ಶಾಸನವಹಿಯಲ್ಲಿ ಸತ್ತಸೂತ್ರವಾಗಿ (Dead letter on statute book) ಬಿದ್ದಿದೆ.

ರಾಜ್ಯ ಸರ್ಕಾರಿ ನೌಕರರು ಮುಷ್ಕರ ಹೂಡಿಯೆಬಿಟ್ಟರು! ಎರಡು ದಿನ ಪ್ರಜೆಗಳು ಎಂಥ ಕಷ್ಟ ಪರಂಪರೆಯನ್ನು ಅನುಭವಿಸಿದರು


ಎಂಬುದು ಅನುಭವಿಸಿದವರಿಗೆ ಗೊತ್ತು. ಆದರೆ ಜಾರಿಯಲ್ಲಿರುವ ಕಾನೂನಿನ ಹಣೆಬರಹ ಏನಾಯಿತು ಎಂಬುದನ್ನು ಆಲೋಚಿಸಬೇಕು. ಇದರಿಂದ ಬರಲಿರುವ ಚುನಾವಣೆಗಳ ಮೇಲೆ ಆಗುವ ಪರಿಣಾಮಗಳೇನು? ಮುಖ್ಯವಾಗಿ-ಕೇಂದ್ರ ಚುನಾವಣಾ ಆಯೋಗದ ನೀತಿ ಸಂಹಿತೆಯ ಬಹು ಮುಖ್ಯ ಸೂತ್ರವಾದ ಸರ್ಕಾರಿ ನೌಕರರಿಗೆ ಯಾವ ಹೊಸ ಸೌಲಭ್ಯಗಳನ್ನೂ ಕೊಡತಕ್ಕದ್ದಲ್ಲ ಎಂಬುದು ಏನಾಯಿತು? ಸರ್ವೋಚ್ಚ ನ್ಯಾಯಾಲಯಕ್ಕೆ ಸಮನಾದ ಮುಖ್ಯ ಚುನಾವಣಾ ಆಯುಕ್ತರ ಘೋಷಣೆ ಕಾಲಕಸಕ್ಕಿಂತ ಕಡೆಯಾಗಿ ಉಲ್ಲಂಘನೆ ಆದದ್ದು ನಿಜ. ಸರ್ಕಾರ ನೌಕರರು ಕೇಳಿದ ಶೇಕಡಾ ೨೦ ಹೆಚ್ಚಳವನ್ನೂ ಕೊಡುವುದಾಗಿ ತೀರ್ಮಾನಿಸಿತು.

ಸರ್ಕಾರ ಈಗ ಕೈಗೊಂಡ ನಿರ್ಧಾರವನ್ನು ಮಾರ್ಚ್ ೧೬ರಂದು ಕೈಗೊಳ್ಳಲು ಬರುತ್ತಿರಲಿಲ್ಲವೆ? ಅಲ್ಲಿಯವರೆಗೆ ಕೇವಲ ಎರಡುವರೆ ತಿಂಗಳವರೆಗೆ ನೌಕರರು ತಡೆದುಕೊಳ್ಳಲು ಆಗುತ್ತಿರಲಿಲ್ಲವೆ? ಸರ್ಕಾರ ನೌಕರರ ಬೆದರಿಕೆಗೆ ಏಕೆ ಮಣಿಯಿತು? ಇದು ಮುಖ್ಯವಾಗಿ ಆಲೋಚಿಸಬೇಕಾದ ಮಾತು.

ಚುನಾವಣೆ ಮುಂದಿರುವಾಗ ಚುನಾವಣೆಗಳಲ್ಲಿ ಕಾರ್ಯ ನಿರ್ವಹಿಸಬೇಕಾದ ಸರ್ಕಾರಿ ನೌಕರರನ್ನು ಎದುರು ಹಾಕಿಕೊಳ್ಳುವ ಧೈರ್ಯ ಆಳುವವರಿಗೆ ಬರಲಾರದು. ಅಧಿಕಾರದಲ್ಲಿದ್ದವರು ಚುನಾವಣೆ ನಡೆಸುವಾಗ ಬಹುಮಟ್ಟಿಗೆ ತಮಗೆ ಬೇಕಾದ, ಹಂಗಿನಲ್ಲಿರುವ, ಋಣಿಗಳಾದ ನೌಕರರನ್ನು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉಳಿಸಿಕೊಳ್ಳಲು, ಹಾಕಿಸಿಕೊಳ್ಳಲು ಹವಣಿಸುವುದು ರಹಸ್ಯವೇನಲ್ಲ. ಜಿಲ್ಲಾ ನಿರ್ವಾಚನಾಧಿಕಾರಿ ತಮಗೆ ಬೇಕಾದವರಾದರೆ ತಮಗೆ ಬೇಕಾದವರನ್ನು ಮತಗಟ್ಟೆ ಅಧಿಕಾರಿಗಳನ್ನಾಗಿ ನೇಮಿಸಿಕೊಳ್ಳಲು ಸುಲಭ. ಅಂಥ ಅನುಕೂಲವಾದ ಅಧಿಕಾರಿಗಳಿದ್ದರೆ, ಪೋಲಿಂಗ್ ಮುಗಿಯುವಾಗ, ಮತ ಚಲಾಯಿಸದ ಮತದಾರರ ಮತ ಚೀಟಿಗಳನ್ನು ತಮಗೆ ಬೇಕಾದವರ ಪೆಟ್ಟಿಗೆಗಳಲ್ಲಿ ತುರುಕಲು (Rigging) ಅನುಕೂಲವಾಗುತ್ತದೆ. ಹಾಗೆಯೆ ಎಣಿಕೆಯ ಕಾಲದಲ್ಲಿ ತಮಗೆ ಅನುಕೂಲರಾದ ಗಣಕಾಧಿಕಾರಿಗಳನ್ನು ಹಾಕಿಸಿಕೊಳ್ಳಲು ಬರುತ್ತದೆ. ಮತಗಳ ಒಟ್ಟು ಸಂಖ್ಯೆಯನ್ನು ಕೂಡುವಾಗ, ಕುಲಗೆಟ್ಟ ಮತಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವಾಗಲೂ ಅಧಿಕಾರಿಗಳು ಕೈಚಳಕ ಮಾಡುವುದು ಅಸಾಧ್ಯವಲ್ಲ! ಚುನಾವಣೆಗಳಲ್ಲಿ ಕಾರ್ಯ ನಿರ್ವಹಿಸುವ ಸರ್ಕಾರಿ ನೌಕರರು-ಅಭ್ಯರ್ಥಿಗಳ ಏಜೆಂಟರ ಸಮ್ಮುಖದಲ್ಲೇ ತಮಗಿಷ್ಟ ಬಂದ ಫಲಿತಾಂಶವನ್ನು ತೇಲಿಸಲು ಸಾಧ್ಯ. ಆದ್ದರಿಂದಲೇ ಚುನಾವಣಾ ಆಯೋಗ ಮೇಲಿನ ನೀತಿ ಸಂಹಿತೆಯನ್ನು ಜಾರಿಗೊಳಿಸಿ ಚುನಾವಣೆಗಳು ನ್ಯಾಯ (Fair)ವಾಗಿ ನಡೆಯಲು ಏರ್ಪಾಟು ಮಾಡಿದೆ.

ರಾಜ್ಯ ಸರ್ಕಾರ ನೌಕರರ ಈ ಅಕಾಲಿಕ ಅನುಚಿತ ಒತ್ತಡಕ್ಕೆ ಯಾಕೆ ಮಣಿಯಿತು?

ಸರ್ಕಾರಿ ನೌಕರರು ಈ ಆಯಕಟ್ಟಿನ ಇಕ್ಕಟ್ಟಿನ ಸಮಯದಲ್ಲೆ ಮುಷ್ಕರ ನಿರ್ಧಾರ ಏಕೆ ಕೈಗೊಂಡರು? ಅವರಿಗೆ ಗೊತ್ತು ಆಳುವವರು. ಅವರ ಆಕ್ರೋಶಕ್ಕೆ ಈಡಾಗುವ ಧೈರ್ಯ ಮಾಡಲಾರರು ಎಂದು. ಮೇಲಾಗಿ ಚುನಾವಣೆಗಳಲ್ಲಿ ಕೆಲಸ ಮಾಡುವವರು ಅವರಲ್ಲದೆ ಬೇರೆ ಯಾರೂ ಇಲ್ಲ. ಅವರು ಚುನಾವಣಾ ಕೆಲಸಕ್ಕೂ ಬಹಿಷ್ಕಾರ ಹಾಕಿದರೆ ಕರ್ನಾಟಕದಲ್ಲಿ ಚುನಾವಣೆಗಳೇ ನಡೆಯದೆ



ಹೋಗಬಹುದು! ಹಾಗಾದರೆ ಗತಿ ಏನು? ಕೇಂದ್ರ ಚುನಾವಣಾ ಆಯೋಗ, ಚುನಾವಣಾ ಕಾರ್ಯಕ್ಕೆ ಬಾರದವರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದೆ. ಈ ನೌಕರರು ಕೆಲಸಕ್ಕೆ ಬಾರದಿದ್ದರೆ ನೆರೆರಾಜ್ಯಗಳಿಂದಲಾದರೂ ಚುನಾವಣಾ ಸಿಬ್ಬಂದಿಯನ್ನು ಕರಿಸಿ ಚುನಾವಣೆ ನಡೆಸಲು ಬರುತ್ತಿತ್ತು. ಚುನಾವಣೆಗಳನ್ನು ಅಡ್ಡಿಪಡಿಸುವ, ಅಡಚಣೆ ಉಂಟುಮಾಡುವ ಈ ಮುಷ್ಕರ ಘೋರ ಅಪರಾಧವೆಂದು ಸುಗ್ರೀವಾಜ್ಞೆ ಹೊರಡಿಸಲೂ ಬರುತ್ತಿತ್ತು. ಶೇಷನ್ ಅಂಥ ಭಂಡ ಧೈರ್ಯಶಾಲಿ ಇದ್ದಿದ್ದರೆ ತಕ್ಕ ಉಪಾಯ ಹೂಡುತ್ತಿದ್ದರು. ಈಗಲಾದರೂ ಕೇಂದ್ರ ಚುನಾವಣಾ ಆಯೋಗ ಕರ್ನಾಟಕ ಸರ್ಕಾರದ ನೀತಿ ಸಂಹಿತೆಯನ್ನು ಉಲ್ಲಂಘಿಸಿದ "ನಿರ್ಧಾರವನ್ನು ಜಾರಿಗೊಳಿಸದಂತೆ ತಡೆಹಿಡಿಯಲು ಬಂದೀತು. ಹೀಗೆ ಮಾಡಿದರೆ ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳಬಹುದು. ಪ್ರಚಲಿತ ಶಾಸನವನ್ನು ಎತ್ತಿ ಹಿಡಿಯಬಹುದು.

ರಾಜ್ಯ ಸರ್ಕಾರ ನೌಕರರ ಈ ಅಕಾಲಿಕ ಅನುಚಿತ ಒತ್ತಡಕ್ಕೆ ಯಾಕೆ ಮಣಿಯಿತು? ಸರ್ಕಾರ ಮೊದಲು ವ್ಯಕ್ತಪಡಿಸಿದ ಪ್ರತಿಕ್ರಿಯೆ ಸರ್ವಥಾ ನ್ಯಾಯಸಮ್ಮತ; ನೀತಿ ಸಂಹಿತೆಗೆ ಅನುಗುಣ. ಈಗ-ಚುನಾವಣಾ ಘೋಷಣೆ ಮಾಡಿದ ಮೇಲೆ-ರಾಜ್ಯ ಸರ್ಕಾರ ಏನೂ ಮಾಡಲು ಬರುವುದಿಲ್ಲ ಎಂದು ದೃಢ ನಿಲುಮೆ ತಾಳಬಹುದಾಗಿತ್ತು. ಆದರೆ ಸರ್ಕಾರ ಏಕೆ ಮಣಿಯಿತು? ಮೇಲೆ ಹೇಳಿದಂತೆ ನೌಕರರು ಅನುಕೂಲವಾಗಿದ್ದರೆ ಚುನಾವಣೆಗಳಲ್ಲಿ ಅನುಕೂಲವಾಗಬಹುದು. ಒಂದು ವೇಳೆ ಎದುರು ಹಾಕಿಕೊಂಡರೆ ನಿಶ್ಚಯವಾಗಿ ಹಾನಿ ಆಗಿಯೆ ಆಗುವುದು. ಹೀಗೆ ಹಿಂದೆ ೧೯೫೨ರಲ್ಲಿ ಮದ್ರಾಸ್ ರಾಜ್ಯದಲ್ಲಿ ಆಗಿಯೂ ಇತ್ತು. ೧೯೫೦ರಲ್ಲಿ ಸಂವಿಧಾನ ಜಾರಿಯಲ್ಲಿ ಬಂದ ವರ್ಷ ಒಪ್ಪತ್ತಿನಲ್ಲಿ ಸರ್ಕಾರಿ ನೌಕರರು ಚುನಾವಣೆಗಳು ಬರುವುದಕ್ಕಿಂತ ಮುಂಚೆ ವೇತನ ಹೆಚ್ಚಳಕ್ಕಾಗಿ ಮುಷ್ಕರ ಹೂಡಿದರು. ಸರ್ಕಾರ ಆ ಮುಷ್ಕರಕ್ಕೆ ಮಣಿಯಲಿಲ್ಲ. ಮುಷ್ಕರ ನಿರತ ನೌಕರರ ಮೇಲೆ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಂಡರು. ಮುಷ್ಕರ ನಿರತರು ಕೊನೆಗೂ ಮುಷ್ಕರ ನಿಲ್ಲಿಸಿ ಕೆಲಸಕ್ಕೆ ಹಾಜರಾದರು. ಸರ್ಕಾರ ಕೆಲವರನ್ನು ನೌಕರಿಯಿಂದ ವಜಾ ಮಾಡಿತು. ಗೈರು ಹಾಜರಾದ ದಿನಗಳ ಸಂಬಳ ಹಿಡಿದರು. ಸೇವಾ ಹಿರಿತನಕ್ಕೂ ಬಾಧಕವುಂಟಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಮುಷ್ಕರದ ಕಾಲಾವಧಿಯಲ್ಲಿ ಜನರ ಆಕ್ರೋಶಕ್ಕೆ ಈಡಾದರು.

ಈ ಹಿನ್ನೆಲೆಯಲ್ಲಿ ೧೯೫೧ರ ಅಂತ್ಯಕ್ಕೆ ಸಾರ್ವತ್ರಿಕ ಚುನಾವಣೆಗಳು ಬಂದವು. ಆಗ ಚುನಾವಣಾ ಕಾರ್ಯನಿರತ ನೌಕರರು ತಮ್ಮ ಕೈಚಳಕ ತೋರಿಸಿಯೆಬಿಟ್ಟರು. ಆಂಧ್ರ ಜಿಲ್ಲೆಗಳಲ್ಲಿ ವಿಶಾಖಪಟ್ಟಣದಿಂದ ನೆಲ್ಲೂರುವರೆಗೆ ಕರಾವಳಿ ಜಿಲ್ಲೆಗಳಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿತು. ಐದು ಜನ ಆಂಧ್ರ ಮಂತ್ರಿಗಳು ಸೋತುಹೋದರು. ಮದ್ರಾಸ್ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯೆ ಕಷ್ಟವಾಯಿತು. ಈ ಕಷ್ಟವನ್ನು ಎದುರಿಸಲು, ಗೌರ್ನರ್ ಜನರಲ್ ಆಗಿ ನಿವೃತ್ತಿ ಹೊಂದಿದ್ದ ರಾಜಾಜಿ ಅವರನ್ನು ಮುಖ್ಯಮಂತ್ರಿಯನ್ನಾಗಿ ತಂದರು. ಅವರು ವಿಧಾನಮಂಡಲದ ಸದಸ್ಯರಾಗಿಲ್ಲದಿದ್ದರೂ ಕೂಡ!!

ಸರ್ಕಾರಿ ನೌಕರರನ್ನು ಖುಷಿಯಲ್ಲಿಡುವುದು ಯಾವಾಗಲೂ ಕ್ಷೇಮ. ಚುನಾವಣೆಗಳ ಕಾಲದಲ್ಲಂತೂ ಇದು ಅತ್ಯಗತ್ಯ! ವ್ಯಾವಹಾರಿಕ. ನಮ್ಮ ಸರ್ಕಾರ ವ್ಯಾವಹಾರಿಕವಾಗಿ ಉಚಿತವಾದುದನ್ನೇ ಮಾಡಿದೆ! ಆದರೆ ಚುನಾವಣಾ ನೀತಿ ಸಂಹಿತೆ ಏನಾಯಿತು?



ನಶಿಸುತ್ತಿರುವ ಕನ್ನಡದ ಪ್ರಥಮ ತ್ರಿಪದಿ ಶಾಸನ


○ ಶಂಕರಗೌಡ ವೈ. ಪಾಟೀಲ

ವಿಶ್ವವಿಖ್ಯಾತ ಐತಿಹಾಸಿಕ ಪ್ರೇಕ್ಷಣೀಯ ಸ್ಥಳವಾದ ಬಾದಾಮಿಯಲ್ಲಿನ ಗುಹಾಂತರ ದೇವಾಲಯಗಳು, ಇತರ ಪ್ರಾಚೀನ ದೇವಾಲಯಗಳು, ಚಾಲುಕ್ಯರ ಕಲೆ, ವಾಸ್ತು-ಶಿಲ್ಪಗಳನ್ನು ಇಂದಿಗೂ ಜೀವಂತವಾಗಿ ಪ್ರತಿಬಿಂಬಿಸುತ್ತ ಅವರ ಶಿಲ್ಪ ಕಲಾ ಕೌಶಲ್ಯಕ್ಕೆ ಕಲಾಪ್ರೀತಿಗೆ ಜೀವಂತ ಸಾಕ್ಷಿಯಾಗಿ ನಿಂತಿರುವಂತೆ, ಇಲ್ಲಿ ಖಂಡರಿಸಲ್ಪಟ್ಟಿರುವ ಶಿಲಾ ಶಾಸನಗಳು ಗತಕಾಲದ ಚರಿತ್ರೆಯನ್ನು ಸಾರಿ ಹೇಳುವ ಐತಿಹಾಸಿಕ ದಾಖಲೆಗಳಾಗಿ ನಿಂತಿವೆ. ಇಂತಹ ಅಮೂಲ್ಯವಾದ ಶಾಸನಗಳಲ್ಲೊಂದು 'ಕಪ್ಪೆ ಅರಭಟ್ಟನ ಶಾಸನ'.

ಸುಮಾರು ಕ್ರಿ.ಶ. ೭ನೇ ಶತಮಾನದಲ್ಲಿ ಖಚಿತವಾದ ಈ ಶಾಸನವು 'ಕಪ್ಪೆ ಅರಭಟ್ಟ'ನೆಂಬ ವೀರನೊಬ್ಬನ ಶೌರ್ಯದ ಹಿರಿಮೆಯನ್ನು ಕೀರ್ತಿಸುವ ಶಾಸನವಾಗಿದೆ. ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ನಿರೂಪಿಸಿದಂತೆ, ಈ ಶಾಸನದಲ್ಲಿ ವ್ಯಕ್ತವಾಗಿರುವ ಕಪ್ಪೆ ಅರಭಟ್ಟನ ವ್ಯಕ್ತಿತ್ವವನ್ನು ಸಾರರೂಪದಲ್ಲಿ ಈ ರೀತಿಯಾಗಿ ನಿರೂಪಿಸಬಹುದು : ''ಕಪ್ಪೆ ಅರಭಟ್ಟನು ಪ್ರಾಯಶಃ ಹುಟ್ಟಿನಿಂದ ಬ್ರಾಹ್ಮಣನಾಗಿದ್ದ ಒಬ್ಬ ಸಮರ್ಥ ಯೋಧ. ತನ್ನ ಒಳ್ಳೆಯ ನಡವಳಿಕೆಯಿಂದ ಆತ 'ಕಲಿಯುಗ ವಿಪರೀತನ್' ಎಂದು ಹೆಸರಾಗಿದ್ದ. ಹೀಗಿದ್ದುದರಿಂದ ಸಹಜವಾಗಿಯೇ ಒಳ್ಳೆಯ ಜನ ಅವನ್ನು ತಮ್ಮವನೆಂದು ಆದರಿಸುತ್ತಿದ್ದರು. ದುಷ್ಟರು ಆತನ ಬಳಿ ಸೇರುತ್ತಿರಲಿಲ್ಲ. ಮಾನವಂತನಾಗಿ ಬಾಳಬೇಕು ಮಾನಭಂಗವನ್ನು ಸಹಿಸುವುದಕ್ಕಿಂತ ಸಾಯುವುದೇ ಲೇಸು ಎಂಬುದು ಆತನ ನಂಬಿಕೆಯಾಗಿತ್ತು. ಒಳ್ಳೆಯವರ ವಿಷಯದಲ್ಲಿ ಆತ ಒಳ್ಳೆಯವನೇ. ರಾಜನೈತಿಕವಿರಬಹುದು, ಸೈನ್ಯ ವಿಚಾರವಿರಬಹುದು. ಯಾವುದೇ ದೊಡ್ಡ ಜವಾಬ್ದಾರಿಯನ್ನು ದಕ್ಷತೆಯಿಂದ ನಿರ್ವಹಿಸಬಲ್ಲ ಧುರೀಣ ಆತ. ಮನಸ್ಸು ಮಾಡಿದರೆ ಒಳ್ಳೆಯದನ್ನೂ ಮಾಡಬಲ್ಲ, ಕೆಟ್ಟದ್ದನ್ನೂ ಮಾಡಬಲ್ಲ. ಅಂದರೆ ಒಳ್ಳೆಯವರಿಗೆ ಒಳ್ಳೆಯವನು, ಕೆಟ್ಟವರಿಗೆ ಕೆಟ್ಟವನು. ಶಿಷ್ಟರ ರಕ್ಷಣೆ ದುಷ್ಟರ ವಿನಾಶ ಎಂಬುದು ಅವನ ಸಂಕಲ್ಪ. ಅದರಲ್ಲಿ ಆತ ಸಮರ್ಥ. ಆತನನ್ನು ಎದುರು ಹಾಕಿಕೊಂಡವರು ಹಾಳಾಗುವುದು ಖಂಡಿತ.''

ಹೀಗೆ ಕಪ್ಪೆ ಅರಭಟ್ಟನೆಂಬ ವೀರ ಕನ್ನಡಿಗನೊಬ್ಬನ ವ್ಯಕ್ತಿ ಚಿತ್ರಣವನ್ನು ಸಾರ್ಥಕವಾಗಿ, ಸಮರ್ಥವಾಗಿ ನಿರೂಪಿಸಿರುವುದು ಈ ಶಾಸನದ ವೈಶಿಷ್ಟ್ಯವಾಗಿದೆ. ಇದಲ್ಲದೇ ಈ ಶಾಸನವು ಇನ್ನೂ ಕೆಲವು ಪ್ರಮುಖ ವೈಶಿಷ್ಟ್ಯಗಳನ್ನು ಹೊಂದಿದೆ. ''ಕನ್ನಡದ ಪ್ರಪ್ರಥಮ ತ್ರಿಪದಿ ಶಾಸನ'' ಎಂಬ ಹೆಗ್ಗಳಿಕೆಗೆ ಭಾಜನವಾದ ಶಾಸನವಿದು. ಅಂದರೆ ದೇಶೀಯ ಛಂದಸ್ಸಾದ ತ್ರಿಪದಿಯು ಪ್ರಪ್ರಥಮ ಬಾರಿ ಬಳಕೆಯಾದುದು ಈ ಶಾಸನದಲ್ಲಿ. ಇದಲ್ಲದೆ ಕ್ರಿ.ಶ. ೭ನೇ ಶತಮಾನದ ಕನ್ನಡ ಭಾಷಾ ಅವಸ್ಥೆಯ ಬಗ್ಗೆ ಅರಿತುಕೊಳ್ಳಲು ಇದು ತಕ್ಕ ಸಾಮಗ್ರಿ ಒದಗಿಸುವುದರಿಂದ ಇದು ಭಾಷಾ ಅಧ್ಯಯನದ ದೃಷ್ಟಿಯಿಂದಲೂ ಪ್ರಾಮುಖ್ಯ ಹೊಂದಿದೆ. ಈ ಶಾಸನದಲ್ಲಿ ಉಕ್ತವಾಗಿರುವ ''ಸಾಧುಗೆ ಸಾಧು, ಮಾಧೂರ್‍ಯಂಗೆ ಮಾಧೂರ್ಯಂ, ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ್, ಮಾಧವನೀತನ್ ಪೆರನಲ್ಲ'' ಎಂಬ ಮಾತುಗಳು ಪ್ರಸ್ತುತದಲ್ಲಿ ಕಪ್ಪೆ ಅರಭಟ್ಟನನ್ನು ಕುರಿತು ಉಲ್ಲೇಖಿಸಲಾಗಿದೆಯಾದರೂ, ಪರೋಕ್ಷವಾಗಿ ಇದು ಅಂದಿನ ವೀರ ಕನ್ನಡಿಗರ ಸಾಮಾಜಿಕ ನೈತಿಕ ಮೌಲ್ಯಗಳನ್ನು ಪ್ರತಿಬಿಂಬಿಸುತ್ತವೆ.

ಈ ಎಲ್ಲ ದೃಷ್ಟಿಯಿಂದಲೂ ಅತ್ಯಂತ ಮಹತ್ವಪೂರ್ಣವಾದ ಶಾಸನದ ಪ್ರಸ್ತುತ ಸ್ಥಿತಿಯು ಶೋಚನೀಯವಾಗಿರುವುದು ದುರದೃಷ್ಟಕರ. ಈ ಶಾಸನದ ಮುಂದೆಲ್ಲಾ ಮುಳ್ಳು ಕಂಟಿಗಳು ಬೆಳೆದು ಹತ್ತಿರ ಹೋಗಲು ಸುಗಮವಾದ ದಾರಿಯು ಇಲ್ಲದಂತಾಗಿದೆ. ಆಸಕ್ತ ಸಹೃದಯ ಪ್ರವಾಸಿಗರು ಇದನ್ನು ಅರಸಿಕೊಂಡು ಬಂದರೆ ಇದರ ದರ್ಶನವಾಗುವುದು ಸುಲಭವಲ್ಲ. ಏಕೆಂದರೆ ಈ ಶಾಸನದ ಬಳಿ ''ಕಪ್ಪೆ ಅರಭಟ್ಟನ ಶಾಸನ'' ಎಂಬ ಫಲಕವೇ ಇಲ್ಲ. ಇದಲ್ಲದೇ ಯೋಗ್ಯ ರಕ್ಷಣೆಯು ಇಲ್ಲದೇ, ಬಿಸಿಲು, ಗಾಳಿ, ಮಳೆಗಳಿಗೆ ಶತಶತಮಾನಗಳಿಂದ ಮೈಯೊಡ್ಡಿ ನಿಂತಿರುವ ಈ ಶಾಸನ ದಿನದಿಂದ ದಿನಕ್ಕೆ ನಶಿಸುತ್ತಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ನೀಡಿದಲ್ಲಿ ಇಂತಹ ಒಂದು ಅಮೂಲ್ಯ ಶಾಸನದ ಮೂಲ ರೂಪವನ್ನು ಮುಂದಿನ ಪೀಳಿಗೆಯವರು ನೋಡುವ ಭಾಗ್ಯವನ್ನು ಕಲ್ಪಿಸಿಕೊಟ್ಟಂತಾಗುತ್ತದೆ. ●



ಚಟ್ನಿ ಪುಡಿ

ಬೇಕಾಗುವ ಸಾಮಗ್ರಿಗಳು



ಅರ್ಧ ಕೆ.ಜಿ. ಪುಟಾಣಿ, ೧೦೦ ಗ್ರಾಂ ಮೆಂತೆ, ೮ ಗಡ್ಡೆ ಬೆಳ್ಳುಳ್ಳಿ, ಒಂದು ಬಟ್ಟಲು ಒಣ ಕೊಬ್ಬರಿ, ೨ ಟೀ ಸ್ಪೂನ್ ಜೀರಿಗೆ, ಒಂದು ಕಟ್ಟು ಕೊತ್ತಂಬರಿ ಸೊಪ್ಪು, ೧ ಕಟ್ಟು ಕರಿಬೇವು, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಖಾರದ ಪುಡಿ.

ಮಾಡುವ ವಿಧಾನ

ಮೆಂತೆಯನ್ನು ಪುಡಿ ಮಾಡಿಕೊಂಡು ನಂತರ ಪುಟಾಣಿ, ತುರಿದುಕೊಂಡ ಒಣ ಕೊಬ್ಬರಿ, ಉಪ್ಪು ಮತ್ತು ಖಾರ ಪುಡಿ ಮಾಡಿಕೊಳ್ಳಿ. ಜೀರಿಗೆ ಮತ್ತು ಕರಿಬೇವು ಬೆಚ್ಚಗೆ ಮಾಡಿಕೊಂಡು ಅದರ ಜೊತೆಗೆ ಬೆಳ್ಳುಳ್ಳಿ, ಕೊತ್ತಂಬರಿ ಸೊಪ್ಪನ್ನು ಪುಡಿ ಮಾಡಿಕೊಂಡು ಎಲ್ಲವನ್ನು ಒಟ್ಟಿಗೆ ಸೇರಿಸಿ ಒಂದು ಸಲ ಕುಟ್ಟಿ ಇಲ್ಲವೇ ಮಿಕ್ಸಿಯಲ್ಲಿ ಪುಡಿ ಮಾಡಿ. ಚಟ್ನಿ ಪುಡಿ ತಯಾರು.

- ಎನ್.ಎಸ್.ಎಸ್. ಸುಜಾತ,
ರಾಣೆಬೆನ್ನೂರು

ಮಿಶ್ರ ಹಣ್ಣಿನ ಜಾಮ್

ಬೇಕಾಗುವ ಸಾಮಗ್ರಿಗಳು

ಹೆಚ್ಚಾಗಿ ತಿರುಳಿರುವ ಹಣ್ಣುಗಳಾದ ಪರಂಗಿ, ಬಾಳೆಹಣ್ಣು, ಸಪೋಟ, ಮಾವು, ಅನಾನಸ್, ಸೇಬು, ಕಪ್ಪು ದ್ರಾಕ್ಷಿ ಇವುಗಳ ಪಲ್ಪ್ ಒಂದು ಲೋಟ, ಒಂದು ಲೋಟ ಸಕ್ಕರೆ, ಕಾಲು ಚಮಚ ಲಿಂಬೆ ಉಪ್ಪು, ರಾಸ್‌ಪೆರೀ ಕೆಂಪು ಬಣ್ಣ ಒಂದು ಚಿಟಿಕೆ, ಮಿಶ್ರ ಹಣ್ಣುಗಳ ಸುವಾಸನೆ (ಎಸೆನ್ಸ್) ಕಾಲು ಚಮಚ.

ಮಾಡುವ ವಿಧಾನ

ಹಣ್ಣಿನ ಸಿಪ್ಪೆ ಮತ್ತು ಬೀಜವನ್ನು ಬೇರ್ಪಡಿಸಿ ತುರಿಯುವ ಮಣೆಯಿಂದ ತುರಿದುಕೊಳ್ಳಿ. ಇದನ್ನು ಒಲೆಯ ಮೇಲಿಟ್ಟು ಹಣ್ಣಿನ ತಿರುಳು ಮೃದುವಾಗುವವರೆಗೂ ಬೇಯಿಸಿ. ಒಲೆಯಿಂದ ಇಳಿಸಿ ಚೆನ್ನಾಗಿ ಮಸೆಯಿರಿ. ಹಣ್ಣಿನ ತಿರುಳೊಂದಿಗೆ (ಪಲ್ಪ್‌ನೊಂದಿಗೆ) ಸಕ್ಕರೆಯನ್ನು ಸೇರಿಸಿ, ಒಲೆಯ ಮೇಲಿಟ್ಟು ಚೆನ್ನಾಗಿ ಬೇಯಿಸಿ. ಪ್ರಾರಂಭದಲ್ಲಿ ಪಾತ್ರೆಯ ಮಧ್ಯ ಭಾಗದಲ್ಲಿ ಮಾತ್ರ ಕುದಿಯುತ್ತದೆ. ಜಾಮ್ ಹದ ಬರುವುದಕ್ಕೆ ೪-೫ ನಿಮಿಷಗಳ ಮೊದಲು ಪಾತ್ರೆಯ ಸುತ್ತಲು ಚೆನ್ನಾಗಿ ಕುದಿಯುತ್ತದೆ. ನಂತರ ಲಿಂಬೆ ಉಪ್ಪು ಮತ್ತು ಬಣ್ಣವನ್ನು ಸೇರಿಸಿ, ಜಾಮ್ ಹದ ಬರುವವರೆಗೂ ಕುದಿಸಿ. ಜಾಮ್ ಆಗಿರುವುದನ್ನು ಕಂಡು ಹಿಡಿಯುವ ವಿಧಾನ:



ಕುದಿಯುತ್ತಿರುವ ಸ್ವಲ್ಪ ಜಾಮ್‌ನ್ನು ಒಂದು ತಟ್ಟೆಯಲ್ಲಿ ತೆಗೆದುಕೊಂಡು ಚೆನ್ನಾಗಿ ಆರಿಸಿ, ನಂತರ ತಟ್ಟೆಯನ್ನು ತಿರುಗಿಸಿದಾಗ ಜಾಮ್ ನೀರಿನಂತೆ ಹರಿಯದೆ, ಇದ್ದ ಜಾಗದಲ್ಲೇ ಇದ್ದರೆ ಜಾಮ್ ಆಗಿದೆ ಎಂದು ತಿಳಿಯಿರಿ. ನಂತರ ಜಾಮನ್ನು ಒಲೆಯಿಂದ ಇಳಿಸಿ, ಸುವಾಸನೆಯನ್ನು ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ, ಅಗಲವಾದ ಬಾಯಿಗಳ ಸೀಸೆಗಳನ್ನು ಮರದ ಹಲಗೆಯ ಮೇಲಿಟ್ಟು ಬಿಸಿಯಾದ ಜಾಮ್‌ನ್ನು ತುಂಬಿ, ಚೆನ್ನಾಗಿ ಆರಿದ ನಂತರ ಮುಚ್ಚಳ ಮುಚ್ಚಿ.

- ಶುಭ ಎಚ್.ಸಿ.,
ಬೆಂಗಳೂರು


ಎಳ್ಳು ಹೋಳಿಗೆ

ಬೇಕಾಗುವ ಸಾಮಗ್ರಿಗಳು

೧ ದೊಡ್ಡ ಕಪ್ ಬಿಳಿ ಅಥವಾ ಕಪ್ಪು ಎಳ್ಳು, ೧ ದೊಡ್ಡ ಕಪ್ ಬೆಲ್ಲದ ಪುಡಿ, ೧ ದೊಡ್ಡ ಚಮಚ ರಿಫೈನ್ಡ್ ಎಣ್ಣೆ, ೧ ಚಿಟಿಕೆ ಉಪ್ಪು, ೧ ದೊಡ್ಡ ಕಪ್ ಮೈದಾ ಹಿಟ್ಟು.

ಮಾಡುವ ವಿಧಾನ

ಹೂರಣ : ಎಳ್ಳನ್ನು ಒಂದು ದಪ್ಪ ತಳದ ಬಾಂಡ್ಲಿಯಲ್ಲಿ ಹಾಕಿ ಹುರಿಯಬೇಕು. ಚೆನ್ನಾಗಿ ಹುರಿದ ನಂತರ ಅದನ್ನು ಆರಲು ಬಿಡಬೇಕು. ಅದು ಸಾಧಾರಣ ತಣ್ಣಗಾದ ಮೇಲೆ ಮಿಕ್ಸರ್‌ನಲ್ಲಿ ಹಾಕಿ ಪುಡಿ ಮಾಡಬೇಕು. ಅದರಲ್ಲಿ ಪುಡಿ ಬೆಲ್ಲವನ್ನು ಹಾಕಿ ಒಮ್ಮೆ ಮಿಕ್ಸರ್‌ನಲ್ಲಿಯೇ ಪುಡಿ ಮಾಡಬೇಕು.




ಮೈದಾ ಹಿಟ್ಟನ್ನು ಒಂದು ಪರಾತದಲ್ಲಿ ಹಾಕಿ, ಮಧ್ಯದಲ್ಲಿ ಸ್ವಲ್ಪ ತಗ್ಗು ಮಾಡಬೇಕು. ಇದರಲ್ಲಿ ಒಂದು ಚಿಟಿಕೆ ಉಪ್ಪು ಹಾಗೂ ಚೆನ್ನಾಗಿ ಕಾಯ್ದ ಒಂದು ಚಮಚ ಎಣ್ಣೆ ಹಾಕಬೇಕು. ಇದನ್ನು ಚೆನ್ನಾಗಿ ಕಲಿಸಿದ ನಂತರ ನೀರು ಹಾಕಿ ನಾದಬೇಕು. ನಾದಿದ ಹಿಟ್ಟನ್ನು ಅರ್ಧಗಂಟೆ ನೆನೆಯಲು ಬಿಡಬೇಕು.

ಅನಂತರ ಈ ಹಿಟ್ಟಿನಲ್ಲಿ ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಬೇಕು. ಸುಮಾರು ಚಿಕ್ಕ ನಿಂಬೆಹಣ್ಣಿನ ಗಾತ್ರದಷ್ಟು. ಈ ಉಂಡೆಯನ್ನು ಸ್ವಲ್ಪ ಲಟ್ಟಿಸಿ ಅದನ್ನು ಅಂಗೈಯಲ್ಲಿ ಇಟ್ಟು ಮೇಲೆ ತಯಾರಿಸಿದ ಪುಡಿಯನ್ನು ಹಾಕಿ ಅದನ್ನು ಮುಚ್ಚಬೇಕು. ಅದನ್ನು ಚೆನ್ನಾಗಿ ಎರಡೂ ಕೈಯಿಂದ ಪ್ರೆಸ್ ಮಾಡಿ ಚಪಾತಿಯ ಹಾಗೆ ತೆಳುವಾಗಿ ಲಟ್ಟಿಸಿ, ಹೆಂಚಿನ ಮೇಲೆ ಹಾಕಿ ಎರಡೂ ಕಡೆ ಒಣದಾಗಿಯೇ ಬೇಯಿಸಬೇಕು. ಬೇಯಿಸಿದ ಈ ಹೋಳಿಗೆಗಳನ್ನು ಪೇಪರ್‌ನ ಮೇಲೆ ಒಂದೊಂದಾಗಿ ಹಾಕಿ ತಣ್ಣಗಾದ ಮೇಲೆ, ಬಾಕ್ಸ್‌ನಲ್ಲಿ ಸ್ಟೋರ್ ಮಾಡಬಹುದು. ಇದರ ರುಚಿ ತುಪ್ಪದೊಡನೆ ತಿಂದಾಗ ಇನ್ನೂ

ಶಂಕರ ಪೋಳಿ

ಬೇಕಾಗುವ ಸಾಮಗ್ರಿಗಳು



ಕಾಲು ಕೆ.ಜಿ. ಮೈದಾ ಹಿಟ್ಟು, ಒಂದು ಸಣ್ಣ ಕಪ್ ಸಕ್ಕರೆ, ಒಂದು ಸಣ್ಣ ಕಪ್ ನೀರು, ಒಂದು ಸಣ್ಣ ಕಪ್ ಎಣ್ಣೆ ಅಥವಾ ತುಪ್ಪ (ಒಂದನ್ನು ಉಪಯೋಗಿಸಬೇಕು)

ಮಾಡುವ ವಿಧಾನ

ಸಕ್ಕರೆ, ಎಣ್ಣೆ (ಅಥವಾ ತುಪ್ಪ) ನೀರು ಎಲ್ಲವನ್ನೂ ಹಾಕಿ, ಒಲೆಯ ಮೇಲೆ ಇಟ್ಟು ಸಕ್ಕರೆ ಕರಗುವವರೆಗೆ ಕೈಯಾಡಿಸುತ್ತಾ ಇರಬೇಕು. ಕರಗಿದ ನಂತರ ಅದನ್ನು ಕೆಳಗಿಳಿಸಿ ಅದು ತಂಪು ಆದ ಮೇಲೆ ಮೈದಾಹಿಟ್ಟಿನೊಂದಿಗೆ ಅದನ್ನು ಚೆನ್ನಾಗಿ ನಾದಬೇಕು. ನಾದಿದ ಹಿಟ್ಟನ್ನು ಸಣ್ಣ ಸಣ್ಣ ಉಂಡೆಗಳನ್ನು ಮಾಡಿ ಚಪಾತಿ ಆಕಾರದಲ್ಲಿ ''ದಪ್ಪಗೆ'' ಲಟ್ಟಿಸಬೇಕು. ಲಟ್ಟಿಸಿದ ನಂತರ ಬೇಕಾದ ಆಕಾರದಲ್ಲಿ ಕೊರೆದು ಸಣ್ಣ ಸಣ್ಣ ತುಂಡುಗಳನ್ನು ಮಾಡಿ ಬಾಣಲೆಯಲ್ಲಿ ಎಣ್ಣೆಯನ್ನು ಹಾಕಿ ಸಣ್ಣನೆ ಉರಿಯನ್ನು ಮಾಡಿಕೊಂಡು ಕರಿಯಬೇಕು. ಕರಿದ ಶಂಕರ ಪೋಳಿ ತಿನ್ನಲು ಬಲು ರುಚಿ.

- ಎನ್. ಎಂ. ಸುಲೋಚನಮ್ಮ, ಕೊಟ್ಟೂರು

ಹೆಚ್ಚುವದು. ಇದರ ಅರ್ಥ ಇದನ್ನು ಬಿಸಿಯಾಗಿ ತಿನ್ನಬಾರದು ಅಂತ ಅಲ್ಲ!

- ಮುಕ್ತಾ ವಿಲ್ಸನ್,
ಬೆಂಗಳೂರು

ದ್ದರೆ ಸ್ವಲ್ಪ ನೀರನ್ನು ಸೇರಿಸಿ ವಡೆಯಂತೆ ತಟ್ಟಿ ಎಣ್ಣೆಯಲ್ಲಿ ಕರಿಯಿರಿ.

- ಸುಶೀಲಾ ಗಾಯಕವಾಡ,
ಮೊಳಕಾಲ್ಮೂರು

ಅಡುಗೆಮನೆ

ಶ್ರೀಖಂಡ

ಬೇಕಾಗುವ ಸಾಮಗ್ರಿಗಳು

೧ ಲೀಟರ್ ಗಟ್ಟಿ ಮೊಸರು, ಕಾಲು ಕೆ.ಜಿ. ಸಕ್ಕರೆ, ೫-೬ ಯಾಲಕ್ಕಿ, ಒಂದು ಚಿಟಿಕೆ ಕೇಸರಿ ಕಲರ್.

ಮಾಡುವ ವಿಧಾನ



ಗಟ್ಟಿ ಮೊಸರನ್ನು ಒಂದು ತೆಳುವಾದ ಪಂಚೆ ಬಟ್ಟೆಯಲ್ಲಿ ಕಟ್ಟಿ ಒಂದು ಕಡೆ ನೇತು ಹಾಕಬೇಕು. ನೀರು ಚೆನ್ನಾಗಿ ಬಸಿದು ಹೋದ ಮೇಲೆ (೧ ಗಂಟೆ ನಂತರ) ಮೊಸರನ್ನು ಒಂದು ಪಾತ್ರೆಯಲ್ಲಿ ಹಾಕಿ. ಅದಕ್ಕೆ ಸಕ್ಕರೆಯನ್ನು ಹಾಕಿ ಚೆನ್ನಾಗಿ ಗೋಟಾಯಿಸಬೇಕು. ಅದಕ್ಕೆ ಯಾಲಕ್ಕಿ ಪುಡಿ, ಸ್ವಲ್ಪ ಕೇಸರಿ ಕಲರ್ ಹಾಕಿ ಪೇಸ್ಟ್ ತರಹ ಮಾಡಬೇಕು.

ಇದನ್ನು ಪೂರಿ ಅಥವಾ ಚಪಾತಿಗೆ ಬಳಸಬಹುದು. ಅಥವಾ ಐಸ್‌ಕ್ರೀಂ ತರಹ ಇದನ್ನು ಮಕ್ಕಳಿಗೆ ತಿನ್ನಲು ಕೊಡಬಹುದು. ಇದು ಆರೋಗ್ಯಕ್ಕೆ ತುಂಬಾ ಒಳ್ಳೆಯದು.

- ಸುನೀತಾನಂದ,
ದಾವಣಗೆರೆ

ರಾಗಿಯ ಮಾಲ್ಟ್

ಬೇಕಾಗುವ ಸಾಮಗ್ರಿಗಳು

ರಾಗಿ, ತುಪ್ಪ, ಯಾಲಕ್ಕಿ, ಗೋಡಂಬಿ, ಕೇಸರಿ, ಕಸ್ತೂರಿ.

ಮಾಡುವ ವಿಧಾನ



ಒಳ್ಳೆಯ ರಾಗಿಯನ್ನು ತಂದು ಸ್ವಚ್ಛಮಾಡಿ ನೀರಿನಲ್ಲಿ ನೆನೆಯಿಡಬೇಕು. ಮಾರನೆಯ ದಿನ ರಾಗಿಯಲ್ಲಿರುವ ನೀರನ್ನು ಬಸಿದು ಶುಭ್ರವಾಗಿ ಬಟ್ಟೆಯಲ್ಲಿ ಕಟ್ಟಿ ಒಂದು ದಿವಸ ಹಾಗೇ ಇಡಬೇಕು. ರಾಗಿಯ ಗಂಟಿನ ಮೇಲೆ ಭಾರವಾದ ವಸ್ತುವನ್ನು ಇಡಬೇಕು. ಮಾರನೆಯ ದಿವಸ ರಾಗಿಯನ್ನು ನೆರಳಲ್ಲಿ ಒಣಗಿಸಬೇಕು. ರಾಗಿ ಚೆನ್ನಾಗಿ ಒಣಗಿದ ಮೇಲೆ ಬೀಸಿ ಹಿಟ್ಟು ಮಾಡಿಕೊಂಡು ಬಟ್ಟೆಯಿಂದ ಶೋಧಿಸಿಕೊಳ್ಳಬೇಕು. ನಂತರ ಒಂದು ಬಾಣಲೆಯಲ್ಲಿ ಸ್ವಲ್ಪ ತುಪ್ಪ ಹಾಕಿ ಅದರಲ್ಲಿ ಯಾಲಕ್ಕಿ ಮತ್ತು ಗೋಡಂಬಿಯ ಪುಡಿಯನ್ನು ಘಮ್ಮಗೆ ಹುರಿದು ರಾಗಿಯ ಹಿಟ್ಟಿಗೆ ಬೆರೆಸಿ ಸ್ವಲ್ಪ ಕೇಸರಿ ಮತ್ತು ಕಸ್ತೂರಿಯನ್ನು ಹಾಕಿ ಪುನಃ ಚೆನ್ನಾಗಿ ಬೆರೆಸಿ ಪ್ಯಾಕ್ ಮಾಡಿದರೆ ಅದೇ ರಾಗಿಯ ಮಾಲ್ಟ್.

- ಶೋಭಕ್ಕ ಎ. ಹೊಸಳ್ಳಿ,
ಹಳೇವೀರಾಪುರ

ಬಾಳೆಕಾಯಿ ಚಟ್ನಿ

ಬೇಕಾಗುವ ಸಾಮಗ್ರಿಗಳು

೨-೩ ಬಾಳೆಕಾಯಿ, ೪ ಹಸಿಮೆಣಸಿನ ಕಾಯಿ, ೧ ಈರುಳ್ಳಿ, ಕೊತ್ತಂಬರಿ ಸೊಪ್ಪು, ಕರಿಬೇವಿನ ಸೊಪ್ಪು, ಮೊಸರು, ರುಚಿಗೆ ತಕ್ಕ ಉಪ್ಪು.

ಮಾಡುವ ವಿಧಾನ

ಬಾಳೆಕಾಯಿಯನ್ನು ಬೆಂಕಿಯ ಉರಿಯಲ್ಲಿ ಬೇಯಿಸಿ ನಂತರ ಸಿಪ್ಪೆಯನ್ನು ತೆಗೆದು ಹಸಿ



ಮೆಣಸು, ಈರುಳ್ಳಿ, ಕೊತ್ತಂಬರಿ ಸೊಪ್ಪು, ಕರಿಬೇವಿನ ಸೊಪ್ಪು, ಹಾಕಿ ರುಬ್ಬಬೇಕು. ನಂತರ ಮೊಸರನ್ನು ಹಾಕಿ ಕಲಸಬೇಕು. ಈರುಳ್ಳಿಯನ್ನು ಸಣ್ಣಗೆ ಹೆಚ್ಚಿ ಹಾಕಿ, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಕಲಿಸಿ.

- ಕವಿತಾ ಪಿ.ಡಿ.,
ಗೊರಕೋಡು

ಸಬ್ಬಕ್ಕಿ ವಡೆ

ಬೇಕಾಗುವ ಸಾಮಗ್ರಿಗಳು

ಅರ್ಧ ಚಟಾಕು ಸಬ್ಬಕ್ಕಿ, ಅರ್ಧ ಚಟಾಕು ಅಕ್ಕಿ



ಹಿಟ್ಟು, ೨ಚಮಚ ತುರಿದ ತೆಂಗಿನಕಾಯಿ, ಎರಡು ಹಸಿಮೆಣಸಿನ ಚೂರುಗಳು, ಅರ್ಧ ಚಮಚ ಉಪ್ಪು, ಹುಳಿ ಮೊಸರು ಎರಡು ಸೌಟು.

ಮಾಡುವ ವಿಧಾನ

ಮೇಲೆ ಕಾಣಿಸಿದ ಪದಾರ್ಥಗಳನ್ನು ಹುಳಿ ಮೊಸರಿನಲ್ಲಿ ಹಾಕಿ ಚೆನ್ನಾಗಿ ಕಿವುಚಿ ಒಂದು ತಾಸು ಹದವಾಗಲು ಬಿಡಿ. ಬಳಿಕ ಬಹಳ ಮಂದವಾಗಿ

ಗೋಧಿ ಲಾಡು

ಬೇಕಾಗುವ ಸಾಮಗ್ರಿಗಳು



೨೦೦ ಗ್ರಾಂ ಗೋಧಿ ಹಿಟ್ಟು, ೨ ಬಾಳೆಹಣ್ಣು, ೫೦ ಗ್ರಾಂ ಹುರಿದು ಪುಡಿ ಮಾಡಿದ ಕಡಲೇ ಬೀಜ, ೩೦೦ ಗ್ರಾಂ ಸಕ್ಕರೆ ಪುಡಿ, ೫ ಎಮ್.ಎಲ್. ಹಾಲು, ಏಲಕ್ಕಿ ಪುಡಿ ಮತ್ತು ಕೊಬ್ಬರಿ ತುರಿ ಹಾಗೂ ಕಡಲೆಕಾಯಿ ಎಣ್ಣೆ ಸ್ವಲ್ಪ.

ಮಾಡುವ ವಿಧಾನ

ಗೋಧಿ ಹಿಟ್ಟನ್ನು ಚೆನ್ನಾಗಿ ಸುವಾಸನೆ ಬರುವ ವರೆಗೆ ಹುರಿದುಕೊಂಡು ಇದಕ್ಕೆ ಸಣ್ಣದಾಗಿ ಕತ್ತರಿಸಿದ ಬಾಳೆಹಣ್ಣನ್ನು ಬೆರೆಸಿಕೊಳ್ಳಿ. ನಂತರ ದಪ್ಪ ತಳವಿರುವ ಮತ್ತೊಂದು ಪಾತ್ರೆಗೆ ಸ್ವಲ್ಪ ಎಣ್ಣೆ ಹಾಕಿ. ಎಣ್ಣೆ ಕಾದ ನಂತರ ಬಾಳೆಹಣ್ಣು ಮಿಶ್ರಿತ ಗೋಧಿ ಹಿಟ್ಟು, ಸಕ್ಕರೆ ಪುಡಿ, ಹಾಲು, ಕಡಲೇಬೀಜ ಮತ್ತು ಏಲಕ್ಕಿ ಪುಡಿ ಹಾಕಿ ಸಣ್ಣ ಉರಿಯಲ್ಲಿ ಮಿಶ್ರಣವನ್ನು ಕೈಬಿಡದೇ ಕೆದಕುತ್ತಾ ಇರಿ. ನಂತರ ಮಿಶ್ರಣ ಮುದ್ದೆ ತರಹ ಬಂದಾಗ ಕೆಳಗಿಳಿಸಿ ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ಕೊಬ್ಬರಿ ತುರಿಯಲ್ಲಿ ಉರುಳಿಸಿ ತೆಗೆಯಿರಿ.

- ಶಕುಂತಳ ಹೆಚ್.ಎಸ್., ಹಾಸನ

ಬೇಡಿಕೆಯಲ್ಲಿರುವ ನಿರುದ್ಯೋಗಿ ಬುರುಡೆಗಳು !

ಅಂದು ಬಸ್‌ಸ್ಟಾಪಿನಲ್ಲಿ ನಿಂತಿದ್ದೆ. ಒಂದೈದು ಜನ ಹ್ಯಾಟುಧಾರಿಗಳು. ಅದು ನನ್ನ ಗಮನಕ್ಕೆ ಬರಲಿಲ್ಲ. ಬಸ್ಸು ಬಂದ ನಂತರ ಎಲ್ಲರೂ ಹತ್ತಿದೆವು. ಅಂತಹ ಜನವೇನೂ ಇರಲಿಲ್ಲ. ಸರಿ, ಹ್ಯಾಟುಧಾರಿಗಳೆಲ್ಲಾ ನಿಧಾನವಾಗಿ ಹ್ಯಾಟು ತೆಗೆದರು. ಒಂದೂ ಮಾತು ಆಡಲಿಲ್ಲ. ಇಡೀ ಬಸ್ಸಿನ ಜನರೆಲ್ಲಾ ಒಂಟಿ ಕತ್ತು ಮಾಡಿ ನೋಡುತ್ತಿದ್ದರು.

ಮೊದಲು ನನಗೂ ಏನೆಂದು ಹೊಳೆಯಲಿಲ್ಲ. ಆಶ್ಚರ್ಯದಿಂದ ನಿಧಾನವಾಗಿ ನೋಡಿದೆ. ಹ್ಯಾಟು ತೆಗೆದ ಎಲ್ಲರೂ ಬುರುಡೆಯನ್ನು ನುಣ್ಣಗೆ ಬೋಳಿಸಿ ಹಾಲಿನಂತ ಬಿಳೀ ಬಣ್ಣ ಹೊಡೆದಿದ್ದಾರೆ. ಅದರ ಮೇಲೆ ಅಕ್ಷರಗಳು, ಅಲ್ಲಾ ಸ್ವಾಮಿ, ಜಾಹೀರಾತುಗಳು. ಒಂದೆರಡು ಸ್ಯಾಂಪಲ್ ಓದಿ.

''ನಿಮ್ಮ ಎಲ್ಲಾ ವಸ್ತುಗಳ ಜಾಹೀರಾತಿಗೆ ಸಂಪರ್ಕಿಸಿ''

''ಯಾವುದೇ ವಿಧವಾದ ಜಾಹೀರಾತಿಗೆ ಸಂಪರ್ಕಿಸಿ''

''ಅತೀ ಅಲ್ಪ ದರದಲ್ಲಿ ನಿಮ್ಮ ವಸ್ತುಗಳ ಜಾಹೀರಾತಿಗೆ ಸಂಪರ್ಕಿಸಿ''

''ನಿರುದ್ಯೋಗಿ ಯುವಕರೆ? ಕೆಲಸಕ್ಕೆ ವಿದ್ಯಾರ್ಹತೆಯಿಲ್ಲದಿದ್ದರೂ ಸಂಪರ್ಕಿಸಿ''. ಎಲ್ಲಾ ಕಡೆ ಫೋನ್ ನಂಬರ್ ಬರೆದಿತ್ತು.

ಬೋಡು ಬುರುಡೆ ಜಾಹೀರಾತುದಾರರು, ನಿಧಾನವಾಗಿ ತಲೆಯನ್ನು ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ತಿರುಗಿ ಓದುಗರಿಗೆ ಅನುಕೂಲ ಮಾಡಿಕೊಟ್ಟರು.

ಮುಂದಿನ ಸ್ಟಾಪು ಬಂದ ತಕ್ಷಣ, ಹ್ಯಾಟು ಧರಿಸಿ ಎಲ್ಲರೂ ಇಳಿದು ಹೋದರು. ಒಂದು ಮಾತಿಲ್ಲ, ಕತೆಯಿಲ್ಲ. ಅಷ್ಟರಲ್ಲಿ ಫೋನ್ ನಂಬರ್ ಬಾಯಿಪಾಠವಾಗಿತ್ತು.

ಮನೆಗೆ ಬರುವ ವೇಳೆಗೆ ''ಮಯ'' ವಕ್ರಿಸಿದ್ದ. ಇವನೇನು ಧರ್ಮರಾಯನಿಗೆ ಮಾಯಾಗೃಹ ಕೊಟ್ಟ ರಾಕ್ಷಸ ಶಿಲ್ಪಿಯಲ್ಲ. ನಮ್ಮಂತಹ ಬಾಡಿಗೆದಾರನಿಗೆ ಕತ್ತು ಹಿಚುಕುವ ರಾಕ್ಷಸ.

''ನೋಡ್ರೀ, ಇನ್ನೊಂದೇ ತಿಂಗ್ಳು. ಮನೆ ಖಾಲಿ ಮಾಡಿ, ಇಲ್ದಿದ್ರೆ ನೂರು ರೂಪ್ಯಾ ಜಾಸ್ತಿ ಮಾಡ್ತೀನಿ''

ನರಕಾಸುರ. ಪ್ರತಿ ವರ್ಷ ಇವನ ಅವತಾರ ದೀಪಾವಳಿಗೇ ಆಗುತ್ತದೆ ಪೀಡೆ. ತಕ್ಷಣ ಮಾತಾಡಲಿಲ್ಲ.

ನಿಧಾನವಾಗಿ ಯೋಚಿಸುತ್ತಾ ಕೂತೆ. ಮತ್ತೆ ಮನೆ ಹುಡುಕೋದು ಹ್ಯಾಗೆ? ದಲ್ಲಾಲಿಗಳ ದುರಾಸೆ, ಮನೆ ಯಜಮಾನರ ಜಂಭ, ದೇವರೇ ದಿಕ್ಕು. ತಕ್ಷಣ ನೆನಪಿಗೆ ಬಂತು. ಬುರುಡೇ ಜಾಹೀರಾತು. ಸರಿ ಫೋನನ್ನು ತಿರುಗಿಸಿದೆ.

''ಹಲೋ... ಪರಮ ಅಡ್ವರ್ಟೈಸಿಂಗ್ ಕಂಪೆನಿ''

ಅತ್ತ ಕಡೆಯ ಕೋಗಿಲೆಯ ಧ್ವನಿ. ನನ್ನ ವಿಚಾರ ತಿಳಿಸಿ, ಮನೆಗೆ ಜಾಹೀರಾತು ಕೊಡಬೇಕೆಂದೆ.

''ತಾವು ದಯವಿಟ್ಟು ಹತ್ತು ಗಂಟೆಗೆ ನಮ್ಮ ಎಂ. ಡಿ. ಪರಮೇಶ್‌ರನ್ನು ಭೇಟಿ ಮಾಡಿ. ಅಪಾಯಿಂಟ್‌ಮೆಂಟನ್ನು ಕೊಟ್ಟಿದ್ದೇನೆ'' ಶುಕಭಾಷಿಣಿ ಉಲಿದಳು.


ನನಗೋ ಒಂದೇ ಸಂಶಯ, ಈ ಪರಮೇಶ ನನ್ನ ಚಾಂಡಾಲ ಸ್ನೇಹಿತ ಪರಮನೆ? ಅಥವಾ ಬೇರೆ ಯಾರಾದ್ರೂ? ಇಂತಾ ಮನೆ ಹಾಳು ಕೆಲ್ಸಕ್ಕೆಲ್ಲಾ ಪರಮನೇ ಎತ್ತಿದ ಕೈ. ಅವನು ಇಷ್ಟೊಂದು ದೊಡ್ಡ ಕಂಪನಿ ಹ್ಯಾಗೆ ಕಟ್ದ? ಬಗೆಹರಿಯಲಿಲ್ಲ. ಹೇಗಿದ್ರೂ ನಾಳೆ ನೋಡುವೆನೆಲ್ಲಾ ಎಂದು ಸುಮ್ಮನಾದೆ.

''ದಯವಿಟ್ಟು ಕೂತ್ಕೊಳ್ಳಿ, ಎಂ. ಡಿ. ಇನ್ನೇನು ಬರ್‍ತಾರೆ'' ಶುಕಭಾಷಿಣಿ ಹೇಳಿದಳು. ಸುಮ್ಮನೆ ಕುಳಿತಿರಲು ಬೇಜಾರು. ಹಾಗೇ ಒಳಗೆಲ್ಲಾ ಸುತ್ತಾಡಿ ಬಂದೆ.

ಒಂದು ಕಡೆ ನೀಟಾಗಿ ಡ್ರೆಸ್ ಮಾಡಿಕೊಂಡಿದ್ದ ಇಪ್ಪತ್ತರಿಂದ ಐವತ್ತರವರೆಗಿನ ಬುರುಡೆಗಳು, ಇಂಟರ್‌ವ್ಯೂಗೆ, ಮತ್ತೊಂದು ಕಡೆ ಬಣ್ಣ ಬ್ರಷ್‌ಗಳೊಂದಿಗೆ ಕಲಾವಿದರು, ಬುರುಡೆಗಳ ಮೇಲೆ ಹಳೇ ಜಾಹೀರಾತು ತೆಗೆದು ಹೊಸದನ್ನು ಬರೆಯುತ್ತಿದ್ದರು. ಹುಚ್ಚರ ಸಂತೆಯಲ್ಲಿ ನಿಂತಂತಿದ್ದೆ.

''ಸಾರ್, ನಿಮ್ಮನ್ನ ಎಂ. ಡಿ. ಕರೀತಿದ್ದಾರೆ'' ಲಲನೆ ಕರೆದಳು. ''ಇವತ್ತು ಅರ್ಜೆಂಟ್ ಮೀಟಿಂಗಿದೆ, ನಿಮ್ಮ ಫೋಟೊ ಕೊಟ್ಟು ಹೋಗಿ.

ಪರಮನ ಮುಂದೆ ನನ್ನಂತಹ ಹೇಡಿಗಳಿಗೆ ಧಿಕ್ಕಾರ. ಬರೀ ಬುರುಡೆಯ ಮೇಲ್ಭಾಗದಲ್ಲೇ ಇವನು ಇಷ್ಟೊಂದು ಮಾಡಿದ್ದಾನೆ! ಇನ್ನು ಒಳಗಡೆ ಇರುವುದೇ ಇವನ ಹಿಡಿತಕ್ಕೆ ಸಿಕ್ರೆ? ದೇವರೇ ಗತಿ!



ನಾಳೆ ಬಂದು ಕೆಲ್ಸಕ್ಕೆ ಸೇರಿ'' ಅವಳು ಉಳಿದವರಿಗೆ ಹೇಳಿದಾಗ ಅರ್ಥವಾಗಲಿಲ್ಲ. ಕೆಲಸಕ್ಕೆ ಅರ್ಜಿ ಮುಖ್ಯವಲ್ಲವೆ? ಫೋಟೋ ಮಾತ್ರಾ ಸಾಕೆ? ಕಂಪನಿ ಯಜಮಾನ ಆಯ್ಕೆ ಮಾಡುವುದಿಲ್ಲವೆ? ಬಂದವರಿಗೆಲ್ಲಾ ಕೆಲಸವೆ? ಶ್ರೀಕೃಷ್ಣ, ನೀನೂ ಇಂತಾ ಪವಾಡ ಮಾಡಲಿಲ್ಲವಲ್ಲಯ್ಯಾ? ಎಂದು ಚಿಂತಿಸಿದೆ.

''ಬಾ ಗುರೂ, ಯಾಕೆ ದಂಗಾಗಿ ನಿಂತಿದ್ದಿ?''

ಹೌದು, ನನ್ನ ಪರಮನ ಧ್ವನಿ. ಬೆಚ್ಚಿದೆ, ಬೆವರಿದೆ. ಇವನಿಗೇ ಕೆಲ್ಸವಿರಲಿಲ್ಲ. ಈಗ? ಕಾಫಿ ತರಿಸಿದೆ.

''ಗಾಬರಿಯಾಗ್ಬೇಡ ಗುರೂ, ನಡೀ ಮನೀಗೊಗೋವ'' ಎಳೆದುಕೊಂಡೇ ಹೊರಟ. ಲಲನೆಗೆ ಅಂದಿನ ಕೆಲಸ ಒಪ್ಪಿಸಿ.

ಸುಂದರ ಮನೆ. ಪಾರೂ ನಗುತ್ತಾ, ''ಬನ್ನಿ ಅಣ್ಣಾ... ಅಪರೂಪ ಆಗ್ಬಿಟ್ರಿ'' ಎನ್ನಬೇಕೆ?

''ಪರಮ, ನಿಜ ಹೇಳು. ನೀನೇ ಕೆಲ್ಸ ಇಲ್ದೆ ಅಲೀತಿದ್ದೋನು... ಇಷ್ಟೆಲ್ಲಾ ಹ್ಯಾಗೆ?''

''ಅದೆಲ್ಲಾ ದೊಡ್ಡ ಕತೆ ಗುರೂ'' ಹೇಳತೊಡಗಿದ.

ಒಮ್ಮೆ ಪರಮ ಹೆಂಡತಿ ಮಕ್ಕಳ ಜೊತೆ ತಿರುಪತಿ ಯಾತ್ರೆ ಹೊರಟ. ಅಂದು ಗಲಾಟೆ ಜಾಸ್ತಿ. ಇವರು ತಮಿಳುನಾಡಿನಿಂದ ಬಂದ ಒಂದು ಗ್ಯಾಂಗಿನ ಜೊತೆ ಪರಿಚಯ ಬೆಳೆಸಿ, ದೇವರ ದರ್ಶನಕ್ಕೆ ಹೊರಟರು.

ಮೊದಲು ಹರಕೆ ತೀರಬೇಕಲ್ಲ. ಇವನ ಮಕ್ಕಳು, ಆ ಗ್ಯಾಂಗಿನವರು ಎಲ್ಲರ ಬುರುಡೆಗಳು ಸಾಮೂಹಿಕವಾಗಿ ಗುಂಡಾದವು. ಪರಮನಿಗೆ ತನ್ನ ಮಕ್ಕಳು ತಪ್ಪಿ ಹೋದಂತಾಯ್ತು. ಎಲ್ಲಾ ತಲೆಗಳೂ ಒಂದೇ ಸೈಜು, ಆಕಾರ, ಹೊಳಪು, ಒಂದೇ ವಿಧವಾದ ನಾಮಲಾಂಛನ. ಪರಮ ದಂಪತಿಗಳಿಗೆ ದಿಕ್ಕು ತೋರದೆ ಅಳುತ್ತಾ ನಿಂತರು.

''ಅಪ್ಪಾ, ಆ ಬೊಂಬೆ ಕೊಡ್ಸು'' ಮಕ್ಕಳು ಎದುರು ಬಂದಾಗ ಪರಮನ ಪ್ರಾಣವುಳಿದಿತ್ತು, ಅಲ್ಲೇ ಇದ್ದರೂ ಗುರುತು ಹಿಡಿಯಲಾಗಲಿಲ್ಲ. ತಿರುಪತಿಯಲ್ಲಿ ಬೋಡು ತಾತನನ್ನು ಹುಡುಕಿದ ಹಾಗೆ. ಇಷ್ಟಾದರೂ ಆ ತಮಿಳು ಗ್ಯಾಂಗಿನಲ್ಲಿ ಒಬ್ಬರೂ ತಪ್ಪಿಸಿಕೊಳ್ಳಲಿಲ್ಲ. ಪರಮನಿಗೆ ಅಚ್ಚರಿ. ಕೇಳಿಯೇ ಬಿಟ್ಟ.

''ಅದಾ ಸಾರ್... ರೊಂಬೋ ಈಜಿ'' ಮುಖಂಡ ತಮಿಳ್ಗನ್ನಡದಲ್ಲಿ ತನ್ನ ಗುಟ್ಟನ್ನು ಒಡೆದ.

''ಇಲ್ಲಿ ಪಾರು ಸಾರ್... ಕೊಳಂದೈ, ಕುಂಜಿ ಮಂಡೇ ಪಿನ್ನಾಗತ್ತಿಲೇ ಎನ್ನಾ'' ಅರೆರೆ! ಗುಂಡಾದ, ಹಳ್ಳಿ ಮುತ್ತೈದೆ ಹಣೆಯಲ್ಲಿರುವಷ್ಟು ಕುಂಕುಮ ಅಗಲದ ಎರೆಡೆರೆಡು ಬಣ್ಣದ ಬೊಟ್ಟುಗಳು.

''ಇಂದ ಗುರುತು ಎಷ್ಟು ದೂರತ್ತಿಕ್ಕೂ ತೆರಿಯುಮೇ'' ಎಲಾ ಇವನ! ಇವನ ಬುದ್ಧಿಯೆ? ಒಮ್ಮೆ ಪರಮನಿಗೆ ಆಶ್ಚರ್ಯವುಂಟು ಮಾಡಿದ ಅಂಶ. ಅದೇ ಅಗಸರವನು ಎಲ್ಲರ ಮನೆ ಬಟ್ಟೆಯನ್ನೂ ಒಂದೇ ಸತಿ ತೆಗೆದುಕೊಂಡು ಹೋಗಿ ಹೇಗೆ ಕರೆಕ್ಟಾಗಿ ತಂದುಕೊಡುತ್ತಾನೆ? ಎಂದು.

ಆದೇನ್ ಸಾರ್ ದೊಡ್ಡ ಇಷ್ಯ. ಒಂದೊಂದು ಮನೇವರ್ಗೆ ಒಂದೊಂದು ಗುರ್ತು ಹಾಕ್ತೀವಿ. ಹೀಗೆ ಬಟ್ಟೆ ಮೇಲೆ'' ತೋರ್ಸಿದ. ಒಂದು ಚುಕ್ಕೆ, ಎರಡು ಚುಕ್ಕೆ, ಅಡ್ಡ, ಉದ್ದ, ಗೆರೆ ಹೀಗೆ. ಈ ತಮಿಳನೂ ಹಾಗೇ ಮಾಡಿದ್ದ. ಇಲ್ಲದಿದ್ದರೆ ಆ ಬುರುಡೇ ಸಾಗರದಲ್ಲಿ ತಮ್ಮವರನ್ನು ಗುರುತು ಹಿಡಿಯುವುದು ಹೇಗೆ? ಎಂತಹಾ ಪ್ಲಾನು? ಸರಿ, ಪರಮನೂ ತನ್ನ ಮಕ್ಕಳಿಗೆ ಬುರುಡೇ ಹಿಂದೆ ಮುದ್ರೆ ಒತ್ತಿದ.

ವಾಪಸ್ಸು ಬರುವಾಗ ಮತ್ತೊಂದು ಪ್ರಸಂಗ ಪರಮನ ಜೀವನದ ದಿಕ್ಕನ್ನೇ ಬದಲಾಯಿಸಿತು. ಪರಮನ ದೊಡ್ಡ ಮಗ ಯಾವುದೋ ಚಾಕಲೇಟ್ ತಿಂದು, ಅದರ ಜೊತೆ ಬಂದ ಸ್ಟಿಕ್ಕರನ್ನು ತಮ್ಮನ ಬುರುಡೆಗೇ ಅಂಟಿಸಿದ್ದ. ಸರಿ. ಬಸ್ಸಿನಲ್ಲಿ ಅದು ಕಂಪನಿಯ ಜಾಹೀರಾತಿನಂತೆ ಕೆಲಸ ಮಾಡಿತ್ತು. ಎಲ್ಲಾ ಮಕ್ಕಳೂ ಅದೇ ಬ್ರಾಂಡಿನ ಚಾಕೋಲೇಟಿಗೆ ತಗಾದೆ ಮಾಡಿದವು.

''ಈ ದರಿದ್ರ ಕಂಪನಿಯವರು ಬೋರ್ಡು, ಟೀವೀ ಎಲ್ಲಾದ್ರಲ್ಲೂ ತೋರ್ಸೋದು ಬಿಟ್ಟು ಬುರುಡೆ ಮೇಲೇ ಜಾಹೀರಾತು ಹಾಕಿದ್ದಾರೆ. ಒಳ್ಳೇ ಅಡ್ವರ್ಟೈಸ್'' ಯಾರೋ ಗೊಣಗಿದ್ದರು.

ಪರಮ ದಿಗ್ಗನೆದ್ದು ಕೂತ. ಅವನ ಬುದ್ಧಿ ಬದುಕುವ ದಾರಿ ಹುಡುಕಿತ್ತು. ಊರಿಗೆ ಬಂದವನೇ ಪ್ರಾಯೋಗಿಕವಾಗಿ ಒಂದಿಬ್ಬರು ಹುಡುಗರಿಗೆ ಆಸೆ ತೋರಿಸಿ, ತಲೆಯನ್ನು ಗುಂಡಾಯಿಸಿದ. ತನ್ನ ವಿಳಾಸವನ್ನು ಬರೆದು ಸಂಪರ್ಕಿಸಲು ಬರೆದು ರಸ್ತೆ ಮೇಲೆ ದಬ್ಬಿದ್ದ. ಸಾಯಂಕಾಲದ ಹೊತ್ತಿಗೆ ಹತ್ತಾರು ಜನ ಅವನನ್ನು ಹುಡುಕಿ ಬಂದಿದ್ದರು.

''ನೋಡು ಗುರು, ಗೃಹ ಕೈಗಾರಿಕೆಯಂತೆ ಮಾಡಿದ್ದು, ಈಗ ದೊಡ್ಡ ಕಂಪನಿಯಾಗಿದೆ''

ಪರಮನ ಮುಂದೆ ನನ್ನಂತಹ ಹೇಡಿಗಳಿಗೆ ಧಿಕ್ಕಾರ. ಬರೀ ಬುರುಡೆಯ ಮೇಲ್ಭಾಗದಲ್ಲೇ ಇವನು ಇಷ್ಟೊಂದು ಮಾಡಿದ್ದಾನೆ! ಇನ್ನು ಒಳಗಡೆ ಇರುವುದೇ ಇವನ ಹಿಡಿತಕ್ಕೆ ಸಿಕ್ರೆ? ದೇವರೇ ಗತಿ!

''ಗುರುವೇ ಎಲ್ಲಿದ್ದೀ?'' ಎಚ್ಚರಿಸಿದ.

ಜಾಹೀರಾತು ಹಣದಲ್ಲಿ ಶೇಕಡಾ ಇಪ್ಪತ್ತು ಭಾಗ ಇವನಿಗೆ. ಇಪ್ಪತ್ತು ಭಾಗ ಜಾಹೀರಾತುಗಳು ನಗರ ಸುತ್ತಲು. ಉಳಿದವು ಜಾಹೀರಾತು ಹೊತ್ತ ತಲೆಗಳಿಗೆ ಭಾಗ.

''ನಿನ್ಗೆ ಯಾವ್ದಾದ್ರೂ ಗುಂಡು ಬುರುಡೆ ಗೊತ್ತಿದ್ರೆ ಹೇಳು ಗುರೂ. ಗಡಿಗೆ ತಲೆಗೆ, ಬಿಂದಿಗೆ ತಲೆಗೆ, ಚೊಂಬು ತಲೆಗೆ ಇಷ್ಟಿಷ್ಟೂಂತ ಕಮಿಷನ್ ಕೊಡ್ತೀನಿ'' ವಿದ್ಯೆ ಇಲ್ದಿದ್ರೂ ಪರ್ವಾಗಿಲ್ಲ, ಬುರುಡೆ ಇರ್ಬೇಕು'' ಪರಮ ಹೇಳಿದ.

''ಪರಮ, ನಿನ್ನ ಧೈರ್ಯ ನಂಗಿಲ್ಲ. ಸಧ್ಯಕ್ಕೆ ಒಂದು ಬಾಡಿಗೆ ಮನೆ ಬೇಕು'' ಕೈಮುಗಿದೆ.

ಪರಮ ಗಹಗಹಿಸಿ ನಕ್ಕ.


''ಶಶಿ, ಅಲ್ಲಿ ಇರೋ ಹಂಡೆ ತಲೆ ಮೇಲೆ ಮನೆ ಬಾಡಿಗೆಗೆ ಬೇಕೆನ್ನುವುದನ್ನು ಬರ್ಸು. ಒಂದ್ಯೆದು ತಲೆಗಾದ್ರೆ ಸಾಕು'' ಕಂಪನಿಗೆ ಫೋನ್ ಮಾಡಿದ ಪರಮ.

''ನನ್ನ ದೋಸ್ತಿ, ನೀನೇನೂ ಕಾಸು ಕೊಡಬ್ಯಾಡಾ. ಮನೆ ಸಿಕ್ರೆ, ಅತ್ತಿಗೆಗೆ ಹೇಳಿ ಪಾರ್ಟಿ ಮಾಡ್ಸು. ತುಂಬಾ ದಿನವಾಯ್ತು.''

ಹಂಡೆ ಬುರುಡೆಯ ಮೇಲೆ ''ಮನೆ ಬಾಡಿಗೆಗೆ ಬೇಕೆಂದು'' ಜಾಹೀರಾತು ನಿಮಗೆ ಕಂಡರೆ, ನಿಮ್ಮಲ್ಲಿ ಮನೆ ಇದ್ದರೆ, ದಯವಿಟ್ಟು ನನಗೇ ಕೊಡಿ ಸ್ವಾಮಿ. ನಾನು ಪಗಮನಷ್ಟು ಚಾಂಡಾಲನಲ್ಲ.

ಪರಮನಂತೂ ಬದುಕಿದ್ದಾನೆ, ಅಮೋಘವಾಗಿ, ನಾನೂ ಬದುಕುತ್ತೇನೆ, ಹ್ಯಾಗೆ ಇರಬಹುದೋ ಹಾಗೆ.

○ ಡಾ. ಎಚ್. ಎಸ್. ವೆಂಕಟೇಶ್



ಸ್ಫೂರ್ತಿ

ತನ್ನ
ಮೈಮೇಲಿನ
ಒದ್ದೆಬಟ್ಟೆ
ಕುಮಾರವ್ಯಾಸನ
ಕಾವ್ಯಕ್ಕೆ ಸ್ಫೂರ್ತಿ,
ನನ್ನವಳ
ಮೈಮೇಲಿನ
ಒದ್ದೆಬಟ್ಟೆ
ನನ್ನ ಕಾವ್ಯಕ್ಕೆ ಸ್ಫೂರ್ತಿ!

– ಪರಮೇಶ್ವರ ಎಸ್. ಕುದರಿ

ತಂಗುದಾಣವಿಲ್ಲ

ಬೆಳಗಾವಿ ಜಿಲ್ಲೆಗೆ ಸೇರಿದ ಸವದತ್ತಿ ತಾಲೂಕಿನ ಯಡ್ರಾಂವಿ ಎಂಬ ಹಳ್ಳಿ ನನ್ನೂರು. ಇದು ಸವದತ್ತಿಯಿಂದ ೩ ಕಿ.ಮೀ. ದೂರವಿದೆ. ಇಲ್ಲಿ ತಂಗುದಾಣವಿಲ್ಲದ ಕಾರಣ ಬಸ್ಸಿಗಾಗಿ ಕಾಯುವವರು ರಸ್ತೆಯ ಮಗ್ಗುಲಲ್ಲಿ ನಿಂತು ಪ್ರಯಾಸಪಡುತ್ತಾರೆ. ಸವದತ್ತಿ ಯಲ್ಲಮ್ಮನ ಜಾತ್ರೆ ಸಮಯದಲ್ಲಿ ಯಡ್ರಾಂವಿಯ ಪರಶುರಾಮನ ತೀರ್ಥಕ್ಕೆ ಬರುವವರ ಸಂಖ್ಯೆ ದೊಡ್ಡದು. ಅಪಘಾತಗಳೂ ಹೆಚ್ಚಾಗುತ್ತವೆ. ಆದ್ದರಿಂದ ಇಲ್ಲಿ ತಂಗುದಾಣ ನಿರ್ಮಿಸುವುದು ಅಗತ್ಯವಿದೆ.

- ರಿಯಾಜ್ ಅಹ್ಮದ್ ನಿಪ್ಪಾಣಿ, ಯಂಡ್ರಾವಿ

ರೊಟ್ಟಿ ಬಸಪ್ಪ

ರೊಟ್ಟಿ ಬಸಪ್ಪ ಎಂದು ಖ್ಯಾತಿ ಪಡೆದ ನಮ್ಮೂರಿನ ಈ ಹಬ್ಬದ ಬಗ್ಗೆ ಒಂದೆರಡು ವಿಷಯ ತಿಳಿಯಪಡಿಸುತ್ತೇನೆ. ಈ ಹಬ್ಬವನ್ನು ನಮ್ಮ ಊರಿನ ಅಕ್ಕಪಕ್ಕ ಹಲವಾರು ಕಡೆಗೆ ಮಾಡುವ ಪದ್ಧತಿಯುಂಟು.

ಈ ಹಬ್ಬವನ್ನು ಗೌರಿ ಹಬ್ಬವಾದ ಐದು ಅಥವಾ ಒಂಬತ್ತನೇ ದಿನದಂದು ಮಾಡುತ್ತಾರೆ. ಅಂದು ಒಂದು ಓಣಿಯ ಹೆಣ್ಣು ಮಕ್ಕಳೆಲ್ಲಾ ಮೊದಲೇ ಚರ್ಚಿಸಿ ಜೇಡಿ ಮಣ್ಣನ್ನು ತರಿಸಿ ಬಸವನ ಮೂರ್ತಿಯನ್ನು ತಯಾರಿಸುತ್ತಾರೆ.

ಹೊಲದಲ್ಲಿ ದುಡಿಯಲು ಹೋದ ಹೆಣ್ಣು ಮಕ್ಕಳೆಲ್ಲಾ ಅಂದು ಮನೆಗೆ ಬೇಗನೇ ಬಂದು ನಿಗದಿ ಪಡಿಸಿದ ಸ್ಥಳದಲ್ಲಿ ಅಂದರೆ, ವಿಶೇಷವಾಗಿ ಮಾಳಿಗೆಯ ಮೇಲೆ ನೆಲವನ್ನು ಸಾರಿಸಿ ರಂಗವಲ್ಲಿ ಹಾಕಿ ಸೂರ್ಯ, ಚಂದ್ರ, ಏಣಿ, ಮುಳಗಾಯಿ, ಮೆಣಸಿನಕಾಯಿ ಮುಂತಾದ ಆಕೃತಿಗಳನ್ನು ಸುಣ್ಣ-ಬಣ್ಣಗಳಿಂದ ಬಳಿಯುತ್ತಾರೆ. ಆಮೇಲೆ ಬಸವಣ್ಣನನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ಅನಂತರ ಕಾಯಿ ಹಣ್ಣು ನೈವೇದ್ಯವಾಗುತ್ತದೆ. ಇಷ್ಟೆಲ್ಲಾ ನಡೆಯುವ ಹೊತ್ತಿಗೆ ನಡುರಾತ್ರಿ ಆಗುತ್ತದೆ.

ಚಿಕ್ಕ ಊರಿದ್ದರೆ ಹೆಚ್ಚು ಕಡಿಮೆ ಊರಿನವರೆಲ್ಲಾ ಒಂದು ಕಡೆ ಈ ಹಬ್ಬವನ್ನು ಆಚರಿಸುತ್ತಾರೆ. ಊರು ದೊಡ್ಡದಿದ್ದರೆ ಓಣಿಗೆ ಒಂದರಂತೆ ಆಚರಿಸುವ ಪದ್ಧತಿಯುಂಟು.

ಓಣಿಯ ಎಲ್ಲರೂ ತಾವು ತಯಾರಿಸಿದ ಊಟವನ್ನು ಒಂದೆಡೆ ತರುತ್ತಾರೆ. (ಬಸವನಿಗೆ ಕುಂಬಳಕಾಯಿ-ಬೆಲ್ಲದ ಹಾಲು ವಿಶೇಷ) ಅದನ್ನೆಲ್ಲಾ ಹಂಚಿ ಊಟ ಮಾಡುತ್ತಾರೆ. ಅನಂತರ ಬಸವಣ್ಣನ ಪ್ರತಿಮೆಯನ್ನು ಗಂಗಾ ಮಾತೆಗೆ ಅರ್ಪಿಸುತ್ತಾರೆ. ಒಂದು ಬಾವಿಯ ಹತ್ತಿರ ಹೋಗಿ ಮತ್ತೊಂದು ಬಾರಿ ಪೂಜಿಸಿ ಬಸವಣ್ಣನ ಮೇಲೆ ಕೋಲನ್ನು ಹೊಯ್ಯುತ್ತಾರೆ.

ಇಲ್ಲಿ ಜನಪದ ಸೊಗಡು ಎದ್ದು ಕಾಣುತ್ತದೆ. ಪಟ್ಟಣದಲ್ಲಿ ಈ ರೀತಿಯ ಸಂತೋಷ ಸಡಗರ ಸಿಗಲಿಕ್ಕಿಲ್ಲ. ಯಾಂತ್ರಿಕ ಜೀವನದಿಂದ ಹೊರಬರಬೇಕೆಂದರೆ ಹಳ್ಳಿಯ ಇಂತಹ ಹಲವಾರು ಹಬ್ಬ ಆಚರಣೆಗಳು ನೆರವಿಗೆ ಬಂದಾವು.

- ಕೆ.ಯಂ. ವಿರುಪಾಕ್ಷಯ್ಯ, ಮಂಗನಹಳ್ಳಿ

ಟಿ.ವಿ. ಚಟ

ಇತ್ತೀಚೆಗೆ ಬಹುಪಾಲು ಮನೆಗಳಲ್ಲಿ ೨೪ ಗಂಟೆ ಕಾಲ ಟಿ.ವಿ. ಉರಿಯುತ್ತಿರುತ್ತದೆ. ವಿದ್ಯುತ್ ನಿಂತಾಗಲೇ ಅದಕ್ಕೆ ಬಿಡುವು. ಕುಟುಂಬದ ಎಲ್ಲ ವಯಸ್ಸಿನ ಸದಸ್ಯರು ಇದರೆದುರೇ ಊಟ, ನಿದ್ರೆ, ಮಾತುಕತೆ ಮುಗಿಸುತ್ತಾರೆ. ಈ ಮಧ್ಯೆ ಮಕ್ಕಳ ಓದೂ ಜರುಗುತ್ತದೆ. ಟಿ.ವಿ. ಪರದೆಗೆ ಕಣ್ಣು ಕೀಲಿಸಿ ಊಟದ ತಟ್ಟೆಯನ್ನೂ ನೋಡದೆ ಊಟದ ಶಾಸ್ತ್ರ ಮುಗಿಯುತ್ತದೆ. ಉಂಡದ್ದರ ರುಚಿಯೂ ಗೊತ್ತಾಗುವುದಿಲ್ಲ. ಈ ರೀತಿ ತಿಂದ ಆಹಾರ ದೇಹಕ್ಕೆ ದಕ್ಕುವುದೇ? ಟಿ.ವಿ.ಯಲ್ಲಿ ಮೂಡಿಬರುವ ದ್ವಂದ್ವಾರ್ಥದ ಶಬ್ದಗಳು, ಅಶ್ಲೀಲ ದೃಶ್ಯಗಳು ಮಕ್ಕಳಲ್ಲಿ ಯಾವ ಪರಿಣಾಮ ಬೀರಬಹುದು?

ಮಕ್ಕಳು ಕೆಡಲು ಎಷ್ಟು ಬೇಕೋ ಅಷ್ಟೂ ಅವಕಾಶವನ್ನು ಹಿರಿಯರು ನಿರ್ಮಿಸಿಕೊಡುತ್ತಿರುವುದು ಶೋಚನೀಯ. ಈ ಬಗ್ಗೆ ಮನೆಯ ಹಿರಿಯರು ಯೋಚಿಸಿಯಾರೆಂದು ಆಶಿಸಲೇ?

- ರಾಘವೇಂದ್ರ ಶರ್ಮಾ, ಗುರುಮಠಕಲ್

ಬಂಕಾಪುರ

ಜನರ ಅಭಿಲಾಷೆಗೆ ಬೆಲೆಕೊಟ್ಟ ಸರ್ಕಾರ ಶಿಗ್ಗಾಂವ ತಾಲ್ಲೂಕನ್ನು ಹಾವೇರಿ ಜಿಲ್ಲೆಗೆ ಸೇರಿಸಿದೆ. ಅಲ್ಲದೆ, ಈ ಮೊದಲು ಬಂಕಾಪುರ ನಗರವನ್ನು ಶಹಬಜಾರ ಅಂಕದಖಣ ಕೊಟ್ಟಿಗೇರಿ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಈ ಮೂರು ಬೇರೆ ಬೇರೆ ಹೆಸರುಗಳ ಬದಲಾಗಿ ಬಂಕಾಪುರ ನಗರವೆಂದು ನಮ್ಮ ಸರ್ಕಾರ ಇತ್ತೀಚೆಗೆ ಘೋಷಣೆ ಮಾಡಿದೆ. ಇನ್ನು ನಮ್ಮ ಬಂಕಾಪುರ ನಗರ ಎಲ್ಲಾ ದೃಷ್ಟಿಯಿಂದಲೂ ಅಭಿವೃದ್ಧಿ ಹೊಂದುತ್ತದೆ ಎಂಬ ಭರವಸೆ ನಮಗಿದೆ. ಇದಕ್ಕಾಗಿ ನಮ್ಮ ಈಗಿನ ಸರ್ಕಾರಕ್ಕೆ ಅಭಿವಂದನೆಗಳು.

- ಎಸ್.ವಿ. ಅಂಗಡಿ, ಬಂಕಾಪುರ

ತೆರೆಯದ ಆರೋಗ್ಯ ಕೇಂದ್ರ

ನಮ್ಮೂರು ಸೋಮಸಮುದ್ರ. ಜಿಲ್ಲಾ ಕೇಂದ್ರದಿಂದ ಕೇವಲ ೧೨ ಕಿ.ಮೀ. ದೂರದಲ್ಲಿದ್ದರೂ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ಯಾರೋ, ಪುಣ್ಯಾತ್ಮರ ಶಿಫಾರಸ್ಸಿನಿಂದ ಊರಿನಲ್ಲಿ ಹುಣ್ಣಿಮೆ ಚಂದ್ರನಂತೆ ಆಸ್ಪತ್ರೆ ಕಟ್ಟಡ ನಿರ್ಮಾಣವಾಯಿತು. ಆಸ್ಪತ್ರೆಯಲ್ಲಿ ಮಾತ್ರೆ ತೆಗೆದುಕೊಳ್ಳೋಣ ಎಂದ ಮುದಿಕಿ ಶಾಂತಮ್ಮ ಸತ್ತೇ ಹೋಯಿತು. ಆದರೂ ಆರೋಗ್ಯಕೇಂದ್ರ ಪ್ರಾರಂಭವಾಗಲಿಲ್ಲ. ಇದರ ಉದ್ಘಾಟನೆಗೆ ಶ್ರೀಯುತರಾರಿಗೂ ಪುರುಸೊತ್ತಿಲ್ಲವೋ ಅಥವಾ ಇನ್ನು ಕೆಲವೇ ತಿಂಗಳುಗಳಲ್ಲಿ ಪ್ರಳಯವಾಗುತ್ತದೆ ಇನ್ನೇಕೆ ಇದನ್ನು ತೆರೆಯಬೇಕೆಂದು ಬಿಟ್ಟಿರುವರೋ ತಿಳಿಯುತ್ತಿಲ್ಲ. ಒಂದು ಲಕ್ಷ ರೂಪಾಯಿ ಖರ್ಚಿನಿಂದ ಕಟ್ಟಿಸಿದ ಇಂತಹ ಆರೋಗ್ಯ ಕೇಂದ್ರಗಳನ್ನು ಈ ರೀತಿ ಹಾಳು ಬಿಟ್ಟಿರುವುದು ಯಾವ ಪುರುಷಾರ್ಥಕ್ಕೋ!

-ಎಂ ಜಂಬುನಾಥ, ಸೋಮಸಮುದ್ರ

ಪರಿಹಾರವೇನು?

ಉತ್ತರ ಕನ್ನಡ ಜಿಲ್ಲೆಯ ಹಿಂದುಳಿಯುವಿಕೆಗೆ ಮೂಲ ಕಾರಣವೆಂದರೆ ಮೂಢನಂಬಿಕೆ ಅನಕ್ಷರತೆ, ಯುವಕರು ಜೂಜಾಟದ ಸುಳಿಗೆ ಸಿಲುಕಿದ್ದಾರೆ. ರೈತರು ಪೈರಿನ ಹಣವನ್ನು ಮಟ್ಕಾಕ್ಕೆ ಸುರಿಯುತ್ತಿದ್ದಾರೆ. ಮೀನುಗಾರರು ಕೂಡ ಗಳಿಸಿದ್ದನ್ನು ಉಳಿಸಲಾಗುತ್ತಿಲ್ಲ. ಜಿಲ್ಲೆಯಲ್ಲಿ ನಿರುದ್ಯೋಗ ಬಡತನ ಹೆಚ್ಚುತ್ತಲೇ ಇದೆ. ಮಕ್ಕಳು ಚಾಕೋಲೇಟ್ ತಿನ್ನುವ ಕಾಲ ಹೋಗಿ ಗುಟುಕಾ ಮೆಲ್ಲುವ ಕಾಲ ಬಂದಿದೆ.

ಇಲ್ಲಿನ ಸರ್ಕಾರಿ ಆಸ್ಪತ್ರೆಗಳು ಕೊಳೆತು ನಾರುತ್ತಿವೆ. ಅಧಿಕಾರಿಗಳು ಭಕ್ಷಕರಾಗಿದ್ದಾರೆ. ಕಾನೂನು ಕೈಕಟ್ಟಿ ಕುಳಿತಿದೆ. ಮಟ್ಕಾ ಮೂಲಕ ಜನರನ್ನು ವಂಚಿಸುವ ಖದೀಮರ ಜಾಲವನ್ನು ಪ್ರತಿಭಟಿಸಿ ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದರು. ಪರಿಣಾಮ ಮಾತ್ರ ಶೂನ್ಯ.

ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ರಾಜಕಾರಣಿಗಳನ್ನು ನೆಚ್ಚಿ ಕುಳಿತುಕೊಳ್ಳಬೇಕೇ? ಅಥವಾ ಕರಾವಳಿ-ಮಲೆನಾಡಿನ ಜನ ಜಾಗೃತರಾಗಿ ಪರಿಸ್ಥಿತಿಯನ್ನು ನೆಟ್ಟಗಾಗಿಸಬೇಕೇ?

-ವಸಂತಕುಮಾರ ಹಿಂಡಿಗಿ, ಶಿರಾಲಿ

'ಸೊಳ್ಳೆ'ಪುರ

ನನ್ನೂರು ಕಲ್ಬುರ್ಗಿ ಜಿಲ್ಲೆಯ ''ಶಹಾಪುರ''. ಈ ಶಹಾಪುರ- ''ಸೊಳ್ಳೆಪುರ''ವಾಗಿ ಪರಿವರ್ತಿಸಲ್ಪಟ್ಟಿದೆ. ಒಂದು ದಿನ ತಂಗಿ ನೋಡಿದರೆ ಈ ಅನುಭವ ನಿಮಗೂ ಉಂಟಾಗುವುದು. ಇದರಿಂದಾಗಿ ನಾನಾ ರೋಗಗಳು ಇಲ್ಲಿ ತಾಣ ಮಾಡಿಕೊಂಡಿವೆ. ಕಾಲೇಜಿನ ಪಕ್ಕದಲ್ಲೇ ಹಾದು ಹೋದರೆ, ನಿಮ್ಮನ್ನು ಮುತ್ತಿಕೊಳ್ಳುವ ಮಲ-ಮೂತ್ರದ ಗಬ್ಬು ಸುವಾಸನೆ, ವಾಕರಿಕೆ ತರುತ್ತದೆ. ನಗರದ ಮುಖ್ಯರಸ್ತೆಯಲ್ಲಿ ನಡೆದಾಡಿದರೆ ಬರಿ ಧೂಳು, ದುಮ್ಮು. ''ಪುರಸಭೆಯವರು ಇತ್ತ ಗಮನ ನೀಡಿ ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡಬಹುದೇ?

-ವಿಜಯಕುಮಾರ್, ಸತ್ಯಂಪೇಟೆ

ಹಕ್ಕಿ ಬಗ್ಗೆ ಅಕ್ಕರೆ ರೈತನ ಬಾಯಿಗೆ ಸಕ್ಕರೆ

ಕೃಷಿಯಲ್ಲಿ ತಮ್ಮದೇ ಆದ ಮಹತ್ತರ ಪಾತ್ರವನ್ನು ಹೊಂದಿರುವ ಪಕ್ಷಿಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಇರುವುದರಿಂದ, ಅವುಗಳಿಂದ ನಿರೀಕ್ಷಿತ ಸಹಾಯ ಪಡೆಯಲು ಆಗುತ್ತಿಲ್ಲ.



○ ಪುಷ್ಪಾ ಎಂ.ಕಮ್ಮಾರ
ಸಹಾಯಕ ಕೃಷಿ ಅಧಿಕಾರಿ, ರಾಮನಗರ, ಮಂಡ್ಯ ಜಿಲ್ಲೆ

ಶರವೇಗದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯ ಬೇಡಿಕೆಗೆ ಅನುಗುಣವಾಗಿ, ಆಹಾರ ಉತ್ಪಾದನೆಯನ್ನು ಹೆಚ್ಚಿಸುವ ಆತುರದಲ್ಲಿ ನಾವು ಕಳೆದ ನಾಲ್ಕು ದಶಕಗಳಿಂದ ಬೆಳೆ ತೆಗೆಯುತ್ತಿರುವ ಭೂಮಿಯ ಮೇಲೆ ಅತಿಯಾದ ಒತ್ತಡ ಹೇರುತ್ತಿದ್ದೇವೆ.

ಅಧಿಕ ಇಳುವರಿ ಕೊಡುವ ಸಂಕಿರಣ ತಳಿಯ ಬಿತ್ತನೆ ಬೀಜಗಳು, ಅದಕ್ಕೆ ಅನುಗುಣವಾಗಿ ರಸಾಯನಿಕ ಗೊಬ್ಬರಗಳ ಬಳಕೆ ಮತ್ತು ಬೆಳೆ ಚೆನ್ನಾಗಿ ಬೆಳೆದು ಕೀಟಗಳ ದಾಳಿಗೆ ತುತ್ತಾದಾಗ ಅವುಗಳ ನಿಯಂತ್ರಣಕ್ಕೆ ಯದ್ವಾ ತದ್ವಾ ಕೀಟ ನಾಶಕ ರಸಾಯನಿಕಗಳ ಬಳಕೆ ಇವುಗಳ ಪರಿಣಾಮವಾಗಿ, ತಕ್ಷಣಕ್ಕೆ ಇಳುವರಿ ಹೆಚ್ಚಿತಾದರೂ, ಇದೇ ರೀತಿಯ ಕೃಷಿ ಪದ್ಧತಿಗಳನ್ನು ಮತ್ತೆ ಮತ್ತೇ ಅನುಸರಿಸಿದಾಗ ಕ್ರಮೇಣವಾಗಿ ಇಳುವರಿ ಕಡಿಮೆ ಆಗುತ್ತಾ ಬಂದಿತು ಇದಕ್ಕೇನು ಕಾರಣ?

೧. ಶಿಫಾರಸು ಮಾಡಿದಂತೆ, ಕೊಟ್ಟಿಗೆ ಗೊಬ್ಬರ ಕೊಡದೆ ಕೇವಲ ರಸಾಯನಿಕ ಗೊಬ್ಬರ ಕೊಡುತ್ತಾ ಹೋದಾಗ ಮಣ್ಣಿನ ಭೌತಿಕ ರಚನೆಯಲ್ಲಿ ವ್ಯತ್ಯಾಸವಾಗುತ್ತಾ ಬಂದಿದೆ.

೨. ಸರಿಯಾದ ಸಮಯದಲ್ಲಿ, ಕೀಟಬಾಧೆಗೆ ತಕ್ಕಂತೆ ಸರಿಯಾದ ಪ್ರಮಾಣದಲ್ಲಿ ಕೀಟನಾಶಕ ಸಿಂಪಡಿಸದೆ, ವಿವೇಚನಾ ರಹಿತವಾದ ಕೀಟನಾಶಕ ಬಳಕೆಯಿಂದಾಗಿ ಉಪದ್ರವಿ ಕೀಟಗಳು ನಿರ್ರೋಧಕ ಶಕ್ತಿ ಪಡೆದುದು ಒಂದೆಡೆಯಾದರೆ, ಉಪಕಾರಿ ಕೀಟಗಳ ಮತ್ತು ಪಕ್ಷಿಗಳ ನಾಶ ಇನ್ನೊಂದಡೆ ಆಯಿತು.

೩. ಭೂಮಿಯಿಂದ ಆಹಾರ ಮತ್ತು ಮೇವಿನ ಉತ್ಪಾದನೆಗೆ ಗಮನ ಕೊಟ್ಟವೇ ಹೊರತು, ಬದಲಿಗೆ ಭೂಮಿಗೆ ಏನನ್ನೂ ಕೊಡುತ್ತಿಲ್ಲಾ.

೪. ಮಣ್ಣಿನಲ್ಲಿ ಸಾಕಷ್ಟು ಪೋಷಕಾಂಶಗಳ ಭಂಡಾರವಿದ್ದರೆ ತಾನೇ ಆಹಾರ ಧಾನ್ಯಗಳು ಪೋಷಕಾಂಶಗಳನ್ನು ಪಡೆಯುವುದು? ಇದ್ಯಾವುದನ್ನೂ ಲೆಕ್ಕಿಸದೆ, ಮಣ್ಣಿನಿಂದ ನಾವು ಇಳುವರಿ ಪಡೆಯುತ್ತಲೇ ಹೋದಾಗ, ಅದರ ತಾಳ್ಮೆಯ ಶಕ್ತಿ ಮೀರಿ ಭೂಮಿಯಿಂದ ಬೆಳೆಯ ಇಳುವರಿ ಕಡಿಮೆಯಾಗುತ್ತಾ ಬಂದಿತು.

ಈ ಬಗ್ಗೆ ಬುದ್ಧಿಜೀವಿಗಳು, ಚಿಂತನೆ ಪ್ರಾರಂಭಿಸಿದಾಗ ನಾವು ಇದುವರೆಗೆ ಅನ್ನ ಕೊಡುವ ಮಣ್ಣಿನೊಡನೆ ನಡೆದುಕೊಂಡ ಅನುಚಿತ ರೀತಿಯೇ ಕಾರಣವೆಂದು ತಿಳಿದುಬಂದಿತು.

ಅಲ್ಲಿಂದೀಚೆಗೆ ಎಲ್ಲೆಡೆ ಕೇಳಿ ಬರುತ್ತಿರುವ ವಿಷಯವೆಂದರೆ, ಸಾವಯುವ ಕೃಷಿ. ಇದರಿಂದಲೇ ಕಳೆದುಕೊಂಡ ಮಣ್ಣಿನ ಸಾರವನ್ನು ಪುನಃ ಪಡೆಯಲು ಸಾಧ್ಯವೆಂದು ಮನವರಿಕೆಯಾಯಿತು. ಭೂಮಿಗೆ ಸಾಕಷ್ಟು ಪ್ರಮಾಣದಲ್ಲಿ ಸಾವಯುವ ವಸ್ತುವನ್ನು ಸೇರಿಸಿ, ಅತ್ಯಲ್ಪ ಪ್ರಮಾಣದಲ್ಲಿ ರಸಾಯನಿಕ ಗೊಬ್ಬರ ಕೀಟನಾಶಕ ರಸಾಯನಿಕಗಳನ್ನು ಬಳಸುವದರ ಮೂಲಕ ಸಾವಯುವ ಕೃಷಿಯನ್ನು ರೂಢಿಸಿಕೊಳ್ಳುವುದು ಬಹಳ ಅಗತ್ಯವಾಯಿತು.

ಬೆಳೆಯನ್ನು ಚೆನ್ನಾಗಿ ಬೆಳೆಯುವಂತೆ ಮಾಡುವಷ್ಟೇ ಮುಖ್ಯ, ಅದನ್ನು ಉಪದ್ರವಿ ಕೀಟಗಳಿಂದ ರಕ್ಷಿಸುವುದು ನಿಸರ್ಗದಲ್ಲಿ ಸಾಮಾನ್ಯವಾಗಿ ಎಲ್ಲಾ ಪಕ್ಷಿಗಳೂ ಕೀಟಹಾರಿಗಳಾದ್ದರಿಂದ, ನಮ್ಮ ಬೆಳೆಗಳಿಗೆ ತಗಲುವ ಹಾನಿಕಾರಕ ಕೀಟಗಳನ್ನು ಈ ಪಕ್ಷಿಗಳಿಂದ ನಿಯಂತ್ರಿಸಲು ಸಾಧ್ಯವಿದೆ.

ಮಾಗಿ ಉಳುಮೆಯಿಂದ ಪ್ರಾರಂಭಿಸಿ, ಬೆಳೆ ಕಟಾವಾಗುವವರೆಗೂ ವಿವಿಧ ಹಂತಗಳಲ್ಲಿ ಉಪದ್ರವಿ ಕೀಟಗಳನ್ನು ಹಕ್ಕಿಗಳು ನಿಯಂತ್ರಿಸಲು ಸಾಕಷ್ಟು ಅವಕಾಶವಿದೆ. ಮಾಗಿ ಉಳುಮೆ ಮಾಡುವಾಗ ಕಾಗೆ, ಕೋಗಿಲೆ ಮತ್ತು ಕೆಂಬೂತಗಳು, ಕೊಕ್ಕರೆ ಮತ್ತು ಬೆಳ್ಳಕ್ಕಿಗಳು ಮಣ್ಣಿನಿಂದ ಹೊರಗೆಡವಲ್ಪಡುವ ಸುಪ್ತಾವಸ್ಥೆಯಲ್ಲಿರುವ ಕೀಟಗಳನ್ನು ಹಿಡಿದು ತಿನ್ನುತ್ತವೆ.

೧. ಭತ್ತದ ಕೆಸರು ಗದ್ದೆ ಮಾಡುವಾಗಲೂ ಬೆಳ್ಳಕ್ಕಿಗಳು ನೀರಿನಲ್ಲಿ ಉಸಿರು ಕಟ್ಟಿ ಹೊರಗೆ ಬರುವ ಕೀಟಗಳನ್ನು ತಿನ್ನುತ್ತವೆ.

೨. ಗಾತ್ರದಲ್ಲಿ ತೀರ ಚಿಕ್ಕದಾಗಿರುವ ಗುಬ್ಬಿಗಳು ತೊಗರಿ ಕಾಯಿ ಕೊರೆಯುವ ಹುಳು, ಪತಂಗ, ಮಿಡತೆ ಮತ್ತು ಹೇನುಗಳನ್ನು ಹೆಕ್ಕಿ ತಿನ್ನುತ್ತವೆ.

೩. ಗೊರವಂಕ ಎಂದರೆ ಮೈನಾ ಹಕ್ಕಿಗಳು ಬೆಳಿಗ್ಗೆ ಮತ್ತು ಸಾಯಂಕಾಲದ ಸಮಯದಲ್ಲಿ ಕಡಲೆಕಾಯಿ, ಕಡಲೆಯಂತಹ ಬೆಳೆಗಳಲ್ಲಿ ಹುಳುಗಳನ್ನು ಹೆಕ್ಕಿ ತಿನ್ನುತ್ತವೆ.

೪. ಬಿಳಿ ತಲೆಯ ಗ್ವಾಜೆ ಹಕ್ಕಿಗಳು, ಕುಸುಬೆ, ಕಡಲೆ, ಬೆಳೆ ಕಾಳು, ಹಣ್ಣಿನ ಮರಗಳ ಎಲೆಗಳ ಕೆಳಭಾಗದಲ್ಲಿರುವ ಹೇನು, ಶಲ್ಕ ಮತ್ತು ತಿಗಣೆಗಳನ್ನು ಹೆಕ್ಕಿ ತಿನ್ನುತ್ತವೆ.

೫. ನೆಲದಲ್ಲಿ ಪೊಟರೆ, ಕೋವೆ ಮತ್ತು ಡೊಗರುಗಳಲ್ಲಿ ಮನೆ ಮಾಡಿಕೊಂಡಿರುವ, ನೋಡಲು ಸ್ಥಳೀಯ ಕೋಳಿಗಳಂತೆ ಕಾಣುವ ಹಾಲಕ್ಕಿಗಳು ಕಡಲೆ ಬೆಳೆಯು ಹೂವಾಡುವ ಹಂತದಲ್ಲಿರುವಾಗ ಹೊಲದಲ್ಲಿ ಕಾಣಿಸಿಕೊಂಡು ಸಾವಿರಾರು ಹುಳುಗಳನ್ನು ತಿನ್ನುವ ಸಾಮರ್ಥ್ಯ ಹೊಂದಿವೆ.

೬. ಕಡಲೆ, ನೆಲಗಡಲೆ ಹೊಲಗಳಲ್ಲಿ ಹಾರಾಡುವ ಕೀಟಗಳನ್ನು ಹಾರಾಡುತ್ತಲೇ ಹಿಡಿದು ತಿನ್ನುತ್ತವೆ ಕಪ್ಪಡದ ಹಕ್ಕಿಗಳು.

೭. ತೊಗರಿಯಲ್ಲಿ ಕಾಯಿಕೊರಕವನ್ನು ಕಾಜಾಣ ಹಕ್ಕಿ ಬಹು ಯಶಸ್ವಿಯಾಗಿ ಹೆಕ್ಕಿ ತಿನ್ನುತ್ತದೆ.

೮. ಮರಕುಟಿಕ ಹಕ್ಕಿಗಳು ಕಂಬಳಿ ಹುಳುಗಳ ಸಮೂಹವನ್ನು ಬಲು ಚುರುಕಾಗಿ ನಾಶ ಮಾಡುತ್ತವೆ.

ಇಷ್ಟೇ ಅಲ್ಲದೆ, ಮೈನಾ ಹಕ್ಕಿಗಳು, ಕಾಜಾಣ, ಕೊಕ್ಕರೆಯಂತ ಇನ್ನೂ ಅನೇಕ ಪಕ್ಷಿಗಳು, ಎಮ್ಮೆ, ದನಕರು ಕುರಿಗಳ ಮೇಲೆ ಸವಾರಿ ಮಾಡುತ್ತಲೇ ಅವುಗಳ ಮೈ ಮೇಲಿನ ಹೇನು, ಉಣ್ಣೆಗಳಂತಹ ಪರಾವಲಂಬಿ ಕೀಟಗಳನ್ನು ತಿನ್ನುತ್ತವೆ. ಇದರಿಂದ ದನಕರುಗಳ ಆರೋಗ್ಯ ಉತ್ತಮವಾಗಿರುತ್ತದೆ ಆದ್ದರಿಂದ, ಪರೋಕ್ಷವಾಗಿ ಹೈನುಗಾರಿಕೆಗೂ ಹಕ್ಕಿಗಳ ಸಹಾಯವಿರುವುದು.

ಹೀಗೆ ಕೃಷಿಯಲ್ಲಿ ತಮ್ಮದೇ ಆದ ಮಹತ್ತರ ಪಾತ್ರವನ್ನು ಹೊಂದಿರುವ ಪಕ್ಷಿಗಳನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಇರುವುದರಿಂದ, ಅವುಗಳಿಂದ ನಿರೀಕ್ಷಿತ ಸಹಾಯ ಪಡೆಯಲು ಆಗುತ್ತಿಲ್ಲ. ಪರಿಸರದ ಪ್ರಜ್ಞೆ ನಮ್ಮಲ್ಲಿ ಇಲ್ಲದೆ ಇರುವುದರಿಂದ ಅನೇಕ ಅಪರೂಪದ ಹಕ್ಕಿಗಳು ಇಂದು ವಿನಾಶದ ಅಂಚಿನಲ್ಲಿವೆ. ಡಾ. ಸಲೀಂ ಅಲಿಯವರಂತಹ ಪಕ್ಷಿ ಹಿತಚಿಂತಕರಿಂದಾಗಿ ಆಧುನಿಕ ಜಗತ್ತಿಗೆ ಹಕ್ಕಿಗಳ ಬಗ್ಗೆ ಅಲ್ಪ ಸ್ವಲ್ಪ ತಿಳಿದಂತಾಗಿದೆ. ಈಗಲೂ ಕಾಲ ಮಿಂಚಿಲ್ಲ. ನಮ್ಮ ಪರಿಸರಕ್ಕೆ ಅನುಗುಣವಾಗಿ ಅದರ ರಕ್ಷಣಾ ದೃಷ್ಟಿಯಿಂದ ನಾವು ಕೃಷಿ ಪದ್ಧತಿಯನ್ನನುಸರಿಸುವುದರ ಮೂಲಕ ಪಕ್ಷಿ ಸಂಕುಲದ ವಿಕಾಸಕ್ಕೆ ಪ್ರೋತ್ಸಾಹ ನೀಡಲು ಇನ್ನೂ ಅವಕಾಶವಿದೆ.

ಸಾವಯುವ ಕೃಷಿ ಅನುಸರಿಸಿ, ಪಕ್ಷಿಗಳನ್ನು ಉಳಿಸಿ. ●



ಮುಧೋಳದ ಆರ್.ಎಂ.ಜಿ. ಪದವಿ ಪೂರ್ವ ಮಹಾವಿದ್ಯಾಲಯದ ಪಾಚಾರ್ಯರೊಂದಿಗೆ ವಿಜ್ಞಾನ ಶಿಕ್ಷಕರು.

ಗೋಮೂತ್ರದಿಂದ ವಿದ್ಯುತ್ ಉತ್ಪಾದನೆ

ಸಿದ್ಧರಾಜ್ ಎಂ. ಕೆಂಧೂಳಿ, ಬಾಗಲಕೋಟೆ

ಬಸವೇಶ್ವರ ವಿದ್ಯಾವರ್ಧಕ ಸಂಘ ನಡೆಸುವ ಮುಧೋಳದಲ್ಲಿರುವ ಆರ್.ಎಂ.ಜಿ. ಪದವಿ ಪೂರ್ವ ಮಹಾವಿದ್ಯಾಲಯದ ವಿಜ್ಞಾನ ಶಿಕ್ಷಕರು ಸತತ ಸಂಶೋಧನೆ ಮಾಡಿ ಕೃಷಿ ತ್ಯಾಜ್ಯ ವಸ್ತುವಾದ ಗೋಮೂತ್ರದಿಂದ ವಿದ್ಯುತ್ ಉತ್ಪಾದಿಸಿ ಅಚ್ಚರಿಯನ್ನುಂಟು ಮಾಡಿದ್ದಾರೆ.

ಈ ಪ್ರಾತ್ಯಕ್ಷಿಕೆಯು ಸಾರ್ವಜನಿಕ ಶಿಕ್ಷಣ ಇಲಾಖೆ ಏರ್ಪಡಿಸಿದ್ದ ವಿಜ್ಞಾನ-ವಸ್ತು ಪ್ರದರ್ಶನದ ಕೃಷಿ ವಿಭಾಗದಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು, ಮಂಡ್ಯದಲ್ಲಿ ನಡೆದ ರಾಜ್ಯಮಟ್ಟದ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಆಯ್ಕೆ ಆಗಿತ್ತು. ರಾಜ್ಯಮಟ್ಟದಲ್ಲಿಯೂ ಕೂಡಾ ಐದನೇಯ ವಿಶೇಷ ಸ್ಥಾನವನ್ನು ಪಡೆದು ದಕ್ಷಿಣ ಭಾರತದ ವಿಭಾಗ ಮಟ್ಟಕ್ಕೆ ಆಯ್ಕೆ ಆಗಿದೆ. ಅದು ಕೇರಳದಲ್ಲಿ ನಡೆಯಲಿದೆ. ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ವಸ್ತು ಪ್ರದರ್ಶನದ ನಿರೂಪಣೆಯನ್ನು ನೀಡಿ ಪ್ರಶಂಸೆ ಪಡೆದಿದ್ದಾರೆ.

ಕೃಷಿ ತ್ಯಾಜ್ಯ ವಸ್ತುಗಳನ್ನು ಮರುಬಳಸಿ ಸುಮಾರು ೦.೫ ಓಲ್ಟ್‌ದಿಂದ ೧ ಓಲ್ಟ್‌ವರೆಗೆ ವಿದ್ಯುತ್ ಉತ್ಪಾದಿಸಿ ಕಡಿಮೆ ವಿದ್ಯುತ್ ಉಪಯೋಗಿಸುವ ಉಪಕರಣಗಳನ್ನು (ಎಲೆಕ್ಟ್ರಾನಿಕ್ಸ್ ಗೋಡೆ ಗಡಿಯಾರ, ಕ್ಯಾಲ್ಕುಲೇಟರ್, ಎಲ್.ಇ.ಡಿ. ಬಲ್ಬು) ಈ ವಿದ್ಯುತ್‌ಗೆ ಅಳವಡಿಸಬಹುದು.

ಕೃಷಿ ತ್ಯಾಜ್ಯ ವಸ್ತುಗಳೆಂದರೆ ಪ್ರಾಣಿಗಳ ಮಲ ಮೂತ್ರ ಮತ್ತು ಕೀಟ ನಾಶಕಗಳ ಶೇಷ ಭಾಗಗಳಾಗಿವೆ. ಪ್ರಾಣಿಗಳ ಮಲಮೂತ್ರಗಳನ್ನು ಕಾಂಪೋಸ್ಟ್ ಗೊಬ್ಬರ (ಜೈವಿಕ ಗೊಬ್ಬರ)ದಂತೆ ಉಪಯೋಗಿಸುವದು ಸರ್ವ ಸಾಮಾನ್ಯವಾಗಿದೆ. ಕೃಷಿ ತ್ಯಾಜ್ಯ ವಸ್ತುಗಳಾದ ಪ್ರಾಣಿಗಳ ಸಗಣಿ ಮತ್ತು ವಿಶೇಷವಾಗಿ ಮೂತ್ರದಿಂದ (ಗೋಮೂತ್ರ) ವಿದ್ಯುತ್ ಕೋಶಗಳನ್ನು ತಯಾರಿಸಿ ಅವುಗಳನ್ನು ಕಡಿಮೆ ಸಾಮರ್ಥ್ಯದ ವಿದ್ಯುತ್ ಉಪಕರಣಗಳಿಗೆ ಬಳಸಬಹುದು.

ಬೇಕಾಗುವ ಉಪಕರಣಗಳು

೧. ಪ್ಲಾಸ್ಟಿಕ್ ಡಬ್ಬಗಳು (ಫೋಟೊ ರೀಲುಗಳ ಸಣ್ಣ ಡಬ್ಬಿಗಳು)
೨. ಸುಟ್ಟ ಬ್ಯಾಟರಿಯ ವಿದ್ಯುತ್ ಕೋಶಗಳು
೩. ಸೆಗಣಿ ಅಥವಾ ಗೋಮೂತ್ರ
೪. ವಾಹಕ ತಂತಿ
೫. ಎಲೆಕ್ಟ್ರಾನಿಕ್ಸ್ ಗೋಡೆ ಗಡಿಯಾರ
೬. ಕ್ಯಾಲ್ಕುಲೇಟರ್
೭. ಎಲ್.ಇ.ಡಿ. ಬಲ್ಬ್


> ಬಸವೇಶ್ವರ ವಿದ್ಯಾವರ್ಧಕ ಸಂಘ ನಡೆಸುವ ಮುಧೋಳದಲ್ಲಿರುವ ಆರ್.ಎಂ.ಜಿ. ಪದವಿಪೂರ್ವ ಮಹಾವಿದ್ಯಾಲಯದ ವಿಜ್ಞಾನ ಶಿಕ್ಷಕರು ಸತತ ಸಂಶೋಧನೆ ಮಾಡಿ ಕೃಷಿ ತ್ಯಾಜ್ಯ ವಸ್ತುವಾದ ಗೋಮೂತ್ರದಿಂದ ವಿದ್ಯುತ್ ಉತ್ಪಾದಿಸಿ ಅಚ್ಚರಿಯನ್ನುಂಟು ಮಾಡಿದ್ದಾರೆ.

ವಿಧಾನ

ಸುಟ್ಟ ಬ್ಯಾಟರಿ ಸೆಲ್‌ಗಳಲ್ಲಿಯ ಗ್ರಾಫೈಟ್ ಸರಳು ಮತ್ತು ಸತುವಿನ ತಗಡು ತೆಗೆದುಕೊಂಡು, ಫೋಟೋ ರೀಲಿನ ಪ್ಲಾಸ್ಟಿಕ್ ಡಬ್ಬಿಯ ಮೇಲ್ಭದಿಯ ಮುಚ್ಚಳದಲ್ಲಿ ರಂಧ್ರಗಳನ್ನು ಮಾಡಿ ಸೇರಿಸಬೇಕು. ಡಬ್ಬಿಯಲ್ಲಿ ಗೋಮೂತ್ರ ಅಥವಾ ಸೆಗಣಿ ತುಂಬಿ ಪ್ಲಾಸ್ಟಿಕ್ ಡಬ್ಬಿಯ ಮುಚ್ಚಳಿಕೆಯನ್ನು ಸರಳನ್ನು ಮುಳುಗಿಸಬೇಕು. ಒಂದು ವಿದ್ಯುತ್ ಕೋಶ ತಯಾರಾಯಿತು. ಇದರಲ್ಲಿಯ ಗ್ರಾಫಾಯಿಟ್ ಸಲಾಕೆ ಧನಾಗ್ರದಂತೆ, ಮತ್ತು ಸತುವಿನ ತಗಡಿನ ಸಲಾಕೆ ಋಣಾಗ್ರದಂತೆ ವರ್ತಿಸುವದು, ಇವುಗಳಿಗೆ ವಾಹಕ ತಂತಿಗಳನ್ನು ಜೋಡಿಸಿ ಉಪಕರಣಗಳಿಗೆ ಜೋಡಿಸಿ ಉಪಯೋಗಿಸಬಹುದು.

ಕಾರ್ಯ

ಒಂದು ವಿದ್ಯುತ್ ಕೋಶವು ಸುಮಾರು ೦.೫ರಿಂದ ೧ ಓಲ್ಟ್ ವರೆಗೆ ವಿದ್ಯುತ್ ಶಕ್ತಿಯನ್ನು ಉತ್ಪಾದನೆ ಮಾಡುವುದರೊಂದಿಗೆ ವಿದ್ಯುತ್ ಪ್ರವಾಹ ಶಕ್ತಿಯನ್ನು ಕೊಡುವುದು. ಇಂತಹ ೩-೪ ಕೋಶಗಳನ್ನು ಜೋಡಿಸಿ ಹೆಚ್ಚಿನ ವಿದ್ಯುತ್ ಶಕ್ತಿಯನ್ನು ಪಡೆಯಬಹುದಾಗಿದೆ. ಇದು



''ಓಲ್ಟನ ವಿದ್ಯುತ್ ಕೋಶದ ತತ್ವದಂತೆ'' ನಡೆಯುವುದು, ಶಕ್ತಿಯ ಪ್ರಮಾಣ ಕಡಿಮೆ ಆದಾಗ ಮತ್ತೆ ಗೋಮೂತ್ರಗಳನ್ನು ಬದಲಾವಣೆ ಮಾಡಬಹುದಾಗಿದೆ.

ಉಪಯೋಗ

೧. ಒಂದು ಎಲೆಕ್ಟ್ರಾನಿಕ್ಸ್ ಗೋಡೆ ಗಡಿಯಾರ ಸತತವಾಗಿ ೧ರಿಂದ ೨ ತಿಂಗಳವರೆಗೆ ನಡೆಯುವುದು.
೨. ಕ್ಯಾಲ್ಕುಲೇಟರ್‌ದಿಂದ ಲೆಕ್ಕ ಮಾಡಬಹುದು.
೩. ೨ ಎಲ್.ಇ.ಡಿ. ಬಲ್ಬ್‌ಗಳನ್ನು ನಿರಂತರವಾಗಿ ೨ ದಿನಗಳವರೆಗೆ ಉರಿಸಬಹುದು.
೪. ಮನೆಯಲ್ಲಿ ಕರೆಗಂಟೆ ಜೋಡಿಸಬಹುದು.
೫. ಕಡಿಮೆ ಸಾಮರ್ಥ್ಯದ ವಿದ್ಯುತ್ ಉಪಕರಣ ಗಳನ್ನು ಬಳಸಬಹುದು.
೬. ಪಿಯಾನೋವನ್ನು ನಡೆಸಬಹುದು.
೭. ಪ್ರಯೋಗ ಶಾಲೆಯಲ್ಲಿ ವಿದ್ಯುತ್ ಕೋಶದ ಮಾದರಿ ಮತ್ತು ಉಪಯುಕ್ತತೆಯನ್ನು ತಿಳಿಸಬಹುದಾಗಿದೆ.

ಇತರ ಲಾಭಗಳು

೧. ಕೃಷಿ ತ್ಯಾಜ್ಯ ವಸ್ತುಗಳಲ್ಲದೆ ಸುಟ್ಟ ಬ್ಯಾಟರಿ ವಸ್ತುಗಳನ್ನು ಮರುಬಳಕೆ ಮಾಡಬಹುದು.
೨. ಗೋಡೆ ಗಡಿಯಾರದಲ್ಲಿ ವಿದ್ಯುತ್ ಕೋಶದ ಬದಲಾಗಿ ಬಳಸಬಹುದು.
೩. ಅಲಂಕಾರದ ರೂಪದಲ್ಲಿ ಎಲ್.ಇ.ಡಿ. ಬಲ್ಬ್‌ಗಳನ್ನು ಬಳಸಬಹುದು.
೪. ಚಾರ್ಜಿಂಗ್ ಬ್ಯಾಟರಿಯ ಕೋಶವನ್ನು ಮರಳಿ ಬಳಸಬಹುದು.

ಗೋಮೂತ್ರ ಒಂದು ಪವಿತ್ರ ವಸ್ತು, ಸಕಲ ಕಾರ್ಯಗಳಿಗೆ ಸಿದ್ಧವಸ್ತು ಎಂದು ನಂಬಿಕೆ ಸಮಾಜದಲ್ಲಿ ಇರುವುದರಿಂದ ಇದರಿಂದ ತಯಾರಿಸಿದ ಕೋಶಗಳನ್ನು ಯಾವದೇ ಸ್ಥಳದಲ್ಲಿಯೂ ಇಡಬಹುದು. ಹೀಗೆ ಗೋಮೂತ್ರದಿಂದ ತಯಾರಿಸಿದ ಕೋಶದಲ್ಲಿ ವಿದ್ಯುತ್ ಶಕ್ತಿ ಕಡಿಮೆ ಆದಾಗ ಅದರಲ್ಲಿಯ ತ್ಯಾಜ್ಯವಸ್ತುಗಳನ್ನು ಬದಲಾಯಿಸಿ ಮತ್ತೇ ತುಂಬಿ ನಿರಂತರವಾಗಿ ವಿದ್ಯುತ್ ಶಕ್ತಿಯನ್ನು ಪಡೆಯಬಹುದು.

ಈ ಪ್ರಯೋಗವನ್ನು ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ಮಾಡಿ ನೋಡಿದರೆ ನಾವು ಮಾಡಿದ ಶ್ರಮ ಸಾರ್ಥಕ ಎಂದು ಮುಧೋಳದ ಆರ್.ಎಂ.ಜಿ. ಪದವಿಪೂರ್ವ ಮಹಾ ವಿದ್ಯಾಲಯದ ವಿಜ್ಞಾನ ಶಿಕ್ಷಕ ಹಾಗೂ ಪ್ರಯೋಗದ ಸಂಯೋಜಕರಾದ ಸಿ.ಜಿ. ಹಿರೇಮಠ ಅಭಿಪ್ರಾಯಪಟ್ಟಿದ್ದಾರೆ. ಈ ಪ್ರಯೋಗ ಎಲ್ಲರ ಗಮನ ಸೆಳೆದು ಪ್ರಶಂಸೆಗೆ ಪಾತ್ರವಾಗಿದೆ. ಪ್ರಾಚಾರ್ಯರಾದ ಸಿ.ಎಂ. ಬಳ್ಳೊಳ್ಳಿ ಅವರ ಪ್ರೋತ್ಸಾಹ-ಪ್ರೇರಣೆಯಿಂದ ಈ ಯಶಸ್ಸು ಲಭಿಸಿದೆ ಎನ್ನುವ ಹಿರೇಮಠರು ಇತರ ವಿಜ್ಞಾನ ಶಿಕ್ಷಕರ ಸಹಾಯವನ್ನು ಸ್ಮರಿಸುತ್ತಾರೆ.

ಮನವಿ

ಈ ಪ್ರಯೋಗದಿಂದ ಬ್ಯಾಟರಿ ಬಲ್ಬ್‌ಗಳು ಹೊತ್ತಿಕೊಳ್ಳುವುದಿಲ್ಲ. ಇದನ್ನು ಸಾಧ್ಯವಾಗಿಸಲು ಸಂಯೋಜಕ ಶಿಕ್ಷಕ ಸಿ.ಜಿ. ಹಿರೇಮಠ ಮತ್ತು ನಾರಾಯಣ ಕೊಡಗಗೋಳ ಇವರು ಮುಧೋಳದಲ್ಲಿ ಹೆಚ್ಚಿನ ಪ್ರಯತ್ನ ನಡೆಸಿದ್ದಾರೆ. ಓದುಗರಲ್ಲಿ ಏನಾದರೂ ಸಲಹೆ-ಸೂಚನೆಗಳಿದ್ದರೆ ಮತ್ತು ಹೆಚ್ಚಿನ ಮಾಹಿತಿ ಬೇಕಾದರೆ ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.

ಸಿ.ಜಿ. ಹಿರೇಮಠ, ವಿಜ್ಞಾನ ಶಿಕ್ಷಕರು,
ಆರ್.ಎಂ.ಜಿ. ಪದವಿಪೂರ್ವ ಮಹಾವಿದ್ಯಾಲಯ,
ಮುಧೋಳ, ಬಾಗಲಕೋಟಿ ಜಿಲ್ಲೆ



ಮೊಸರು

ಮೊಸರು ಸಾಮಾನ್ಯವಾಗಿ ಉಷ್ಣತೆ, ದೀಪನ, ಸ್ನಿಗ್ಧತೆ, ಗುರುತ್ವಗಳೆಂಬ ಗುಣಗಳಿಂದ ಕೂಡಿರುತ್ತದೆ. ಹಸುವಿನ ಮೊಸರು ಶ್ರೇಷ್ಠವಾದುದು. ಇದು ರುಚಿಕರವೂ, ಅಗ್ನಿದೀಪಕವೂ ಆಗಿದ್ದು ಶಕ್ತಿ ಮತ್ತು ವೀರ್ಯವನ್ನು ಹೆಚ್ಚಿಸುತ್ತದೆ. ಎಮ್ಮೆಯ ಮೊಸರು ಕಫವರ್ಧಕ ಹಾಗೂ ವಾತಪಿತ್ತನಾಶಕವಾಗಿರುತ್ತದೆ. ಕಾಯಿಸಿದ ಮೊಸರಿನ ಸೇವನೆ ಮಾಡಬಾರದು. ಅಜೀರ್ಣ ವುಂಟಾದಾಗ ಹಸುವಿನ ಮೊಸರು ಅಥವಾ ಮಜ್ಜಿಗೆಯಲ್ಲಿ ಸಮವಾಗಿ ನೀರನ್ನು ಮತ್ತು ಸೈಂಧವ ಲವಣವನ್ನು ಕೂಡಿಸಿ ಕುಡಿಯಬೇಕು.

ತೃಷ್ಣ (ಮಿತಿಮೀರಿದ ಬಾಯಾರಿಕೆ)ವುಂಟಾದಾಗ ಬರಿಯ ನೀರಿನಿಂದ ನೀರಡಿಕೆ ಕಡಿಮೆಯಾಗದಿದ್ದರೆ ೧೦ ಚಮಚ ಸಿಹಿಮೊಸರು, ೫ ಚಮಚ ಸಕ್ಕರೆ, ಸ್ವಲ್ಪ ತುಪ್ಪ, ಒಂದು ಚಮಚ ಜೇನು ತುಪ್ಪ, ಒಂದು ಚಿಟಿಕೆ-ಮೆಣಸಿನ ಪುಡಿ, ೨ ಚಿಟಿಕೆ-ಏಲಕ್ಕಿ, ಇವುಗಳನ್ನೆಲ್ಲ ಒಂದು ಮಣ್ಣಿನ ಹೊಸ ಗಡಿಗೆಯಲ್ಲಿ ಕಲೆಸಿಟ್ಟುಕೊಂಡು ಸ್ವಲ್ಪ ಸ್ವಲ್ಪ ಕುಡಿಯಬೇಕು.

ಮಜ್ಜಿಗೆ

''ದೇವತೆಗಳ ಸಂತರ್ಪಣೆಗಾಗಿ ಸ್ವರ್ಗದಲ್ಲಿ ಅಮೃತವು ವಿರಾಜಿಸಿರುವಂತೆ ಮಾನವರ ಸಂತರ್ಪಣೆಗಾಗಿ ಭೂಲೋಕದಲ್ಲಿ ತಕ್ರವೆಂಬ (ಮಜ್ಜಿಗೆ) ಅಮೃತವು ವಿರಾಜಿಸುತ್ತಿದೆ'' ಎಂದು ಭಾವಮಿಶ್ರ ಹೇಳಿರುತ್ತಾರೆ. ಮಜ್ಜಿಗೆಯು ಸಿಹಿ, ಹುಳಿ, ಸ್ವಲ್ಪ ಒಗರುಗಳಿಂದ ಕೂಡಿ ಹಗುರಾದ ಪೇಯವಾಗಿದೆ. ಸಿಹಿಯಾದ ಮಜ್ಜಿಗೆಯ ಪಿತ್ತವನ್ನು ತಗ್ಗಿಸಿ ಕಫವನ್ನು ಹೆಚ್ಚಿಸುವದು. ಹುಳಿ ಮಜ್ಜಿಗೆಯ ವಾಯುವನ್ನು ತಗ್ಗಿಸಿ ಪಿತ್ತವನ್ನು ಹೆಚ್ಚಿಸುವದು.

ಸ್ಥೂಲ ದೇಹವುಳ್ಳವರು ಮಜ್ಜಿಗೆಯನ್ನು ಪ್ರತಿದಿನ ಸೇವಿಸಬೇಕು. ಬಹುದಿನಗಳಿಂದ ಭೇದಿಯಾಗುತ್ತಿರುವವರು ಮಜ್ಜಿಗೆಯನ್ನು ಸೇವಿಸಬೇಕು. ಉರಿಮೂತ್ರವಿದ್ದಾಗ ಮಜ್ಜಿಗೆಯನ್ನು ಹೆಚ್ಚಾಗಿ ಸೇವಿಸಬೇಕು. ಹೊಟ್ಟೆ ನೋವಿದ್ದಾಗ ಸೈಂಧವ ಲವಣ, ಶುಂಠಿ, ಹಿಪ್ಪಲಿ, ಮೆಣಸು ಇವುಗಳನ್ನು ಮಜ್ಜಿಗೆಯಲ್ಲಿ ಕೂಡಿಸಿ ಕುಡಿಯುವದರಿಂದ ಶಾಂತವಾಗುತ್ತದೆ.

ಮಲಬದ್ಧತೆಯುಂಟಾದಾಗ ಕರಿಯ ಉಪ್ಪು ಮತ್ತು ಓಮವನ್ನು ಅರೆದು ಮಜ್ಜಿಗೆಯೊಡನೆ ಕೂಡಿಸಿ ಕುಡಿಯಬೇಕು. ಅಜೀರ್ಣವಿದ್ದಾಗ ಬೇರೆ ಆಹಾರವನ್ನು ಸೇವಿಸದೇ ಕೇವಲ ಮಜ್ಜಿಗೆಯನ್ನು ಸೇವಿಸಬೇಕು.

○ **ಡಾ. ವಸುಂಧರಾ ಭೂಪತಿ**



ಪ್ರೀತಿ ಬಟ್ಟಲು

(ಕವಿತೆಗಳು)

ಲೇ: ಪ್ರಕಾಶ್ ಗ. ಖಾಡೆ
ಪ್ರ: ಅನಿಕೇತ ಪ್ರಕಾಶನ ಲೋಕಾಪುರ - ೨೨ ಮುದ್ರಣ: ೧೯೯೭ ಪುಟ: ೫೪
ಬೆಲೆ: ರೂ. ೨೫/-




ಪ್ರಕಾಶ್ ಖಾಡೆಯವರು ನನಗೆ ಸುಮಾರು ಹತ್ತು ವರ್ಷಗಳಿಂದ ಪರಿಚಿತರು ಉಂಡುಟ್ಟು ಆರಾಮವಾಗಿರುವುದೇ ಬದುಕು ಎಂಬ ಭಾವನೆಗಳಿಂದ ದೂರವಿದ್ದು, ಸದಾ ಏನಾದರೊಂದು ಕಾರ್ಯದಲ್ಲಿ ತೊಡಗಿಕೊಂಡಿರುವ ಮತ್ತು ಸೂಕ್ಷ್ಮ ಸಂವೇದನೆಗಳಿಗೆ ಸ್ಪಂದಿಸುವ ಮನೋಭಾವ ಉಳ್ಳವರು. ಅನುಭವಗಳಿಗೆ ಮೂರ್ತರೂಪ ಕೊಡುವ ಕಲೆ ಇವರಿಗೆ ಸಿದ್ಧಿಸಿದೆ. ಆದ್ದರಿಂದಲೇ ಎಂಥಾ ವಿಘ್ನಗಳ ನಡುವೆಯೂ ಕೊನೆಗೊಳ್ಳದ ಬದುಕಿನ ಆಕರ್ಷಣೆ ಈ ಕಾಲದಲ್ಲಿ ಅರಳಿನಿಲ್ಲದ ಅವಸ್ಥೆಯಲ್ಲಿ ವ್ಯಕ್ತಿಯನ್ನು ದಾರಿ ತಪ್ಪಿಸುತ್ತಿರುವ ಸ್ಥಿತಿ ಯಾವುದು ಎಂಬುದನ್ನು ಎಳೆ ಎಳೆಯಾಗಿ ಬಿಚ್ಚಿಡುವಲ್ಲಿ ಯಶಸ್ವಿಯಾದ ಕವನ ಸಂಕಲನ ಖಾಡೆಯವರ ಪ್ರೀತಿ ಬಟ್ಟಲು.

- ವಿದ್ಯಾ ಕುಂದರಗಿ

ಹೇಮನ ಅಂಕಣ

(ಲೇಖನ ಸಂಗ್ರಹ)

ಪ್ರ : ಸುಲಲಿತ ಪ್ರಕಾಶನ, 'ಹೇಮ', ಜ್ಯೋತಿಕಾಲನಿ, ಸಾಯಿನಗರ, ಹುಬ್ಬಳ್ಳಿ-೩೧ ಮುದ್ರಣ: ೧೯೯೭ ಪುಟ: ೧೨೦ ಬೆಲೆ: ರೂ. ೪೦/-



ಪ್ರೊಫೆಸರ್ ಸಿ.ಪಿ.ಹೇಮಗಿರಿ ಮಠರು ಕೈಯಲ್ಲಿ ಒಂದು ತುಂಡು ಕಾಗದ ಸಿಕ್ಕರೆ, ಕುಂತಲ್ಲಿ, ನಿಂತಲ್ಲಿ, ಅದರಲ್ಲಿಯೇ ಕವಿತೆ ಹೀಚಬಲ್ಲರು ಒಂದು ಲೇಖನ ಗೀಚಬಲ್ಲರು. ಅಂಥ ಸಿದ್ಧಹಸ್ತ ಅವರದು. ಸಹಜ ಪ್ರತಿಭೆಯಿರುವ ಅವರಿಗೆ ಬರಹ ಬಹು ಸುಲಭವಾಗಿ ಬಂದಿದೆ ಮೃದುವಾದ ಹೃದ್ಯವಾದ ಗದ್ಯವನ್ನು ಅವರು ಮೈಗೂಡಿಸಿಕೊಂಡಿದ್ದಾರೆ.

ತಮ್ಮ ಹೃದಯವನ್ನು ಸರಿಯಾದ ಸ್ಥಾನದಲ್ಲಿ ಇರಿಸಿಕೊಂಡಿರುವ ಅವರು ಒಳ್ಳೆಯದನ್ನು ಗುರುತಿಸುವ, ಮೆಚ್ಚುವ ದೃಷ್ಟಿಯನ್ನು ಪಡೆದುಕೊಂಡಿದ್ದಾರೆ. ತಮಗೆ ಒಪ್ಪಿಗೆಯೆನಿಸಿದ ವ್ಯಕ್ತಿಯ ಬಗೆಗೆ, ವಿಷಯದ ಬಗೆಗೆ ಅವರು, ಅತಿಶಯೋಕ್ತಿಯ ಆರೋಪವನ್ನು ತಂದುಕೊಂಡರೂ ಹಿಂಜರಿಯದೆ ಮುಕ್ತಕಂಠದಿಂದ ಪ್ರಶಂಸೆ ಮಾಡುತ್ತಾರೆ. ದಿಲ್‌ದಾರ್ ಎನ್ನುವ ಧಾರಾಳತನ ಅವರಲ್ಲಿ ಇದೆ.

ಓದುಗರಿಗೆ ಕೊಡುವಂತಹ ವಸ್ತು ಅವರಲ್ಲಿ ವಿಪುಲವಾಗಿವೆ. ಇಲ್ಲಿ ಕೆಲವೊಂದನ್ನು ಮೆಚ್ಚಿ ಅವರು ಈ ಸಂಗ್ರಹದಲ್ಲಿ ತಂದಿದ್ದಾರೆ. ವ್ಯವಸ್ಥಿತವಾದ ಆಯ್ಕೆಯನ್ನು ಅವರು ಮಾಡಿಲ್ಲವಾದರೂ ಒಳ್ಳೆಯದನ್ನು ಒಂದೇ ಸೂತ್ರದಲ್ಲಿ ಪೋಣಿಸುವ ಪ್ರಯತ್ನವನ್ನು ಅವರು ಮಾಡಿದ್ದಾರೆನ್ನುವದು ಎಲ್ಲರಿಗೂ ಕಾಣುವಂತಿದೆ. ತಮಗೆ ಆದರ್ಶಪ್ರಾಯರಾದ ಹಲವಾರು ಜನರ ಚಿತ್ರಣವನ್ನು ಅವರು ಇಲ್ಲಿ ಕೊಟ್ಟಿದ್ದಾರೆ.

ಮುನ್ನುಡಿಯಿಂದ


ಈ ಲೇಖನಗಳಲ್ಲಿ ಉಪಯುಕ್ತ ಸಂಗತಿಗಳಿವೆ. ಸಂಗತಿ ಹಾಗೂ ಸಮಸ್ಯೆಗಳ ಕಡೆಗೆ ನೋಡುವ ಹೊಸ ದೃಷ್ಟಿಕೋನ ಇದೆ. ಎಲ್ಲಕ್ಕೂ ಮೇಲಾಗಿ ಮಾಗಿದ ಮನಸ್ಸಿನ ಮಾರ್ದವತೆ ಇದೆ. ಇಂಥ ಆರೋಗ್ಯಕರ ಮನೋಭಾವನೆ ಇದ್ದರೇನೇ ಮನುಷ್ಯನ ಬದುಕು ಒಳ್ಳೆಯ ಗತಿಗೆ ಹೋಗಿ ಹತ್ತುತ್ತದೆ.

- ಡಾ. ಪಾಟೀಲ ಪುಟ್ಟಪ್ಪ

ಕೊಬ್ರಿ-ಬೆಲ್ಲ

(ಶಿಶು ಕವನಗಳು)

ಲೇ: ಗಂಗಾಧರ ನಂದಿ
ಪ್ರ: ಶ್ರೀ ನಂದಿ ಪ್ರಕಾಶನ, ಶಿವಯೋಗೀಶ್ವರ ನಗರ, ಹಾವೇರಿ - ೫೮೧೧೧೦.
ಮುದ್ರಣ: ೧೯೯೭ ಪುಟ: ೫೬ ಬೆಲೆ: ರೂ. ೨೦/-



ಹಾವೇರಿ ಭಾಗದಲ್ಲಿ ಮಕ್ಕಳ ಸಾಹಿತ್ಯದ ಪ್ರೀತಿಯನ್ನು ಜೀವಂತವಾಗಿರಿಸಿರುವ ಬಹು ಪಾಲು ಶ್ರೇಯಸ್ಸು ಗಂಗಾಧರ ನಂದಿ ಅವರದು. ಈಗಿನದು ೨೫ನೆಯ ಪದ್ಯ ಸಂಕಲನ 'ಕೊಬ್ರಿ-ಬೆಲ್ಲ'. ಅಂದವಾದ ಚಿತ್ರ-ಮುದ್ರಣದಿಂದ ಖುಷಿಕೊಡುವ ಇಲ್ಲಿನ ರಚನೆಗಳಲ್ಲಿ ಮೂಗಿನ ಮೇಲೆ ಚಸ್ಮಾ ಇಟ್ಟುಕೊಳ್ಳುವ ಅಜ್ಜ-ಅಜ್ಜಿಯರಿಂದ ಹಿಡಿದು ಇಂದು ಮರೆತೇ ಹೋಗಿರುವ 'ರಂಗಣ್ಣ', 'ಗಿಲಗಂಚಿ' ಯವರೆಗೆ ನಾನಾ ಬಗೆಯ ೨೫ ಕವನಗಳು ೨೫ ಚಿತ್ರಗಳಿವೆ. ಬಾಲ್ಯ ನೀಡುವ ಬದುಕಿನ ಸಂಗತಿಗಳನ್ನು ಬೆಳೆದಂತೆಲ್ಲ ನಾವು ಕಳೆದುಕೊಳ್ಳುತ್ತ ಹೋಗುತ್ತೇವೆ. ಅದರಲ್ಲೂ ಇಂದಿನ ದಿನಗಳಲ್ಲಿ ಮಕ್ಕಳ ಮುಗ್ಧತೆಯ ಮೇಲಿನ ಆಕ್ರಮಣ ಹತ್ತಾರು ಬಗೆಯ ಮುಸುಕಿನಿಂದ ಎರಗುತ್ತಿದೆ. ಬಾಲ್ಯದ ಪ್ರೀತಿಯನ್ನು ಅದೇ ಲವಲವಿಕೆಯಿಂದ ಇಡುವಲ್ಲಿ


ಗಂಗಾಧರ ನಂದಿ (ಗಮನ) ಒಂದು ಒಳ್ಳೆಯ ಕೆಲಸವನ್ನೇ ಮಾಡಿದ್ದಾರೆ.

- ಆನಂದ ಪಾಟೀಲ

ವೈದ್ಯ ಕಿರಣ

('ವಿಮ್ಸ್' ಕವನ ಸಂಕಲನ)

ಪ್ರ. ಸಂ: **ಡಾ. ಬಿ.ಜಿ. ಚಂದ್ರಶೇಖರ** ಸಂ.: **ಟಿ.ಕೆ. ಗಂಗಾಧರ ಪತ್ತಾರ್**
ಪ್ರ: ಕನ್ನಡ ಸಂಘ, ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ - ೪.
ಮುದ್ರಣ: ೧೯೯೭ ಪುಟ: ೬೪ ಬೆಲೆ: ರೂ. ೨೫/-



ವೈವಿಧ್ಯ, ವಿಶಿಷ್ಟತೆಗಳಿಂದ ಕೂಡಿರುವ ಈ ಸಂಕಲನದ ಕವನಗಳಲ್ಲಿ ಮಾನವೀಯತೆಗೆ ತುಡಿಯುವ ಹೃದಯವಂತಿಕೆ ಇರುವುದನ್ನು ಕಾಣಬಹುದು. ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ಸಾಮಾಜಿಕ ಪ್ರಜ್ಞೆಯೂ ದಟ್ಟವಾಗಿರುವ ಕವನಗಳೊಂದಿಗೆ ವೈದ್ಯಕೀಯ ವಿಜ್ಞಾನದಂತಹ ಗಂಭೀರ ವಿಷಯಗಳನ್ನು ಸಹಜವಾಗಿ, ಸರಳವಾಗಿ, ಅರ್ಥಪೂರ್ಣವಾಗಿ ಅಭಿವ್ಯಕ್ತಿಸುವ ಕವನಗಳೂ ಇಲ್ಲಿವೆ.


ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸ್ನಾತಕಪೂರ್ವ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು, ಗೃಹ ವೈದ್ಯರು, ವಿವಿಧ ವರ್ಗದ ಸಿಬ್ಬಂದಿಗಳಲ್ಲಿ ಹುದುಗಿರುವ ಕಾವ್ಯ ಪ್ರತಿಭೆಯನ್ನು ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯ ಮಾಡಿಕೊಡುವುದೇ ಈ ಕವನ ಸಂಕಲನ ಪ್ರಕಟಣೆಯ ಉದ್ದೇಶ.

- ಡಾ. ಲಲಿತಾ ಮಹಾಲೆ

ಕವನ ಕುಸುಮ

(ಕವನ ಸಂಕಲನ)

ಲೇ: ಆರ್. ರಂಗಸ್ವಾಮಿ, ಪ್ರ: ಶ್ರೀ ದೊಡ್ಡಮ್ಮ ಮಾಯಣ್ಣ ಪ್ರಕಾಶನ, ನಂ. ೨೧೯, ೨ನೇ ಮುಖ್ಯ ರಸ್ತೆ, ಕಮಲಾನಗರ, ಬೆಂಗಳೂರು - ೭೯.
ಮುದ್ರಣ: ೧೯೯೭ ಪುಟ: ೩೬ ಬೆಲೆ: ರೂ. ೮/-



"**ಎ**ಳೆಗರ ಎತ್ತಾಗದೆ, ಸಸಿಯು ಮರವಾಗದೆ ಎಂದಿಗೂ ಇರಲಾರದಯ್ಯ" ಎಂಬುದಾಗಿ ಸರ್ವಜ್ಞ ಕವಿ ಸಾರಿದ್ದಾನೆ. ಹಾಗೆಯೇ ಒಂದಲ್ಲ ಒಂದು ದಿನ ಯುವ ಕಲಾವಿದ ಶ್ರೀ ಆರ್. ರಂಗಸ್ವಾಮಿಯವರು ಪ್ರತಿಭಾವಂತ ಸಾಹಸಪರ ಸಾಹಿತಿಯಾಗುತ್ತಾರೆಂಬ ನಂಬಿಕೆ ನನಗಿದೆ. ನಡೆನುಡಿಯಲ್ಲಿ ಸರಳ ಸಜ್ಜನಿಕೆಯಿದೆ, ಮಾತಿನಲ್ಲಿ ವಿನಯವಿದೆ, ಬರಹದಲ್ಲಿ ಕಳಕಳಿಯಿದೆ. ಸಂಗೀತದ ಅಭಿರುಚಿಯಿದೆ ಹಾಡುಗಳನ್ನು ರಚಿಸುವ ಹವ್ಯಾಸವಿದೆ ಈಗ "ಕವನ ಕುಸುಮ" ಎಂಬ ಕವನ ಸಂಕಲನ ಕೃತಿ ಹೊರತರುವುದು ಶುಭ ಸೂಚನೆ - ಶ್ರೀ ಆರ್. ರಂಗಸ್ವಾಮಿಯವರು ಬರೆದಂತ ಲೇಖನ, ಕವನ ಮತ್ತು ಕವಿತೆಗಳನ್ನು ನಾನು ಓದಿದ್ದೇನೆ ಸ್ವತಃ ಹಾಡುವುದನ್ನು ಕೇಳಿದ್ದೇನೆ ತಂದೆಯಂತೆ ಮಗ ಇವರ ತಂದೆ ಶ್ರೀ ರಂಗಯ್ಯ ಇವರು ಒಳ್ಳೆಯ ಜಾನಪದ ಕಲಾವಿದರು ಹಾಡುಗಾರರು ಕೂಡ ಸರಳಜೀವಿ ಹಾಗೂ ಜಾನಪದ ಕವಿ ತಂದೆ ಮಗನಿಗೆ ಒಳ್ಳೆಯ ಭವಿಷ್ಯವಿದೆ ಪ್ರೋತ್ಸಾಹವಿಲ್ಲದೆ ಎಲೆಮರೆಯ ಕಾಯಂತೆ ಬೆಳಕಿಗೆ ಬಾರದ ಪ್ರತಿಭಾವಂತ ದಲಿತ ಬರಹಗಾರರಿವರು, ಭಾವಗೀತೆ, ನಾಡಗೀತೆ, ಭಕ್ತಿಗೀತೆ, ಕ್ರಾಂತಿಗೀತೆ ಮುಂತಾದವುಗಳನ್ನು ಸುಶ್ರಾವ್ಯವಾಗಿ ಹಾಡುವ ಕಲೆಗಾರರಿವರು ಸಮಾಜ ಸರ್ಕಾರ ಇಂತವರನ್ನು ಗುರ್ತಿಸಿ ಪ್ರೋತ್ಸಾಹಿಸಿದರೆ ಸಮಾಜಕ್ಕೆ ಇಂತಹವರಿಂದ ಉಪಕಾರವಾಗುವುದರಲ್ಲಿ ಅನುಮಾನವಿಲ್ಲಾ "ಕವನ ಕುಸುಮ" ಕೃತಿಯ ಕಲಾವಿದ ಆರ್. ರಂಗಸ್ವಾಮಿರವರಿಗೆ ಕನ್ನಡಮ್ಮನ ದಯ ನಿತ್ಯವು ಇರಲೆಂದು ಶುಭ ಹಾರೈಸುತ್ತೇನೆ.

- ಆಶುಕವಿ ಜೆ. ಲಿಂಗಯ್ಯ

ಲೇಖಕರ/ಪ್ರಕಾಶಕರ ಗಮನಕ್ಕೆ

ಈ ಅಂಕಣದಲ್ಲಿ ಹೊಸ ಪ್ರಕಟಣೆಗಳ ವಿವರ ಪ್ರಕಟಿಸಲಾಗುವುದು. ಇದಕ್ಕಾಗಿ ತಮ್ಮ ಇತ್ತೀಚಿನ ಪ್ರಕಟಣೆಗಳ ಒಂದು ಪ್ರತಿ ಕಳಿಸಿ.

ಕನ್ನಡ -ಕಲೆ- ಸಂಸ್ಕೃತಿ

(ಸೂಕ್ತಿ ಸಂಗ್ರಹ)

ಲೇ / ಪ್ರ: **ಟಿ.ವಿ. ವೆಂಕಟರಮಣಯ್ಯ**, ಇ.ಡಬ್ಲ್ಯೂ.ಎಸ್. ೨೧೮, ಕೆ.ಎಚ್.ಬಿ. ಕಾಲೋನಿ-೨ನೇ ಹಂತ, ೫ನೇ ಕ್ರಾಸ್, ಬಸವೇಶ್ವರ ನಗರ, ಬೆಂಗಳೂರು - ೭೯.
ಮುದ್ರಣ: ೧೯೯೭ ಪುಟ: ೯೪ ಬೆಲೆ: ರೂ. ೪೦/-



ಹೆಸರೇ ಸೂಚಿಸುವಂತೆ ಮೂರು ಪ್ರಧಾನ ವಿಷಯಗಳಿಗೆ ಸಂಬಂಧಿಸಿದ ಸೂಕ್ತಿಗಳ ಸಂಗ್ರಹವಿದು.

ಮೊದಲ ಭಾಗದಲ್ಲಿ ಕನ್ನಡ ನಾಡು-ನುಡಿಗಳಿಗೆ ಸಂಬಂಧಿಸಿದ ಸೂಕ್ತಿಗಳನ್ನೂ, ಎರಡನೆಯ ಭಾಗದಲ್ಲಿ ಕಲೆ ಹಾಗೂ ಅದರ ಪ್ರಕಾರಗಳಾದ ಚಿತ್ರಕಲೆ, ನಾಟಕ, ನಾಟ್ಯ ಹಾಗೂ ಸಂಗೀತಕ್ಕೆ ಸಂಬಂಧಿಸಿದ ಸೂಕ್ತಿಗಳನ್ನೂ ಮೂರನೆಯ ಭಾಗದಲ್ಲಿ ಸಂಸ್ಕೃತಿ, ನಾಗರೀಕತೆ-ಸಂಸ್ಕೃತಿ ಹಾಗೂ ಪ್ರಕೃತಿ-ಸಂಸ್ಕೃತಿಗೆ ಸಂಬಂಧಿಸಿದ ಸೂಕ್ತಿಗಳನ್ನು ಅಳವಡಿಸಲಾಗಿದೆ.

"ಏಕ ವಿಷಯ", "ದ್ವಿ-ವಿಷಯ" ಹಾಗೂ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸೂಕ್ತಿಗಳ ಸಂಗ್ರಹ ನನ್ನ ಹವ್ಯಾಸಗಳಲ್ಲೊಂದು. ಇದರ ಮುಂದುವರಿದ ಫಲವೇ ಪ್ರಸ್ತುತ ಸಂಗ್ರಹ.

- ಟಿ.ವಿ. ವೆಂಕಟರಮಣಯ್ಯ

ರಕ್ಷಣೆಗೆ ಮೊರೆಯಿಡುತ್ತಿರುವ ಕಿತ್ತೂರಿನ ಕೋಟೆ ಅರಮನೆ

ನಾಡಿನ ಸ್ವಾತಂತ್ರ್ಯಕ್ಕಾಗಿ ಜೀವತೇಯ್ದ ಕಿತ್ತೂರು ಅರಸೊತ್ತಿಗೆಯ ವೈಭವ ಮಣ್ಣುಪಾಲಾಯಿತು ಎಂಬ ಮಾತಿನಲ್ಲಿ ಆಂಗ್ಲರೊಂದಿಗೆ ನಮ್ಮವರ ಪಾಲೂ ಸಾಕಷ್ಟಿರುವುದು ನಿಜಕ್ಕೂ ವಿಷಾದನೀಯ!

'ಕಿತ್ತೂರು-ಆಂಗ್ಲರನ್ನು ಬೆಚ್ಚಿ ಬೀಳಿಸಿದ ಹೆಸರು. ಈ ಹೆಸರು ಕೇಳಿದರೆ ಕನ್ನಡಿಗರ ಮೈಮನಗಳಲ್ಲಿ ಮಿಂಚು ಹರಿಯುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಕೆಚ್ಚೆದೆಯಿಂದ ಹೋರಾಡಲು ರಾಣಿ ಚೆನ್ನಮ್ಮ, ರಾಣಿ ವೀರಮ್ಮ, ಸಂಗೊಳ್ಳಿ ರಾಯಣ್ಣ, ಅಮಟೂರು ಬಾಳಪ್ಪ, ಸರದಾರ ಗುರುಸಿದ್ಧಪ್ಪ ಮುಂತಾದವರಿಗೆ ಜನ್ಮವಿತ್ತ ಪುಣ್ಯಭೂಮಿ ಈ ಕಿತ್ತೂರು. ಅಂದಿನ ವೀರಗಾದೆಗಳನ್ನು ಹೋರಾಟವನ್ನು ಉಸುರುವ ಅವರು ಬಾಳಿ ಬದುಕಿದ ನೆಲ, ಅರಮನೆ ಕೋಟೆ ಕೊತ್ತಲುಗಳು ಇಂದು ದಯಾನೀಯ ಸ್ಥಿತಿಯಲ್ಲಿವೆ.

ಕಿತ್ತೂರು ಎಂಬ ಹೆಸರಿನ ಬಗ್ಗೆ ಸ್ಪಷ್ಟ ದಾಖಲೆಗಳು ಕಂಡು ಬರುವದಿಲ್ಲ. ಗೋವೆ, ಕದಂಬ, ರಾಜ ಜಯಕೇಶಿಯ ಕಾಲದಲ್ಲಿನ ಶಾಸನವೊಂದರಲ್ಲಿ ಈ ಹೆಸರು ಬಳಕೆಯಾಗಿದೆ. ಕ್ರಿ.ಶ. ೬ನೇ ಶತಮಾನಕ್ಕೆ ಸೇರಿದ ರಾಷ್ಟಕೂಟರ ಶಾಸನಗಳು ಇಲ್ಲಿ ದೊರೆತಿರುವದರಿಂದ ಈ ಹೊತ್ತಿಗಾಗಲೇ ಈ ಊರು ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಈ ಊರಿಗೆ 'ಗಿಜಗನ ಹಳ್ಳಿ' ಎಂಬ ಹೆಸರು ಇತ್ತೆಂದು ಧಾರವಾಡ ಗೆಜೇಟಿಯರನಲ್ಲಿ ಉಲ್ಲೇಖಿಸಲಾಗಿದೆ. ೧೬ನೇಯ ಶತಮಾನದ ಕೊನೆಯಲ್ಲಿ ಯುಸೂಪಖಾನನ ಜಹಗಿರಿಯಲ್ಲಿ ಸೇರಿದ ಕಿತ್ತೂರು ಮುಖ್ಯನಗರವೆನಿಸಿತ್ತು. ವಿಜಾಪುರ ಸುಲ್ತಾನರಿಂದ ಕಿತ್ತೂರು ಸಂಸ್ಥಾನವನ್ನು ಹಿರೇಮಲ್ಲಸರ್ಜ ಎಂಬಾತ ದತ್ತಿ ಪಡೆದು ಕಿತ್ತೂರಿನಲ್ಲಿ ತನ್ನ ಆಳ್ವಿಕೆಯನ್ನು ಆರಂಭಿಸಿದ ಈ ಭಾಗದ ೨೮೦ ದೊಡ್ಡ ಮತ್ತು ೭೦ ಸಣ್ಣ ಹಳ್ಳಿಗಳು ಈ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿದ್ದವು. ಆದಿಲಷಾಹಿಗಳ, ಹೈದರಾಲಿಯ, ಸವಣೂರು ನವಾಬರ ಆಂಗ್ಲರ ಆಳ್ವಿಕೆ ಕಂಡ ಕಿತ್ತೂರು ವೈಭಯುತವಾಗಿ ಮೆರೆದಿದ್ದು ರಾಣಿ ಚೆನ್ನಮ್ಮನ ಕಾಲದಲ್ಲಿ ಎಂಬುದು ಗಮನಾರ್ಹ.

ಕಿತ್ತೂರು ದೊರೆ ಮಲ್ಲಸರ್ಜನನಿಗೆ ರುದ್ರಮ್ಮ ಮತ್ತು ಚೆನ್ನಮ್ಮ ಎಂಬಿಬ್ಬರು ಹೆಂಡತಿಯರು. ರುದ್ರಮ್ಮನಿಗೆ ಶಿವಲಿಂಗರುದ್ರ ಸರ್ಜ, ವೀರರುದ್ರಸರ್ಜ ಎಂಬಿಬ್ಬರು ಮಕ್ಕಳಿದ್ದರು. ಚೆನ್ನಮ್ಮನಿಗೆ ಶಿವಬಸವರಾಜ ಎಂಬೊಬ್ಬನೆ ಮಗನಿದ್ದ. ದುರಾದೃಷ್ಟವಶಾತ್ ವೀರರುದ್ರಸರ್ಜ ಮತ್ತು ಶಿವಬಸವರಾಜ ತಾರುಣ್ಯದಲ್ಲಿಯೇ ತೀರಿಕೊಂಡರು. ೧೮೧೪ರಲ್ಲಿ ದೊರೆ ಮಲ್ಲಸರ್ಜನು ತೀರಿಕೊಂಡಾಗ ಅನಾರೋಗ್ಯದಿಂದ ಬಳಲುತ್ತಿದ್ದ ಶಿವಲಿಂಗರುದ್ರನೇ ದೊರೆಯಾದನು. ವೀರಮ್ಮ ಎಂಬಾಕೆಯನ್ನು ಕೈಹಿಡಿದ ಈತನಿಗೂ ಮಕ್ಕಳಾಗಲಿಲ್ಲ. ೧೯೨೪ರಲ್ಲಿ ಶಿವಲಿಂಗ ರುದ್ರಸರ್ಜನ ಆರೋಗ್ಯವು ಕೆಡಲಾರಂಭಿಸಿದಾಗ ಹಾಗೆ ಚೆನ್ನಮ್ಮ ಮಾಸ್ತಿಮರಡಿಯ ಬಾಳಪ್ಪಗೌಡರ ಮಗ ಶಿವಲಿಂಗಪ್ಪನನ್ನು ದತ್ತುಪುತ್ರನನ್ನಾಗಿ ಸ್ವೀಕಾರ ಮಾಡಲು ನಿರ್ಧರಿಸಿದಳು. ಆಂಗ್ಲರ ಹಿಡಿತ ಇಲ್ಲಿನ ನೆಲದಲ್ಲಿ ಬಿಗಿಯಾಗುತ್ತಿದ್ದ ದಿನಗಳವು. ''ದತ್ತುಪುತ್ರನಿಗೆ ಹಕ್ಕಿಲ್ಲ''ವೆಂದು ಆಂಗ್ಲರು ಸಾರಿದರು ಕೂಡ ಕಿತ್ತೂರು ಅರಸೊತ್ತಿಗೆ ಅದಕ್ಕಂಜಲಿಲ್ಲ. ೧೮೨೪ ಸೆಪ್ಟೆಂಬರ್ ೧೧ರಂದು ದತ್ತಕ ಕಾರ್ಯವನ್ನು ನೆರವೇರುಸುವದರ ಮೂಲಕ ಕಿತ್ತೂರು ಅರಸೊತ್ತಿಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಸಡ್ಡು ಹೊಡೆದು ನಿಂತಿತು. ಧಾರವಾಡದ ಕಲೆಕ್ಟರ್ ಜಾನ್ ಥ್ಯಾಕರೇಯ ಗುಡುಗಿಗೆ ಕಿತ್ತೂರು ವೀರರು ಅಂಜದಿದ್ದಾಗ ೧೮೨೪ರ ಅಕ್ಟೋಬರ್ ೨೧ರಂದು ಥ್ಯಾಕರೇ ಭಾರೀ ಸೈನ್ಯದೊಂದಿಗೆ ಕಿತ್ತೂರಿಗೆ ಧಾವಿಸಿದ. ಕಿತ್ತೂರ ವೀರರು ದಾಳಿಗೇನೂ ಅಂಜಲಿಲ್ಲ. ಗಂಡುಗಚ್ಚೆ ಹಾಕಿ ಕುದುರೆಯೇರಿ ಖಡ್ಗ ಹಿಡಿದು ರಾಣಿ ಚೆನ್ನಮ್ಮಳೇ ಯುದ್ಧಭೂಮಿಗೆ ಧುಮುಕಿದಳು. ಗುರುಸಿದ್ಧಪ್ಪ, ಅಮಟೂರಿನ ಬಾಳಪ್ಪ ಮುಂತಾದವರು ಆಂಗ್ಲರ ರುಂಡವನ್ನು ಚೆಂಡಾಡಿದರೆ ನಿಗ್ರೋ ಸೈನಿಕ ರಾಮಹಬಸಿ ಥ್ಯಾಕರೆಯ ರುಂಡವನ್ನು ಕೆಳಗುರುಳಿಸಿದ. ಅಂದಿನ ವಿಜಯ ಕಿತ್ತೂರಿನ ಪಾಲಾಯಿತು. ಸೋಲಿನಿಂದ ರೊಚ್ಚಿಗೆದ್ದ ಬ್ರಿಟಿಷರು ೧೮೨೪ರ ಡಿಸೆಂಬರ್ ೨ರಂದು ಮತ್ತೆ ಕಿತ್ತೂರಿನ ಮೇಲೆ ದಾಳಿ ಮಾಡಿದರು. ಈ ದಾಳಿಯಲ್ಲಿ ಕಲೆಕ್ಟರ್ ಜಾನ್‌ಮನ್ರೋ ಮತ್ತು ಪುಣೆಯ ಕಮಿಷನರ ಚಾಪ್ಲಿನ್ ಸುಮಾರು ೨೫ ಸಾವಿರ ಸೈನ್ಯಬಲದೊಂದಿಗೆ ಪಾಲ್ಗೊಂಡಿದ್ದರು. ಮೋಸದಿಂದ ಮಾತ್ರ ವಿಜಯ ಎಂದರಿತ ಬ್ರಿಟೀಷರು ಕಿತ್ತೂರಿನ ವ್ಯಕ್ತಿಗಳಿಗೆ ಆಸೆ ತೋರಿಸಿ ಅವರಿಗೆ ಮದ್ದಿನ ಸಂಗ್ರಹಕ್ಕೆ ಸಗಣಿ ನೀರನ್ನು ಬೆರೆಸಲು ಆದೇಶಿಸುತ್ತಾರೆ. ಈ ವಿಶ್ವಾಸಘಾತುಕರು ಮಾಡಿದ ಕೆಲಸದಿಂದಾಗಿ ಮದ್ದುಗಳೆಲ್ಲಾ ನಿಷ್ಪ್ರಯೋಜಕವಾಗಿ ಕಿತ್ತೂರು ವೀರರು ಅಸಹಾಯಕರಾಗಬೇಕಾ



ಯಿತು. ಹಗಲು ರಾತ್ರಿ ಎಡೆಬಿಡದೆ ನಡೆದ ಹೋರಾಟದಲ್ಲಿ ಬೆಳಕು ಹರಿಯುತ್ತಿದ್ದಂತೆ ಕಿತ್ತೂರು ಸಂಸ್ಥಾನ ಆಂಗ್ಲರ ಕೈವಶವಾಯಿತು. ರಾಣಿ ಚೆನ್ನಮ್ಮ ಮತ್ತಿತರ ರಾಜಪರಿವಾರವನ್ನು ಸೆರೆಹಿಡಿದ ಜಾನ್‌ಮನ್ರೋ ಅವರನ್ನೆಲ್ಲಾ ಬೈಲಹೊಂಗಲದ ಜೈಲಿಗೆ ಕಳುಹಿಸಿದ. ಇಲ್ಲಿಗೆ ಸಂಸ್ಥಾನವೊಂದರ ಜೀವಂತ ಮಜಲು ಮುಗಿದಿತ್ತು. ಮುಂದೇ ನಡೆದದ್ದೆಲ್ಲಾ ಬರೀ ಲೂಟಿ, ದೋಚುವಿಕೆ.

ಚಾಪ್ಲಿನ್ ಸುಮಾರು ಮುನ್ನೂರು ಬಂಡಿಗಳಲ್ಲಿ ಇಲ್ಲಿನ ಸಂಪತ್ತನ್ನು ಹೇರಿಕೊಂಡು ಧಾರವಾಡಕ್ಕೆ ಬಂದನು. ಚಾಪ್ಲಿನ್ ಒಬ್ಬನೇ ಏಕೆ ಕಂಡಕಂಡವರೆಲ್ಲಾ ಅರಮನೆಯನ್ನು ದೋಚಲಾರಂಭಿಸಿದರು. ಕಿತ್ತೂರಿನ ಬಸ್ ನಿಲ್ದಾಣದಿಂದ ೨ ಕಿ.ಮೀ. ದೂರದಲ್ಲಿ ಈ ಅರಮನೆಯ ಭಗ್ನಾವಶೇಷಗಳಿವೆ. ಅಂದಿನ ವೈಭವ, ತ್ಯಾಗ, ಬಲಿದಾನಗಳನ್ನು ಸ್ಮರಿಸುತ್ತ ಹೆಜ್ಜೆ ಇಡುತ್ತಿದ್ದರೆ ತುಕ್ಕು ಹಿಡಿದ ಸೂಚನಾ ಫಲಕಗಳು, ನೆಲಕ್ಕುರುಳಿದ ಭಗ್ನಾವಶೇಷಗಳು, ಮುಳ್ಳುಗಿಡಗಳಿಂದಾವೃತವಾದ ಕೋಟೆ ಕೊತ್ತಲುಗಳು ಹೊಲಸಿನ ವಾತಾವರಣದೊಂದಿಗೆ ಪ್ರವಾಸಿಗರನ್ನು ಸ್ವಾಗತಿಸುತ್ತವೆ. ಮೊದಲು ಕಾಣುವ ವಸ್ತುಸಂಗ್ರಹಾಲಯವೇ ಹಳೆಯ ಸಾಮಾನುಗಳನ್ನು ತುಂಬಿದ ಕೊಳಕು ಕೋಣೆಯಂತಿದೆ. ಕಿತ್ತೂರು ಸಂಸ್ಥಾನಕ್ಕೆ ಸೇರಿದ ಬಹುತೇಕ ವಸ್ತುಗಳು ಸುತ್ತಲಿನವರ ಮನೆಯನ್ನು ಸೇರಿರುವದರಿಂದ ವಸ್ತುಗಳ ಕೊರತೆ ಇಲ್ಲಿ ಎದ್ದು ಕಾಣುತ್ತದೆ.

ಅರಮನೆಯ ಅವಶೇಷದ ಸ್ಥಿತಿ ಕಲ್ಲೆದೆಯನ್ನು ಕರಗಿಸುತ್ತದೆ. ದನ, ಎಮ್ಮೆ, ಆಡು ಕುರಿ ಮೇಯಿಸುವವರ ನೆಚ್ಚಿನ ತಾಣವಿದು. ರಾಜಗೃಹ, ದೇವರಮನೆ, ಸಭಾಮಂದಿರ-ವಿಶ್ರಾಂತಿ ಕೋಣೆ ಮುಂತಾದ ಅರಮನೆಯ ಭಾಗಗಳು ಹೊಲಸಿನಿಂದಾವೃತವಾಗಿವೆ. ನಿಧಿ ಸಿಕ್ಕಿತೆಂಬ ದುರಾಲೋಚನೆಯಿಂದ ಸಿಕ್ಕಸಿಕ್ಕಲೆಲ್ಲಾ ನೆಲವನ್ನು ಅಗೆಯಲಾಗಿದೆ. ಹಾಗೆ ಚೆನ್ನಮ್ಮ ಬಳಸುತ್ತಿದ್ದ ಗುಪ್ತ ಬಾವಿಯೊಂದಿಗೆ ಇಲ್ಲಿರುವ ಬಾವಿಗಳೆಲ್ಲಾ ಹೊಲಸು ತುಂಬಿ ದುರ್ಗಂಧಮಯವಾಗಿವೆ. ಸುಮಾರು ೨೩ ಎಕರೆಯ ಕೋಟೆಯ ಪ್ರದೇಶದಲ್ಲಿ ಭಗ್ನಾವಶೇಷಗಳು ಸಾಕಷ್ಟಿವೆ. ಉತ್‌ಖನನ ನಡೆದರೆ ಸಾಕಷ್ಟು ಐತಿಹಾಸಿಕ ಅಂಶಗಳು ಬೆಳಕಿಗೆ ಬರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಈ ಕೋಟೆ ಅರಮನೆಯ ದುರವಸ್ಥೆಯ ಬಗ್ಗೆ ಹೇಳುತ್ತಾ ಹೋದರೆ ಅದು ಮುಗಿಯದ ಮಾತೆನಿಸುತ್ತದೆ. ಈ ನೆಲೆಗೆ ಇಂದು ಕಾಯಕಲ್ಪದ ಅಗತ್ಯತೆ ಬಹಳವಿದೆ.

○ ದ.ರಾ. ಪುರೋಹಿತ ಕಲಾದಗಿ

ಮಲಗುವ ಭಂಗಿಯಲ್ಲಿ ಮನುಜನ ಗುಣ

ವ್ಯಕ್ತಿಯೊಬ್ಬನ ನಿದ್ರಿಸುವ ವೈಖರಿಯನ್ನು ಆಧಾರವಾಗಿಟ್ಟುಕೊಂಡು ಅವನ ಗುಣ ಹಾಗೂ ವ್ಯಕ್ತಿತ್ವದ ಬಗ್ಗೆ ತಿಳಿಯಬಹುದು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ....ಪಕ್ಕಕ್ಕೆ ಮಲಗಿಯೋ, ಭೂಮಿಗಭಿಮುಖವಾಗಿಯೋ, ಆಕಾಶಾಭಿಮುಖವಾಗಿಯೋ.... ಹೀಗೆ ಹಲವು ಅವತಾರಗಳಲ್ಲಿ ಮಲಗುವುದನ್ನು ನಾವು ಕಾಣುತ್ತೇವೆ.

ಭೂಮಿಗಭಿಮುಖವಾಗಿ ಮಲಗಿರುವವರು ಎಷ್ಟೋ ಸಮಸ್ಯೆಗಳಿಗೆ ಬಲಿಯಾಗಿರುತ್ತಾರೆ. ಆರ್ಥಿಕವಾಗಿ ಕಷ್ಟದ ಸ್ಥಿತಿಯಲ್ಲಿರುವುದಲ್ಲದೆ, ವ್ಯಾಸಂಗದ ಕುರಿತು ಭಯಪಡುವುದೂ ಇಲ್ಲಿ ಮನಸ್ಸಲ್ಲಿ ವಿವಿಧ ಆಲೋಚನೆ ಅಡಕವಾಗಿರಬಹುದು. ಆದರೂ, ಇವರಿಗೆ ಅಧಿಕವಾಗಿ ಕಷ್ಟಪಡುವ ಗುಣವೂ ಇರುತ್ತದೆ. ಅತಿ ಸಣ್ಣ ವಿಷಯಕ್ಕೂ ಆಲೋಚಿಸುವ ವ್ಯಕ್ತಿತ್ವ ಇವರದಾಗಿರುತ್ತದೆ.

ಆಕಾಶಾಭಿಮುಖವಾಗಿ ಮಲಗುವವರಿಗೆ ಜೀವನದಲ್ಲಿ ಸಾಮಾನ್ಯವಾಗಿ ಕಷ್ಟಗಳೆದುರಾಗುವುದು ಕಡಿಮೆ. ''ನನ್ನ ಕರ್ತವ್ಯ ಮುಗಿಯಿತು'' ಅನ್ನೋ ರೀತಿಯಲ್ಲಿ ಇವರು ವ್ಯವಹರಿಸುವುದಲ್ಲದೆ, ಸಾಲ ಸೋಲುಗಳ ಸಮಸ್ಯೆಗಳಂತೂ ಕಡಿಮೆ. ಇವರು ತಮ್ಮ ಭವಿಷ್ಯ ಜೀವನದಲ್ಲಿ ಮಹಾನ್ ವ್ಯಕ್ತಿಯಾಗಿ ಮೆರೆಯುವರಲ್ಲದೆ ಅತಿಯಾಗಿ ಖರ್ಚುಮಾಡುವುದರಲ್ಲಿ ನಿಪುಣರಾಗಿರುತ್ತಾರೆ.

ಪಕ್ಕಕ್ಕೇ ಒರಗಿ ನಿದ್ರಿಸುವವರು, ಭವಿಷ್ಯತ್ ಕುರಿತು ಸದಾ ಆಲೋಚಿಸುತ್ತಾರಲ್ಲದೆ, ಪ್ರತಿ ಕೆಲಸ ಮಾಡುವ ಮುಂಚೆ ಆಲೋಚಿಸಿ ಮುನ್ನುಗ್ಗುತ್ತಾರೆ. ಜೀವನದಲ್ಲಿವರಿಗೆ ಕಷ್ಟ-ಸುಖ ಸಮಾನವಾಗಿರುತ್ತದೆ. ಹಣದ ವಿಷಯದಲ್ಲಿ ಅಕ್ಕ-ಪಕ್ಕ ಹಿಂದೆ-ಮುಂದೆ, ಮೇಲೆ-ಕೆಳಗೆ ನೋಡಿ ಖರ್ಚು ಮಾಡುವಷ್ಟು ಜಿಪುಣರು.

ಕೆಲವರು ಮಲಗುವಾಗ, ಕೈ-ಕಾಲುಗಳನ್ನು ಒಂದೆಡೆ ಮಡಚಿಕೊಂಡು ನಿದ್ರಿಸುತ್ತಾರೆ. ಇವರಲ್ಲಿ ಆಪತ್‌ಗಳಿಂದ ತಾವು ಮಾತ್ರ ಪಾರಾಗಬೇಕೆಂಬ ಸ್ವಾರ್ಥ ಭಾವನೆ ಇರುವುದಲ್ಲದೆ, ಸದಾ ಮಾನಸಿಕವಾಗಿ ಬಳಲುತ್ತಿರುತ್ತಾರೆ.

ಪದೇ ಪದೇ ಕಣ್ಣುಗಳನ್ನು ಉಜ್ಜಿಕೊಳ್ಳುತ್ತಾ ಮಲಗುವವರಿಗೆ ಭಯಾಂದೋಳನ ಇರುವುದಲ್ಲದೆ ನಿದ್ರೆ ವಿಪರೀತವಾಗಿರುತ್ತದೆ.

ಕೆಲವರು ನಿದ್ರಿಸುವಾಗ ಬೆರಳುಗಳನ್ನು ಮುರಿಯುತ್ತಿರುತ್ತಾರೆ. ಇಂತಹ ಜನ ಈಗೀಗ ಕಷ್ಟಗಳಿಂದ ಪಾರಾಗುತ್ತಿದ್ದಾರೆಂದು ಬಗೆಯಬೇಕು. ಕಷ್ಟಪಡುವ ತಾಳ್ಮೆ ಇವರಲ್ಲಿಲ್ಲದಿದ್ದರೂ ದೊಡ್ಡ ಕೆಲಸವಾದರೂ ನಿಧಾನವಾಗಿ ಮಾಡುತ್ತಿರುತ್ತಾರೆ.

ಕೆಲವರು ಅಂಗಾತವಾಗಿ ಮಲಗಿ ಎರಡು ಕೈಗಳನ್ನು ಹೊಟ್ಟೆ ಮೇಲೆ ಇಟ್ಟುಕೊಳ್ಳುತ್ತಾರೆ. ಇವರು ಸಾಧು ಸ್ವಭಾವಿಗಳಾಗಿರುವುದಲ್ಲದೆ ಜೀವನದಲ್ಲಿ ಎಲ್ಲರ ಮನ್ನಣೆಯನ್ನು ಗೆಲ್ಲುತ್ತಾರೆ. ಇವರು ಜೀವನದಲ್ಲಿ ದೈವಭಕ್ತರಾಗಿದ್ದು, ಎಷ್ಟೇ ಖರ್ಚು ಮಾಡಿದರೂ ಆಸ್ತಿ ಬರುತ್ತಲೇ ಇರುತ್ತದೆಯಲ್ಲದೆ ಇವರಿಗೆ ಯಾರೂ ಮೋಸ ಮಾಡುವುದಿಲ್ಲ.

ಕೈ ತಲೆಕೆಳಗಿಟ್ಟು, ಪಕ್ಕಕ್ಕೆ ಮಲಗುವವರು ಅತಿಯಾಗಿ ಖರ್ಚು ಮಾಡಿ ಪಶ್ಚಾತ್ತಾಪ ಪಡುವವರಲ್ಲದೆ ಜೀವನದಲ್ಲಿ ವಿವಿಧ ಪಾಠಗಳನ್ನು ಕಲಿಯುತ್ತಾರೆ. ಬೇರೊಬ್ಬರ ಬಳಿ ಸಾಲ ಪಡೆದರೂ, ನೀತಿ-ನಿಯತ್ತಿನೊಂದಿಗೆ ಹಿಂತಿರುಗಿಸುವ ಗುಣ ಇವರಲ್ಲಿರುತ್ತದೆ. ಇವರು ದಿನಂಪ್ರತಿ ಆಲೋಚನಾಪರರು.

ಕೆಲವರು ಮಲಗಿರುವಾಗ ಆಕಡೆ-ಈಕಡೆ ಉರುಳುತ್ತಿರುತ್ತಾರೆ. ಇವರು ಆಂದೋಳನಾಕಾರರಾಗಿರುವುದಲ್ಲದೆ, ಪ್ರತಿಯೊಂದು ಕೆಲಸವನ್ನೂ ಅತ್ಯವಸರದಿಂದ ಮಾಡುತ್ತಿರುತ್ತಾರೆ.

○ ಉತ್ತನೂರು ವ್ಯಾಸ್

ಕನಸಿನ ಹುಡುಗ ಪ್ರತ್ಯಕ್ಷನಾದರೆ?

ನಾನು ಹತ್ತೊಂಬತ್ತು ವರ್ಷದ ಬಿ.ಕಾಂ ಪದವೀಧರೆ. ನಾನು ನನ್ನ ಆರನೆಯ ವಯಸ್ಸಿನಿಂದಲೂ ಒಬ್ಬ ಹುಡುಗನನ್ನು ಆರಾಧಿಸುತ್ತಿದ್ದೇನೆ. ಒಂದು ರೀತಿ "Dream Boy". ಆದರೆ ಅವನು ಯಾರು? ಏನು ಮಾಡುತ್ತಿದ್ದಾನೆ? ಹೇಗಿದ್ದಾನೆ? ಹೆಸರು, ವಿಳಾಸ ಏನೂ ಗೊತ್ತಿಲ್ಲ. ಆದರೂ ಆತ ಚಿಕ್ಕ ವಯಸ್ಸಿನಿಂದಲೂ ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟಿದ್ದಾನೆ.

ನಾನು ನನ್ನ ಜೀವನವನ್ನು ಸಮಾಜ ಸೇವೆಗಾಗಿ ಮುಡುಪಾಗಿಟ್ಟಿದ್ದೇನೆ. ಹಾಗೂ ಮದುವೆಯಾಗಬಾರದೆಂದು ನಿರ್ಧರಿಸಿದ್ದೇನೆ. ನನ್ನ ಕನಸಿನ ಹುಡುಗ, ನನ್ನ ಪ್ರೀತಿಯ ಅಣ್ಣ ಮತ್ತು ಸ್ನೇಹಿತನಾಗಿದ್ದಾನೆ, ಯಾವಾಗಲೂ ನನ್ನ ಜೊತೆಯಲ್ಲಿಯೇ ಇದ್ದಾನೆ ಎನ್ನಿಸುತ್ತದೆ. ಒಂದು ವೇಳೆ ನನ್ನ ಕನಸಿನ ರೂಪ ಸಾಕಾರವಾಗಿ ಬಂದರೆ ಏನು ಮಾಡುವುದು ಮತ್ತು ನನ್ನ ಕನಸಿನ ಹುಡುಗ ನನಗೆ ಸಿಗುತ್ತಾನೆಯೇ? ಇದು ನನ್ನ ಭ್ರಮೆಯೇ? ನನ್ನ ಅಂತರಾತ್ಮ ಅವನು ಇದ್ದಾನೆ ಇದ್ದಾನೆ ಎಂದು ಸಾರಿ ಸಾರಿ ಹೇಳುತ್ತಿದೆ.

ಇದಕ್ಕೆ ನಿಮ್ಮ ಸಲಹೆಯನ್ನು ತಿಳಿಸಿ.

ಮನಿಲಾ, ಊರು ಬೇಡ

ಸಲಹೆ

ಎಲ್ಲರಿಗೂ ಕನಸಿನ ರಾಜ, ಕನಸಿನ ರಾಜಕುಮಾರಿಯರಿರುತ್ತಾರೆ. ಅವರೆಲ್ಲಾ ಸಾಕಾರವಾಗಿ ಕಣ್ಣ ಮುಂದೆ ಬಂದು ನಿಮ್ಮ ನಿಜ ಜೀವನದಲ್ಲಿ ಹಾಸುಹೊಕ್ಕಾಗಿ ಸೇರುವರೆಂದು ಹೇಳಲಾಗದು. ಕೆಲವರಿಗೆ ಅದೃಷ್ಟವಿದ್ದರೆ ಹಾಗೆಯೇ ಸುಮಾರು ೩೦%ರಿಂದ ೭೦% ಇರುವವರು ಸಿಕ್ಕಬಹುದು. ಕನಸುಗಳೆಲ್ಲಾ ನನಸಾಗದು. ಅಂತರಾತ್ಮದಲ್ಲಿ ಅವನು ಇದ್ದಾನೆ ಎನಿಸುತ್ತಿದ್ದರೆ, ನಿಮ್ಮ ಅಂತರಾತ್ಮ ಅಂತಹವನನ್ನು ಗುರುತಿಸಬಹುದು. ಆದರೆ ಅವನಿಗೂ ಕನಸುಗಳಿರುವುದಿಲ್ಲವೇ? ಅವನ ಕನಸಿನ ರಾಜಕುಮಾರಿ ನೀವೇ ಎಂದು ಹೇಗೆ ಹೇಳುವುದು. ಹರೆಯದಲ್ಲಿ ಮನಸ್ಸು ಹುಚ್ಚು ಕುದುರೆಯಂತೆ, ಕನಸು ಕಾಣುವುದು ತಪ್ಪಲ್ಲ. ಕನಸು ನನಸಾಗದಿದ್ದಾಗ ತೊಳಲಾಡುವುದು ಸರಿಯಲ್ಲ. ಕನಸಿನ ರಾಜಕುಮಾರನನ್ನು ಮನಸ್ಸಿನ ಭ್ರಮಾಲೋಕದಲ್ಲಿ ಭದ್ರವಾಗಿಟ್ಟುಕೊಳ್ಳಿ, ಸಿಗುವ ಒಳ್ಳೆಯ ಹುಡುಗನಲ್ಲಿ ಅವನನ್ನು ಹುಡುಕಿ ನಿಮ್ಮವನನ್ನಾಗಿಸಿಕೊಳ್ಳಿ.

ಮನದ ಮಾಲಿನ್ಯ ನಿವಾರಣೆ

ಮನಸ್ಸು ಪರಿಶುದ್ಧವಾದಷ್ಟೂ ಅದರ ನಿಗ್ರಹ ಸುಲಭ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

ಅಂದರೆ ಮನೋನಿಗ್ರಹ ಎನ್ನುವುದು ಮನಸ್ಸಿನ ಪರಿಶುದ್ಧತೆಯನ್ನು ಅವಲಂಬಿಸಿದೆ. ನಮ್ಮ ಮನಸ್ಸು ಮಲಿನವಾಗಿರುವುದರಿಂದಲೇ ನಾವು ಅದನ್ನು ವಶಪಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮನಸ್ಸು ಮತ್ತೆ ಮತ್ತೆ ಮಲಿನವಾಗುವಂತೆ ನಾವು ಬದುಕಿದರೆ ಅದೇ ಸ್ಥಿತಿಯಲ್ಲಿ ನಾವು ಎಷ್ಟು ಕಷ್ಟಪಟ್ಟರೂ ಮನದ ನಿಗ್ರಹ ಸಾಧ್ಯವಾಗುತ್ತಿಲ್ಲ. ಮನಸ್ಸಿನ ಮಾಲಿನ್ಯಗಳಾವುವುವೆಂದರೆ ಅಸೂಯೆ, ದ್ವೇಷ, ಕ್ರೋಧ, ಕಾಮ, ಲೋಭ ಇತ್ಯಾದಿಗಳು. ಈ ಮಾಲಿನ್ಯಗಳು ಅನುರಕ್ತ ಹಾಗೂ ಆಕರ್ಷಣೆಗಳ ಮೂಲಕ ಮನಸ್ಸನ್ನು ಪ್ರಕ್ಷುಬ್ಧಗೊಳಿಸುತ್ತವೆ. ಇದರಿಂದಾಗಿ ಮನಸ್ಸಿನ ಸಮತೂಕ ತಪ್ಪುತ್ತದೆ. ಹಾಗಾದರೆ ನನ್ನ ಪ್ರಶ್ನೆ ಹೀಗಿದೆ.

ಈ ಮಾಲಿನ್ಯಗಳನ್ನು ನಾವು ನಿವಾರಿಸುವುದು ಹೇಗೆ?

-ಅ.ಬ.ಕಾ.ಳ.

ಸಲಹೆ

ಮನದ ಮಾಲಿನ್ಯವನ್ನು ನಿವಾರಿಸಬೇಕಾದರೆ ಶಿಸ್ತಿನ ಜೀವನದ ದಾರಿ ಹಿಡಿಯಬೇಕು. ಮನಸ್ಸಿನ ಭಾವನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಮುಖ್ಯ. ಇಂದ್ರಿಯಗಳ ನಿಗ್ರಹ ಅತೀ ಮುಖ್ಯ. ಕೀಳು ಭಾವನೆಗಳನ್ನು ತೊಡೆದು ಹಾಕಿ ವಿಶಾಲ ದೃಷ್ಟಿ ಬೆಳೆಸಿಕೊಳ್ಳಬೇಕು. ಇತರರ ತಪ್ಪುಗಳನ್ನು ವಿಶಾಲ ಹೃದಯದಿಂದ ಕ್ಷಮಿಸಲು ಕಲಿಯಬೇಕು. ನೀವು ನಡೆವ ದಾರಿಯಲ್ಲಿ ನೀವು ಎಡವಿದರೆ ಮುಂದ ಎಡವದಂತೆ ಎಚ್ಚರ ವಹಿಸಬೇಕು. ಎಲ್ಲರೂ ನಿಮ್ಮಂತೆಯೇ, ನೀವೂ ಅವರಂತೆಯೇ ಎನ್ನುವ ವಿಚಾರ ಮನನ ಮಾಡಿಕೊಳ್ಳಬೇಕು. ಎಲ್ಲವನ್ನೂ ಮಾನವೀಯ ದೃಷ್ಟಿಯಿಂದ ನೋಡಿ ಮೊದಲು ಮಾನವನಾಗಬೇಕು.



○ ಉಷಾ ನವರತ್ನರಾಮ್

ಬ್ರಾಹ್ಮಣ ಹುಡುಗ, ಲಿಂಗಾಯತ ಹುಡುಗಿ

ನಾನು ೨೦ ವರ್ಷದ ಯುವತಿ. ಒಬ್ಬ ಹುಡುಗನನ್ನು ಪ್ರೀತಿಸುತ್ತಿದ್ದೇನೆ. ಅವನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದಾನೆ. ನಾವಿಬ್ಬರೂ ಮದುವೆಯಾಗಬೇಕೆಂದು ನಿರ್ಧಾರ ಮಾಡಿದ್ದೇವೆ. ಆದರೆ ನಮ್ಮಿಬ್ಬರದು ಈಗ ತಾನೆ B.A. ಮುಗಿದಿದೆ. ಅವನು L.L.B. ಓದಲು ಹುಬ್ಬಳ್ಳಿಗೆ ಹೋಗಿದ್ದಾನೆ. ಅವನು ಬರುವವರೆಗೆ ನಮ್ಮ ಮನೆಯಲ್ಲಿ ಕಾಯುವುದಿಲ್ಲ. ನಮ್ಮ ತಂದೆಯವರು ತುಂಬಾ ಸಿಟ್ಟಿನ ಸ್ವಭಾವದವರಾಗಿರುವದರಿಂದ ಅವರಲ್ಲಿ ಹೇಳಲು ಧೈರ್ಯ ಆಗುತ್ತಿಲ್ಲ. ನಮ್ಮಿಬ್ಬರ ಜಾತಿ ಬೇರೆ ಬೇರೆಯಾಗಿದೆ. ಅವನು ಬ್ರಾಹ್ಮಣ, ನಾನು ವೀರಶೈವಳು. ಆದರೆ ನನಗೆ ಅವನನ್ನು ಬಿಟ್ಟು ಬಾಳಲು ಆಗುತ್ತಿಲ್ಲ. ನಾವು ಈಗಲೇ ರಿಜಿಸ್ಟರ್ಡ್ ಮದುವೆ ಆಗಬೇಕೆಂದರೆ ಸ್ವಂತ ಸಂಪಾದನೆಯೂ ಇಲ್ಲ. ಆಕಸ್ಮಾತ್ ಈ ಮದುವೆ ಆಗದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿರುವೆ. ನಾನು ಬೇರೆ ಮದುವೆಯಾದರೆ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೆದರಿಸುತ್ತಿದ್ದಾನೆ. ಇದಕ್ಕೆ ಸರಿಯಾದ ಪರಿಹಾರ ಸೂಚಿಸಿ.

ಎಂ.ಟಿ., ಊರು ಬೇಡ

ಸಲಹೆ

ಪ್ರೀತಿ, ಪ್ರೇಮಗಳ ನಡುವೆ ಜಾತಿ, ವಯಸ್ಸು, ವರ್ಣ ಯಾವುದೂ ಬರಬಾರದು. ನಿಮ್ಮ ತಂದೆಯವರನ್ನು ಒಪ್ಪಿಸುವ ಭಾರ ನಿಮ್ಮದು. ನಿಮ್ಮಿಬ್ಬರ ಪ್ರೀತಿ ಎಷ್ಟು ಆಳವಾಗಿದೆಯೆಂದು ನೀವು ಅವರಿಗೆ ಮನನ ಮಾಡಬೇಕು. ನೀವು ಮೆಜಾರಿಟಿಗೆ ಬಂದಿರುವುದರಿಂದ ಕಡ್ಡಾಯವಾಗಿ ನೀವು ಬೇರೆ ಹುಡುಗನನ್ನು ಮದುವೆಯಾಗಲು ಯಾರೂ ಒತ್ತಾಯ ಪಡಿಸುವಂತಿಲ್ಲ. ಅದು ಕಾನೂನು ಬಾಹಿರ. ಪ್ರೀತಿಯ ಸುಳಿಗೆ ಸಿಕ್ಕಿ ಕೊಚ್ಚಿ ಹೋಗುವ ಮುಂಚೆ ನೀವಿಬ್ಬರೂ ಆಳವಾಗಿ ಆಲೋಚಿಸಬೇಕಿತ್ತು. ಈಗಲೂ ಸಮಯ ಮೀರಿಲ್ಲ. ನೀವು ಎಲ್ಲಾದರೂ ಉದ್ಯೋಗ ಹಿಡಿಯಿರಿ. ಹುಡುಗನೂ ಉದ್ಯೋಗ ಹಿಡಿಯಲಿ. ಉದ್ಯೋಗ,ಸಂಪಾದನೆಯಿಲ್ಲದೇ ನೆಮ್ಮದಿಯ ಬದುಕು ಕಷ್ಟ. ನೆಮ್ಮದಿ ಹಾಳಾದರೆ ಪ್ರೀತಿಗೂ ಪೆಟ್ಟು, ಆತ್ಮಹತ್ಯೆಯ ವಿಷಯ ಯೋಚಿಸಬೇಡಿ. ಅದು ಹೇಡಿತನ. ನಿಮ್ಮಿಬ್ಬರಿಗೂ ಆಪ್ತರಾದವರ ಸಲಹೆ, ಮಾರ್ಗದರ್ಶನವನ್ನು ಪಡೆಯಿರಿ.

ಒಡೆದ ಕೈಕಾಲು

ನಾನು ಹದಿನಾರು ವರ್ಷದ ಯುವತಿ. ನನ್ನ ಕಾಲು, ಕೈಗಳು ವರ್ಷದ ಹನ್ನೆರಡು ತಿಂಗಳೂ ಒಡೆದಿರುತ್ತವೆ. (ಬಿರುಕು ಬಿಟ್ಟಿರುತ್ತವೆ).

ಇದಕ್ಕಾಗಿ ನನಗೆ ಪರಿಹಾರ ತಿಳಿಸಿ.

ಹೆಸರು ಬೇಡ, ಗುಳೇದಗುಡ್ಡ


ಸಲಹೆ

ನಿಮ್ಮದು ಶುಷ್ಕ ಚರ್ಮವಿರಬೇಕು. ಇದಕ್ಕೆ ಪರಿಹಾರ ಪ್ರತಿದಿನ ಸ್ನಾನ ಮಾಡಿದ ನಂತರ ಮೈ, ಕೈ ಮುಖಕ್ಕೆ ಯಾವುದಾದರೂ ಕ್ರೀಂ ಹಚ್ಚಿ. ಪ್ರತಿವಾರ ಎಣ್ಣೆ ಸ್ನಾನ ಮಾಡಿ. ಸ್ನಾನ ಮಾಡಿದ ನಂತರ ಒರೆಸದೇ ಹಾಗೇ ಆರಲು ಬಿಡಿ. ಯಥೇಚ್ಛವಾಗಿ ನೀರು, ಪಾನೀಯಗಳನ್ನು ಕುಡಿಯಿರಿ. ಹಸಿಯಾದ ತರಕಾರಿ, ಕಾಳು ಸೇವಿಸಿ. ತಲೆಕೂದಲಿಗೆ ಹೊಟ್ಟು ಹಗರು ಬಾರದಂತೆ ಎಚ್ಚರವಹಿಸಿ. ಮೈಯನ್ನು ಬಿಸಿಲಿಗೆ ಒಡ್ಡಬೇಡಿ. ಮೈತುಂಬಾ ಬಟ್ಟೆ ಧರಿಸಿ ಚೆನ್ನಾಗಿ ವ್ಯಾಯಾಮ ಮಾಡಿ. ಮಲಬದ್ಧತೆಯಾಗದಂತೆ ಎಚ್ಚರವಹಿಸಿ. ರಕ್ತಹೀನತೆ ಯಿದ್ದರೆ ಸರಿಪಡಿಸಿಕೊಳ್ಳಿ.

ಮನೆಬಿಟ್ಟು ದೂರಹೋಗಬೇಕೆಂದಿರುವೆ

ನಾನು ೩೩ ವರ್ಷದ ನಿರುದ್ಯೋಗಿ ಪದವೀಧರ. ಬಡತನದಲ್ಲಿ ಹುಟ್ಟಿ ಕಷ್ಟದಲ್ಲಿ ಬೆಳೆದವ. ಜೀವನದ ಬಗ್ಗೆ ತುಂಬ ತಿಳಿದವನಾಗಿದ್ದು, ೧೯೯೧-೯೨ರಲ್ಲಿ B.A., B.Ed. ಮುಗಿಸಿ ಅನುದಾನ ರಹಿತ ಶಾಲೆಯಲ್ಲಿ ೩-೪ ವರ್ಷ ಪಾಠ ಹೇಳಿದೆ. ಯಾವುದೇ ಪರಿಹಾರ ಸಿಗಲಿಲ್ಲ. ೯೬-೯೭ರಲ್ಲಿ ಒಬ್ಬ ಹೆಣ್ಣಿನ ತಂದೆಯವರು ನೌಕರಿ ಕೊಡಿಸುವೆನೆಂದು ಹೇಳಿ ನನಗೆ ಮದುವೆ ಮಾಡಿದರು. ನಾನು ಒಪ್ಪಿ ಮದುವೆಯಾದೆ. ಒಂದು ಶಾಲೆಯಲ್ಲಿ ಕೆಲಸಕ್ಕೆ ಸೇರಿಸಿದರೂ, ೬-೭ ತಿಂಗಳು ಫ್ರೀ ಆಗಿ ಕೆಲಸ ಮಾಡಿದೆ. ಮೊದಲ ತಿಂಗಳಿಂದಲೇ ನಿಮಗೆ ಪಗಾರ ಬಿಡುಗಡೆ ಮಾಡುತ್ತೇವೆಂದು ಹೇಳಿ, ಇದುವರೆಗೂ ಮಾಡಿಲ್ಲ. ನನ್ನ ಸೀಟು approve ಆಗಿಲ್ಲ ಅಂತ ಕೆಲ ಶಿಕ್ಷಕರು ಹೇಳಿ ನನ್ನ ಮನಸ್ಸನ್ನು ನೋಯಿಸಿದ್ದಾರೆ. ಆದರೆ ಈಗ ಏನು ಮಾಡಬೇಕೆಂಬುದು ತಿಳಿಯದಾಗಿದೆ. ಕಾರ್ಯದರ್ಶಿಯನ್ನು ಕೇಳಿದರೆ ಈ ತಿಂಗಳು ಮುಂದಿನ ತಿಂಗಳು ಅಂತ ಸುಳ್ಳು ಹೇಳುತ್ತಾ ಇದ್ದಾನೆ. ಆದುದರಿಂದ ನಾನು ಬೇಜಾರಾಗಿ ಮನೆ ಬಿಟ್ಟು ಎಲ್ಲಿಯಾದರೂ ಸುಖ ಜೀವನ ನಡೆಸಬೇಕೆಂದಿದ್ದೇನೆ. ಅದಕ್ಕೆ ನಿಮ್ಮ ಸಲಹೆ ಏನು? ದಯವಿಟ್ಟು ತಿಳಿಸಿರಿ.

ಹೆಸರು, ಊರು ಬೇಡ



ಸಲಹೆ

ನಿರುದ್ಯೋಗ ನಮ್ಮ ದೇಶದಲ್ಲಿನ ಬಹಳ ದೊಡ್ಡ ಸಮಸ್ಯೆ. ನಿಮ್ಮ ಬಗ್ಗೆ ಅನುಕಂಪ ಪಡಬೇಕಾದದ್ದೇ. ಕೆಲಸ ಕೊಡಿಸುವ ಆಸೆಯೊಡ್ಡಿದಾಗ ಮದುವೆಯಾಗಿ ತಪ್ಪು ಮಾಡಿದ್ದೀರಿ. ನಿಮ್ಮ ಕಷ್ಟದಲ್ಲಿ, ನಿಮ್ಮ ಕಾಲಿನ ಮೇಲೆ ನೀವು ನಿಲ್ಲಲಾಗದ ಸ್ಥಿತಿಯಲ್ಲಿ ಒಂದು ಹೆಣ್ಣಿನ ಕೈಹಿಡಿದು ಅವಳನ್ನು ಕಷ್ಟಕ್ಕೆ ಸಿಲುಕಿಸಿದ್ದೀರಿ. ನೀವು ಬಿ.ಎಡ್. ಮಾಡಿರುವಿರಿ. ನೀವೇ ಏಕೆ ಟ್ಯೂಷನ್ ಹೇಳುವುದಾಗಲೀ ಟ್ಯುಟೋರಿಯಲ್‌ನ ತೆಗೆಯುವುದಾಗಲಿ ಮಾಡಬಾರದು? ಮನೆ-ಪಾಠಗಳನ್ನು ಹೇಳಬಹುದು. ಒಂದು ಸಣ್ಣ ಪ್ರೈಮರಿ ಶಾಲೆ ತೆಗೆಯಬಹುದು. ನಿಮ್ಮ ಹೆಂಡತಿಯನ್ನು ಈ ಕೆಲಸದಲ್ಲಿ ತೊಡಗಿಸಿಕೊಳ್ಳಿ. ಈಗಿನ ಕಾಲದಲ್ಲಿ, ಪ್ಲೇ ಹೋಂಗಳು ಬೇಕಾದಷ್ಟು ಸಂಪಾದಿಸುತ್ತಿವೆ. ಪ್ರೈವೇಟ್ ಟ್ಯೂಷನ್ ಹೇಳಿ ಕೈತುಂಬಾ ಸಂಪಾದಿಸುವವರಿದ್ದಾರೆ. ಮನೆ ಬಿಟ್ಟು ಹೋಗುವ ಬದಲು ನೀವೇ ನಿಮ್ಮ ಭವಿಷ್ಯ ರೂಪಿಸಿಕೊಳ್ಳಲು ಯತ್ನಿಸಿ. ಗಾಡ್ ಹೆಲ್ಪ್ಸ್ ದೋಸ್ ಹೂ ಹೆಲ್ಪ್ ದೆಮ್‌ಸೆಲ್ವ್ಸ್ ಎಂಬ ಆಂಗ್ಲ ನಾಣ್ಣುಡಿಯಿದೆ. ಅಂತೆಯೇ ನೀವೇ ರೂಪಿಸಿಕೊಳ್ಳುವ ಬದುಕು ಉತ್ತಮ ತರವಾದುದಾಗಬಹುದು.

ಬಡಕಲು ದೇಹ

ನನಗೀಗ ೨೪ ವರ್ಷ ವಯಸ್ಸು. ನನ್ನ ತೂಕ ೪೪ ಕೆ.ಜಿ. ನಾನೀಗ ತುಂಬಾ ಅಶಕ್ತನಾಗಿದ್ದೇನೆ ಎಂದೆನಿಸುತ್ತದೆ. ನಾನು ಚಿಕ್ಕಂದಿನಿಂದಲೂ ತೆಳ್ಳಗೆ ಇದ್ದು, ಎಲ್ಲರೂ ನನ್ನ ಕಂಡ ತಕ್ಷಣ "ಎಷ್ಟು ತೆಳ್ಳಗಾಗಿದ್ದಿಯಲ್ಲಾ?" ಎಂದು ಕೇಳುತ್ತಾರೆ. ಎಲ್‌ಎಲ್‌ಬಿ ಅಂತಿಮ ವರ್ಷದಲ್ಲಿ ಓದುತ್ತಿರುವ ನನಗೆ ಇದರ ಬಗೆಗೆ ತುಂಬಾ ಚಿಂತೆಯಾಗಿಬಿಟ್ಟಿದೆ.

ಸದ್ಯ ನಾನು ೩೦ ನಿಮಿಷಗಳ ಲಘು ವ್ಯಾಯಾಮ ಮಾಡುತ್ತೇನೆ. ಮುಖ್ಯವಾಗಿ ನಾನು ಸದೃಢವಾಗಿ ಬೆಳೆಯಲು ಮಾಡಬೇಕಾದುದಾದರೂ ಏನು? ಎಂಬುದನ್ನು ನನಗೆ ತಿಳಿಸಿರಿ.

ಹೆಸರು, ಊರು ಬೇಡ

ಸಲಹೆ

ತೂಕ ಹೆಚ್ಚಿಸಿಕೊಳ್ಳಲು ಪೌಷ್ಟಿಕ ಆಹಾರ, ವ್ಯಾಯಾಮ, ಶಿಸ್ತಿನ ಜೀವನ ಬಹಳ ಮುಖ್ಯ. ನೀವು ನಿಮ್ಮ ಎತ್ತರ ತಿಳಿಸಿಲ್ಲ. ನೀವು ಆರೋಗ್ಯವಾಗಿದ್ದು, ಶಕ್ತಿವಂತರಾಗಿದ್ದರೆ ತೆಳ್ಳಗಿದ್ದರೂ ಸರಿ ತೂಕ ಹೆಚ್ಚಿಸಿಕೊಂಡು ಅನಾರೋಗ್ಯ ಕಾಡುವಂತೆ ಮಾಡಿಕೊಳ್ಳಬೇಡಿ. ತೂಕ ಹೆಚ್ಚಾದರೆ ಹೃದಯ ಸಂಬಂಧದ ಕಾಯಿಲೆಗಳು ಬರುತ್ತವೆ. ಮಧುಮೇಹ ಕಾಡಬಹುದು. ನೀವು ಹದಿಹರೆಯದಿಂದಲೇ ದೇಹದ ಬೆಳವಣಿಗೆಯತ್ತ ಗಮನ ಹರಿಸಬೇಕಿತ್ತು. ಸ್ನಾಯುಗಳು ಸದೃಢಗೊಳ್ಳಲು ಯಾವುದಾದರೂ 'ಜಿಮ್' (Gym)ಗೆ ಸೇರಿ ಸೂಕ್ತ ಮಾರ್ಗದರ್ಶನದೊಂದಿಗೆ ದೃಢಕಾಯರಾಗಬಹುದು. ಒಳ್ಳೆಯ ಪೌಷ್ಟಿಕ ಆಹಾರ ಸೇವಿಸಿ. ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳಿ, ಉಲ್ಲಸಿತರಾಗಿರಿ. ಒತ್ತಡಗಳಿಗೆ ಮಣಿಯಬೇಡಿ.

ಮಿಡಿ ಹಾಕಿಕೊಳ್ಳುವ ಆಸೆ

೧. ನಾನು ೧೫ ವರ್ಷದ ಯುವತಿ. ನನಗೆ ಹೊಟ್ಟೆ ದಪ್ಪಗೆ ಇದೆ ಮತ್ತು ಕಾಲುಗಳು ಕೂಡ ದಪ್ಪಗಾಗಿವೆ. ನಾನು ಸ್ವಲ್ಪ ಗಿಡ್ಡಗಿದ್ದೇನೆ. ನಾನು ಅಷ್ಟೇನು ದಪ್ಪ ಇಲ್ಲ, ಮೀಡಿಯಮ್ ಇದ್ದೇನೆ. ನನಗೆ ಚೂಡಿ ಮತ್ತು ಮಿಡಿ ಹಾಕಿಕೊಳ್ಳಲು ಇಷ್ಟ. ಆದರೆ ನನಗೆ ಚಂದ ಕಾಣಿಸುವುದಿಲ್ಲ. ಇದಕ್ಕೆ ಪರಿಹಾರ ಕೊಡಿ.

೨. ನಮ್ಮ ತಾಯಿಯವರಿಗೆ ಮುಟ್ಟು ಆದ ಎರಡು ದಿನಕ್ಕೆ ಬಹಳ ಹೊಟ್ಟೆ ನೋಯುತ್ತದೆಯಂತೆ. ಎಷ್ಟು ವೈದ್ಯರ ಬಳಿ ತೋರಿಸಿದರೂ ಕಡಿಮೆಯಾಗಿಲ್ಲ. ಹಾಗೆ ಆದಾಗ ಉರುಳಾಡುವ ಹಾಗೆ ಆಗುತ್ತದೆಯಂತೆ. ಇದಕ್ಕೆ ತಾವು ಪರಿಹಾರ ಕೊಡಿರಿ.

ಹೆಸರು ಮತ್ತು ಊರು ಬೇಡ

ಸಲಹೆ

ಇದಕ್ಕೆ ಪರಿಹಾರವೆಂದರೆ ನೀವು ತೆಳ್ಳಗಾಗಬೇಕು. ನಿಮ್ಮ ಎತ್ತರಕ್ಕೆ ತಕ್ಕಷ್ಟು ದಪ್ಪ ಇದ್ದರೆ ಸಾಕು. ತೂಕ ಹೆಚ್ಚಿರುವವರಿಗೆ ಸೀರೆಯೂ ಅಂದವಾಗಿ ಕಾಣುವುದಿಲ್ಲ. ಪಥ್ಯದ ಆಹಾರ ಸೇವಿಸಿ. ಕೊಬ್ಬು ಕಡಿಮೆ ಬಳಸಿ. ಸಾಕಷ್ಟು ವ್ಯಾಯಾಮ ಮಾಡಿ. ವಾಕಿಂಗ್, ಜಾಗಿಂಗ್, ಸ್ಕಿಪ್ಪಿಂಗ್ ಮಾಡಿ. ಆಲಸಿಕೆ, ಸೋಮಾರಿತನವಿದ್ದರೆ ಅವುಗಳನ್ನು ದೂರವಿಡಿ. ಯಾವಾಗಲೂ ಚಟುವಟಿಕೆಯಿಂದಿರಿ. ತಜ್ಞ ಡಯಟಿಷಿಯನ್ ಒಬ್ಬರನ್ನು ಸಂಪರ್ಕಿಸಿ ತೂಕ ಕಡಿಮೆ ಮಾಡಿಕೊಳ್ಳಿ.

ನಿಮ್ಮ ತಾಯಿಯ ತೊಂದರೆಗೆ ನೀವು ಯಾವುದಾದರೂ ಸ್ತ್ರೀತಜ್ಞ ವೈದ್ಯರನ್ನು ಸಂಪರ್ಕಿಸಿ ಪೂರಾ ತಪಾಸಣೆ ಮಾಡಿಸಿ. ಹಾಗೆಲ್ಲಾ ಪತ್ರದಲ್ಲಿ ಬರೆದು ಹೇಳುವ ಸಮಾಧಾನದಿಂದ ಅದು ಪರಿಹಾರವಾಗುವುದಲ್ಲ. ವಿಜ್ಞಾನ, ವೈದ್ಯಕೀಯ ಪರಿಣತಿ ಬಹಳ ಬೆಳೆದಿದೆ. ಅದು ಕಂಡುಹಿಡಿಯದಿರುವುದೇ ಇಲ್ಲ. ಎಲ್ಲಕ್ಕೂ ತಾಳ್ಮೆ ಸಹನೆ ಮುಖ್ಯ. ಒಳ್ಳೆಯ ತಜ್ಞ ಚಿಕಿತ್ಸೆಯಿಂದ ತೊಂದರೆ ನಿವಾರಣೆಯಾಗಬಹುದು.

ವಿದ್ಯೋದ್ಯೋಗ

ಎಂ.ಬಿ.ಎ. : ಸಂಪೂರ್ಣ ವಿವರ

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐ.ಐ.ಎಂ.)ಗಳು ಭಾರತ ಸರಕಾರದಿಂದ ಸ್ಥಾಪಿಸಲ್ಪಟ್ಟಿವೆ. **ಐ.ಐ.ಎಂ. ಕಲ್ಕತ್ತ** ೧೯೬೧ರಲ್ಲಿ Massachnsetts Institute of Technology (MIT) ಸಹಯೋಗದೊಡನೆ ಸ್ಥಾಪಿಸಲ್ಪಟ್ಟಿದ್ದರೆ, **ಐ.ಐ.ಎಂ. ಅಹ್ಮದಾಬಾದ್** ೧೯೬೨ರಲ್ಲಿ Harvard Business School ಸಹಯೋಗದೊಡನೆ ಸ್ಥಾಪಿಸಲ್ಪಟ್ಟಿತು. ಹಾಗೇ **ಐ.ಐ.ಎಂ. ಬೆಂಗಳೂರು** ೧೯೭೩ರಲ್ಲಿ ಯಾರ ಸಹಯೋಗವಿಲ್ಲದೆ ಸ್ವತಂತ್ರವಾಗಿ ಸ್ಥಾಪಿಸಲ್ಪಟ್ಟಿತು. ಮುಂದೆ **ಐ.ಐ.ಎಂ. ಲಕ್ನೋ** ಹಾಗೂ ಕಳೆದ ವರ್ಷ ಅಂದರೆ ೧೯೯೬ರಲ್ಲಿ **ಐ.ಐ.ಎಂ. ಇಂದೂರು** ಮತ್ತು **ಐ.ಐ.ಎಂ. ಕೋಳಿಕೊಡು** ಸ್ಥಾಪನೆಯಾದವು.

ನಮ್ಮ ದೇಶದಲ್ಲಿ ಮ್ಯಾನೇಜ್‌ಮೆಂಟ್ ವಿದ್ಯಾಭ್ಯಾಸವನ್ನು ವೃದ್ಧಿಗೊಳಿಸಲೆಂದೇ ಈ ಸಂಸ್ಥೆಗಳನ್ನು ಪ್ರತ್ಯೇಕವಾಗಿ ಸ್ಥಾಪಿಸಿದ್ದಾರೆ. ಐ.ಐ.ಎಂ.ಗಳಲ್ಲಿ ಪೂರ್ಣ ವೇಳೆಯ ೨ ವರ್ಷದ Post Graduate Diploma in Management (PGDM)ಗಳ ವ್ಯಾಸಂಗ ಕ್ರಮವನ್ನು ನಡೆಸುತ್ತಾರೆ. ಇವು ನಮ್ಮ ದೇಶದಲ್ಲಿ ಹಾಗು ಬೇರೆ ದೇಶಗಳಲ್ಲಿ ನಡೆಸುವ ಎಂ.ಬಿ.ಎ.ಗಳಿಗೆ ಸರಿ ಸಮಾನವೆಂದು ಪರಿಗಣಿಸಲ್ಪಟ್ಟಿವೆ. ಐ.ಐ.ಎಂ.ಗಳು ಪಿ.ಜಿ.ಡಿ.ಎಂ. ಅಲ್ಲದೆ ಫೆಲೊ ಪ್ರೋಗ್ರಾಮ್ (Fellow Programme)ಗಳನ್ನು ಸಹ ನಡೆಸುತ್ತವೆ. ಇವು ವಿಶ್ವವಿದ್ಯಾಲಯಗಳು ವ್ಯಾವಹಾರಿಕ ಶಿಕ್ಷಣದಲ್ಲಿ ಕೊಡುವ Ph.Dಗಳಿಗೆ ಸರಿ ಸಮಾನ.

ಐ.ಐ.ಎಂ.ಗಳಲ್ಲಿ ದೊರೆಯುವ ಸೌಲಭ್ಯಗಳು ಹಾಗು ಸೌಕರ್ಯಗಳು ಅಪಾರ. ಸೌಲಭ್ಯಗಳನ್ನು ಒದಗಿಸಲು ಭಾರಿ ಮೊತ್ತದ ಬಂಡವಾಳ ತೊಡಗಿಸಿದ್ದಾರೆ. ಅಲ್ಲಿ ದೊರೆಯುವ ಸೌಲಭ್ಯಗಳು ಹಾಗು ಸಮರ್ಥ ಅಧ್ಯಾಪಕ ಸಿಬ್ಬಂದಿಯು ನಮ್ಮ ದೇಶದ ಮತ್ತೆ ಬೇರಾವ ಸಂಸ್ಥೆಯಲ್ಲೂ ಸರಿ

> ನವೆಂಬರ್ ಸಂಚಿಕೆಯಲ್ಲಿ ಎಂ.ಬಿ.ಎ. ಕುರಿತ ಪ್ರಾಥಮಿಕ ವಿವರಗಳನ್ನು ನೀಡಿ ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು ಮಾಹಿತಿ ಒದಗಿಸುವುದಾಗಿ ತಿಳಿಸಲಾಗಿತ್ತು. ಮಾಹಿತಿ ಸಂಗ್ರಹಿಸಲು ತುಸು ವಿಳಂಬವಾದ್ದರಿಂದ ಈ ಸಂಚಿಕೆಯಲ್ಲಿ ಆ ಭರವಸೆ ಈಡೇರಿಸುತ್ತಿದ್ದೇವೆ. ಆಂಧ್ರ ಬ್ಯಾಂಕ್‌ನಲ್ಲಿ ಹಿರಿಯ ಮ್ಯಾನೇಜರ್ ಆಗಿರುವ ಎಂ.ಬಿ.ಎ. ಪದವೀಧರ **ಮಹಾದೇವಪ್ಪ ಆವಿನ** ಅವರು ಶ್ರಮವಹಿಸಿ ಸಿದ್ಧಪಡಿಸಿರುವ ಲೇಖನವಿದು.

ಸಮಾನವಾಗಿ ದೊರೆಯಲಿಕ್ಕಿಲ್ಲ. ಇಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಅತಿ ಮೇಲ್ದರ್ಜೆಯ ಬೋಧನಾ ಪ್ರಯೋಜನ ಹಾಗೂ ವ್ಯಾಪಕವಾದ ವಿವಿಧ ವಿಷಯಗಳ ಆಯ್ಕೆ ಲಭ್ಯವಿದೆ. ಭಾರಿ ಗ್ರಂಥಾಲಯಗಳ ಕಂಪ್ಯೂಟರ್‌ಗಳ ಸೌಲಭ್ಯಗಳು ದೊರೆಯುತ್ತವೆ. ಹೆಚ್ಚಿನ ಐ.ಐ.ಎಂ.ಗಳು

○ ಮಹಾದೇವಪ್ಪ ಆವಿನ

ಸುಂದರವಾದ ಹಾಗೂ ದೊಡ್ಡ Campusಗಳನ್ನು ಹೊಂದಿವೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಹೊಂದಿವೆ. ಐ.ಐ.ಎಂ.ಗಳು ಅನೇಕ ಭಾರೀ ಹಾಗು ಮಧ್ಯಮ ಉದ್ದಿಮೆಗಳೊಡನೆ ಸಂಬಂಧ ಹೊಂದಿವೆ. ಇದರಿಂದ ವಿದ್ಯಾರ್ಥಿಗಳು ಯೋಜನಾ ಪರಿಕಲ್ಪನೆ ಹಾಗು ಉದ್ಯೋಗ ನೇಮಕ ಸೌಕರ್ಯಗಳನ್ನು ಸುಲಭವಾಗಿ ಗಳಿಸಬಹುದು. ಇವುಗಳಲ್ಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ವಿದ್ಯಾರ್ಥಿಗಳು ತಮ್ಮ ಅಭ್ಯಾಸದ ಎರಡನೇ ವರ್ಷದಲ್ಲಿ ತಮಗೆ ಬೇಕಾದ ಹಾಗು ಅಭಿರುಚಿಯುಳ್ಳ ಯಾವುದೇ ವಿಷಯಗಳನ್ನು ಆರಿಸಿಕೊಂಡು ವಿಶೇಷ ಪರಿಣತಿಗೆ (Specialisation) ಅಧ್ಯಯನ ನಡೆಸಬಹುದು. ಈ ಸೌಲಭ್ಯ ಬೇರಾವ ಸಂಸ್ಥೆಗಳಲ್ಲೂ ದೊರೆಯಲಿಕ್ಕಿಲ್ಲ.


ಅರ್ಜಿ ಯಾವಾಗ ಸಲ್ಲಿಸಬೇಕು?

ಐ.ಐ.ಎಂ.ಗಳಿಗೆ ಸೇರಿಕೊಳ್ಳಲು ಎಲ್ಲಾ ಆರು ಐ.ಐ.ಎಂ.ಗಳು ಸೇರಿ ನಡೆಸುವ Common Admission Test (CAT)ನಲ್ಲಿ ಉತ್ತೀರ್ಣರಾಗಬೇಕು. ಅದಕ್ಕೆ ಅರ್ಜಿಗಳನ್ನು ಸಾಮಾನ್ಯವಾಗಿ ಆಗಸ್ಟ್ ತಿಂಗಳ ಕೊನೆಯಲ್ಲಿ ಅಥವಾ ಸೆಪ್ಟೆಂಬರ ತಿಂಗಳ ಮಧ್ಯದೊಳಗೆ ಕರೆಯುತ್ತಾರೆ. ಅದರ ಜಾಹೀರಾತು ಸಾಮಾನ್ಯವಾಗಿ ರಾಷ್ಟ್ರಮಟ್ಟದ ಎಲ್ಲಾ ದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತದೆ.

ಅರ್ಜಿಗಳನ್ನು ನಿಗದಿಪಡಿಸಿದ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಗಳಲ್ಲಿ ರೂ ೬೦೦ (ಎಸ್.ಸಿ., ಎಸ್.ಟಿ. ಅಭ್ಯರ್ಥಿಗಳಿಗೆ ರೂ. ೩೦೦) ಭರ್ತಿ ಮಾಡಿ ಪಡೆಯಬೇಕು. ಸ್ಟೇಟ್ ಬ್ಯಾಂಕ್ ಶಾಖೆ ಇಲ್ಲದ ಸ್ಥಳದವರು ಹಾಗು ಕೆಲವು ವಿಶೇಷ ಸಂದರ್ಭಗಳಲ್ಲಿ ಅರ್ಜಿಗಳನ್ನು ನಿಗದಿಪಡಿಸಿದ ಐ.ಐ.ಎಂ.ಗಳಿಂದ ಡಿ.ಡಿ.ಮೂಲಕ ಹಣ ಕಳಿಸಿ ತರಿಸಿಕೊಳ್ಳಬಹುದು.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಎಲ್ಲಾ ಐ.ಐ.ಎಂ.ಗಳಿಗೂ ಸೇರಿ ಒಂದೇ ಸಿ.ಎ.ಟಿ. ನಡೆಸುವುದರಿಂದ ಒಂದೇ ಅರ್ಜಿಯನ್ನು ಖರೀದಿಸಬೇಕು. ಆ ಅರ್ಜಿಯ ಜೊತೆ ಎಲ್ಲಾ ಮಾಹಿತಿಯನ್ನು ತಿಳಿಸುವ ಒಂದು ಪ್ರಕಟಣ ಪುಸ್ತಕವು (Bulletin) ಸಹ ಇರುತ್ತದೆ.

ಪೂರ್ಣಗೊಳಿಸಿದ ಅರ್ಜಿ ಸಲ್ಲಿಸಲು ಅಕ್ಟೋಬರ್ ತಿಂಗಳು ಕೊನೆ. ಸಿ.ಎ.ಟಿ. ಪರೀಕ್ಷೆಯನ್ನು ಸಾಮಾನ್ಯವಾಗಿ ಡಿಸೆಂಬರ್ ತಿಂಗಳ ಎರಡನೇ ಭಾನುವಾರ ನಡೆಸುತ್ತಾರೆ. ಪರೀಕ್ಷೆಯನ್ನು ಇಡೀ ರಾಷ್ಟ್ರದ ಸುಮಾರು ೨೦



ಮುಖ್ಯ ಕೇಂದ್ರಗಳಲ್ಲಿ ನಡೆಸುತ್ತಾರೆ. ಕೇಂದ್ರಗಳ ಹೆಸರುಗಳನ್ನು ಜಾಹೀರಾತಿನಲ್ಲಿ ಹಾಗು C.A.T. Bulletinನಲ್ಲಿ ಪ್ರಕಟಿಸಿರುತ್ತಾರೆ.

ವಿದ್ಯಾರ್ಹತೆ

ಐ.ಐ.ಎಂ.ಗಳು ನಡೆಸುವ Post Graduate Programme (PGP)ಗೆ ಕನಿಷ್ಠ ವಿದ್ಯಾರ್ಹತೆ ಈ ರೀತಿ ಇದೆ.

೧. ಯಾವುದೇ ವಿಷಯದಲ್ಲಿ ವಿಶ್ವ ವಿದ್ಯಾಲಯಗಳ ಮಾನ್ಯತೆ ಪಡೆದ ಪದವಿ ಪಡೆದಿರಬೇಕು (ಅಥವಾ ಸರಿ ಸಮಾನವಾದ ಶಿಕ್ಷಣ ಪಡೆದಿರಬೇಕು). ಪದವಿಯಲ್ಲಿ ಕನಿಷ್ಠ ಶೇ.೫೦ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. (ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳಿಗೆ ಶೇ.೪೫ರಷ್ಟು ಅಂಕಗಳು)

೨. ಅದೇ ರೀತಿ ಪ್ರೌಢಶಾಲಾ/ಪದವಿ ಪೂರ್ವ ಶಿಕ್ಷಣದಲ್ಲಿ ಸಹ ಶೇ. ೫೦ರಷ್ಟು ಅಂಕಗಳನ್ನು (ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳಿಗೆ ಶೇ.೪೫ರಷ್ಟು ಅಂಕಗಳು) ಪಡೆದಿರಬೇಕು. ಆದರೆ ಐ.ಐ.ಎಂ. ಕಲ್ಕತ್ತಗೆ ಮಾತ್ರ ಗಣಿತ ವಿಷಯದಲ್ಲಿ ಹೆಚ್ಚು ಪರಿಚಯವಿರಬೇಕು.

ಅಭ್ಯರ್ಥಿಗಳು ಕೊನೆಯ ವರ್ಷದ ಪದವಿ ಶಿಕ್ಷಣ ಓದುತ್ತಿದ್ದರೂ ಸಹ ಅರ್ಜಿ ಹಾಕಿಕೊಳ್ಳಬಹುದು. ಆದರೆ ಅಂಥವರು ಆಯ್ಕೆಯಾದರೆ. ಐ.ಐ.ಎಂ.ಗೆ ಸೇರಿಕೊಳ್ಳುವ ಮುಂಚೆ ತಮ್ಮ ಕನಿಷ್ಠ ವಿದ್ಯಾರ್ಹತೆ ಅವಶ್ಯಕತೆಗಳನ್ನು ಪೂರ್ತಿ ಮಾಡಬೇಕು. ಅರ್ಜಿ ಸಲ್ಲಿಸಲು ಕೆಲಸದ ಅನುಭವ ಇರುವುದು ಕಡ್ಡಾಯವಿಲ್ಲ. ಆದರೆ ಅನುಭವ ಇದ್ದರೆ ಆಯ್ಕೆಯಲ್ಲಿ ಅನುಕೂಲವಾಗುವುದು. ವಯಸ್ಸಿನ ಯಾವುದೇ ನಿರ್ಬಂಧವಿಲ್ಲ.

ಸ್ಥಳಾವಕಾಶಗಳು

ದೇಶದಲ್ಲಿರುವ ಆರು ಐ.ಐ.ಎಂ.ಗಳಲ್ಲಿ ದೊರೆಯುವ ಒಟ್ಟು ಸ್ಥಳಾವಕಾಶಗಳು ಸುಮಾರು ೮೫೦ ರಿಂದ೯೦೦. ಇದರಲ್ಲಿ ಸರಕಾರದ ನೀತಿಯ ಪ್ರಕಾರ ಪರಿಶಿಷ್ಟ ಜಾತಿಯವರೆಗೆ ಶೇ.೧೫ರಷ್ಟು ಹಾಗು ಪರಿಶಿಷ್ಟ ಪಂಗಡದವರಿಗೆ ಶೇ.೭.೫ರಷ್ಟನ್ನು ಮೀಸಲಾಗಿಟ್ಟಿರುತ್ತಾರೆ.

ಆಯ್ಕೆ ವಿಧಾನ

ಐ.ಐ.ಎಂ.ಗಳಿಗೆ ಆಯ್ಕೆ ವಿಧಾನವು ಲಿಖಿತ ಪರೀಕ್ಷೆ (Written Test) ಸಮುದಾಯ ಚರ್ಚೆ (Group Discussion)ಹಾಗು ವೈಯಕ್ತಿಕ ಸಂದರ್ಶನ (Personal Interview) ಗಳನ್ನೊಳಗೊಂಡಿರುತ್ತದೆ. ಸಾಮಾನ್ಯವಾಗಿ ಲಿಖಿತ ಪರೀಕ್ಷೆಯನ್ನು ಮೊದಲ ಸುತ್ತಿನಲ್ಲೇ ಅಭ್ಯರ್ಥಿಗಳನ್ನು ಜರಡಿಹಿಡಿಯಲು ನಡೆಸಲಾಗುತ್ತದೆ. ಸಿ.ಎ.ಟಿ.ಗೆ ಸುಮಾರು ೫೫೦೦೦ ಅಭ್ಯರ್ಥಿಗಳು ಡಿಸೆಂಬರ್ ೧೯೯೭ರ ಪರೀಕ್ಷೆಯಲ್ಲಿ ಕುಳಿತಿದ್ದರು ಎಂದು ಅಂದಾಜು ಮಾಡಲಾಗಿದೆ. ಈ ಸಂಖ್ಯೆ ಪ್ರತಿ ವರ್ಷ ಬೆಳೆಯುತ್ತಲೇ ಇರುತ್ತದೆ. ಈ ಸಂಖ್ಯೆಯಲ್ಲಿ ಕೇವಲ ಸುಮಾರು ೨೫೦೦ ಅಭ್ಯರ್ಥಿಗಳನ್ನು ಮಾತ್ರ ಸಮುದಾಯ ಚರ್ಚೆಗೆ ಹಾಗು ಸಂದರ್ಶನಕ್ಕೆ ಆಯ್ಕೆ ಮಾಡುತ್ತಾರೆ. ಉಳಿದವರನ್ನು ತಿರಸ್ಕರಿಸಲಾಗುತ್ತದೆ. ಲಿಖಿತ ಪರೀಕ್ಷೆಯಲ್ಲಿ ಆಯ್ಕೆಯಾದವರನ್ನು ಮಾರ್ಚ್ ತಿಂಗಳ ಮೊದಲನೇ ವಾರದಲ್ಲಿ ಸಮುದಾಯ ಚರ್ಚೆಗೆ ಹಾಗು ವೈಯಕ್ತಿಕ ಸಂದರ್ಶನಕ್ಕೆ ಕರೆಯುತ್ತಾರೆ. ಆದರಲ್ಲಿ ಆರಿಸಲ್ಪಟ್ಟವರಿಗೆ ಪಿ.ಜಿ.ಡಿ.ಎಂ. ಹಾಗೂ Fellow Programmeಗೆ ಜುಲೈ ತಿಂಗಳ ಮೊದಲನೇ ವಾರದಲ್ಲಿ ತರಗತಿಗಳು ಶುರುವಾಗುತ್ತವೆ. ಹೀಗೆ ಐ.ಐ.ಎಂ.ಗಳಿಗೆ ಆಯ್ಕೆ ಕಾರ್ಯಕ್ರಮವು ಕೋರ್ಸ್ ಪ್ರಾರಂಭವಾಗುವ ೮-೯ ತಿಂಗಳುಗಳ ಮುಂಚಿತವಾಗಿಯೇ ಪ್ರಾರಂಭವಾಗುತ್ತದೆ.

ವಿದ್ಯಾಭ್ಯಾಸಕ್ಕೆ ತಗುಲುವ ವೆಚ್ಚ

ಐ.ಐ.ಎಂ.ಗಳಲ್ಲಿ ಪಿ.ಜಿ.ಡಿ.ಎಂ. ಮುಗಿಸಿದ ನಂತರ ಗಿಟ್ಟಿಸುವ ವೇತನಕ್ಕೆ ಹೋಲಿಸಿದರೆ ಅಭ್ಯಾಸಕ್ಕೆ ತಗುಲುವ ವೆಚ್ಚ ಮಿತವಾದದ್ದೆ ಎಂದು ಹೇಳಬಹುದು. ಈ ಮೊತ್ತ ವರ್ಷಕ್ಕೆ ಸುಮಾರು ರೂ. ೭೫೦೦೦ ದಷ್ಟಾಗಬಹುದು. ಯು.ಎಸ್.ಎ. ಗಳಂತಹ ಹೊರ ದೇಶಗಳಲ್ಲಿ ಓದಿದರೆ ಒಂದು ವರ್ಷಕ್ಕೆ ಸುಮಾರು ರೂ. ೫ ಲಕ್ಷ ಮೀರಬಹುದು. ವಿದ್ಯಾರ್ಥಿಗಳಿಗೆ ಐ.ಐ.ಎಂ.ಗಳಲ್ಲಿ ಆರ್ಥಿಕ ನೆರವು ದೊರೆಯುತ್ತದೆ. ಸುಮಾರು ಶೇ.೨೫ರಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳು ದೊರೆಯುತ್ತವೆ. ಕೆಲವು ವಿದ್ಯಾರ್ಥಿಗಳು ಕೆಲವು ಟ್ರಸ್ಟ್‌ಗಳಿಂದ, ಸಂಘ ಸಂಸ್ಥೆಗಳಿಂದ, ಕೆಲವು ಉದ್ದಿಮೆಗಳಿಂದ ಆರ್ಥಿಕ ನೆರವು ಪಡೆಯಬಹುದು. ಇವಲ್ಲದೆ ಕೆಲವು ಬ್ಯಾಂಕುಗಳು ವಿದ್ಯಾಭ್ಯಾಸಕ್ಕೆ ಸಾಲಗಳನ್ನು ಒದಗಿಸುತ್ತವೆ. ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ Tuition Feeಯಲ್ಲಿ ರಿಯಾಯಿತಿ ದೊರೆಯುತ್ತದೆ.

Fellow Programmeನ ವಿದ್ಯಾರ್ಥಿಗಳಿಗೆ ಒಳ್ಳೆಯ ಉದಾರವಾದ ಸ್ಟೈಪಂಡ್ ದೊರೆಯುತ್ತದೆ. ಅಲ್ಲದೆ ವಾರ್ಷಿಕ Contingency ಭತ್ಯೆ ಕೂಡ ದೊರೆಯುತ್ತದೆ. ಈ ಮೊತ್ತಗಳು ಅಭ್ಯರ್ಥಿಯ ವಿದ್ಯಾರ್ಹತೆ ಹಾಗೂ ಅನುಭವಗಳ ಆಧಾರದ ಮೇಲೆ ನಿರ್ಣಯಗೊಳ್ಳುತ್ತವೆ.

ಇಲ್ಲಿ ನಾವು ಗಮನಿಸಬೇಕಾದ್ದು ಏನೆಂದರೆ ಐ.ಐ.ಎಂ.ಗಳಿಗೆ ಆಯ್ಕೆ ಮಾಡುವಾಗ ಅಭ್ಯರ್ಥಿಗೆ ಆರ್ಥಿಕ ನೆರವು ಅವಶ್ಯಕತೆ ಇದೆಯೇ ಇಲ್ಲವೇ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಆಯ್ಕೆಯು ಅಭ್ಯರ್ಥಿಯ ಬುದ್ಧಿ ಸಾಮರ್ಥ್ಯದ ಮೇಲೆ ನಡೆಯುತ್ತದೆ.

ಉದ್ಯೋಗಾವಕಾಶ ಹೇಗೆ?

ಸರಾಸರಿ ಐ.ಐ.ಎಂ. ವಿದ್ಯಾರ್ಥಿಗಳಿಗೆ ಅವರು ಅಭ್ಯಾಸ ಮುಗಿಯುವುದರೊಳಗೆ ೨-೩ ಕಡೆ ಉದ್ಯೋಗಾವಕಾಶಗಳು ದೊರೆಯುವ ಸಂಭವ ಹೆಚ್ಚು. ಇಲ್ಲಿ ಉದ್ಯೋಗ ಕೊಡುವವರು ಉದ್ಯೋಗಿಯನ್ನು ಆಯ್ಕೆ ಮಾಡುವುದಕ್ಕಿಂತ ಉದ್ಯೋಗಿಯೇ ಸೂಕ್ತ ಸಂಸ್ಥೆಯನ್ನು ಆರಿಸಿಕೊಳ್ಳುವ ಸಂದರ್ಭಗಳು ಹೆಚ್ಚು. ಪ್ರಾರಂಭದಲ್ಲಿಯೇ ಯಾವ ಅನುಭವವಿಲ್ಲದ ಹೊಸ ಪದವೀಧರನಿಗೆ ಮಾಸಿಕ ವೇತನವು ಸುಮಾರು ರೂ.೧೦,೦೦೦ ದಿಂದ ರೂ ೨೦,೦೦೦ರ ವರೆಗೆ ಸಿಗುತ್ತದೆ.

ಖಚಿತವಾಗಿಯೂ ಐ.ಐ.ಎಂ.ಗಳು ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವನ್ನು ಒದಗಿಸಿ ಕೊಡುತ್ತವೆ. ಆದರೆ ಐ.ಐ.ಎಂ.ಗಳಲ್ಲಿ ಆಯ್ಕೆಗೊಂಡು ಸ್ಥಳ ಪಡೆಯುವುದಕ್ಕೆ ವಿದ್ಯಾರ್ಥಿಗಳು ಪರಿಶ್ರಮ ಪಡಬೇಕಾಗುತ್ತದೆ.

ಐ.ಐ.ಎಂ.ಹೊರತಾದ ಎಂ.ಬಿ.ಎ.

ನಮ್ಮ ದೇಶದಲ್ಲಿ ಐ.ಐ.ಎಂ.ಗಳಲ್ಲದೆ ಬೇರೆ ಕೆಲವು ಮುಖ್ಯ ಸಂಸ್ಥೆಗಳು ರಾಷ್ಟ್ರ ಮಟ್ಟದಲ್ಲಿ ಎಂ.ಬಿ.ಎ. ಶಿಕ್ಷಣಕ್ಕೆ ಪ್ರಸಿದ್ಧಿಯಾಗಿವೆ. ಅವುಗಳ ವಿವರಗಳು ಈ ರೀತಿ ಇವೆ.

1. Xavier's Labour Relations Institute (XLRI), Post Box 222, CH Area (E) Jamshedpur - 831 001 (Bihar)

ಈ ಸಂಸ್ಥೆಯಲ್ಲಿ ೨ ವರ್ಷ ಪೂರ್ಣಾವಧಿಯ ಸ್ನಾತಕೋತ್ತರ ವ್ಯಾಸಂಗವು a. Business Managementನಲ್ಲೂ (೬೦ ಸ್ಥಳಗಳು) b. Personnel Management & Industrial Relationsನಲ್ಲೂ (೬೦ ಸ್ಥಾನಗಳು) ನಡೆಸುತ್ತಾರೆ.

ಅರ್ಹತೆ : ಯಾವುದೇ ವಿಷಯದಲ್ಲಿ ಪದವಿಯನ್ನು ಶೇ.೫೫ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. (ಎಸ್.ಸಿ./ಎಸ್.ಟಿ.ಗಳಿಗೆ ಶೇ.೪೦ ಅಂಕಗಳು). ಈ ಸಂಸ್ಥೆಯಲ್ಲಿ ೩ ವರ್ಷದ ಪಾರ್ಟ್‌ಟೈಮ್ ಆಗಿ ಸಾಯಂಕಾಲ ನಡೆಸುವ ಎಂ.ಬಿ.ಎ. ವ್ಯಾಸಂಗವು ಇದೆ. ಇದಕ್ಕೆ ಅರ್ಹತೆ ಮೇಲೆ ತಿಳಿಸಿದಂತೆ. ಆದರೆ ಅಭ್ಯರ್ಥಿಗಳು ಪೂರ್ಣಾವಧಿಯ ಕೆಲಸದಲ್ಲಿರಬೇಕು ಹಾಗು ೨ ವರ್ಷದ ಅನುಭವವಿರಬೇಕು.

Fellow Programme

ಅರ್ಹತೆ : ಸ್ನಾತಕೋತ್ತರ ಅಥವಾ ಅದರ ಸರಿ ಸಮಾನ ಪರೀಕ್ಷೆಯಲ್ಲಿ ಶೇ.೫೫ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು. (ಎಸ್.ಸಿ./ಎಸ್. ಟಿ. ಗಳಿಗೆ ಶೇ.೪೦ರಷ್ಟು ಅಂಕಗಳು). B.E./B.Techಗಳಾಗಿದ್ದರೆ ಶೇ.೬೦ರಷ್ಟು ಅಂಕಗಳನ್ನು ಪಡೆದಿರಬೇಕು. ಇದಲ್ಲದೆ ೩ ವರ್ಷ ಕೆಲಸದ ಅನುಭವವಿರಬೇಕು. Fellow ವ್ಯಾಸಂಗಕ್ಕೆ ತಿಂಗಳಿಗೆ ರೂ. ೧೫೦೦ ಮಾಸಾಶನ ದೊರೆಯುತ್ತದೆ.

ಮೇಲಿನ ವ್ಯಾಸಂಗಗಳಿಗೆ ಆಯ್ಕೆಯು ಲಿಖಿತ ಪರೀಕ್ಷೆಯ ಮೇಲೆ ನಡೆಯುತ್ತದೆ. ಇದಕ್ಕೆ ಅರ್ಜಿಯನ್ನು ಪ್ರತಿ ವರ್ಷ ಸೆಪ್ಟಂಬರ್/ಅಕ್ಟೋಬರ್‌ನಲ್ಲಿ ಕರೆಯುತ್ತಾರೆ. ಅರ್ಜಿ ಸಲ್ಲಿಸಲು ನವೆಂಬರ್ ಕೊನೆ. ಲಿಖಿತ ಪರೀಕ್ಷೆಯು ಸಾಮಾನ್ಯವಾಗಿ ಜನವರಿ ತಿಂಗಳ ಮೊದಲನೆ ಭಾನುವಾರ ನಡೆಯುತ್ತದೆ. ಪರೀಕ್ಷೆಗಳು ಬೆಂಗಳೂರು ಸೇರಿದಂತೆ ದೇಶದ ನಾನಾ ಕಡೆ ೧೨ ಪ್ರಮುಖ ಕೇಂದ್ರಗಳಲ್ಲಿ ನಡೆಯುತ್ತವೆ. ಅರ್ಜಿ ಮತ್ತು ಮಾಹಿತಿ ಪತ್ರವನ್ನು XLRIನಿಂದ ನಿಗದಿತ ಹಣವನ್ನು ಡಿ.ಡಿ.ಮೂಲಕ ಕಳಿಸಿ ಪಡೆಯಬಹುದು. ಹೆಚ್ಚಿನ ವಿವರಗಳು ಜಾಹೀರಾತಿನಲ್ಲಿ ದೊರೆಯುತ್ತವೆ.

2. University of Bombay

ಈ ವಿಶ್ವವಿದ್ಯಾಲಯದ ಕೆಳಗೆ ಸುಮಾರು ೧೧ ಪ್ರಮುಖ ವಿದ್ಯಾ ಸಂಸ್ಥೆಗಳು ೨ ವರ್ಷ ಪೂರ್ಣಾವಧಿಯ Master of Management Studies (MMS) ವ್ಯಾಸಂಗವನ್ನು ನೀಡುತ್ತಾರೆ. ಆ ಸಂಸ್ಥೆಗಳ ವಿವರಗಳು ಈ ರೀತಿ ಇವೆ.

a. Jamnalal Bajaj Institute of Management Studies (JMIMS), Dadabhai Naoroji House, 164, Backbay Reclamation, Road No.3, Church gate, Mumbai - 400 020. ೨ ವರ್ಷ ಪೂರ್ಣಾವಧಿಯ ಎಂ.ಎಂ.ಎಸ್. ವ್ಯಾಸಂಗಕ್ಕೆ ೫೦ ಸ್ಥಳಾವಕಾಶಗಳಿವೆ. ಹಾಸ್ಟೆಲ್ ಸೌಕರ್ಯವಿದೆ.

b. Chetna's Ramprasad Khandelwal Institute of Management & Research Survey No.341, Bandra East, Mumbai - 400 051. ೨ ವರ್ಷದ ಎಂ.ಎಂ.ಎಸ್. ಒಟ್ಟು ೬೦ ಸ್ಥಳಗಳು,

c. Narsee Monjee Institute of Management Studies, Juhu Development Scheme, Vileparle (W), Mumbai - 400 056. ೨ ವರ್ಷದ ಎಂ.ಎಂ.ಎಸ್. ಒಟ್ಟು ೧೨೦ ಸ್ಥಳಗಳು, ೫೦ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವಿದೆ. ಕಂಪ್ಯೂಟರ್ ಹಾಗು ಉದ್ಯೋಗಕ್ಕೆ Placement ಸೌಲಭ್ಯಗಳಿವೆ.

d. Sydenham Institute of Management Studies & Research and Enterpreneurship Education, 'B' Road, Churchgate, Mumbai - 400 020. ೨ ವರ್ಷದ ಎಂ.ಎಂ.ಎಸ್.ಗೆ ೬೦ ಸ್ಥಳಗಳು.

e. Prin L.N. Welingkar Institute of Management Development & Research 195. Sion (East) Ruia College Hostel Campus, Sion, Mumbai - 400 022 ೨ ವರ್ಷದ ಎಂ.ಎಂ.ಎಸ್.ಗೆ ೬೦ ಸ್ಥಳಗಳು. ಹಾಸ್ಟೆಲ್ ಹಾಗು ಉದ್ಯೋಗಕ್ಕೆ Placement ಸೌಲಭ್ಯಗಳಿವೆ.

f. K.J. Somaiya Institute of Management Studies & Research, vidyanagar, Vidyavihar, Mumbai - 400 077.

g. Bharti vidyapeet's Institute of Management Studies & Research, Naya Mumbai.

h. MET's Management Institute, Gen. Arun Kumar Vaidya Chowk, Near Leelavathi Hospital, Bandra Reclamation, Bandra (w), Mumbai - 400 050, ೨ ವರ್ಷದ ಎಂ.ಎಂ.ಎಸ್. ೬೦ ಸ್ಥಳಗಳು

i. Rizvi Institute of Management Studies & Research, Rizvi Complex, Off Carder Road, Bandra (w), Mumbai - 400 050, ೨ ವರ್ಷದ ಎಂ.ಎಂ.ಎಸ್. ೬೦ ಸ್ಥಳಗಳು ಗ್ರಂಥಾಲಯ ಹಾಗು ಕಂಪ್ಯೂಟರ್ ಸೌಲಭ್ಯಗಳಿವೆ.

ಐ.ಐ.ಎಂ. ವಿಳಾಸ ಹಾಗೂ ವಿವರಗಳು

1. Indian Institute of Management, Vastrapur, Ahmedabad-380 015
   ಇಲ್ಲಿ ೨ ವರ್ಷ ಪೂರ್ಣಾವಧಿಯ Post Graduate Programme (PGP)ನ್ನು ಮತ್ತು Fellow Programmeನ್ನು ನಡೆಸುತ್ತಾರೆ. ೧೮೦ ಸ್ಥಳಾವಕಾಶಗಳಿವೆ. ಹಾಸ್ಟೆಲ್, ಕಂಪ್ಯೂಟರ್ ಮತ್ತು ಗ್ರಂಥಾಲಯಗಳ ಸೌಲಭ್ಯಗಳಿವೆ. ವಿದ್ಯಾರ್ಥಿ ವೇತನಗಳಿವೆ ಹಾಗು ಉದ್ಯೋಗಕ್ಕೆ Placement ಸೌಕರ್ಯವಿದೆ.
2. Indian Institute of Management, Bannerghatta Road, Bangalore - 76.
   ಇಲ್ಲಿ ೨ ವರ್ಷ ಪೂರ್ಣಾವಧಿಯ ಪಿ.ಜಿ.ಪಿ. ಮತ್ತು Fellow Programmeಗಳು ನಡೆಯುತ್ತವೆ. ೨೦೦ ಸ್ಥಳಾವಕಾಶ ಇವೆ. ಹಾಸ್ಟೆಲ್, ಕಂಪ್ಯೂಟರ್, ಒಳ್ಳೆಯ ಗ್ರಂಥಾಲಯ, ವಿದ್ಯಾರ್ಥಿ ವೇತನ, ಆರ್ಥಿಕ ಸಹಾಯ ಮತ್ತು ಉದ್ಯೋಗಕ್ಕೆ Placement ಸೇವೆ ಮುಂತಾದ ಸೌಲಭ್ಯಗಳಿವೆ.
3. Indian Institute of Management, Joka, Diamond Harbour Road, Calcutta - 700 027
   ಇಲ್ಲಿ ೨ ವರ್ಷ ಪೂರ್ಣಾವಧಿಯ ಪಿ.ಜಿ.ಪಿ. (೨೫೦ ಸ್ಥಳಗಳು) ೪ ವರ್ಷದ Fellow Programme (೫೦ ಸ್ಥಳಗಳು) ಇವೆ. ಇವಲ್ಲದೆ (Post Graduate Programme in Computer Aided Management (PGPCM)ನ್ನು ಸಹ ನಡೆಸುತ್ತಾರೆ. ಹಾಸ್ಟೆಲ್, ಕಂಪ್ಯೂಟರ್ ಹಾಗು ಗ್ರಂಥಾಲಯ ಸೌಲಭ್ಯಗಳಿವೆ.
4. Indian institute of Management, Prabandh Nagar, Off Sitapur Road, Lucknow - 226 013
   ಇಲ್ಲಿ ೨ ವರ್ಷ ಪೂರ್ಣಾವಧಿಯ ಪಿ.ಜಿ.ಪಿ. (೧೨೦ ಸ್ಥಳಗಳು) ಇದೆ. ಹಾಸ್ಟೆಲ್, ಕಂಪ್ಯೂಟರ್, ಸಂಶೋಧನೆ ಮತ್ತು ಸಲಹಾ ಸೌಲಭ್ಯಗಳಿವೆ.
5. Indian Institute of Management, Kozhikode (Calicut), (Kerala)
   ಇದು ಹೊಸದಾಗಿ ಪ್ರಾರಂಭವಾದ ಐ.ಐ.ಎಂ. ಇಲ್ಲಿ ೨ ವರ್ಷದ ಪಿ.ಜಿ.ಪಿ. ನಡೆಸುತ್ತಾರೆ. ಒಟ್ಟು ೬೦ ಸ್ಥಳಾವಕಾಶಗಳಿವೆ.
6. Indian Institute of Management, Indore (M.P.)
   ಇದು ಸಹ ಹೊಸದಾಗಿ ಶುರುವಾಗಿರುವ ಐ.ಐ.ಎಂ. ೨ ವರ್ಷ ಪೂರ್ಣಾವಧಿಯ ಪಿ.ಜಿ.ಪಿ. ನಡೆಸುತ್ತಾರೆ. ಒಟ್ಟು ೬೦ ಸ್ಥಳಾವಕಾಶಗಳಿವೆ.

j. Vivekanand Education Society's Institutes of Management, Sindhi Society, Chembur, Mumbai - 400 071, ೨ ವರ್ಷದ ಎಂ.ಎಂ.ಎಸ್. ೬೦ ಸ್ಥಳಗಳು.

k. MGM's Institute of Management, Mumbai - Pune Highway, Sector-18, Kamothe, Naya Mumbai - 410 209, ೨ ವರ್ಷದ ಎಂ.ಎಂ.ಎಸ್., ೬೦ ಸ್ಥಳಗಳು.

ಮೇಲೆ ತಿಳಿಸಿದ ೧೧ ಸಂಸ್ಥೆಗಳು ಬಾಂಬೆ ವಿಶ್ವವಿದ್ಯಾಲಯಕ್ಕೆ Affiliate ಆಗಿವೆ. ಎಲ್ಲಾ ಸಂಸ್ಥೆಗಳಿಗೂ ಸೇರಿಸಿ ಆಯ್ಕೆಗೆ Common written Test (CWT) ನಡೆಸುತ್ತಾರೆ.

ಅರ್ಹತೆ : ೧. ಆಯಾ ವರ್ಷ ಆಗಸ್ಟ್ ತಿಂಗಳ ೧೮ರ ಒಳಗೆ ಪದವಿ ಪರೀಕ್ಷೆಯಲ್ಲಿ ಕನಿಷ್ಠ ಶೇ.೫೦ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. (ಎಸ್.ಸಿ./ಎಸ್.ಟಿ. ಗಳಿಗೆ ಶೇ. ೪೫ರಷ್ಟು ಅಂಕಗಳು)

೨.Common Written Test (CWT) ನಲ್ಲಿ ಕನಿಷ್ಠ ಶೇ.೩೫ರಷ್ಟು ಅಂಕಗಳನ್ನು ಪಡೆದಿರಬೇಕು.

ಸೇರುವ ವಿಧಾನ : Common Written Test ೨೦೦ ಅಂಕಗಳನ್ನೊಳಗೊಂಡ ಪರೀಕ್ಷೆ. ಈ ಪರೀಕ್ಷೆಯನ್ನು ಜಮನ್‌ಲಾಲ್ ಬಜಾಜ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್ (JBIMS) ನಡೆಸುತ್ತದೆ. ಮೇಲೆ ತಿಳಿಸಿದ ಎಲ್ಲಾ ೧೧ ಸಂಸ್ಥೆಗಳಲ್ಲೂ ಎಂ.ಎಂ.ಎಸ್.ಗೆ ಪ್ರವೇಶ ಪಡೆಯಲು ಈ ಪರೀಕ್ಷೆ ಅನ್ವಯಿಸುತ್ತದೆ.

ಆದರೆ ಪ್ರತಿ ಸಂಸ್ಥೆಯು ತನ್ನದೇ ಆದ ಸಿ.ಡಬ್ಲ್ಯೂ.ಟಿ.ಯಲ್ಲಿ ಪಡೆದ ಅಂಕಗಳ ಮಿತಿಯನ್ನು ನಿಗದಿಪಡಿಸುತ್ತದೆ. ಇದು ವಿಶ್ವವಿದ್ಯಾಲಯವು ನಿಗದಿಪಡಿಸಿದ ಕನಿಷ್ಠ ಅಂಕ ಮಿತಿಗಿಂತ ಜಾಸ್ತಿ ಇರುತ್ತದೆ. ಇದಲ್ಲದೆ ಆಯಾ ಸಂಸ್ಥೆಗಳು ಅಭ್ಯರ್ಥಿಗಳಿಗೆ ಸಾಮೂಹಿಕ ಚರ್ಚೆ ಹಾಗು ಸಂದರ್ಶನಗಳನ್ನು ನಡೆಸುತ್ತವೆ. ಇವುಗಳ ಒಟ್ಟು ಆಧಾರದ ಮೇಲೆ ಆಯ್ಕೆ ಪಟ್ಟಿ ತಯಾರಿಸುತ್ತವೆ.

ಅರ್ಜಿ ಹಾಗು ಮಾಹಿತಿ ಪತ್ರಗಳನ್ನು JBIMS ನಿಂದ ನಿಗದಿಪಡಿಸಿದ ಶುಲ್ಕವನ್ನು ಕಟ್ಟಿ ಪಡೆಯಬೇಕು. ಅರ್ಜಿ ಹಾಕಲು ಕೊನೆ ದಿನಾಂಕ ಮಾರ್ಚ್‌ನಲ್ಲಿರುತ್ತದೆ. ಪರೀಕ್ಷೆಗಳು ಮುಂಬಯಿ ನಲ್ಲಿ ಮೇ ತಿಂಗಳಲ್ಲಿ ನಡೆಯುತ್ತವೆ. ಈ ಪರೀಕ್ಷೆಯಲ್ಲಿ ತೇರ್ಗಡೆಯಾದ ಹಾಗು ಅರ್ಹ ಅಭ್ಯರ್ಥಿಗಳಿಗೆ ಆಯಾ ಸಂಸ್ಥೆಗಳು ಸಾಮೂಹಿಕ ಚರ್ಚೆ/ಸಂದರ್ಶನಗಳನ್ನು ಜೂನ್/ಜುಲೈ ತಿಂಗಳಲ್ಲಿ ನಡೆಯುತ್ತವೆ. ಆಗಸ್ಟ್ ತಿಂಗಳಲ್ಲಿ ತರಗತಿಗಳು ಪ್ರಾರಂಭವಾಗುತ್ತವೆ.

3. Faculty of Management Studies (FMS) University of Delhi, Delhi - 110 007


ಅ. ೨ ವರ್ಷ ಪೂರ್ಣಾವಧಿಯ ಎಂ.ಬಿ.ಎ. ಕೋರ್ಸ್

ಬ. ೨ ವರ್ಷ ಪೂರ್ಣಾವಧಿಯ MBA Course Public Systems Managment.

ಕ. ೩ ವರ್ಷ ಅಲ್ಪಾವಧಿಯ ಎಂ.ಬಿ.ಎ. ಮುಂತಾದವು.

ಅರ್ಹತೆ : ವಿಜ್ಞಾನ ಅಥವಾ ಆರ್ಟ್ಸ್‌ನಲ್ಲಿ ಪದವಿಯಲ್ಲಿ ಶೇ.೫೫ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ಗಣಿತ/ಸಂಖ್ಯಾಶಾಸ್ತ್ರದಲ್ಲಿ ಪದವಿಯಾಗಿದ್ದರೆ. ಶೇ.೬೦ರಷ್ಟು ಅಂಕಗಳು. ಅಭ್ಯರ್ಥಿಯ ವಯಸ್ಸು ಕನಿಷ್ಠ ೨೦ ವರ್ಷವಾಗಿರಬೇಕು. Part time MBAಗಾದರೆ ಕೆಲಸದಲ್ಲಿದ್ದು ೫ ವರ್ಷದ ಅನುಭವವಿರಬೇಕು.

ಸಂಸ್ಥೆಗೆ ಸೇರಲು ಬೇಕಾದ ಅರ್ಜಿ ಹಾಗು ಮಾಹಿತಿ ಪತ್ರವನ್ನು ಎಫ್.ಎಂ.ಎಸ್.ನಿಂದ ನಿರ್ಧರಿಸಿದ ಶುಲ್ಕ ಸಲ್ಲಿಸಿ ತರಿಸಿಕೊಳ್ಳಬೇಕು. ಅರ್ಜಿ ಸಲ್ಲಿಸಲು ಡಿಸೆಂಬರ್ ತಿಂಗಳು ಕೊನೆ.



ಬರಹ ಪರೀಕ್ಷೆಯನ್ನು ದೇಶದ ಮುಖ್ಯ ೮ ನಗರ ಕೇಂದ್ರಗಳಲ್ಲಿ ನಡೆಸಲಾಗುವುದು.

ಈ ಸಂಸ್ಥೆಯಲ್ಲಿರುವ ಒಟ್ಟು ಸ್ಥಳಗಳಲ್ಲಿ ಶೇ. ೨೨.೫ರಷ್ಟು ಎಸ್.ಸಿ.ಹಾಗು ಶೇ. ೫ರಷ್ಟು ಎಸ್.ಟಿ.ಗೂ ಮೀಸಲಿರಿಸಿದೆ.

4. Institute of Rural Management, Anand

ಈ ಸಂಸ್ಥೆ ೨ ವರ್ಷದ Post Graduate Programme in Rural Management ನಡೆಸುತ್ತದೆ. ಈ ವ್ಯಾಸಂಗ ಪೂರ್ಣಗೊಳಿಸಿದವರಿಗೆ Post Graduate Diploma in Rural Management ಕೊಡುತ್ತದೆ.

ಕರ್ನಾಟಕದಲ್ಲಿ ಮ್ಯಾನೇಜ್‌ಮೆಂಟ್ ಶಿಕ್ಷಣ

1. ಬೆಂಗಳೂರು ವಿಶ್ವವಿದ್ಯಾಲಯ, ಕಾಮರ್ಸ್ ಡಿಪಾರ್ಟ್‌ಮೆಂಟ್ ಮತ್ತು ಮ್ಯಾನೇಜ್‌ಮೆಂಟ್, ಬೆಂಗಳೂರು
2. Department of Post-Graduate Studies, B.M.S. College of Engineering (Affiliated to Bangalore University and approved by AICTE) Bull Temple Road, Bangalore-560 019
3. Indian Institute of Science. Dept. of Management Studies, Bangalore - 560 012
4. Karnataka-Kaveri Institute of Management, 90/1, 90/2, 5th Cross, Malleshwaram, Bangalore - 560 003. (Approved by AICTE and affiliated to Bangalore University)
5. KLE Society's Institute of Management Eduction & Research. P.B. No.504, Sthani K.Raj Bhawan, Pandit Nehru Road, Tilakwadi, Belgaum - 590 006 (Recognised by AICTE)
6. Karnataka University, Kousali Institute of Management studies Dharwar - 580 003
7. M.S. Ramaiah Institute of Management Administration and Research, M.S. Ramaiah Road, MSRIT Post, Bangalore - 560 054 (Approved by AICTE)
8. Mangalore University, Dept. of commerce and business administration University campus, Mangalagangothri- 574 199
9. University of Mysore, Dept. of P.G. Studies & Research in Business Administration, Manasagangotri, Mysore - 570 006
10. Karnataka State Open University, Manasa Gangothri, Mysore - 570 006.
11. Indian Institute of Materials Management, 247, Raheja Arcade Koramangala, Bangalore - 560 095 (Approved by AICTE)

ಇವುಗಳಲ್ಲದೆ ಇತ್ತೀಚೆಗೆ ಕೆಲವು ಪ್ರಮುಖ ಸಂಸ್ಥೆಗಳು ನಿರ್ವಹಣೆ ಶಿಕ್ಷಣದಲ್ಲಿ ತರಬೇತಿ ಶುರು ಮಾಡಿದ್ದಾರೆ. ಅವುಗಳ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ.

ಅರ್ಹತೆ : ವ್ಯವಸಾಯ, ಹೈನುಗಾರಿಕೆ, ಪ್ರಾಣಿ ಸಾಕಣೆ ವ್ಯಾಸಂಗದಲ್ಲಿ ಪದವಿಯನ್ನು ಶೇ.೫೦ರಷ್ಟು ಅಂಕ ಪಡೆದು (ಎಸ್.ಸಿ./ಎಸ್.ಟಿ. ಶೇ.೪೫ರಷ್ಟು ಅಂಕಗಳು) ಉತ್ತೀರ್ಣರಾದವರಿಗೆ ಮಾತ್ರ ಅರ್ಹತೆ. ಅಲ್ಲದೆ ಅಭ್ಯರ್ಥಿಗಳು ಪ್ರೌಢ ಶಾಲಾ ಶಿಕ್ಷಣದಲ್ಲಿ ಶೇ.೫೫ರಷ್ಟು ಅಂಕಪಡೆದು ಉತ್ತೀರ್ಣರಾಗಿರಬೇಕು.

ಸೇರುವ ವಿಧಾನ :ಬರವಣಿಗೆ ಪರೀಕ್ಷೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆರಿಸಲಾಗುವುದು. ಅರ್ಜಿ ಹಾಗು ಮಾಹಿತಿ ಪತ್ರವನ್ನು ಇವರಿಗೆ ಬರೆದು ತರಿಸಿಕೊಳ್ಳಬೇಕು. The Co-ordinator, Institute of Rural Management, Anand - 388 001 (Gujarat) ನಿರ್ಣಯಿಸಿದ ಶುಲ್ಕವನ್ನು ಡಿ.ಡಿ. ಮೂಲಕ ಕಳಿಸಬೇಕು. ಕೊನೆಯ ತಾರೀಖು ಅರ್ಜಿ ತರಿಸಲು ಅಕ್ಟೋಬರ್, ಅರ್ಜಿ ಕಳಿಸಲು ನವೆಂಬರ್.

5. Tata Institute of Social Science (A deemed university) P.B. No. 8313, Deonar, Mumbai - 400 088

೨ ವರ್ಷ ಪೂರ್ಣಾವಧಿಯ Master of Health Administration (MHA)

೨ ವರ್ಷ ಪೂರ್ಣಾವಧಿಯ Master of Hospital Administration (MHA)

ಅರ್ಹತೆ : ಎಂ.ಬಿ.ಬಿ.ಎಸ್. ಪದವಿಯಲ್ಲಿ ಅಥವಾ Nursing ಪದವಿಯಲ್ಲಿ ಅಥವಾ ಬೇರಾವ ವಿಷಯದಲ್ಲಿ ಪದವಿಯನ್ನು ಶೇ.೫೦ ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು. ವಯಸ್ಸು ೪೫ ವರ್ಷದ ಒಳಗೆ ಇರಬೇಕು. ಸ್ಥಳಾವಕಾಶದಲ್ಲಿ ಎಸ್.ಸಿ.ಗೆ ಶೇ.೧೫ರಷ್ಟು ಎಸ್.ಟಿ.ಗೆ ಶೇ.೭.೫ರಷ್ಟು ಮೀಸಲಾಗಿವೆ.

ಅರ್ಜಿ ಹಾಗು ಮಾಹಿತಿ ಪತ್ರವನ್ನು ಸಂಸ್ಥೆಯಿಂದ ತಗುಲುವ ಚಾರ್ಜನ್ನು ಕಟ್ಟಿ ಪಡೆಯಬೇಕು. ಅರ್ಜಿಗಳನ್ನು ಜನವರಿ ತಿಂಗಳಲ್ಲಿ ಕರೆಯುತ್ತಾರೆ. ಕೊನೆಯ ತಾರೀಖು ಏಪ್ರಿಲ್ ತಿಂಗಳಲ್ಲಿ. ತರಗತಿಗಳು ಜೂನ್ ತಿಂಗಳಲ್ಲಿ ಪ್ರಾರಂಭವಾಗುತ್ತವೆ. ಮಿತವಾದ ಸ್ಥಳಗಳ ಹಾಸ್ಟೆಲ್ ಸೌಲಭ್ಯವಿದೆ.

6. Indian Institute of Technology (IIT) Hauz Khas, New Delhi-110 016

ಇಲ್ಲಿ ಒಂದೂವರೆ ವರ್ಷದ M.Tech (Management and System) ನಡೆಸುತ್ತಾರೆ. ಒಟ್ಟು ೨೫ ಸ್ಥಳಗಳು.

ಅರ್ಹತೆ : B.E. ಹಾಗು B.Tech ಪದವಿಧರರು ಮಾತ್ರ ಅರ್ಹರು.

ಆಯ್ಕೆ ವಿಧಾನ : GATE ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆರಿಸುತ್ತಾರೆ. ಅರ್ಜಿ ಹಾಗು ಮಾಹಿತಿ ಪುಸ್ತಕವನ್ನು ಐ.ಐ.ಟಿ. ದೆಹಲಿಯಿಂದ ತರಿಸಿಕೊಳ್ಳಬೇಕು. ಅಲ್ಲಿ ಹಾಸ್ಟಲಿನ ಸೌಲಭ್ಯವಿದೆ. ಜಾಹೀರಾತು ಏಪ್ರಿಲ್/ಮೇ ತಿಂಗಳಲ್ಲಿ ಬರುತ್ತದೆ. ಕೊನೆಯ ತಾರೀಖು ಮೇ/ಜೂನ್, ಸಂದರ್ಶನ ಜೂನ್ ತಿಂಗಳು.

7.Indian Institute of Technology (IIT) Powai, Mumbai - 400 076

ಇಲ್ಲಿ ೨ ವರ್ಷದ Post Graduate Programmeನ್ನು ನಡೆಸುತ್ತಾರೆ. ಇದು ಎಂ.ಎಂ.ಎಸ್.ಗೆ ಸಮಾನ. ಇದು ಅಲ್ಲದೆ ಒಂದೂವರೆ ವರ್ಷ M.Tech in Industrial Managementನ್ನು ಸಹ ಕೊಡುತ್ತಾರೆ.

ಅರ್ಹತೆ : M.Techಗೆ B.E./B.Tech ಆಗಿರಬೇಕು. M.M.S.ಗೆ B.E./B.Tech ಆಗಿರಬೇಕು. ಆರಿಸುವಿಕೆಯು GATE ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇಲೆ ನಿರ್ಣಯಿಸುತ್ತಾರೆ. ಅರ್ಜಿ ಆಹ್ವಾನ ಜಾಹೀರಾತು ಮಾರ್ಚ್‌ನಲ್ಲಿ ಬರುತ್ತದೆ. ಇಲ್ಲಿ ಹಾಸ್ಟೆಲ್, ಕಂಪ್ಯೂಟರ್‌ಗಳ ಸೌಲಭ್ಯ ಇವೆ.

ಹೆಚ್ಚಿನ ವಿವರಗಳಿಗೆ ಹಾಗು ಅರ್ಜಿ ಮತ್ತು ಮಾಹಿತಿ ಪತ್ರಕ್ಕೆ ಇವರನ್ನು ಸಂಪರ್ಕಿಸಬೇಕು. Deputy Registrar, Academic, IIT, Mumbai - 400 076.

8. .Indian Institute of Technology (IIT) Adyar, Madras - 600 036

ಇಲ್ಲಿ ಒಂದೂವರೆ ವರ್ಷದ M.Tech in Industrial Management ನಡೆಸುತ್ತಾರೆ. ೨೫ ಸ್ಥಳಗಳು. ಹಾಸ್ಟೆಲ್ ಸೌಲಭ್ಯವಿದೆ.

ಅರ್ಹತೆ : B.E./B.Tech ಆಗಿರಬೇಕು. ಅರ್ಜಿ ನಮೂನೆ ಹಾಗು ಇತರೆ ವಿವರಗಳನ್ನು ರಾಷ್ಟ್ರ ಮಟ್ಟದ ದಿನಪತ್ರಿಕೆಗಳಲ್ಲಿ ಜಾಹಿರಾತು ಮೂಲಕ ತಿಳಿಸುತ್ತಾರೆ. ಇದು ಏಪ್ರಿಲ್ ತಿಂಗಳಲ್ಲಿ ಬರುತ್ತದೆ. ಕೊನೆಯ ತಾರೀಖು ಮೇ ತಿಂಗಳು

9. Indian Institute of Technology (IIT) Kanpur - 208 016

ಇದೂ ಸಹ ಮೇಲಿನ IIT ಗಳಂತೆ ವಿವರಗಳು.

10. Indian Institute of Technology (IIT) Kharagpur-721 302

ಇಲ್ಲಿ ೨ ವರ್ಷದ M.Tech in Industrial Engineering and Management ಇದೆ. ಒಟ್ಟು ೬೦ ಸ್ಥಳಗಳು. ಇಂಜಿನೀಯರಿಂಗ್‌ನಲ್ಲಿ ಪದವಿ ಪಡೆದಿರಬೇಕು. GATE ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೇಲೆ ಆರಿಸುವಿಕೆ ನಡೆಸುತ್ತದೆ. ಹೆಚ್ಚಿನ ವಿವರಗಳನ್ನು Deputy Registrar IIT, Khargpur - 721 302 ಇವರಿಗೆ ಬರೆದು ತರಸಿಕೊಳ್ಳಬೇಕು.

11. Indira Gandhi National open University School of Managment Studies Maidan Garhi, New Delhi - 110 068

Correspondenceನಲ್ಲಿ MBA ಮಾಡಲು ಇಚ್ಛಿಸುವ ಅಭ್ಯರ್ಥಿಗಳಿಗೆ ಈ ವಿಶ್ವವಿದ್ಯಾಲಯ ಒಂದು ಒಳ್ಳೆಯ ದಾರಿ ತೋರಿಸುತ್ತದೆ. ಇವರಲ್ಲಿ ಅಂಚೆ ಮೂಲಕ ವ್ಯಾಸಂಗ ಮಾಡಬೇಕಾಗುತ್ತದೆ. ೨೧ ಕೋರ್ಸ್‌ಗಳನ್ನು ಓದಿ ಪಾಸಾದರೆ MBA ಪದವಿ ನೀಡುತ್ತಾರೆ. ೨೧ ಕೋರ್ಸ್‌ಗಳಲ್ಲಿ ೧೧ ಕೋರ್ಸ್‌ಗಳು ಕಡ್ಡಾಯವಾಗಿಯೂ ೫ ಕೋರ್ಸ್‌ಗಳು Specialisation ಆಗಿಯು ಮತ್ತು ಇನ್ನು ೫ ಕೋರ್ಸ್‌ಗಳನ್ನು Integrative courseಗಳಾಗಿ ಓದಬೇಕು.


ಪದವಿಧರರು ೩ ವರ್ಷಗಳ ವ್ಯವಹಾರಿಕ ಅನುಭವವಿದ್ದವರು ಅರ್ಹತೆ ಪಡೆಯುತ್ತಾರೆ. ಅರ್ಜಿಗಳನ್ನು IGNOU ನಿಂದ ತರಿಸಿಕೊಳ್ಳಬೇಕು. ಹೆಚ್ಚಿನ ವಿವರಗಳನ್ನು ದೆಹಲಿ ದೂರದರ್ಶನ (DD1)ರಲ್ಲಿ ಸೋಮವಾರ ಬೆಳಗ್ಗೆ ೬.೩೦ರ ಪ್ರಸಾರದಲ್ಲಿ ತಿಳಿಸುತ್ತಿರುತ್ತಾರೆ. ಪ್ರತಿ ರಾಜ್ಯದಲ್ಲೂ IGNOU ಕೇಂದ್ರಗಳಿರುತ್ತವೆ. ಬೆಂಗಳೂರಿನಲ್ಲಿಯ IGNOU ಕೇಂದ್ರದ ವಿಳಾಸ Directorate of Collegiate Education Premises, Seshadri Road, Bangalore-1

ನಿರ್ವಹಣೆ ಶಿಕ್ಷಣವು ಎಲ್ಲಾ ಕಡೆಯಲ್ಲೂ ಅತಿ ಹೆಚ್ಚು ಬೇಡಿಕೆ ಇರುವುದರಿಂದ ನಮ್ಮ ದೇಶದ ಪ್ರತಿ ರಾಜ್ಯದಲ್ಲೂ ಅನೇಕ ಸಂಸ್ಥೆಗಳು ಶಿಕ್ಷಣವನ್ನು ಪ್ರಾರಂಭಿಸಿವೆ. ಇತ್ತೀಚಿನ ಮಾಹಿತಿ ಪ್ರಕಾರ ದೇಶದಲ್ಲಿ ೪೩೦ AICTE ಯಿಂದ ಮಾನ್ಯತೆ ಪಡೆದ ನಿರ್ವಹಣೆ ಶಿಕ್ಷಣ ತರಬೇತಿ ಸಂಸ್ಥೆಗಳಿವೆ. ಇವುಗಳಲ್ಲದೆ ಅನೇಕ ವಿಶ್ವವಿದ್ಯಾಲಯಗಳು ಖಾಸಗಿ ಸಂಸ್ಥೆಗಳು, ಉದ್ದಿಮೆಗಳು ತಾವೆ ನಡೆಸುವ ತರಬೇತಿ ಕೇಂದ್ರಗಳು, ಇನ್ನೂ ಮುಂತಾದ ಅನೇಕ ಸಂಸ್ಥೆಗಳಿವೆ. ಇವುಗಳೆಲ್ಲದರ ಬಗ್ಗೆ ಮಾಹಿತಿ ನೀಡುವುದು ತುಂಬಾ ಕಷ್ಟಕರ. ಆದುದರಿಂದ ನಮ್ಮ ಕರ್ನಾಟಕದಲ್ಲಿರುವ ಸಂಸ್ಥೆಗಳನ್ನು ಮಾತ್ರ ಹೆಸರಿಸುತ್ತಿದ್ದೇವೆ.

ಮುಂದಿನ ಸಂಚಿಕೆಯಲ್ಲಿ

ನಿರ್ವಹಣೆ ಶಿಕ್ಷಣ ರಂಗದಲ್ಲಿ ಅನೇಕ ಸಂಸ್ಥೆಗಳು ಇವೆ. ಇವುಗಳಲ್ಲಿ ಯಾವುದನ್ನು ಆರಿಸಿಕೊಳ್ಳಬೇಕು, ಹೇಗೆ ಆರಿಸಬೇಕು, ನಿರ್ವಹಣಾ ಶಿಕ್ಷಣದಲ್ಲಿ ಯಾವ ಯಾವ ವಿಷಯಗಳನ್ನು ಕಲಿಸುತ್ತಾರೆ, ಹೇಗೆ ಕಲಿಸುತ್ತಾರೆ ಮುಂತಾದ ವಿಷಯ ಹಾಗು ಪ್ರತಿಷ್ಠಿತ Instituteಗಳಿಗೆ ಪ್ರವೇಶ ಪಡೆಯಲು ಹೇಗೆ ತಯಾರಿ ನಡೆಸಬೇಕು ಎಂಬ ಮಾಹಿತಿ ನೀಡಲು ಸ್ಥಳಾಭಾವದಿಂದ ಸಾಧ್ಯವಾಗಿಲ್ಲ. ಮುಂದಿನ ಸಂಚಿಕೆಯಲ್ಲಿ ಈ ವಿವರಗಳನ್ನು ನೀಡಲಾಗುವುದು.

ಅಮೆರಿಕೆಯಲ್ಲಿ ಮಿಂಚಿದ ಹುಬ್ಬಳ್ಳಿಯ ಪ್ರತಿಭೆ





ಪ್ರತಿಭೆ ಹಾಗೂ ಅದರ ಪ್ರಕಾಶ ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳ ಗುತ್ತಿಗೆಯೆಂಬ ಮೂಢ ನಂಬಿಕೆಯನ್ನು ನುಚ್ಚುನೂರುಗೊಳಿಸಿದ ಅಪ್ಪಟ ಕನ್ನಡ ಪ್ರತಿಭಾವಂತನೀತ!

'ಬಿಸಿಲ ಬದುಕು' ಡಿಸೆಂಬರ್ ಸಂಚಿಕೆಯಲ್ಲಿ ಅಮೆರಿಕೆಯಲ್ಲಿ ಉನ್ನತ ಶಿಕ್ಷಣ ಪಡೆಯುವದರ ಬಗೆಗೆ ತಿಳಿದಿರುವಿರಷ್ಟೇ. ಆ ಲೇಖನದಲ್ಲಿ ವಿವರಿಸಿದ ಅಡ್ಡಿ-ಆತಂಕಗಳು, ಸವಾಲುಗಳೆಲ್ಲವನ್ನೂ ಎದುರಿಸಿ ಆ ದೇಶದಲ್ಲಿ ಮಿಂಚಿದ ಅನೇಕರ ಸಾಲಿಗೆ ಹುಬ್ಬಳ್ಳಿ ಮಹಾನಗರದ ಅಜಿತ ಅರವಿಂದ ಪ್ರಭುರವರು ಇತ್ತೀಚೆಗೆ ಸೇರಿದುದು ಅಭಿಮಾನ ಪಡುವಂತಹ ಸಂಗತಿಯಾಗಿದೆ.

'ಮನೆಯೇ ಮೊದಲ ಪಾಠಶಾಲೆ; ಮಾತೆಯೇ ಪ್ರಥಮ ಗುರು' ಎಂಬುದನ್ನು ಸಾಕಾರಗೊಳಿಸಿದವರು ನಗರದ ಸುಪರಿಚಿತ ನ್ಯಾಯವಾದಿ ಅರವಿಂದ ಪ್ರಭು ಹಾಗೂ ಅವರ ಪತ್ನಿ ಶಾಲಿನಿಯವರು, ಮಂಗಳೂರು ಮೂಲದ, ಐವತ್ತೇಳು ವರ್ಷದ ಅರವಿಂದರು ಕಳೆದ ಮೂವತ್ತು ವರ್ಷಗಳಿಂದ ಹುಬ್ಬಳ್ಳಿಯಲ್ಲಿ ನೆಲೆಸಿದ್ದು, ಕಳೆದ ಇಪ್ಪತ್ತು ವರ್ಷಗಳಿಂದ ನ್ಯಾಯವಾದಿಗಳಾಗಿದ್ದಾರೆ. ಕಲೆ, ಕಾಯಿದೆ ಪದವೀಧರರಾದ ಅರವಿಂದರ ಪತ್ನಿಯೂ ದಕ್ಷಿಣ ಕನ್ನಡದವರೇ. ಅವರೂ ಸಹ ಪದವಿಪೂರ್ವ ಶಿಕ್ಷಣ ಪೂರ್ತಿಗೊಳಿಸಿದ್ದಾರೆ. ಈ ದಂಪತಿಗೆ ಮುತ್ತಿನಂಥ ಮೂರು ಗಂಡು ಮಕ್ಕಳು: ಅಜಯ್, ಅಜಿತ್ ಮತ್ತು ಅವಿನಾಶ್. ಮೂವರು ಮೇಧಾವಿ ಮಕ್ಕಳಲ್ಲಿ ಯಾರಿಗೂ ಪ್ರಸಿದ್ಧಿಯ ಹಂಬಲವಿಲ್ಲ.

೨೭ ವರ್ಷದ ಅಜಿತ್‌ಗೆ ಕಳೆದ ಮಾರ್ಚ್‌ನಲ್ಲಿಯೇ ೧೫೦೦ ಅಮೆರಿಕನ್ ಡಾಲರ್ (ಸುಮಾರು ೫೭ ಸಾವಿರ ರೂಪಾಯಿ) ಬಹುಮಾನ ಸಹಿತ ಯುವ ಸಂಶೋಧಕ ಪ್ರಶಸ್ತಿ ದೊರಕಿದೆ. ಈ ಯುವಕನ ಆಯ್ಕೆ ಮಾಡಿದುದು ಅಂತಾರಾಷ್ಟ್ರೀಯ ದಂತ ಸಂಶೋಧನ ಸಂಘ.

ಬಾಲ್ಯದಲ್ಲಿಯೇ ಗುರಿಯನ್ನು ಗುರುತಿಸಿಕೊಂಡ ಅಜಿತ್, ಸತತ ಪರಿಶ್ರಮ ಮತ್ತು ಏಕಾಗ್ರಚಿತ್ತದಿಂದ ಹಂತಹಂತವಾಗಿ ಅದರತ್ತ ಧಾಪುಗಾಲಿಕ್ಕುತ್ತಿದ್ದಾರೆ. ಕರ್ನಾಟಕದಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳ ಸ್ಥಿತಿ ಮತ್ತು ಸರಕಾರಿ ಶಿಕ್ಷಣ ಸಂಸ್ಥೆಗಳ ನ್ಯೂನತೆಗಳ ಅರಿವಿದ್ದರೂ ಸಹ ಆತ್ಮವಿಶ್ವಾಸ ಮತ್ತು ಸ್ವಪ್ರಯತ್ನಗಳನ್ನು ಮಗನಲ್ಲಿ ತಂದೆ ತಾಯಿಗಳು ರೂಢಿಸಿದ್ದರಿಂದ ಸ್ಥಳೀಯ ಕನ್ನಡ ಮಾಧ್ಯಮ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ ಅಜಿತ್ ಸರಕಾರಿ ಕಿರಿಯ ತಾಂತ್ರಿಕ ಶಾಲೆಯಲ್ಲಿ ಉನ್ನತ ಪ್ರಥಮ ಶ್ರೇಣಿ ಪಡೆದು ೧೯೮೬ರಲ್ಲಿ ಪ್ರೌಢ ಮಾಧ್ಯಮಿಕ ಶಿಕ್ಷಣವನ್ನು ಪೂರೈಸಿದರು. ಪ್ರತಿಭೆ ಹಾಗೂ ಅದರ ಪ್ರಕಾಶ ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳ ಗುತ್ತಿಗೆಯೆಂಬ ಮೂಢ ನಂಬಿಕೆಯನ್ನು ನುಚ್ಚುನೂರುಗೊಳಿಸಿದ ಅಪ್ಪಟ ಕನ್ನಡ ಪ್ರತಿಭಾವಂತನೀತ! ಹುಬ್ಬಳ್ಳಿಯ ಜಾಬೀನ್ ವಿಜ್ಞಾನ ಮಹಾವಿದ್ಯಾಲಯದಿಂದ ೧೯೮೮ ಉನ್ನತ ಪ್ರಥಮ ಶ್ರೇಣಿಯಲ್ಲಿ ಪದವಿ ಪೂರ್ವ ಶಿಕ್ಷಣ ಪೂರೈಸಿ, ಬಿ.ವಿ. ಭೂಮರೆಡ್ಡಿ ತಾಂತ್ರಿಕ ಮಹಾವಿದ್ಯಾಲಯದಿಂದ ೧೯೯೨ರಲ್ಲಿ ಬಿ.ಇ. (ಮೆಕ್ಯಾನಿಕಲ್) ಪದವಿಯನ್ನು ಉನ್ನತ ಪ್ರಥಮ ಶ್ರೇಣಿಯಲ್ಲಿ ಗಳಿಸಿದರು.

ಅದೇ ವರ್ಷ ಅಮೇರಿಕೆಯ ನ್ಯೂಯಾರ್ಕ್‌ನ ಟ್ರಾಯ್‌ನಲ್ಲಿ ಸಂಶೋಧನ ಸಹಾಯಕರಾಗಿ ಸೇರಿದರು. ವರ್ಜೀನಿಯಾದ ಓಲ್ಡ್ ಡೊಮಿನಿಯನ್ ವಿಶ್ವವಿದ್ಯಾಲಯದಿಂದ ೧೯೯೪ರಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಹಾಗೂ ಟ್ರಾಯ್‌ನಲ್ಲಿಯ ರೆನ್ಸ್‌ಲೀರ್ ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟ್‌ನಿಂದ ೧೯೯೬ರಲ್ಲಿ ಬಯೋ-ಮೆಡಿಕಲ್ ಎಂಜಿನಿಯರಿಂಗ್‌ದಲ್ಲಿ ಎಂ.ಎಸ್. ಪದವಿಗಳನ್ನು ಗಳಿಸಿದರು.

೧೯೯೬ ಮೇ ತಿಂಗಳಿನಲ್ಲಿ ಮುಂಬೈ ವಿಶ್ವವಿದ್ಯಾಲಯದ ಎಂ.ಕಾಮ್. ಪದವೀಧರೆ ಬಬಿತಾ ಪೈ ಅವರ ಕೈ ಹಿಡಿದ ಅಜಿತ್, ಏಪ್ರಿಲ್ ತಿಂಗಳಲ್ಲಿ ಅನ್ವಿತೆಯ ತಂದೆಯಾಗಿದ್ದಾರೆ.

ದಂತಶಾಸ್ತ್ರ ಸಂಬಂಧಿತ ಬಯೋ-ಮೆಡಿಕಲ್ ಎಂಜಿನಿಯರಿಂಗ್ ಜ್ಞಾನಕ್ಷೇತ್ರದಲ್ಲಿ ಈಗ ಸಂಶೋಧನ ನಿರತರಾಗಿರುವ ಅಜಿತ್ ತಮ್ಮ ಪ್ರೌಢ ಪ್ರಬಂಧ ಸಲ್ಲಿಕೆಯ ಕೊನೆಯ ಹಂತ ತಲುಪಿದ್ದು ೧೯೯೮ರ ಮಧ್ಯದಲ್ಲಿ ಡಾ. ಅಜಿತ್ ಅರವಿಂದ್ ಪ್ರಭು ಆಗುವದರಲ್ಲಿದ್ದಾರೆ.

ಸುಖೀ ದಾಂಪತ್ಯ ಜೀವನ ಸಾಗಿಸುತ್ತಿರುವ ಅಜಿತ್‌ಗೆ ನಿರಂತರ ಜ್ಞಾನ ಸಂಗ್ರಹದಲ್ಲಿ ಅಪಾರ ಆಸಕ್ತಿ. ನೀರ್ಗಲ್ಲು ಜಾರಾಟವೂ ಸಹ ಅವರ ಮೆಚ್ಚಿಕೆಯ ಹವ್ಯಾಸ. ಸ್ವಂತದ ತುತ್ತೂರಿ ಊದುವದನ್ನು ಬಯಸದ ಅವರ ಸ್ವಭಾವದ ಕಾರಣ ಅವರ ಪ್ರಶಸ್ತಿಯ ಸಂತೋಷಕರ ವಾರ್ತೆ ಸಾರ್ವಜನಿಕರನ್ನು ಅವರ ತಂದೆ-ತಾಯಿಗಳ ಮುಖಾಂತರ ಎಂಟು ತಿಂಗಳ ನಂತರ ತಲುಪಿತು. ಕರ್ನಾಟಕದ ಈ ಹೆಮ್ಮೆಯ ಪುತ್ರನ ಸಾಧನೆ ವಿದ್ಯಾರ್ಥಿಗಳ ಬದುಕಿನಲ್ಲಿ ಸ್ಫೂರ್ತಿ ಸ್ಫುರಿಸುವುದರಲ್ಲಿ ಸಂದೇಹವಿಲ್ಲ.

○ ಟಿ. ಕೆ. ತಾಪಸ್

ಹೊಟೇಲ್ ಮ್ಯಾನೇಜ್‌ಮೆಂಟ್‌ನಲ್ಲಿ ಡಿಪ್ಲೊಮಾ

ಮೂರು ವರ್ಷದ ಹೋಟೆಲ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾಕ್ಕೆ ಮೊದಲ ವರ್ಷದ ಪ್ರವೇಶಕ್ಕಾಗಿ ಸಂಯುಕ್ತ ಪ್ರವೇಶ ಪರೀಕ್ಷೆ

ನ್ಯಾಷನಲ್ ಕೌನ್ಸಿಲ್ ಫಾರ್ ಹೋಟೆಲ್ ಮ್ಯಾನೇಜ್‌ಮೆಂಟ್ ಅಂಡ್
ಕ್ಯಾಟರಿಂಗ್ ಟೆಕ್ನಾಲಜಿ,
ಲೈಬ್ರರಿ ಅವಿನ್ಯೂ, ಪ್ರಸಾ ಕಾಂಪ್ಲೆಕ್ಸ್, ಹೊಸದೆಹಲಿ - ೧೧೦ ೦೧೨

ಅಹಮದಾಬಾದ್, ಬೆಂಗಳೂರು, ಭೂಪಾಲ್, ಭುವನೇಶ್ವರ, ಕಲ್ಕತ್ತ ಚಂಡೀಗಢ, ಚೆನ್ನೈ (ಮದ್ರಾಸ್) ದೆಹಲಿ, ಗೋವಾ, ಗುರುದಾಸಪುರ, ಗೌಹಾಟಿ, ಗ್ವಾಲಿಯರ್, ಹೈದರಾಬಾದ್, ಜೈಪುರ, ಲಕ್ನೋ, ಮುಂಬೈ ಶಿಮ್ಲಾ, ಶ್ರೀನಗರ ಮತ್ತು ತಿರುವನಂತಪುರದಲ್ಲಿರುವ ಹೋಟೆಲ್ ಮ್ಯಾನೇಜ್‌ಮೆಂಟ್ ಕ್ಯಾಟರಿಂಗ್ ಟೆಕ್ನಾಲಜಿ ಮತ್ತು ಅಪ್ಲೈಡ್ ನ್ಯೂಟ್ರಿಷನ್‌ನ ಸಂಸ್ಥೆಗಳಲ್ಲಿ ಮೂರು ವರ್ಷದ ಡಿಪ್ಲೋಮಾಕ್ಕೆ ಮೊದಲ ವರ್ಷದ ಪ್ರವೇಶಕ್ಕಾಗಿ ೧೯೯೮-೯೯ನೇ ಸಾಲಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹತೆ

ವಿದ್ಯಾರ್ಹತೆ : ಅಭ್ಯರ್ಥಿಯು ೧೦+೨ ವರ್ಷಗಳ ಪರೀಕ್ಷೆಯನ್ನು ಅಥವಾ ಅದಕ್ಕೆ ತತ್ಸಮಾನವಾದ ಪರೀಕ್ಷೆಗಳನ್ನು ಅಂದರೆ ಪಿ.ಯು.ಸಿ. ಪಾಸು ಮಾಡಿರಬೇಕು. ಈ ಪರೀಕ್ಷೆಗಳಲ್ಲಿ ಇಂಗ್ಲಿಷ್ ಕಡ್ಡಾಯವಾಗಿ ತೆಗೆದುಕೊಂಡಿರಬೇಕು. ೧೯೯೭-೯೮ನೇ ಸಾಲಿನಲ್ಲಿ ಪಿ.ಯು.ಸಿ. ಪರೀಕ್ಷೆಯನ್ನು ತೆಗೆದುಕೊಂಡಿರುವವರೂ ಅರ್ಜಿ ಸಲ್ಲಿಸಬಹುದು. ಆದರೆ ಪ್ರವೇಶದ ಸಂದರ್ಭದಲ್ಲಿ ಅರ್ಹತಾ ಪರೀಕ್ಷೆಯಲ್ಲಿ ಅಂದರೆ ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು. ಒಂದು ವೇಳೆ ಅರ್ಹತಾ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಪ್ರವೇಶವನ್ನು ನಿರಾಕರಿಸಲಾಗುವುದು.

ವಯೋಮಿತಿ : ೧.೭.೧೯೯೮ಕ್ಕೆ ೨೨ ವರ್ಷ ಮೀರಿರಬಾರದು ಪರಿಶಿಷ್ಟಜಾತಿ/ಪಂಗಡದ ಅಭ್ಯರ್ಥಿಗಳಿಗೆ ೨೫ ವರ್ಷಗಳವರೆಗೆ ರಿಯಾಯಿತಿ ಇದೆ.

ಮೀಸಲಾತಿ : ಶೇ.೧೫ರಷ್ಟು ಸ್ಥಾನಗಳನ್ನು ಪರಿಶಿಷ್ಟ ಜಾತಿಗೆ ಶೇ.೭.೫ರಷ್ಟು ಸ್ಥಾನಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿಡಲಾಗಿದೆ.

ಆಯ್ಕೆ ಮಾಡುವ ವಿಧಾನ

ಅಭ್ಯರ್ಥಿಗಳು ವಸ್ತುನಿಷ್ಠ ಪ್ರಶ್ನೆಗಳ ಲಿಖಿತ ಪರೀಕ್ಷೆಗೆ ದಿನಾಂಕ ೫.೪.೧೯೯೮ರ ಭಾನುವಾರ ನಿಗದಿತ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಾಗಬೇಕು. (ಕೋಡ್ ಪಟ್ಟಿ೧) ಎ.ರೀಸನಿಂಗ್ ಅಂಡ್ ಲಾಜಿಕಲ್ ಡಿಡಕ್ಷನ್ (Reasoning and Logical deduction) **ಬಿ.** ಸಂಖ್ಯಾ ಸಾಮರ್ಥ್ಯ ಮತ್ತು ವೈಜ್ಞಾನಿಕ ಮನೋಭಾವ ಸಿ. ಸಾಮಾನ್ಯಜ್ಞಾನ **ಡಿ.** ಇಂಗ್ಲಿಷ್ ಭಾಷೆ ಈ ನಾಲ್ಕು ವಿಷಯಗಳಲ್ಲಿ ಮೇಲಿನ ಎ.ಬಿ.ಸಿ.ಯನ್ನು ಇಂಗ್ಲಿಷ್ ಅಥವಾ ಹಿಂದಿ ಮಾಧ್ಯಮಗಳಲ್ಲಿ ಉತ್ತರಿಸಬಹುದು. ಈ ಪರೀಕ್ಷೆಯು ಅಭ್ಯರ್ಥಿಯ ಸಾಮರ್ಥ್ಯವನ್ನು ಅಳೆಯುವ ಪರೀಕ್ಷೆಯಾಗಿರುತ್ತದೆ.

ಲಿಖಿತ ಪರೀಕ್ಷೆಯ ಸಾಮರ್ಥ್ಯದ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳನ್ನು ಕಲ್ಕತ್ತ ಚಂಡೀಗಢ, ಚೆನ್ನೈ, ದೆಹಲಿ, ಲಕ್ನೊ, ಮುಂಬೈಗಳಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಯಲ್ಲಿನ ಗುಣಮಟ್ಟವನ್ನು ಅನುಸರಿಸಿ ಆಯ್ಕೆ ಮಾಡಲಾಗುತ್ತದೆ. ಕ್ರೀಡೆ, ಕ್ರಾಫ್ಟ್ ಕೋರ್ಸ್, ಕ್ಯಾಟರಿಂಗ್ ಮತ್ತು ಕ್ರಾಫ್ಟ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ತರಬೇತಿ ಪಡೆದಿದ್ದರೆ ಇದನ್ನು ಆಯ್ಕೆ ಸಂದರ್ಭದಲ್ಲಿ ಪರಿಗಣಿಸಲಾಗುವುದು. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರ ಇರುವುದಿಲ್ಲ.

ಅರ್ಜಿ ಸಲ್ಲಿಸುವ ವಿಧಾನ

ಈ ಕೆಳಗೆ ನಿಗದಿಪಡಿಸಿರುವ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ವಿವರಗಳನ್ನು ದಪ್ಪಕ್ಷರಗಳಲ್ಲಿ ಬರೆಯಬೇಕು. ಕವರಿನ ಮೇಲೆ ಪರೀಕ್ಷಾ ಕೇಂದ್ರದ ಸಂಖ್ಯೆ ಮತ್ತು Category ಕೋಡನ್ನು ಬರೆಯಬೇಕು.

೧. ರೂ. ೪೦೦ರ ಅಕೌಂಟ್‌ಪೇಯಿ ಡಿಮ್ಯಾಂಡ್ ಡ್ರಾಫ್ಟ್‌ನ್ನು (ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ. ೧೨೦) ನ್ಯಾಷನಲ್ ಕೌನ್ಸಿಲ್ ಫಾರ್ ಹೋಟೆಲ್ ಮ್ಯಾನೇಜ್‌ಮೆಂಟ್ ಅಂಡ್ ಕ್ಯಾಟರಿಂಗ್ ಟೆಕ್ನಾಲಜಿ ಎಂಬ ಹೆಸರಿಗೆ ಯಾವುದೇ ಸಿಂಡಿಕೇಟ್ ಬ್ಯಾಂಕ್ ಶಾಖೆಯಲ್ಲಿ ತೆಗೆದು ಅರ್ಜಿಯೊಂದಿಗೆ ಕಳುಹಿಸಬೇಕು. ಹೊಸದೆಹಲಿಯಲ್ಲಿ ಅದು ನಗದೀಕರಿಸಿಕೊಳ್ಳುವಂತಿರಬೇಕು. ಅಭ್ಯರ್ಥಿಯು ಡಿಮ್ಯಾಂಡ್ ಡ್ರಾಫ್ಟಿನ ಹಿಂದೆ ಅವನ/ಅವಳ ಹೆಸರು, ವಿಳಾಸವನ್ನು ತಪ್ಪದೆ ಬರೆಯಬೇಕು. ಹಾಗೆಯೇ ಡಿ.ಡಿ. ತೆಗೆದು ಕೊಂಡಿರುವ ಬ್ಯಾಂಕಿನ ಕೋಡ್ ಸಂಖ್ಯೆ, ನಗದೀಕರಿಸಿಕೊಳ್ಳುವ ಬ್ಯಾಂಕಿನ ಕೋಡ್ ಸಂಖ್ಯೆಯನ್ನು ಎಚ್ಚರಿಕೆಯಿಂದ ನಮೂದಿಸಬೇಕು.

೨. ೨೩x೧೨ ಸೆಂ.ಮಿ. ಸ್ವ ವಿಳಾಸದ ಲಕೋಟೆಗೆ ರೂ. ೨ರ ಸ್ಟಾಂಪ್ ಹಚ್ಚಿ, ಹೆಸರು-ತಂದೆಯ ಹೆಸರು ಮತ್ತು ವಿಳಾಸವನ್ನು ಪಿನ್‌ಕೋಡಿನೊಂದಿಗೆ ಬರೆದು ಅರ್ಜಿಯೊಂದಿಗೆ ಕಳುಹಿಸಬೇಕು.

೩. ರೂ. ೧.೫೦ರ ಸ್ವ ವಿಳಾಸದ ಅಂಚೆ ಕಾರ್ಡನ್ನು ಸ್ವೀಕೃತಿಗಾಗಿ ಕಳುಹಿಸಬೇಕು. ರೂ. ೧.೫೦ಕ್ಕಿಂತ ಕಡಿಮೆ ಮೌಲ್ಯದ ಸ್ಟಾಂಪ್ ಹಚ್ಚಿದ್ದರೆ ಸ್ವೀಕೃತಿ ಕಳುಹಿಸುವುದಿಲ್ಲ.

೪. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರದ ನಕಲನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಅರ್ಜಿಯೊಂದಿಗೆ ಕಳುಹಿಸಬೇಕು.

ಅರ್ಜಿಗಳು ನಿಗದಿತ ನಮೂನೆಯಲ್ಲಿರದಿದ್ದರೆ, ಅಪೂರ್ಣವಾಗಿದ್ದರೆ, ಸಹಿ ಇಲ್ಲದಿದ್ದರೆ. ನಿಗದಿತ ಫೀ ಸಲ್ಲಿಸದಿದ್ದರೆ ಸ್ವವಿಳಾಸದ ಲಕೋಟೆಗೆ ರೂ. ೨ರ ಸ್ಟಾಂಪ್ ಹಚ್ಚದಿದ್ದರೆ ಯಾವುದೇ ಕಾರಣಕ್ಕೂ ಅರ್ಜಿಯನ್ನು ಅಂಗೀಕರಿಸುವುದಿಲ್ಲ.

ಸಂಪೂರ್ಣವಾದ ವಿವರಗಳನ್ನೊಳಗೊಂಡ ಅರ್ಜಿಗಳನ್ನು ದಿನಾಂಕ ೧೬.೨.೧೯೯೮ರೊಳಗೆ ತಲುಪುವಂತೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ನಿಗದಿತ ದಿನಾಂಕದ ನಂತರ ತಲುಪುವ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ.

ಪೋಸ್ಟ್ ಬ್ಯಾಗ್ ನಂಬರ್ ೨೨೮೧,
ಚಾಣಕ್ಯ ಪುರಿ ಪಿ.ಒ.
ಹೊಸ ದೆಹಲಿ - ೧೧೦ ೦೨೧

ಮುಖ್ಯ ಸೂಚನೆಗಳು


೧. ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಲಿಖಿತ ಮತ್ತು ಮೌಖಿಕ ಪರೀಕ್ಷೆಗೆ ಹಾಜರಾಗಬೇಕು.

೨. ಅಭ್ಯರ್ಥಿಯು ಆಯ್ಕೆ ಮಾಡಿಕೊಂಡಿರುವ ಲಿಖಿತ/ಮೌಖಿಕ ಪರೀಕ್ಷಾ ಕೇಂದ್ರವನ್ನು ಒಮ್ಮೊಮ್ಮೆ ರದ್ದು ಪಡಿಸುವ ಸಂಭವವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಅಭ್ಯರ್ಥಿಯು ತನ್ನ ಸ್ವಂತ ಖರ್ಚಿನಲ್ಲಿ ಬದಲಾವಣೆಯಾದ ಕೇಂದ್ರದಲ್ಲಿ ಲಿಖಿತ/ಮೌಖಿಕ ಪರೀಕ್ಷೆಗೆ ಹಾಜರಾಗಬೇಕಾಗುತ್ತದೆ.

೩. ಯಾವುದೇ ಕಾರಣಕ್ಕೂ ಲಿಖಿತ/ಮೌಖಿಕ ಪರೀಕ್ಷೆಯ ಕೇಂದ್ರಗಳನ್ನು ಬದಲಾವಣೆ ಮಾಡುವುದಿಲ್ಲ.

೪. ಅಭ್ಯರ್ಥಿಗಳಿಗೆ ಯಾವುದೇ ವಿವರಗಳು ಲಭ್ಯವಾಗದಿದ್ದಲ್ಲಿ ಲಿಖಿತ ಪರೀಕ್ಷೆಗೆ ೧೦ ದಿವಸಕ್ಕೆ ಮೊದಲು ಕೌನ್ಸಿಲ್ ಕಛೇರಿಯನ್ನು ಪ್ರಮಾಣೀಕರಿಸಿರುವ ಬ್ಯಾಂಕ್ ಡ್ರಾಫ್ಟ್ ಹಾಗೂ ಪರೀಕ್ಷಾ ಕೇಂದ್ರದ ವಿವರ ಹಾಗೂ ಅಂಚೆ ವಿಳಾಸದೊಂದಿಗೆ ಸಂಪರ್ಕಿಸಬೇಕು. ಆಗ ಲಿಖಿತ/ಮೌಖಿಕ ಪರೀಕ್ಷೆಗೆ ಡೂಪ್ಲಿಕೇಟ್ ಪ್ರವೇಶ ಪತ್ರ ನೀಡಲಾಗುವುದು.

೫. ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.



WRITTEN TEST CENTRES CODE LIST - I

Centre	Code	Centre	Code	Centre	Code	Centre	Code
Ahmedabad	21	Delhi	29	Jamshedpur	37	Shillong	45
Bangalore	22	Dharwad	30	Jammu	38	Shimla	46
Bhopal	23	Goa	31	Kolhapur	39	Thiruvananthapuram	47
Bhubaneswar	24	Gurdaspur	32	Lucknow	40	Udaipur	48
Calcutta	25	Guwaahati	33	Mumbai	41	Varanasi	49
Chandigarh	26	Gwalior	34	Patna	42	Visakhapatnam	50
Chennai	27	Hydeabad	35	Pondicherry	43		
Cochin	28	Jaipur	36	Rourkela	44		

CODE LIST - II

Category	Code
General	01
SC	02
ST	03

CODE LIST - III

Place of Interview	Code
Calcutta	10
Chandigarh	11
Chennai	12
Delhi	13
Lucknow	14
Mumbai	15

NATIONAL COUNCIL FOR HOTEL MANAGEMENT & CATERING TECHNOLOGY

APPLICATION FORM

Last date for Receipt of Applications : 16-02-1998
Written Test on : 05-04-1998

(USE CAPITAL LETTERS)
(TO BE FILLED WITH BALL-POINT PEN)

Reg. No. ______________ (For office use only)

1. Centre for Written Test (Refer Code List-I) Code [|] Centre [ ]

2. Name : [ ]
First Middle Surname

3. Address for Correspondence : [ ]
PIN [ ]

4. Father's Name : [ ]

5. Category you belong to (Refer Code List II) Code [|]

6. Place of Interview if qualified in Written Examination (Refer Code List-III) CODE [|]

7. Date of Birth : (e.g. Write 1st Sept. 1978 as)

DATE		MONTH		YEAR	
0	1	0	9	7	8

DATE		MONTH		YEAR	

8. Age in completed years as on 1.7.1998

DAYS		MONTHS		YEARS	

6. a) Status of 10+2 Examination (Write P for Passed and A for Appearing) [ ]
b) Had English as Compulsory Subject (Show by ✓) YES NO

10. Sex (Write M for Male and F for Female) : [ ]

11. Academic stream you belong to (Write A for Arts, C for Commerce, S for Science and V for Vocational) [ ]

12. DEMAND DRAFT NO. ____________ DATED ____________ AMOUNT RS. __________ BANK ______________ BRANCH CODE ____________

DECLARATION : I hereby declare that the particulars furnished above are true and correct to the best of my knowledge. I have carefully gone through and understood the conditions of admission as published in the Admission Notice.,

Place ______________ Date ________________ Signature of the candidate ____________________ State of domicile [ ]

ಕೃತಿ - ಕರ್ತೃ

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಮಾನ್ಯವಾಗಿ ಕೇಳುವ ಪ್ರಪಂಚದ ಖ್ಯಾತ ಗ್ರಂಥಗಳು ಹಾಗೂ ಅವುಗಳ ಲೇಖಕರ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ.

೧.	ಎಮ್ಮೈಲ್ [EMILE]	ಜೆ.ಜೆ. ರೂಸೋ
೨.	ಎಸ್ಸೆ ಆನ್ ಲೈಫ್	ಸಾಮ್ಯುಯೆಲ್ ಬಟ್ಲರ್
೩.	ಈಟರ್ನಿಟಿ	ಅನ್ವರ್‌ಷೇಕ್
೪.	ಈಥಿಕ್ಸ್	ಅರಿಸ್ಟಾಟಲ್
೫.	ಎಸ್ಸೆ ಆನ್ ಗೀತಾ	ಅರವಿಂದ ಘೋಷ್
೬.	ದ ಫೌಂಡರ್	ಗಂಟರ್ ಗ್ರಾಸ್
೭.	ಫುಲ್ ಮೂನ್	ಪಿ.ಜಿ. ಓಡೌಸ್
೮.	ಫ್ರೆಂಡ್ಸ್ ಆ್ಯಂಡ್ ಮಾಸ್ಟರ್ಸ್	ಆಯುಬ್‌ಖಾನ್
೯.	ಫ್ರೆಂಡ್ಸ್ ಆ್ಯಂಡ್ ಫೋಸ್	ಶೇಕ್ ಮುಜಿಬರ್ ರೆಹಮಾನ್
೧೦.	ಫುಡ್ ನ್ಯುಟ್ರಿಶನ್ ಆ್ಯಂಡ್ ಪಾವರ್ಟಿ ಇನ್ ಇಂಡಿಯಾ	ವಿ.ಕೆ.ಆರ್.ವಿ. ರಾವ್
೧೧.	ಫ್ಲ್ಯಾಗ್ಸ್ ಇನ್ ದ ಡಸ್ಟ್	ವಿಲಿಯಂ ಫಾಲ್ಕನರ್
೧೨.	ಗಾಂಧಿ ಆ್ಯಂಡ್ ಸ್ಟಾಲಿನ್	ಲೂಯಿಸ್ ಫಿಶರ್
೧೩.	ಗಾರ್ಡನರ್	ರವೀಂದ್ರನಾಥ ಠಾಗೂರ್
೧೪.	ಗೀತ ರಹಸ್ಯ	ಬಾಲ ಗಂಗಾಧರ ತಿಲಕ
೧೫.	ಗೋದಾನ	ಪ್ರೇಂ ಚಂದ
೧೬.	ದಿ ಗೋಲ್ಡನ್ ಗೇಟ್	ವಿಕ್ರಂ ಸೇಠ್
೧೭.	ಗ್ರಾಮರ್ ಆಫ್ ಪಾಲಿಟಿಕ್ಸ್	ಹೆರಾಲ್ಡ್ ಜೋಸೆಫ್ ಲಾಸ್ಕಿ
೧೮.	ಗುಡ್ ಅರ್ಥ್	ಪರ್ಲ್ ಎಸ್. ಬಕ್
೧೯.	ಗೈಡ್	ಆರ್.ಕೆ. ನಾರಾಯಣ
೨೦.	ಗ್ರೇಟ್ ಟ್ರಾಜಡಿ	ಜೆಡ್.ಎ. ಭುಟ್ಟೊ
೨೧.	ಹ್ಯಾಮ್ಲೆಟ್	ಷೇಕ್ಸ್‌ಪಿಯರ್
೨೨.	ಹಿಂದು ಇಜಂ	ನೀರಧ್ ಸಿ. ಚೌಧರಿ
೨೩.	ಹೀಟ್ ಆ್ಯಂಡ್ ಡಸ್ಟ್	ರೂತ್ ಪ್ರಾವರ್ ಝಬ್ವಾಲಾ
೨೪.	ಹೋಂ ಕಮಿಂಗ್ಸ್	ಸಿ.ಪಿ. ಸ್ನೋ
೨೫.	ಹಿಂದು ವ್ಯೂ ಆಫ್ ಲೈಫ್	ಡಾ. ಎಸ್. ರಾಧಾಕೃಷ್ಣನ್
೨೬.	ವಾರ್ ಆ್ಯಂಡ್ ಪೀಸ್	ಲೀಯೋ ಟಾಲ್‌ಸ್ಟಾಯ್
೨೭.	ನಾಕುತಂತಿ	ದ.ರಾ. ಬೇಂದ್ರೆ
೨೮.	ಹಂಗ್ರಿ ಸ್ಟೋನ್ಸ್	ರವೀಂದ್ರನಾಥ ಟಾಗೂರ್
೨೯.	ಹ್ಯೂಮನ್ ನಾಲೇಜ್	ಬರ್ಟ್ರೆಂಡ್ ರಸೆಲ್
೩೦.	ಆಯ್ ಆ್ಯಮ್ ನಾಟ್ ಇನ್‌ಲ್ಯಾಂಡ್	ಕೆ.ವಿ. ಅಬ್ಬಾಸ್
೩೧.	ಗಾಡ್ ಆ್ಯಂಡ್ ಬೈಬಲ್	ಅರ್ನಾಲ್ಡ್ ಮ್ಯಾಥ್ಯೂ
೩೨.	ಐ ಫಾಲೋ ದ ಮಹಾತ್ಮಾ	ಕೆ.ಎಂ. ಮುನ್ಷಿ
೩೩.	ಐಡಾಲ್ಸ್	ಸುನೀಲ್ ಗಾವಸ್ಕರ್
೩೪.	ಇಲಿಯಡ್	ಹೋಮರ್
೩೫.	ಇನ್ ಸರ್ಚ್ ಆಫ್ ಗಾಂಧಿ	ರಿಚರ್ಡ್ ಅಟೆನ್ ಬರೋ
೩೬.	ಇಂಡಿಯನ್ ಹೋಂ ರೂಲ್	ಎಂ.ಕೆ. ಗಾಂಧಿ
೩೭.	ಇಂಡಿಯನ್ ವಾರ್ ಆಫ್ ಇಂಡಿಪೆಂಡೆನ್ಸ್	ವಿ.ಡಿ. ಸಾವರಕರ್
೩೮.	ಇಂಡಿಯನ್ ಫಿಲಾಸಫಿ	ಡಾ. ಎಸ್. ರಾಧಾಕೃಷ್ಣ
೩೯.	ಇಂಡಿಯಾ ವಿನ್ಸ್ ಫ್ರೀಡಂ	ಮೌಲಾನ ಅಬುಲ್ ಕಲಾಂ ಆಜಾದ್
೪೦.	ಇಂಡಿಯಾ ಟುಡೆ	ರಂಜಿತ್ ಪಾಮೆ ದತ್
೪೧.	ಇಂಡಿಯಾ ಡಿವೈಡೆಡ್	ಡಾ. ರಾಜೇಂದ್ರ ಪ್ರಸಾದ್
೪೨.	ಇಂಡಿಯಾ (India)	ಮೆಘಾಸ್ತನೀಸ್
೪೩.	ಜುರಾಸಿಕ್ ಪಾರ್ಕ್	ಮಿಚೆಲ್ ಕ್ರಿಕ್‌ಟನ್
೪೪.	ಜೂಲಿಯಸ್ ಸೀಜರ್	ವಿಲಿಯಂ ಶೇಕ್ಸ್‌ಪಿಯರ್
೪೫.	ದ ಜಡ್ಜ್‌ಮೆಂಟ್	ಕುಲದೀಪ ನಯ್ಯರ್
೪೬.	ದ ಜೋಕ್	ಮಿಲನ್ ಕುಂದೇರಾ
೪೭.	ಕಿಂಗ್ ಲಿಯರ್	ಶೇಕ್ಸ್‌ಪಿಯರ್
೪೮.	ಕಾಶ್ಮೀರ್ ಬಿಹೈಂಡ್ ದ ವೈಲ್	ಎಂ.ಜೆ. ಅಕಬರ್
೪೯.	ಕಾಮಾಯಣಿ	ಜೈ ಶಂಕರ್ ಪ್ರಸಾದ್
೫೦.	ಕಾದಂಬರಿ	ಬಾಣ ಭಟ್ಟ
೫೧.	ಲೋಟಸ್ ಈಟರ್ಸ್	ಎ. ಟೆನಿಸನ್
೫೨.	ಕಿಂಗ್ ಆಫ್ ಡಾರ್ಕ್ ಚೇಂಬರ್	ರವೀಂದ್ರನಾಥ ಟಾಗೂರ್
೫೩.	ಲಾಸ್ಟ್ ಬರ್ಡನ್	ಉಪಮನ್ಯು ಚಟರ್ಜಿ
೫೪.	ಲಜ್ಜಾ	ತಸ್ಲೀಮಾ ನಸ್ರೀನ್
೫೫.	ಲವ್ ಸ್ಟೋರಿ	ಎರಿಕ್ ಸೀಗಲ್
೫೬.	ಲಾಸ್ಟ್ ಚೈಲ್ಡ್	ಮಲ್ಕ್‌ರಾಜ್ ಆನಂದ್
೫೭.	ಮ್ಯಾಕ್‌ಬೆತ್	ವಿಲಿಯಂ ಶೇಕ್ಸ್‌ಪಿಯರ್
೫೮.	ಮೇಘದೂತ	ಕಾಳಿದಾಸ
೫೯.	ಮ್ಯಾನ್‌ಕೈಂಡ್ ಆ್ಯಂಡ್ ಮದರ್ ಅರ್ಥ್	ಆರ್ನಾಲ್ಡ್ ಟಾಯ್ನ್‌ಬೀ
೬೦.	ಮಹಾತ್ಮಾಗಾಂಧಿ	ರೋಮೇನ್ ರೋಲಂಡ್
೬೧.	ಮ್ಯಾನ್‌ಫಾರ್ ಮಾಸ್ಕೊ	ಜೆ. ಪೈನ್
೬೨.	ದ ಮಾಸ್ಟರ್ಸ್	ಸಿ.ಪಿ. ಸ್ನೋ
೬೩.	ಮೈ ಡೇಸ್	ಆರ್.ಕೆ. ನಾರಾಯಣ
೬೪.	ಮೈ ಲೈಫ್ ಆ್ಯಂಡ್ ಟೈಮ್ಸ್	ವಿ.ವಿ. ಗಿರಿ
೬೫.	ಮೈ ಟ್ರುಥ್	ಇಂದಿರಾ ಗಾಂಧಿ
೬೬.	ಮೈ ಪ್ರೆಸಿಡೆನ್ಸಿಯಲ್ ಇಯರ್ಸ್	ಆರ್. ವೆಂಕಟರಾಮನ್
೬೭.	ಮೈ ಅರ್ಲಿ ಲೈಫ್	ಎಂ.ಕೆ. ಗಾಂಧಿ
೬೮.	ಮುದ್ರಾರಾಕ್ಷಸ	ವಿಶಾಖದತ್ತ
೬೯.	ಮದರ್	ಮ್ಯಾಕ್ಸಿಂ ಗೋರ್ಕಿ
೭೦.	ಮೂಕಜ್ಜಯ ಕನಸುಗಳು	ಕೆ.ಎಸ್. ಕಾರಂತ
೭೧.	ಮಿಡ್‌ನೈಟ್ಸ್ ಚಿಲ್ಡ್ರನ್	ಸಲ್ಮಾನ್ ರಷ್ದಿ
೭೨.	ಮೃಣಾಲಿನಿ	ಬಂಕಿಮಚಂದ್ರ ಚಟರ್ಜಿ
೭೩.	ನಾನಾ	ಎಮ್ಮೈಲ್ ಜೋಲಾ
೭೪.	ನಾಟ್ಯಶಾಸ್ತ್ರ	ಭರತಮುನಿ
೭೫.	ರಂಗಭೂಮಿ	ಪ್ರೇಂ ಚಂದ
೭೬.	ನೇತಾಜಿ ಡೆಡ್ ಆರ್ ಅಲೈವ್	ಸಾಮರ್ ಗುಹ
೭೭.	ನೀತಿ ಶತಕ	ಬೃತ್ರುಹರಿ
೭೮.	ಒಡಿಸ್ಸಿ	ಹೋಮರ್
೭೯.	ಆಪರೇಶನ್ ಷೈಲ್ಯಾಕ್	ಫಿಲಿಪ್ ರಾತ್
೮೦.	ಪಾಕಿಸ್ತಾನ್ ಪೇಪರ್ಸ್	ಮಣಿಶಂಕರ್ ಅಯ್ಯರ್


ಸಂಗ್ರಹ: **ಶಿ.ಕಾ. ಬಡಿಗೇರ**

ಲೋಕಸೇವೆ ಆಯೋಗದಿಂದ ಅರ್ಜಿ ಆಹ್ವಾನ

ಕಿರಿಯ ಸಹಾಯಕ, ದ್ವಿತೀಯ ದರ್ಜೆ ಸಹಾಯಕ ಹುದ್ದೆಗಳ ನೇಮಕಕ್ಕೆ ಕರ್ನಾಟಕ ಲೋಕ ಸೇವಾ ಆಯೋಗ ಅರ್ಜಿ ಆಹ್ವಾನಿಸಿದೆ.

ಅಭ್ಯರ್ಥಿಗಳ ಆಯ್ಕೆ ಮಾಡಲು ನಡೆಸಬೇಕಿರುವ ವಸ್ತುನಿಷ್ಠ ಬಹು ಆಯ್ಕೆ ಮಾದರಿಯ ಸ್ಪರ್ಧಾತ್ಮಕ ಪರೀಕ್ಷೆ ಮೇ ೧೦ ರಂದು ನಡೆಯಲಿದೆ.

ಬಹು ಆಯ್ಕೆ ರೂಪದ ಪ್ರಶ್ನೆಗಳು



ಇತಿಹಾಸ

೧. ಟಿಪ್ಪುಸುಲ್ತಾನ್ ಎಷ್ಟನೇ ಮೈಸೂರು ಯುದ್ಧದಲ್ಲಿ ಮರಣಸಿದನು
ಅ. ೧ನೇಯದು ಬ. ೨ನೇಯದು
ಕ. ೩ನೇಯದು ಡ. ೪ನೇಯದು

೨. ಬ್ರಿಟನ್‌ದಿಂದ ದಕ್ಷಿಣ ಆಫ್ರಿಕಾ ಸ್ವಾತಂತ್ರ ಪಡೆದದ್ದು ಯಾವಾಗ
ಅ. ೧೯೩೦ ಬ. ೧೯೪೦
ಕ. ೧೯೩೩ ಡ. ೧೯೩೧

೩. ಇಂಡಿಯನ್ ನೆಪೋಲಿಯನ್ ಎಂದು ಹೆಸರು ಪಡೆದ ರಾಜ
ಅ. ಸಮುದ್ರಗುಪ್ತ ಬ. ಚಂದ್ರಗುಪ್ತ
ಕ. ಔರಂಗಜೇಬ ಡ. ಟಿಪ್ಪುಸುಲ್ತಾನ

೪. ಏಸುಕ್ರಿಸ್ತನನ್ನು ಶಿಲುಬೆಗೇರಿಸಿದ ದಿನ ಯಾವುದು
ಅ. ಭಾನುವಾರ ಬ. ಶುಕ್ರವಾರ
ಕ. ಸೋಮವಾರ ಡ. ಶನಿವಾರ

೫. ಅನಿಬೆಸೆಂಟ್ ಸ್ಥಾಪಿಸಿದ ಪತ್ರಿಕೆ ಹೆಸರು
ಅ. ನ್ಯೂ ಇಂಡಿಯಾ
ಬ. ಬೆಂಗಾಲಿಗೆಜೆಟ್
ಕ. ಟೈಮ್ಸ್ ಆಫ್ ಇಂಡಿಯಾ
ಡ. ಆನಂದ ಬಜಾರ್

೬. 'ನಾಜಿಯಿಜಂ' ಹುಟ್ಟು ಯಾವ ದೇಶದಲ್ಲಿ ಆಗಿದೆ
ಅ. ಅಮೆರಿಕಾ ಬ. ಫ್ರಾನ್ಸ್
ಕ. ಪಾಕಿಸ್ತಾನ ಡ. ಜರ್ಮನ್

೭. ಪ್ರಪಂಚ ಪ್ರಸಿದ್ಧ ಮೊನಾಲಿಸಾ ಚಿತ್ರ ರಚಿಸಿದವರು
ಅ. ಪಾಬ್ಲೊ ಪಿಕಾಸೋ
ಬ. ಲಿಯೊನಾರ್ಡೊ ಡಾ ವಿನ್ಸಿ
ಕ. ರವಿವರ್ಮ
ಡ. ಎಂ.ಎಸ್. ಮೂರ್ತಿ

೮. ದಕ್ಷಿಣ ಭಾರತದಲ್ಲಿ ಬ್ರಿಟಿಷರ ಮೊದಲ ನೆಲೆ ಎಲ್ಲಿ ಸ್ಥಾಪಿಸಿಕೊಂಡರು
ಅ. ಮಚಲಿಪಟ್ಟಣ ಬ. ಕೊಚ್ಚಿನ್
ಕ. ಮದ್ರಾಸ್ ಡ. ಪಾಂಡಿಚೇರಿ

೯. ವಿಶ್ವಕವಿ ರವೀಂದ್ರನಾಥ್ ಟಾಗೂರ ಶಾಂತಿ ನಿಕೇತನವನ್ನು ಯಾವಾಗ ಸ್ಥಾಪಿಸಿದರು
ಅ. ೧೯೩೦ ಬ. ೧೯೨೧
ಕ. ೧೯೧೦ ಡ. ೧೯೧೫

೧೦. 'ಜೈ ಹಿಂದ್' ಈ ಘೋಷಣೆಯನ್ನು ಪ್ರಥಮ ಬಾರಿ ಜಾರಿಗೊಳಿಸಿದವರು
ಅ. ಗೋಪಾಲಕೃಷ್ಣ ಗೋಖಲೆ
ಬ. ಮಹಾತ್ಮ ಗಾಂಧಿ
ಕ. ಸುಭಾಷ್‌ಚಂದ್ರ ಬೋಸ್
ಡ. ಬಾಲ್‌ಗಂಗಾಧರ ತಿಲಕ್

ರಾಜ್ಯಶಾಸ್ತ್ರ

೧೧. ಪ್ರಾಥಮಿಕ ಶಿಕ್ಷಣ ಮಾತೃ ಭಾಷೆಯಲ್ಲೇ ನೀಡಬೇಕೆಂದು ಸಂವಿಧಾನ ಎಷ್ಟನೆ ಕಲಂ ಸೂಚಿಸುತ್ತದೆ.
ಅ. ೩೪೦ ಬ. ೩೬೦
ಕ. ೩೫೦.ಎ ಡ. ೩೫೦

೧೨. ಅಸ್ಪೃಶ್ಯತಾ ಕಾನೂನು ಯಾವಾಗ ಜಾರಿಗೆ ಬಂದಿತು.
ಅ. ೧-೬-೧೯೫೫ ಬ. ೧-೪-೧೯೫೫
ಕ. ೧-೧೦-೧೯೫೭ ಡ. ೧-೮-೧೯೫೭

೧೩. ನಾಜಿ ಪಕ್ಷದ ಸ್ಥಾಪಕರು ಯಾರು
ಅ. ಹಿಟ್ಲರ್ ಬ. ಮುಸಲೋನಿ
ಕ. ಸ್ಟಾಲಿನ್ ಡ. ಲೆನಿನ್

೧೪. ಭಾರತದ ಮೊದಲ ಮುಸ್ಲಿಂ ರಾಷ್ಟ್ರಪತಿ ಯಾರು?
ಅ. ಡಾ. ಜಾಕೀರ ಹುಸೇನ್
ಬ. ಷೇಕ್ ಅಬ್ದುಲ್ಲಾ
ಕ. ಫಕ್ರುದ್ದೀನ್ ಅಲಿ ಅಹ್ಮದ್
ಡ. ಜಿನ್ನಾ

೧೫. ರಾಷ್ಟ್ರಪತಿ ಸುಗ್ರೀವಾಜ್ಞೆಯ ಗರಿಷ್ಠ ಅವಧಿ ಎಷ್ಟು?
ಅ. ಆರು ತಿಂಗಳು ಬ. ಎಂಟು ತಿಂಗಳು
ಕ. ೧ ವರ್ಷ ಡ. ೩ ತಿಂಗಳು

೧೬. ಎರಡು ಬಾರಿ ರಾಷ್ಟ್ರಪತಿಯಾಗಿ ಆಯ್ಕೆಯಾದವರು ಯಾರು
ಅ. ಡಾ. ಜಾಕೀರ ಹುಸೇನ್
ಬ. ಡಾ. ರಾಧಾಕೃಷ್ಣನ್
ಕ. ಡಾ. ರಾಜೇಂದ್ರ ಪ್ರಸಾದ್
ಡ. ವಿ.ವಿ. ಗಿರಿ

೧೭. ಭಾರತ ರತ್ನ ಪ್ರಶಸ್ತಿ ಪಡೆದ ಪ್ರಥಮ ವ್ಯಕ್ತಿ ಯಾರು?
ಅ. ವಿನೋಬಾ ಭಾವೆ
ಬ. ರಾಜಗೋಪಾಲಚಾರಿ
ಕ. ಇಂದಿರಾಗಾಂಧಿ
ಡ. ಖಾನ್ ಅಬ್ದುಲ್ ಗಫಾರ ಖಾನ್

೧೮. ಇಂಡಿಯನ್ ರೈಲ್ವೇ ಸ್ಟಾಂಡರ್ಡ್‌ಗೇಜ್ ಎಷ್ಟು
ಅ. ೧-೦೦ ಮೀ. ಬ. ೧-೬೭೬ ಮೀ
ಕ. ೦-೭೦ ಸೆಂ.ಮೀ. ಡ. ೧-೧೦ ಮೀ

೧೯. ವಿಶ್ವಸಂಸ್ಥೆಯಲ್ಲಿ ಭದ್ರತಾ ಮಂಡಳಿಯ ಶಾಶ್ವತ ಸದಸ್ಯರ ಸಂಖ್ಯೆ ಎಷ್ಟು
ಅ. ೭ ಬ. ೪
ಕ. ೬ ಡ. ೫

೨೦. ಸಿಯಾಚಿನ್ ಸರಹದ್ದು ವಿವಾದ ಯಾವ ದೇಶಗಳ ಮಧ್ಯೆ ಉಂಟು
ಅ. ಭಾರತ-ನೇಪಾಳ
ಬ. ಭಾರತ-ಶ್ರೀಲಂಕಾ
ಕ. ಭಾರತ-ಪಾಕಿಸ್ತಾನ
ಡ. ನೇಪಾಳ-ಭೂತಾನ್!

ಅರ್ಥಶಾಸ್ತ್ರ

೨೧. ಭಾರತದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಸಂಖ್ಯೆ ಎಷ್ಟು
ಅ. ೧೯ ಬ. ೨೦
ಕ. ೧೮ ಡ. ೧೪

೨೨. ಪ್ರಪಂಚದಲ್ಲಿ ಅಧಿಕ ತಲಾ ಸರಿ ಆದಾಯ ಹೊಂದಿದ ದೇಶ ಯಾವುದು
ಅ. ಬ್ರುನೈ ಬ. ಇಂಗ್ಲೆಂಡ್
ಕ. ಕುವೈತ್ ಡ. ಅಮೆರಿಕಾ

೨೩. 'ವೆಲ್ತ್ ಆಫ್ ನೇಷನ್ಸ್' ಗ್ರಂಥ ಯಾರು ರಚಿಸಿದ್ದಾರೆ
ಅ. ಜವಾಹರಲಾಲ್ ನೆಹರು
ಬ. ಆರ್. ವೆಂಕಟರಾಮನ್
ಕ. ಆಡಮ್‌ಸ್ಮಿತ್
ಡ. ರಾಜಾಜಿ

೨೪. ಫ್ರಾನ್ಸ್ ದೇಶದ ಕರೆನ್ಸಿಯ ಹೆಸರೇನು
ಅ. ಫ್ರಾಂಕು ಬ. ಯೆನ್
ಕ. ರೂಬಲ್ ಡ. ಪೌಂಡ್

೨೫. ನರಸಿಂಹನ್ ಸಮಿತಿ ಯಾವ ಕ್ಷೇತ್ರದ ಅಭಿವೃದ್ಧಿಗಾಗಿ ವರದಿ ಸಿದ್ಧಪಡಿಸಲು ನೇಮಿಸಲಾಗಿತ್ತು.
ಅ. ಸಹಕಾರ ಕ್ಷೇತ್ರ ಬ. ಬ್ಯಾಂಕ್ ಕ್ಷೇತ್ರ
ಕ. ಕೃಷಿ ರಂಗ ಡ. ಪ್ರವಾಸೋದ್ಯಮ

೨೬. ಭಾರತದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಅಂತಿಮವಾಗಿ ಅನುಮೋದಿಸುವ ಸಂಸ್ಥೆ ಯಾವುದು
ಅ. ಯೋಜನಾ ಆಯೋಗ

ಬ. ಹಣಕಾಸು ಆಯೋಗ
ಕ. ಕಾನೂನು ಆಯೋಗ
ಡ. ರಾಷ್ಟ್ರೀಯ ಅಭಿವೃದ್ಧಿ ಮಂಡಲಿ

೨೭. ವಿಶ್ವ ಆಹಾರ ದಿನವನ್ನು ಎಂದು ಆಚರಿಸುತ್ತಾರೆ
ಅ. ಜೂನ್ ೬ ಬ. ಅಕ್ಟೋಬರ್ ೧೬
ಕ. ಡಿಸೆಂಬರ್ ೧೦ ಡ. ಆಗಸ್ಟ್ ೨೦

೨೮. ದೇಶದಲ್ಲಿ ಅತಿ ದೊಡ್ಡ ಪೆಟ್ರೊ ಕೆಮಿಕಲ್ ಎಲ್ಲಿದೆ
ಅ. ಅಸ್ಸಾಂ ಬ. ಮಹಾರಾಷ್ಟ್ರ
ಕ. ಪಶ್ಚಿಮ ಬಂಗಾಲ ಡ. ಗುಜರಾತ್

೨೯. ಜಿ-೮ರಲ್ಲಿ ಇತ್ತೀಚೆಗೆ ಸೇರಿದ ರಾಷ್ಟ್ರ ಯಾವುದು?
ಅ. ಚೀನಾ ಬ. ಜಪಾನ್
ಕ. ಕೆನಡಾ ಡ. ರಷ್ಯಾ

೩೦. ನಬಾರ್ಡ್ ಬ್ಯಾಂಕ್ ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದು
ಅ. ಶಿಕ್ಷಣ ಬ. ಪ್ರವಾಸೋದ್ಯಮ
ಕ. ವಸತಿಗೆ ಡ. ಕೃಷಿ ಕೈಗಾರಿಕೆಗೆ

ಕಲೆ, ಸಾಹಿತ್ಯ

೩೧. ೧೯೯೭ರ ಸಾಹಿತ್ಯ ನೊಬೆಲ್ ಪ್ರಶಸ್ತಿ ಪುರಸ್ಕೃತರು ಯಾರು
ಅ. ಡೇರಿಯಾ ಫೋ
ಬ. ಕ್ಲಾಡೆ ಕೊಹೆನ್
ಕ. ಜೂಡಿ ವಿಲಿಯಮ್ಸ್
ಡ. ಪ್ರೊ ರಾಬರ್ಟ್

೩೨. 'ಎ ಪಾಸೆಜ್ ಟು ಇಂಡಿಯಾ' ಗ್ರಂಥ ಬರೆದವರು ಯಾರು
ಅ. ನೀರದ್ ಸಿ. ಚೌದರಿ
ಬ. ಇ.ಎಂ. ಫಾಸ್ಟರ್
ಕ. ಕುಲದೀಪ್ ನಾಯ್ಯರ್
ಡ. ಅರುಣ ಶೌರಿ

೩೩. ಪ್ರಸಿದ್ಧ ಕವಿ ಫಿರಕ್ ಗೊರಖ್‌ಪುರಿ ಯಾವ ಭಾಷಾ ಲೇಖಕರು
ಅ. ಹಿಂದಿ ಬ. ಪಂಜಾಬಿ
ಕ. ಉರ್ದು ಡ. ಒರಿಯಾ

೩೪. 'ಜೂಲಿಯಸ್ ಸೀಜರ್' ನಾಟಕ ಕರ್ತೃ ಯಾರು
ಅ. ಜಾರ್ಜ್ ಬರ್ನಾಡ್ ಶಾ
ಬ. ಚಾರ್ಲಿಚಾಪ್ಲಿನ್
ಕ. ರವೀಂದ್ರನಾಥ ಟ್ಯಾಗೋರ
ಡ. ವಿಲಿಯಂ ಷೇಕ್ಸ್‌ಪಿಯರ್

೩೫. ಆಧುನಿಕ ಭಾರತ ನಾಟಕ ರಂಗದಲ್ಲಿ 'ತುಘಲಕ್' ಎನ್ನುವ ಪ್ರಸಿದ್ಧ ನಾಟಕ ಬರೆದ ಕನ್ನಡಿಗರಾರು
ಅ. ಶ್ರೀರಂಗ
ಬ. ಶಿವರಾಮ ಕಾರಂತ
ಕ. ಕುವೆಂಪು
ಡ. ಗಿರೀಶ್ ಕಾರ್ನಾಡ್

೩೬. 'ಆನಂದ ಕಂದ' ಇದು ಯಾರ ಕಾವ್ಯನಾಮ
ಅ. ಸಿದ್ಧಯ್ಯ ಪುರಾಣಿಕ
ಬ. ರಂಶ್ರಿ ಮುಗಳಿ
ಕ. ಜಿ.ಬಿ. ಜೋಶಿ
ಡ. ಬೆಟಗೇರಿ ಕೃಷ್ಣಶರ್ಮ

೩೭. ರೈಟ್ ಲೈವ್ಲಿಹುಡ್ ಪ್ರಶಸ್ತಿ ಹೊಂದಿದ ಏಕೈಕ ಕನ್ನಡಿಗನಾರು
ಅ. ಯು.ಆರ್. ಅನಂತಮೂರ್ತಿ
ಬ. ಕೆ.ವಿ. ಸುಬ್ಬಣ್ಣ
ಕ. ಗಿರೀಶ್ ಕಾರ್ನಾಡ್
ಡ. ಡಾ. ಸುದರ್ಶನ್

೩೮. ಸರಸ್ವತಿ ಸಮ್ಮಾನ್ ಪ್ರಶಸ್ತಿ ಯಾವ ರಾಜ್ಯ ಸ್ಥಾಪಿಸಿದೆ
ಅ. ಮಹಾರಾಷ್ಟ್ರ ಬ. ಮಧ್ಯಪ್ರದೇಶ
ಕ. ಒರಿಸ್ಸಾ ಡ. ಉತ್ತರ ಪ್ರದೇಶ

೩೯. 'ಟೈಮ್ ಮೆಷಿನ್' ಕಾದಂಬರಿ ಕರ್ತೃ ಯಾರು
ಅ. ಹೆಚ್.ಜಿ. ವೆಲ್ಸ್
ಬ. ಷೇಕ್ಸ್‌ಪಿಯರ್
ಕ. ಸಲ್ಮಾನ್ ರಶ್ದಿ
ಡ. ಆರ್.ಕೆ. ನಾರಾಯಣ

೪೦. ಮಹಾತ್ಮಾ ಗಾಂಧೀಜಿಯರ ಮೇಲೆ ಪ್ರಭಾವ ಮಾಡಿದ ಕೃತಿ ಯಾವುದು
ಅ. ಅನ್ ಟು ದಿ ಲಾಸ್ಟ್
ಬ. ಟು ವುಮನ್
ಕ. ದಾಸ್ ಕ್ಯಾಪಿಟಲ್
ಡ. ಗೋರಾ

ಭೂಗೋಳ ಶಾಸ್ತ್ರ

೪೧. ಜಗತ್ ಪ್ರಸಿದ್ಧ ಕೊಹಿನೂರ ವಜ್ರ ಯಾವ ರಾಜ್ಯದಲ್ಲಿ ಲಭಿಸಿದೆ.
ಅ. ಬಿಹಾರ ಬ. ತಮಿಳುನಾಡು
ಕ. ಆಂಧ್ರ ಪ್ರದೇಶ ಡ. ಪಂಜಾಬ

೪೨. 'ಗೇಟ್ ವೆ ಆಫ್ ಇಂಡಿಯಾ' ಎಂದು ಯಾವುದಕ್ಕೆ ಕರೆಯುತ್ತಾರೆ
ಅ. ಪಂಜಾಬ ಬ. ಕೇರಳ
ಕ. ಮುಂಬಯಿ ಡ. ಜಮ್ಮು-ಕಾಶ್ಮೀರ

೪೩. ಅಸ್ಸಾಂದಲ್ಲಿನ 'ದಿಗ್ಬೋಯಿ' ಯಾವುದಕ್ಕೆ ಪ್ರಸಿದ್ಧಿ ಪಡೆದಿದೆ.
ಅ. ಪೆಟ್ರೊಲ್ ಬ. ಖನಿಜ
ಕ. ಕಲ್ಲಿದ್ದಲು ಡ. ಬಂಗಾರ

೪೪. ಗಂಗಾನದಿ ಉಗಮ ಎಲ್ಲಿ
ಅ. ಚಂಬಲ್ ಕಣಿವೆ
ಬ. ಗಂಗೋತ್ರಿ
ಕ. ಕಾಶ್ಮೀರ ಕಣಿವೆ
ಡ. ಡೆಹ್ರಾಡೋನ್

೪೫. ಸಾರ್ಕ್‌ನ ಪ್ರಧಾನ ಕಾರ್ಯಾಲಯ ಎಲ್ಲಿದೆ
ಅ. ಇಸ್ಲಾಮಬಾದ್ ಬ. ದೆಹಲಿ
ಕ. ಕಾಠ್ಮಂಡು ಡ. ಥಿಂಪು

೪೬. ಮೃತ ಸಮುದ್ರ (ಡೆಡ್‌ಸಿ) ಯಾವ ದೇಶದಲ್ಲಿದೆ
ಅ. ಇಸ್ರೆಲ್ ಬ. ಆಫ್ಘಾನಿಸ್ತಾನ
ಕ. ಸ್ವೀಡನ್ ಡ. ಇಂಗ್ಲೆಂಡ್

೪೭. ಬಂಡಿಪುರ ರಾಷ್ಟ್ರೀಯ ಉದ್ಯಾನವನ ಯಾವ ಜಿಲ್ಲೆಯಲ್ಲಿದೆ?
ಅ. ಬೆಂಗಳೂರು ಬ. ಮಂಡ್ಯ
ಕ. ಮೈಸೂರು ಡ. ಶಿವಮೊಗ್ಗ

೪೮. ಪ್ರಪಂಚದಲ್ಲಿಯೇ ಅತಿ ದೊಡ್ಡ ದ್ವೀಪ ಸಮುದಾಯ ಯಾವ ದೇಶದಲ್ಲಿದೆ
ಅ. ಇಂಡೋನೇಷಿಯಾ
ಬ. ಭಾರತ
ಕ. ಐರ್ಲ್ಯಾಂಡ್
ಡ. ವೆಸ್ಟ್ ಇಂಡೀಸ್

೪೯. ಬಾಕ್ಸೈಟ್ ಯಾವುದಕ್ಕೆ ಉಪಯೋಗಿಸುತ್ತಾರೆ
ಅ. ತಾಮ್ರ ಬ. ಅಲ್ಯುಮಿನಿಯಂ
ಕ. ಕಬ್ಬಿಣ ಡ. ಉಕ್ಕು

೫೦. ಪ್ರಪಂಚದಲ್ಲಿ ಎರಡನೆ ದೊಡ್ಡ ಖಂಡ ಯಾವುದು
ಅ. ಯುರೋಪ ಬ. ಆಫ್ರಿಕಾ
ಕ. ಆಸ್ಟ್ರೇಲಿಯಾ ಡ. ಏಷ್ಯಾ

ಉತ್ತರಗಳು :

೧. ಡ, ೨. ಡ, ೩. ಅ, ೪. ಬ, ೫. ಅ, ೬. ಡ, ೭. ಬ, ೮. ಅ, ೯. ಬ ೧೦. ಕ, ೧೧. ಕ, ೧೨. ಅ, ೧೩. ಅ, ೧೪. ಅ, ೧೫. ಅ, ೧೬. ಕ, ೧೭. ಬ ೧೮. ಬ, ೧೯. ಡ, ೨೦. ಕ, ೨೧. ಅ, ೨೨. ಡ, ೨೩. ಕ, ೨೪. ಅ, ೨೫. ಬ, ೨೬. ಡ, ೨೭. ಬ, ೨೮. ಡ, ೨೯. ಡ, ೩೦. ಡ, ೩೧. ಅ, ೩೨. ಬ, ೩೩. ಕ, ೩೪. ಡ, ೩೫. ಡ, ೩೬. ಡ, ೩೭. ಡ, ೩೮. ಬ, ೩೯. ಅ, ೪೦. ಅ, ೪೧. ಕ, ೪೨. ಕ, ೪೩. ಅ, ೪೪. ಬ, ೪೫. ಕ, ೪೬. ಅ, ೪೭. ಕ, ೪೮. ಅ, ೪೯.ಬ, ೫೦. ಬ

ನೀವೂ ಇಂಗ್ಲಿಷ್ ಕಲಿಯಿರಿ | ಭಾಗ-೩

ಸಾಮಾನ್ಯರೂ ಸುಲಭವಾಗಿ ಇಂಗ್ಲಿಷ್ ಕಲಿಯಬಹುದಾದ ಸರಳ ಮಾರ್ಗ ಇಲ್ಲಿದೆ

Articles - ಉಪಪದಗಳು (Demonstrative Adjective)

ಜಾನ್ : ಜಾನ್, ಹಿಂದಿನ ತಿಂಗಳು ನಾವು Noun (ನಾಮಪದ), Pronoun (ಸರ್ವನಾಮ) ಕಲಿತಿದ್ದು ಅವುಗಳನ್ನು ಮೇಲಿಂದ ಮೇಲೆ ಓದುತ್ತಿರಬೇಕು.

ಜಾನಕಿ : ಅಲ್ಲೊ! Parts of Speech ಸಹ ಹೇಳಿಕೊಟ್ಟಿದ್ದಿ. ಅವು ಒಟ್ಟು ೮.

ಜಾನ್ : ನಿನಗೆ ತಾಳ್ಮೆ ಕಡಿಮೆ....

ಜಾನಕಿ : ಹೌದಪ್ಪಾ ಹೌದು. ನಿನಗೆ ನೆನಪಿನ ಶಕ್ತಿ ಕಡಿಮೆ. Noun ಇದರ ಬೇರೆ ಬೇರೆ ಪ್ರಕಾರ ಹೇಳಿರುವಿ.

ಜಾನ್ : ಅವು ಯಾವುವು ಹೇಳ್ತಿಯಾ?

ಜಾನಕಿ : Proper Noun, Common Noun, Collective Noun, Abstract Noun, ಆದರೆ Proper Noun ಬಗ್ಗೆ ಪೂರ್ಣ ಹೇಳಿಲ್ಲ.

ಜಾನ್: ರೈಟ್. Noun ಈ ಪದಕ್ಕೆ ಸಂಬಂಧಿಸಿದ ವಿಷಯವನ್ನು ಪೂರ್ಣ ಕಲಿತು ಮುಂದುವರಿಯೋಣ.

ಜಾನಕಿ : ನೀನು ಹೇಳಿದ್ದಂಗ ಆಗಲಿ. ಯಾಕೆಂದರೆ, ನೀನು ಶಿಕ್ಷಕ ಈಗ!

ಜಾನ್: ನಾಮಪದಕ್ಕೆ ಜೋಡಿಸುವ ಈ ಪದಕ್ಕೆ ವಿಶೇಷಣ (Demonstrative Adjective) ಅಥವಾ ಉಪಪದಗಳು (Articles) ಎನ್ನುತ್ತಾರೆ. Articles ರೂಢಿಯಲ್ಲಿರುವ ಪದ.

ಜಾನಕಿ : Demonstrative ಅಂದರ ಏನು ಹೇಳಲಿಲ್ಲ?

ಜಾನ್ : ಹೌದಲ್ಲ! ಅಂದರ ನಿದರ್ಶಕ (ವಿಶೇಷಣ) ಬಳಕೆಯಲ್ಲಿರುವ ಪದ Article, ಅದನ್ನೇ ಉಪಯೋಗಿಸುವಲುದು ಯೋಗ್ಯ.

ಜಾನಕಿ : ಸರಿ.

ಜಾನ್ : ಉಪಪದಗಳಲ್ಲಿ ಎರಡು ವಿಧ
(i) ಖಚಿತವಾಗಿರದ್ದು (Indefinite). ಅದನ್ನೇ ಅನಿರ್ದಿಷ್ಟವಾದ ಎನ್ನಬಹುದು.
(ii) ನಿರ್ದಿಷ್ಟವಾದ (Definite)

ಜಾನಕಿ : ಉದಾಹರಣೆ ಸಹಿತ ಹೇಳಿದರೆ ನೆನಪುಳಿಯುವದು. ಹಂಗ ಆದರ....

ಜಾನ್ : Indifinite Articles ಎರಡು (i) A (ii) An. ಒಂದು ಮಾತನ್ನು ನೆನಪಿನ್ನಲ್ಲಿಡು Articlesಗಳನ್ನು Nounಗೆ ಮಾತ್ರ ಉಪಯೋಗಿಸ್ತಾರ.

ಜಾನಕಿ : ನೀನು ಮೇಲಿಂದ ಮೇಲೆ "The" ಉಪಯೋಗಿಸುತ್ತೀಯಲ್ಲ.

ಜಾನ್ : ಸಾವಧಾನ ಮಾಡು. ಹೇಳ್ತೇನೆ. ಸಾಮಾನ್ಯವಾಗಿ ಯಾವುದೋ ಒಂದು ವಸ್ತು ವ್ಯಕ್ತಿ ಪ್ರಾಣಿ, ಇತ್ಯಾದಿಗಳನ್ನು ಹೇಳುವಾಗ A-An ಉಪಯೋಗಿಸುವರು.

ಜಾನಕಿ : ಎರಡೂ ಉಪಯೋಗಿಸ್ತಾರ?

ಜಾನ್ : ಇಲ್ಲ. ಒಂದನ್ನೇ ಉಪಯೋಗಿಸುವದು. ಉದಾ: A teacher ಅಂದ್ರ ಯಾರೋ ಒಬ್ಬ ಶಿಕ್ಷಕ. A dog ಯಾವುದೂ ಒಂದು ನಾಯಿ.

ಜಾನಕಿ : An.......... ಉಪಯೋಗ.

ಜಾನ್ : ಏಕವಚನದಲ್ಲಿ ಮಾತ್ರ ಇವುಗಳನ್ನು ಉಪಯೋಗಿಸುತ್ತಾರೆ. Noun-ದ ಮೊದಲಿನ ಅಕ್ಷರ ಸ್ವರದಿಂದ ಪ್ರಾರಂಭವಾದರೆ ಮಾತ್ರ An ಉಪಯೋಗಿಸುತ್ತಾರೆ. ಉದಾ: an egg, an ass, an orange, an umbrella.

ಜಾನಕಿ : i-ದ ಉದಾಹರಣೆ ನಾನು ಹೇಳ್ತೇನೆ. An inkstand.

ಜಾನ್ : Very good. ಇನ್ನೊಂದು ಕೇಳು. H ಇದು ವ್ಯಂಜನ (ಸ್ವರ ಅಲ್ಲ). ಆದರ ಅದರ ಉಚ್ಚಾರ ಮಾಡದಿರುವ ಶಬ್ದಗಳಿವೆ (Nouns). ಉದಾ: Hour, Honest, Heir. ಆದ್ದರಿಂದ ಇಲ್ಲಿ An ಉಪಪದ ಅವಶ್ಯ
ಉದಾ : An hour, An honestman, An heir. ಮತ್ತು ಕೆಲವು ಸಲ ಸ್ವರಗಳು ವ್ಯಂಜನದಂತೆ ಉಚ್ಚಾರ ಮಾಡುವದರಿಂದ ಅಲ್ಲಿ An ಬದಲಾಗಿ A ಉಪಯೋಗಿಸುವರು.

ಜಾನಕಿ : ನಾನು ಹೇಳಿದ್ದುಂಟಲ್ಲ. ಕೇವಲ ಭಾಷಣ ಬೇಡ. ಸ್ವಲ್ಪ-ಸ್ವಲ್ಪ ಹೇಳಿ ಕೆಲವು ಉದಾಹರಣೆ ಕೊಟ್ಟರೆ ಸರಿಯಪ್ಪಾ.

ಜಾನ್ : Sorry ಜಾನಕಿ, Sorry, ಕೇಳು.
European, Unicorn ಇವು Yuದಂತಾ ಉಚ್ಚಾರವಾಗುವದರಿಂದ 'A' ಬೇಕು. A European, A Unicorn, A University. ಇವೆಲ್ಲ ರೂಢಿಯಿಂದ ಬರುತ್ತವೆ. News-Paper ಓದುವಾಗ ಇಂತಹವುಗಳ ಕಡೆಗೆ ಲಕ್ಷ್ಯವಿರಲಿ.

ಜಾನಕಿ : ನಿನ್ನೆ News-paper ಓದುತ್ತಾ ಇದ್ದಾಗ ನೋಡಿದ್ದು ಹೇಳಲೇನು?

ಜಾನ್ : ಹೇಳುದಕ್ಕಿಂತ ಮೊದಲೇ ನಾನು ಹೇಳ್ತೇನೆ. ಕೆಲವು ಶಬ್ದಗಳ ಮೊದಲನೆಯ ಅಕ್ಷರ ಸ್ವರ ಇದ್ದರೂ ಅದರ ಉಚ್ಚಾರ ವ್ಯಂಜನದಂತಿರುವದರಿಂದ ಅಲ್ಲಿ 'A' ಉಪ ಪದ ಉಪಯೋಗಿಸಬೇಕು. ಇಲ್ಲಿ 'An' ಉಪಯೋಗಿಸಬಾರದು.
ಉದಾ: a one-rupee,

ಜಾನಕಿ : ನಾನು ಓದಿದ್ದು ಇಂತಹದೇ a one-eyed man.....ಸರಿ...ನಾ

ಜಾನ್ : ಸರಿ. ಹೀಗೆ ಲಕ್ಷ್ಯಗೊಟ್ಟು ಓದಿದರೆ ಯಾರೇ ಆಗಲಿ, ಬೇಗನೆ ಇಂಗ್ಲಿಷ್ ಕಲಿಯಬಹುದು.

Articles ಒಟ್ಟು ಮೂರು A ಅಥವಾ An ಮತ್ತು The.

ಜಾನಕಿ : ಹೌದಲ್ಲೊ! "The" article ಬಗ್ಗೆ ಏನೂ ಹೇಳಲಿಲ್ಲ. ಈಗ....

ಜಾನ್ : ತಡೆ, ತಡೆ, ಹೇಳ್ತೇನೆ. ನಿರ್ದಿಷ್ಟವಾದ ವ್ಯಕ್ತಿ, ವಸ್ತು ಅಥವಾ ಈ ಪೂರ್ವದಲ್ಲಿ ಉಲ್ಲೇಖವಾದಂತಹದನ್ನು ಹೇಳುವಾಗ "The" ಉಪಪದ (Article)ವನ್ನು ಉಪಯೋಗಿಸಬೇಕು. ಉದಾ: The teacher, ಅದೇ ಶಿಕ್ಷಕ, The dog-ಅದೇ ನಾಯಿ, ಇದನ್ನು ಉಪಯೋಗಿಸುವದು ಏಕವಚನದಲ್ಲಿ. ಇದಕ್ಕಾಗಿ ಕೆಲವು ನಿಯಮಗಳಿವೆ.

ಜಾನಕಿ : ಒಂದೊಂದೆ ನಿಯಮವನ್ನು ಸಾಕಷ್ಟು ಉದಾಹರಣೆ ಸಹಿತ ಹೇಳಿದರೆ ಮಾತ್ರ ತಿಳಿಯಬಹುದು.

ಜಾನ್ : ಹಾಂಗೆ ಆಗಲಿ. ನೀನು ಏಕಪಾಠಿ ಅಲ್ಲಾ ಅಂದ್ಹಂಗ ಆಯಿತು. ಒಂದೇ ಸಲ ಕೇಳಿದರೆ, ಓದಿದರೆ ಅದನ್ನ ಮರೆಯದವರನ್ನು ಏಕಪಾಠಿ ಅನ್ನೋದು.

ಜಾನಕಿ: ನಾನು ಮರೆಯುವದಿಲ್ಲಪ್ಪಾ ಮಾರಾಯಾ. ಆದರ ಅದು ಅಜೀರ್ಣ ಆಗಬಾರದಲ್ಲ, ಅದಕ್ಕ ನಾನು....

ಜಾನ್: ನೀನು ಹೇಳಿದ್ಹಂಗ ಆಗಲಿ. ಒಂದೊಂದೇ ನಿಯಮವನ್ನು ಹೇಳ್ತೇನೆ.

ನಿರ್ದಿಷ್ಟ ಉಪಪದ (Definite Article)

ಉಪಯೋಗಿಸುವ ನಿಯಮಗಳು

ನಿಯಮ I

ನಿರ್ದಿಷ್ಟವಾದ ವ್ಯಕ್ತಿ, ವಸ್ತು ಅಥವಾ ಈ ಪೂರ್ವದಲ್ಲಿ ಹೇಳಿದ್ದನ್ನು ಮತ್ತೆ ಪ್ರಸ್ತಾಪಿಸುವಾಗ "the" ಉಪಪದವನ್ನು ಉಪಯೋಗಿಸಬೇಕು.

ಉದಾ: i) The Class-teacher of X Standard is good.

ii) This is the boy whom I saw in the morning.

i) ಇಲ್ಲಿ ನಿರ್ದಿಷ್ಟ ವರ್ಗದ ಶಿಕ್ಷಕ.

ii) ಮುಂಜಾನೆ ಕಂಡ ಹುಡುಗನೇ ಇವನು ಅಂದರ, ಇಲ್ಲಿ ಖಚಿತವಾದ ಶಿಕ್ಷಕ, ಹುಡುಗ ಕುರಿತು ಹೇಳುವದರಿಂದ "the" ಬೇಕು.

ಜಾನಕಿ: ನೀನು ಹೀಂಗ ವಿವರಿಸಿ ಉದಾಹರಣೆ ಸಹಿತ ಹೇಳಿದರ ತಿಳಿದ್ದss ತಿಳಿಯುತ್ತದೆ. ನಾನೊಂದು ಉದಾಹರಣೆ ಹೇಳಲೇನು, The doctor of our family is ENT Specialist.

ಜಾನ್: ಸರಿ.

ನಿಯಮ II

ಏಕವಚನ ನಾಮಪದವು ಆ ಸಂಪೂರ್ಣ ವರ್ಗವನ್ನೇ ಪ್ರತಿನಿಧಿಸುತ್ತಿದ್ದರೆ, "the" ಉಪಯೋಗಿಸಬೇಕು.

ಉದಾ: 1. The dog is faithfull animal.

ಇಲ್ಲಿ ನಾಯಿ ಇದು ಇಡೀ ನಾಯಿಯ ವರ್ಗಕ್ಕೆ ಅನ್ವಯವಾಗುತ್ತದೆ. ಕಾರಣ ಇಲ್ಲಿ "the" article ಹಚ್ಚಬೇಕು.

2. The cow is useful animal.

3. The squirrel is timid.

4. The tiger is cruel animal.

ಆದರೆ Man ಮತ್ತು woman ಇವು ಪುರುಷ ವರ್ಗವನ್ನು ಮತ್ತು ಮಹಿಳಾ ವರ್ಗವನ್ನು ಸೂಚಿಸಲು ಉಪಯೋಗಿಸಿದಾಗಲೂ ಸಹ ಇಲ್ಲಿ ಯಾವದೇ ಉಪಪದವನ್ನು (the) ಉಪಯೋಗಿಸಬಾರದು. ಉದಾ: Man is laughing animal.

Woman is the queen of kitchen in India.

ಜಾನಕಿ: ಇನ್ನು ೩ನೇ ನಿಯಮ ಪ್ರಾರಂಭಿಸಿದರೆ.....

ಜಾನ್: ನೀನು ಭಾರಿ ಅವಸರ ಮಾಡುತ್ತೀಯಾ. ಇರಲಿ, ಕೇಳು.

ನಿಯಮ III

ನಿಸರ್ಗ ನಿರ್ಮಿತ-ನದಿ, ಪರ್ವತ ಶ್ರೇಣಿ, ಮಹಾಸಾಗರ, ನಡುಗಡ್ಡೆಗಳ ಹೆಸರಿನ ಹಿಂದೆ "the" ಉಪಪದ ಬರುವದು.

ಉದಾ: The Cavery; The Himalayas, The Indian Ocean, The Japanese Island.


ಜಾನಕಿ: ಹಾಗಾದರೆ ಜೋಗ ಫಾಲ್ಸ್‌ಗೆ, The Jog Falls.

ಜಾನ್: ಸರಿ ಹೌದಲ್ಲೊ?

ನಿಯಮ IV

ಕೆಲವು ಸುಪ್ರಸಿದ್ಧ ಪುಸ್ತಕಗಳ (ಕಾವ್ಯ) ಹಿಂದೆ article "the" ಅವಶ್ಯ. The Vedas, The Mahabharat ಆದರೆ ಇವುಗಳ ಹಿಂದೆ ಲೇಖಕರ ಹೆಸರಿದ್ದರೆ "The" ಉಪಯೋಗಿಸಬಾರದು.

ಉದಾ: Vyasa's Mahabharat, Valmiki's Ramayana.



ಜಾನಕಿ: The Kumar-Sambhav ಮತ್ತು Kalidas' Kumar-Sambhav ಹೀಗೆ ನಾನು ಹೇಳಿದ್ದು ಸರಿ ಹೌದಲ್ಲೊ? ಇದೇ ರೀತಿ The Iliad ಮತ್ತು Homers' Iliad.

ಜಾನ್: ಜಾನಕಿ, ನೀನು ಹೇಳಿದ್ದುವೆಲ್ಲಾ, ಸರಿ. ಇನ್ನು ಕೆಲವು ನಿಯಮ ಕಲಿಯಬೇಕಲ್ಲಾ.

ಜಾನಕಿ: ನೀನು ಹೇಳುವುದು ಸರಿ. ನಮಗ ಪ್ರಶ್ನೆ ಕೇಳಿ ಗಟ್ಟಿ ಮಾಡಿಸು. ಅಂದರ ನೀ ಕಲಿಸಿದ್ದು ಸಾರ್ಥಕ. ಇಲ್ಲಾ ಅಂದರ.....

ಜಾನ್: ಕರೆಕ್ಟ್, ಮುಂದಿನ ನಿಯಮ ಹೇಳಿ ಪ್ರಶ್ನೆ ಕೇಳಿದರ....

ಜಾನಕಿ: ಕೇಳು, ಮಾರಾಯಾ ಕೇಳು.

ನಿಯಮ V

ನಿಸರ್ಗದಲ್ಲಿಯ ವೈಶಿಷ್ಟ್ಯಪೂರ್ಣವಾದ ಸಂಗತಿಗಳು ರೂಢನಾಮವುಳ್ಳವುಗಳಿಗೆ (Common Noun) ಉಪಪದವನ್ನು ಅವಶ್ಯವಾಗಿ ಉಪಯೋಗಿಸಬೇಕು. ಉದಾ: The Sun, The earth, The sky, The ocean.

ಜಾನಕಿ: The moon, The sea.

ಜಾನ್: ವೆರಿಗುಡ್, ಕೇಳು.

ನಿಯಮ VI

ಇಲ್ಲಿ ಅಂಕಿತನಾಮಕ್ಕೆ (Proper Noun) ವಿಶೇಷಣವಿದ್ದರೆ (Adjective) ಮಾತ್ರ "the" ಅವಶ್ಯ. ಉದಾ: The white cow, The big elephant, The Shrewd fox.

ಜಾನಕಿ: The brave soldier, The dull boy....

ಜಾನ್: ನಾನು ಕೇಳಿದಾಗ ಮಾತ್ರ ಹೇಳು. ನೀನೇ, ಗಡಿಗೆಯಲ್ಲಿ ನೊಣ ಹೊಕ್ಕಾಂಗ ಮಾಡಬೇಡ. ಮತ್ತ ಒಂದು ಕಿವಿಯಲ್ಲಿ ಕೇಳಿ ಮತ್ತೊಂದು ಕಿವಿಯಿಂದ ಹೊರಗ ಹಾಕಬೇಡ.

ಜಾನಕಿ: ನಾನು ಉತ್ತರ ಹೇಳಿದರ ಒಂದ ಮಾತ ಹೇಳ್ತಿ. ಸುಮ್ಮನಿದ್ದರ ಮತ್ತೊಂದು. ನೀನು ಕಲಿಸುವದು ಬೇಡ.

ಜಾನ್: ಸಿಟ್ಟಿಗೆದ್ದ ಹ್ಯಾಂಗ ಕೂಡಿಲ್ಲಿ. ಮುಂದಿನ ನಿಯಮ ಕೇಳು. ಕಲಿಯುವದೇನು ತಪ್ಪಿದಲ್ಲ.

ಕೊನೆ ಹನಿ

ಜಾನ್: ನೀನು ಎಷ್ಟು ನೆನಪಿಟ್ಟುಕೊಂಡಿದಿ?

ಜಾನಕಿ: ಸರಿ. ನಿನ್ನ ಕೆಲಸವನ್ನು ನೀ ಮಾಡು.

ಜಾನ್: ಈ ವಾಕ್ಯಗಳಲ್ಲಿ Articles ಭರ್ತಿ ಮಾಡು.

1. I saw ---------- cow in the market.
2. ---------- cow was very big.
3. ---------- egg a day keeps doctor away.
4. Pandavas went to ---------- Himalayas.

ಜಾನಕಿ: Articles ಅಷ್ಟೇ ಹೇಳ್ತೀನಿ.

1. a 2. The 3. An 4. the

(ಮುಂದಿನ ತಿಂಗಳು ಮುಂದುವರಿಯುವುದು)

ರಾಘವೇಂದ್ರ, ಗಂಗಾವತಿ

ನಾನು ಪ್ರಥಮ ಪಿ.ಯು.ಸಿ. (ವಿಜ್ಞಾನ)ವರೆಗೂ ಓದಿದ್ದು ಅನಿವಾರ್ಯ ಕಾರಣಗಳಿಂದಾಗಿ ವಿದ್ಯಾಭ್ಯಾಸವನ್ನು ಮುಂದುವರೆಸಲು ಆಗಲಿಲ್ಲ. ಈಗ ನನಗೆ ೨೧ ವರ್ಷ. ನೇರವಾಗಿ ಮುಕ್ತ ವಿಶ್ವವಿದ್ಯಾಲಯ (ಮಾನಸ ಗಂಗೋತ್ರಿ, ಮೈಸೂರು)ದ ಮೂಲಕ ಎಂ.ಎ. ಕಟ್ಟಬೇಕೆಂದು ನಿರ್ಧರಿಸಿದ್ದೇನೆ. ಈ ಎಂ.ಎ. ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ನಾನು ಕೆ.ಪಿ.ಎಸ್.ಸಿ., ಐ.ಎ.ಎಸ್ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ಅರ್ಹನಾಗುವೆನೆ? ತಿಳಿಸಿರಿ. ಈ ಎಂ.ಎ.ಯಿಂದ ಉದ್ಯೋಗಗಳು ದೊರಕಲು ಅನುಕೂಲವಾಗುವುದೆ? ತಿಳಿಸಿರಿ.

ನೀವು ಮೈಸೂರು ವಿಶ್ವವಿದ್ಯಾಲಯದಿಂದ ಅಂಚೆ ತೆರಪಿನ ಮೂಲಕ ಪದವಿಯನ್ನು ಮಾಡುವುದು ಉಪಯೋಗಕಾರಿ. ನೀವು ಇದರಲ್ಲಿ ತೇರ್ಗಡೆಯಾದಲ್ಲಿ ಅವಶ್ಯವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಾದ ಐ.ಎ.ಎಸ್., ಐ.ಪಿ.ಎಸ್. ಅಂತಹ ಪರೀಕ್ಷೆಗಳನ್ನು ಬರೆಯಬಹುದು. ಇದರ ಆಧಾರದ ಮೇಲೆ ಎಂ.ಎ. ಮಾಡಿದಲ್ಲಿ ಒಳ್ಳೆಯ ಅವಕಾಶಗಳು ದೊರೆಯುವಲ್ಲಿ ಸಂಶಯವಿಲ್ಲ.

ಮೋಹನ್, ಮರಳಿ

ನಾನು ದ್ವಿತೀಯ ಪಿ.ಯು.ಸಿ. (ವಿಜ್ಞಾನ)ದ ವರೆಗೆ ಓದಿದ್ದು ಮುಂದೆ ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವಿ ಪಡೆಯಬೇಕೆಂದು ಇಚ್ಛಿಸಿದ್ದೇನೆ. ಈ ಕೋರ್ಸಿಗೆ ಪ್ರವೇಶ ಪರೀಕ್ಷೆ ಇಲ್ಲದೆಯೇ ನೇರವಾಗಿ ನಾನು ಸೇರಿಕೊಳ್ಳಬಹುದೆ? (ಡೊನೇಷನ್ ಕೊಟ್ಟು).

ಒಂದು ವೇಳೆ ಪ್ರವೇಶ ಪರೀಕ್ಷೆ ಅನಿವಾರ್ಯವೇ ಆಗಿದ್ದಲ್ಲಿ ದಯವಿಟ್ಟು ಈ ಪ್ರವೇಶ ಪರೀಕ್ಷೆಗಾಗಿ ಯಾವಾಗ ಪ್ರಕಟಣೆ ಮಾಡುತ್ತಾರೆ ಮತ್ತು ಈ ಪ್ರವೇಶ ಪರೀಕ್ಷೆಯಲ್ಲಿ ಯಾವ ತರಹದ ಪ್ರಶ್ನೆಗಳನ್ನು ಕೇಳುತ್ತಾರೆ? ಅದರ ಪ್ಯಾಟರ್ನ್ ತಿಳಿಸಿರಿ. ಪುಸ್ತಕಗಳು ದೊರೆಯುವ ವಿಳಾಸ ತಿಳಿಸಿ.

ನೀವು ಹೋಟೆಲ್ ಮ್ಯಾನೇಜ್‌ಮೆಂಟ್ ಸೇರಲು ಎರಡು ರೀತಿಯ ಅವಕಾಶಗಳು ಇದ್ದು, ಒಂದು ಪದವಿ ಆಧಾರದ ಮೇಲೆ ಮತ್ತು ಇನ್ನೊಂದು ಡಿಪ್ಲೊಮಾ ಇನ್ ಹೋಟೆಲ್ ಮ್ಯಾನೇಜ್‌ಮೆಂಟ್ ಮೇಲೆ ಮಾಡಬಹುದು. ಈ ಕೋರ್ಸಿಗೆ ಸೇರಲು ನೀವು ಲಿಖಿತ ಪರೀಕ್ಷೆ ಬರೆಯುವುದು ಅವಶ್ಯಕ. ಸುಮಾರು ವಿಶ್ವವಿದ್ಯಾಲಯಗಳು ಕೂಡಾ ಈ ಕೋರ್ಸನ್ನು ನಡೆಸುತ್ತಿವೆ. ಖಾಸಗಿಯಾಗಿ, ಒಬೆರಾಯ ಸ್ಕೂಲ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್, ತಾಜ್ ಗ್ರೂಫ್ ಆಫ್ ಹೋಟೆಲ್ಸ್ ಹಾಗೂ ಇನ್ನಿತರ ಸಂಸ್ಥೆಗಳು ಈ ಕೋರ್ಸನ್ನು ನಡೆಸುತ್ತಿವೆ. ಪ್ರತಿ ವರ್ಷ ಕಾಲಾನುಕಾಲಕ್ಕೆ ದಿನಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟವಾಗುವುದು. ಇದು ಒಳ್ಳೆಯ ಅವಕಾಶಗಳನ್ನು ಹೊಂದಿರುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ನೀವು ಡೊನೇಷನ್ ಮೂಲಕ ಈ ಕೋರ್ಸಿಗೆ ಸೇರಿಕೊಳ್ಳಬಹುದು.



ಮಾರ್ಗದರ್ಶಿ

○ ಡಾ. ಎಸ್.ಸಿ. ಶರ್ಮಾ
ಪ್ರಾಧ್ಯಾಪಕರು
ಆರ್.ವಿ. ಇಂಜಿನಿಯರಿಂಗ್ ಕಾಲೇಜು,
ಮೈಸೂರು ರಸ್ತೆ, ಬೆಂಗಳೂರು - ೫೬೦ ೦೫೯

ಎ.ಎಸ್. ವಿಶ್ವನಾಥ, ರಟ್ಟೀಹಳ್ಳಿ

ನಾನು JODC (೬೨%) ಮತ್ತು ನನ್ನ ಸಹೋದರ ITI (೭೬%) ಪಾಸಾಗಿದ್ದೇವೆ. ನಾವು BSRB ಪರೀಕ್ಷೆಗೆ ಕೂಡಬಹುದೇ? ದಯವಿಟ್ಟು ಉತ್ತರಿಸಿ ಉಪಕರಿಸಿರಿ.

ನನ್ನ ಸಹೋದರ ITI Electronics Mechanic ಮಾಡಿದ್ದಾನೆ. Medical Electronics ಹೋಗಬೇಕೆಂದಿದ್ದಾನೆ. ಅದು ಎಲ್ಲಿದೆ?

ಎಸ್.ಎಸ್.ಎಲ್.ಸಿ. ಮತ್ತು ಸಮಾನಾಂತರ ಪರೀಕ್ಷೆಯಲ್ಲಿ ೬೦% ಅಂಕಗಳೊಂದಿಗೆ ತೇರ್ಗಡೆಯಾದಲ್ಲಿ BSRB ಪರೀಕ್ಷೆಯನ್ನು ಬರೆಯಬಹುದು.

ಮೆಡಿಕಲ್ ಎಲೆಕ್ಟ್ರಾನಿಕ್ಸ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನವೆಂಬರ್ ೯೭ರ 'ಬಿಸಿಲ ಬದುಕು' ಸಂಚಿಕೆಯನ್ನು ನೋಡಿ ಅಥವಾ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ.

Director (Admission), Susruta, Institute Medical Electronics and Bio-Medical Engineering. Care: Vishwa Bharati Institute, 36, Church Street, Bangalore - 560 001.

ಹೆಸರಿಲ್ಲ, ಶಿರಾಲಿ

ನಾನು ದ್ವಿತೀಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ೬೭% ಅಂಕಗಳೊಂದಿಗೆ ಉತ್ತೀರ್ಣನಾಗಿರುತ್ತೇನೆ. ಮುಂದೆ B.F.S.C. (Bachelor in Fishries Science)ಯನ್ನು ಮಂಗಳೂರಿನಲ್ಲಿರುವ ಮೀನುಗಾರಿಕಾ ಕಾಲೇಜಿನಲ್ಲಿ ಮುಂದುವರಿಸಬೇಕೆಂದಿದ್ದೇನೆ. ಇದು ಉದ್ಯೋಗಾಧಾರಿತ ಕೋರ್ಸ್ ಆಗಿದೆಯೆ? ಇದಕ್ಕಿಂತ ಉತ್ತಮವಾದ ಉದ್ಯೋಗಾವಕಾಶ ಇರುವ ಕೋರ್ಸ್‌ಗಳ ಪರಿಚಯ ಮಾಡಿಕೊಡಿ.

ನೀವು ಅವಶ್ಯವಾಗಿ Bachelor in Fishries Science ಕೋರ್ಸನ್ನು ನಿಮ್ಮ ಇಚ್ಛೆಯಂತೆ ಮುಂದುವರಿಸಿ. ಇದು ಒಳ್ಳೆಯ ಅವಕಾಶಗಳನ್ನು ಹೊಂದಿದೆ. ಇಲ್ಲವಾದರೆ B.E., B.Sc. ಕೋರ್ಸ್ ಮಾಡಿ M.C.A. ಕೋರ್ಸ್ ಮಾಡುವುದು ಉತ್ತಮ. ಏಕೆಂದರೆ ಕಂಪ್ಯೂಟರ್‌ನಲ್ಲಿ ಈಗ ಒಳ್ಳೆಯ ಅವಕಾಶಗಳು ಇವೆ.

ಎಂ.ಬಿ. ಭಜಂತ್ರಿ, ಗೋಕಾಕ

ನಾನು ಕೆಲವೊಂದು ಕಾರಣಾಂತರಗಳಿಂದ ಒಂಭತ್ತನೇ ತರಗತಿಗೆ ವಿದ್ಯಾಭ್ಯಾಸವನ್ನು ನಿಲ್ಲಿಸಿಬಿಟ್ಟೆ. ಈಗ ನನಗೆ ಹದಿನೆಂಟು ವರ್ಷಗಳು ಪೂರ್ಣಗೊಂಡಿವೆ. ನಾನೀಗ ಪಿ.ಯು.ಸಿ.ಯ ಪರೀಕ್ಷೆಗೆ ಖಾಸಗಿಯಾಗಿ ಕೂಡಲು ಬಯಸಿದ್ದೇನೆ. ಅದಕ್ಕೆ ನಾನು ಪಿ.ಯು.ಸಿ. ಪರೀಕ್ಷೆಗೆ ಕೂಡಲು ಸಾಧ್ಯವೇ?

ಅವಶ್ಯವಾಗಿ ನೀವು ನಿಮ್ಮ ಹತ್ತಿರದ ಸರಕಾರಿ ಪಿ.ಯು. ಕಾಲೇಜನ್ನು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ. ಈ ಕುರಿತಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳಲ್ಲಿ Notification ಬರುತ್ತದೆ ಮುಂದುವರಿಸಿ.

ಮಹಿಮೂದ ಹಸನ, ಕನಕಗಿರಿ

ಮಾರ್ಚ್ ೩೧ಕ್ಕೆ ನನ್ನ ಅಪ್ರೆಂಟಿಸ್ (I.T.I.) ತರಬೇತಿ ಸಂಪೂರ್ಣಗೊಳ್ಳುವುದು. ನಂತರ ನಾನು ಮತ್ತಾವ ಹೆಚ್ಚಿನ ತರಬೇತಿ ಪಡೆಯಬಹುದು ತಿಳಿಸಿರಿ. ಅಥವಾ ಹೆಚ್ಚಿನ ಅಭ್ಯಾಸ ಮಾಡಬಹುದು ತಿಳಿಸಿರಿ.

ನೀವು ಟ್ರೈನಿಂಗ್ ಆದ ನಂತರ ಕೆಲಸಕ್ಕೆ ಸೇರಿಕೊಂಡು B.E.ಗೆ ಸಮಾನವಾದ A.M.I.E. ಕೋರ್ಸನ್ನು ಮುಂದುವರಿಸಬಹುದು. ಇಲ್ಲವೆ G.T.T.C. ರವರು ನಡೆಸುವ ಡಿಪ್ಲೋಮಾ ಕೋರ್ಸ್‌ಗಳನ್ನು ಮಾಡುವುದು ಉತ್ತಮ. ಏಕೆಂದರೆ ಇವು ಒಳ್ಳೆಯ ಉದ್ಯೋಗ ಅವಕಾಶಗಳನ್ನು ಹೊಂದಿರುತ್ತವೆ.

ರಮೇಶ ಆರ್. ಗೋಡೆರಾ, ಚಿಕ್ಕಂಶಿ ಹೊಸೂರ

ನಾನು ದ್ವಿತೀಯ ಪಿ.ಯು.ಸಿ. ಮಾಡಿ ಮನೆಯಲ್ಲಿ ಇದ್ದೇನೆ. Eye Pharmacy ಮಾಡಬೇಕೆಂದಿರುವೆ. ಆದರೆ ನಾನು ಕಡು ಬಡವ. ಅದಕ್ಕೆ ಮನೆಯಲ್ಲಿ ಇದ್ದುಕೊಂಡೇ ವ್ಯಾಸಂಗ ಮಾಡಬೇಕೆಂದಿರುವೆ. ಮಾರ್ಗದರ್ಶನ ಮಾಡಿ.

ನೀವು ಅವಶ್ಯವಾಗಿ Paramedical Course ಆದಾ Opthalmic Technology/Optometry ಕೋರ್ಸನ್ನು ಮಾಡಬಹುದು. ಆದರೆ, ಪಿ.ಯು.ಸಿ. ಯಲ್ಲಿ ಕನಿಷ್ಠ ೫೦% ಅಂಕಗಳೊಂದಿಗೆ ತೇರ್ಗಡೆಯಾಗಿರಬೇಕು. ಇದರಲ್ಲಿ ಡಿಪ್ಲೋಮಾ ಕೋರ್ಸ್ ೨ ವರ್ಷದಾಗಿದ್ದು ಹೆಚ್ಚಿನ ವಿವರಗಳಿಗಾಗಿ, School of Optometry, Institute of Opthomology, Sarojini Devi Eye Hospital, Hyderabad ಇವರನ್ನು ಸಂಪರ್ಕಿಸಬಹುದು. ಅಥವಾ Government Opthalmic Hospital, Madras ಇವರನ್ನು ಕೂಡಾ ಸಂಪರ್ಕಿಸಬಹುದು. ಇದು ಒಳ್ಳೆಯ ಉದ್ಯೋಗ ಅವಕಾಶಗಳನ್ನು ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಹೊಂದಿರುತ್ತದೆ.

ಹೆಸರಿಲ್ಲ, ಬಾಗಲಕೋಟೆ

ನಾನು ಎಸ್.ಎಸ್.ಎಲ್.ಸಿ. ಪಾಸ್ ಆಗಿದ್ದೇನೆ. ಮುಂದೆ ನಾನು ವಿಜ್ಞಾನ ಕಲಿಯಬೇಕು. ಆದರೆ, ನನಗೆ ಇಂಗ್ಲೀಷ್ ಬರುವುದಿಲ್ಲ. ಆದ್ದರಿಂದ ಯಾವ ಕೋರ್ಸ್ ಮಾಡಬೇಕು ತಿಳಿಸಿ. ಇಂಗ್ಲೀಷ್ ಕಲಿಯಲು ಯಾವ ಪುಸ್ತಕ ಇದೆ ತಿಳಿಸಿ.

ನೀವು ಅವಶ್ಯವಾಗಿ ವಿಜ್ಞಾನ ವಿಷಯಗಳಲ್ಲಿ ಮುಂದುವರೆಯಿರಿ. ಇಂಗ್ಲೀಷ್ ಭಾಷೆಯನ್ನು ನೀವು ಸರಳವಾಗಿ ಕಲಿಯಬಹುದು. ಆದರೆ ನಿರಂತರ ಕೃಷಿ ಅವಶ್ಯಕ. ಮಾರ್ಕೆಟ್‌ಗಳಲ್ಲಿ ಇದಕ್ಕೆ ಸಂಬಂಧಪಟ್ಟ ಸುಮಾರು ಪುಸ್ತಕಗಳು ದೊರೆಯುತ್ತವೆ. ವಿಚಾರಿಸಿ.

ವಿಲಾಸ್‌ಕುಮಾರ ಜೆ. ಸಿಂಧೆ, ಅಗರಖೇಡ

ಕನ್ನಡ ಮಾಧ್ಯಮದಲ್ಲಿ ಪಿ.ಎಚ್.ಡಿ. ಪ್ರಬಂಧ ಮಂಡಿಸಬಹುದೆ? ಮತ್ತು ಪಿ.ಎಚ್.ಡಿ. ಮಾಡಲು ಇರಬೇಕಾದ ಅರ್ಹತೆ ಏನು? ಎಂಬುದರ ಕುರಿತು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ವಿವರ ನೀಡಬೇಕಾಗಿ ವಿನಂತಿ.

ಯಾವುದೇ ವಿಷಯದಲ್ಲಿ ಡಾಕ್ಟರೇಟ್ ಮಾಡಬೇಕಾದಲ್ಲಿ ಸ್ನಾತಕೋತ್ತರದೊಂದಿಗೆ Philosophy ಕೋರ್ಸನ್ನು ಮುಗಿಸಿರಬೇಕು. ಅರ್ಹತೆ ಇದ್ದಲ್ಲಿ ವಿಶ್ವವಿದ್ಯಾಲಯದಲ್ಲಿ ಹೆಸರನ್ನು ನೊಂದಾಯಿಸಿ, ಪ್ರೊಫೆಸರ್‌ಗಳ Guide ಮೇರೆಗೆ ನೀವು ಮುಂದುವರಿಯಬಹುದು. ನೀವು ಅವಶ್ಯವಾಗಿ ಎಂ.ಎ. ಆದಲ್ಲಿ ಕನ್ನಡ ಮಾಧ್ಯಮದಲ್ಲಿ ಪ್ರಬಂಧ ಮಂಡಿಸಬಹುದು. ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ವಿಶ್ವವಿದ್ಯಾಲಯವನ್ನು ಸಂಪರ್ಕಿಸುವುದು ಉತ್ತಮ.

ಮುರಳಿ ಬಿ., ಬಳ್ಳಾರಿ

ನಾನು ಕೈಗಾರಿಕಾ ತರಬೇತಿ ಸಂಸ್ಥೆ (I.T.I.)ನಲ್ಲಿ "ವಿದ್ಯುತ್ ಕರ್ಮಿ" ದ್ವಿತೀಯ ವರ್ಷದಲ್ಲಿ ತರಬೇತಿಯನ್ನು ಪಡೆಯುತ್ತಿದ್ದೇನೆ. I.T.I. ಮುಗಿದ ನಂತರ ಅಪ್ರೆಂಟಿಶಿಪ್ ಎಷ್ಟು ವರ್ಷದ ಕೋರ್ಸ್? ದಾರಿ ತೋರಿಸಬೇಕೆಂದು ಸವಿನಯ ಪ್ರಾರ್ಥನೆ.

ನಿಮ್ಮ ಕೋರ್ಸ್ ಮುಗಿದ ನಂತರ ಜಾಹೀರಾತುಗಳ ಮೇರೆಗೆ ನಿಮಗೆ ಬೇಕಾದ ಕಂಪೆನಿಗಳಲ್ಲಿ ಅಪ್ರೆಂಟಿಸ್‌ಗಾಗಿ ಅರ್ಜಿ ಸಲ್ಲಿಸಬಹುದು. ಸುಮಾರು ಈ ಟ್ರೈನಿಂಗ್ ಕೋರ್ಸ್‌ಗಳು ಒಂದು ವರ್ಷದಿಂದ ಎರಡು ವರ್ಷಗಳವರೆಗೆ ಇರುತ್ತವೆ. ಇದು ಕಂಪೆನಿಗಳ ಮೇಲೆ ಆಧಾರಪಟ್ಟಿರುತ್ತವೆ. ಟ್ರೈನಿಂಗ್ ಪಿರಿಯಡ್‌ನಲ್ಲಿ ಸ್ಟೈಪಂಡ್ ಕೊಡಲಾಗುವುದು. ದಿನಪತ್ರಿಕೆಗಳನ್ನು ವೀಕ್ಷಿಸುವುದು ಉಪಯೋಗಕಾರಿ.

ಫಯಾಜ ಎಂ. ಕೆಸರಟ್ಟಿ, ಮುಧೋಳ

ನಾನು P.U.C. II Year (Science) ವಿದ್ಯಾರ್ಥಿ. ನನಗೆ T.V. ಸಿರಿಯಲ್‌ನಲ್ಲಿ ಜಾಹೀರಾತು (Advertise) ವಿಭಾಗದಲ್ಲಿ ಸೇರಬೇಕೆಂಬ ಬಯಕೆ. ನನ್ನ ಎತ್ತರ ೫-೬'' ಇದ್ದು, ಸುಂದರ ಮುಖ ಇದೆ. ನಾನು ಈ ವಿಭಾಗದಲ್ಲಿ ಏನು ಮಾಡಬೇಕೆಂಬುದನ್ನು ದಯಮಾಡಿ ತಿಳಿಸಬೇಕು.

ನೀವು Presentation ವಿಭಾಗದಲ್ಲಿ News casting ವಿಭಾಗವನ್ನು ಆಯ್ಕೆ ಮಾಡಿಕೊಳ್ಳಬಹುದು. ಇದಕ್ಕಾಗಿ ನಿಮಗೆ ಒಳ್ಳೆಯ ಕಂಠ, modulation ಮತ್ತು Photogenic appearance ಇದ್ದರೆ ಒಳ್ಳೆಯದು. ಈ ವಿಭಾಗದಲ್ಲಿ ಕೋರ್ಸ್‌ಗಳು ನಡೆಸುವ ಶಾಖೆಗಳೆಂದರೆ, Film & Television Institute of India or Universities departments, TV & Radio Journalism ಮುಂತಾದವುಗಳು. Under graduate ಕೋರ್ಸ್‌ಗಳಿಗೆ ಕನಿಷ್ಠ ೧೦+೨ ತೇರ್ಗಡೆ ಹೊಂದಿರಬೇಕು. ನೀವು Diploma in Dramatics ಇದಕ್ಕೆ S.S.L.C. ಆಗಿದ್ದರೆ ಸಾಕು. ಇದು ೨ ವರ್ಷದ ಕೋರ್ಸ್ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ University of Mysore, Croford Hall, P.B. 17, Mysore ಇವರನ್ನು ಸಂಪರ್ಕಿಸಬಹುದು.

ಉಮೇಶ್, ಶಿವಮೊಗ್ಗ

ನಾನು ಪಿ.ಸಿ.ಎಂ. ವಿಭಾಗದಲ್ಲಿ ಬಿ.ಎಸ್.ಸಿ. ಪದವಿ ಪಡೆದಿದ್ದು ಮುಂದೆ ಎಂ.ಎಸ್ಸಿ.ಯನ್ನು ರಸಾಯನ ಶಾಸ್ತ್ರ ವಿಭಾಗದಲ್ಲಿ ಅಂಚೆ ತೆರಪಿನ ಮೂಲಕ ಮಾಡಬೇಕೆಂದಿದ್ದೇನೆ. ಇದು ಸಾಧ್ಯವೆ? ಅದರ ಬಗ್ಗೆ ಮಾಹಿತಿಯನ್ನು ತಿಳಿಸಿ.

ನೀವು ಅವಶ್ಯವಾಗಿ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ M.Sc. in Chemestry ಕೋರ್ಸನ್ನು ಮಾಡಬಹುದು. ಇದಕ್ಕೆ ಅರ್ಹತೆ ಎಂದರೆ B.Sc. (Chemistry) with Physics ವಿಷಯವನ್ನು ತೆಗೆದುಕೊಂಡಿರಬೇಕು. ಹೆಚ್ಚಿನ ವಿವರಗಳಿಗಾಗಿ ಡೈರೆಕ್ಟರೇಟ್ ಆಫ್ ಡಿಸ್ಟೆನ್ಸ್ ಎಜುಕೇಷನ್, ಅಣ್ಣಾಮಲೈ ನಗರ-೬೦೮ ೦೦೨ ಇವರನ್ನು ಸಂಪರ್ಕಿಸಬಹುದು. ಇದಕ್ಕೆ August/September ತಿಂಗಳು ಕೊನೆಯ ದಿನಾಂಕವಾಗಿರುತ್ತದೆ. ಮುಂದುವರಿಸಿ.

ಅರುಣ, ಬೆಂಗಳೂರು

ನಾನು ೧೦ನೇ ತರಗತಿಯಲ್ಲಿ ೪೭ ಅಂಕಗಳೊಂದಿಗೆ ಪಾಸು ಮಾಡಿರುತ್ತೇನೆ. ನನಗೆ ಗಣಿತದಲ್ಲಿ ಆಸಕ್ತಿ. ನಾನು ಮುಂದೆ ಯಾವ ಕೋರ್ಸು ಮಾಡಬಹುದು? ಯಾವ ಕೋರ್ಸು ಮಾಡಿದರೆ ಕೆಲಸ ಸಿಗುತ್ತದೆ? ಐ.ಟಿ.ಐ. ಮಾಡಬಹುದೆ? ನಾನು ಕಂಪ್ಯೂಟರ್ ಕೋರ್ಸ್ ಮಾಡಬಹುದೆ? (ಬಿಡುವಿನ ಸಮಯದಲ್ಲಿ ಹಾಗೂ ಕಡಿಮೆ ಹಣದಲ್ಲಿ)?

ನೀವು ಉದ್ಯೋಗ ಆಧಾರಿತ ಕಂಪ್ಯೂಟರ್ ಕೋರ್ಸ್‌ನ್ನು ಮಾಡುವುದು ಉತ್ತಮ. ಈ ಬಗ್ಗೆ ಖಾಸಗಿ ವಿದ್ಯಾಸಂಸ್ಥೆಗಳು, ಇನ್‌ಸ್ಟಿಟ್ಯೂಟ್‌ಗಳು ವಿವಿಧ ಡಿಪ್ಲೋಮಾ ಕೋರ್ಸ್‌ಗಳನ್ನು ಮಾಡಬಹುದು. ಇಲ್ಲವೆ I.T.I. ಕೋರ್ಸನ್ನು ಮುಂದುವರಿಸಿ.

ಮಾರ್ಗದರ್ಶಿ ವಿಭಾಗಕ್ಕೆ ಕಳುಹಿಸುವ ನಿಮ್ಮ ಪತ್ರಗಳನ್ನು ಈ ವಿಳಾಸಕ್ಕೆ ಕಳುಹಿಸಿರಿ :

ವಿಳಾಸ:

ಬಿಸಿಲ ಬದುಕು ಮಾಸಪತ್ರಿಕೆ

ಮಾರ್ಗದರ್ಶಿ ವಿಭಾಗ, ಅಂಚೆ ಪೆಟ್ಟಿಗೆ ೭೯೫೧

ಬಸವೇಶ್ವರನಗರ, ಬೆಂಗಳೂರು - ೫೬೦ ೦೭೯

ಮಕ್ಕಳ ಬಗ್ಗೆ ಕಾಳಜಿಯುಳ್ಳವರು ತಿಳಿಯಲೇಬೇಕಾದ

ನವೋದಯ ಶಾಲೆಗಳು

○ ಸೂರ್ಯಕಾಂತ ಗುಣಕಿಮಠ

ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸದ ಅವಕಾಶವನ್ನು ಒದಗಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿವಿಧ ಯೋಜನೆಗಳನ್ನು ರೂಪಿಸುತ್ತಲೇ ಇವೆ. ಇವುಗಳ ನಡುವೆ ಖಾಸಗಿ ವಿದ್ಯಾಸಂಸ್ಥೆಗಳು ತಲೆ ಎತ್ತುತ್ತಲೇ ಇವೆ. ಇಂದು ಹುಟ್ಟಿದ ಖಾಸಗಿ ಸಂಸ್ಥೆ ಕೆಲವೇ ವರ್ಷಗಳಲ್ಲಿ ಸ್ವತಂತ್ರವಾದ ಕಟ್ಟಡ, ಪೀಠೋಪಕರಣಗಳು ಪಾಠೋಪಕರಣಗಳನ್ನು ಹೊಂದಿಸಿಕೊಳ್ಳುತ್ತದೆ. ಯಾರ ಸಹಾಯವೂ ಇಲ್ಲದೇ ಗಟ್ಟಿಯಾದ ಹೆಜ್ಜೆ ಇಡುತ್ತಾ ಮೈ ಕೈ ತುಂಬಿಕೊಂಡು ಬೆಳೆಯುತ್ತಾ ಸಾಗುತ್ತದೆ. ಲಂಗುಲಗಾಮಿಲ್ಲದ ಯಾವ ಕಟ್ಟಳೆಗಳೂ, ಸೌಲಭ್ಯಗಳೂ ಇಲ್ಲದ ಮತ್ತು ಪಾಠ ಮಾಡದಿರುವ ಪ್ರವೃತ್ತಿ ಹೊಂದಿರುವ ಶಿಕ್ಷಕರುಗಳಿಂದ ಹಾಗೂ ಸರ್ಕಾರಿ ಶಾಲೆಗಳಿಂದ ಬೇಸತ್ತ ಪಾಲಕರು ತಮ್ಮ ನಿತ್ಯದ ಉಪಜೀವನಕ್ಕೆ ತೊಂದರೆಯಾದರೂ ಸರಿಯೇ ತಮ್ಮ ಮಗು ಉತ್ತಮ ಶಿಕ್ಷಣದಿಂದ ವಂಚಿತವಾಗಬಾರದೆಂದು ಸಹಜವಾಗಿ ಬಯಸುತ್ತಾರೆ.

ಸ್ವಾತಂತ್ರ್ಯ ಪೂರ್ವದಲ್ಲೇ ಹುಟ್ಟಿಕೊಂಡು ಶತಮಾನೋತ್ಸವ, ರಜತ ಮಹೋತ್ಸವ ಇತ್ಯಾದಿಗಳನ್ನು ಆಚರಿಸುವ ಬಹುಪಾಲು ಸರ್ಕಾರಿ ಶಾಲೆಗಳು ಜೀರ್ಣಾವಸ್ಥೆಯಲ್ಲಿವೆ. ಪೀಠೋಪಕರಣಗಳಿಂದ ಸುಸಜ್ಜಿತವಾದ ಒಂದೇ ಒಂದು ಸರ್ಕಾರಿ ಶಾಲೆಯನ್ನು ಕಾಣುವುದು ದುರ್ಲಭವಾಗಿದೆ. ಖಾಸಗಿ ಶಾಲೆಗಳಲ್ಲಿ ಕಡಿಮೆ ವೇತನ ಪಡೆದು ನಿಯತ್ತಿನಿಂದ ದುಡಿವ ಯುವಕ ಯುವತಿಯರು ಸರ್ಕಾರಿ ಶಾಲೆಗಳಿಗೆ ಆಯ್ಕೆಯಾದ ಮರುದಿನವೇ ದುಡಿಯುವ ಪ್ರವೃತ್ತಿಗೆ ತಿಲಾಂಜಲಿಯನ್ನೀಯುತ್ತಾರೆ. ತಾನು ಪಡೆಯುವ ಹೆಚ್ಚಿನ ವೇತನ ಹಾಗೂ ತನ್ನ ಜವಾಬ್ದಾರಿಗಳನ್ನು ಮರೆಯುತ್ತಾನೆ. ಇದಕ್ಕೆ ಕೆಲವರು ಅಪವಾದಗಳಾಗಿರಬಹುದು. ಇಂತಹ ಶಾಲೆಗಳಲ್ಲಿ ಓದುವ ಮಕ್ಕಳು ಶಿಕ್ಷಣ ವಂಚಿತರಾಗುತ್ತಾರೆ. ಒಂದು ರೀತಿಯಲ್ಲಿ ಅನಾಥವಾಗುತ್ತಾರೆ.

ಶೈಕ್ಷಣಿಕ ಅವಕಾಶಗಳಲ್ಲಿನ ಅಂತರಗಳನ್ನು ನಿವಾರಿಸಲು ಮತ್ತು ಸಮಾನತೆಯನ್ನು ತರಲು ೧೯೮೬ರಲ್ಲಿ ರೂಪುಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಯು ವಿಶೇಷ ಮಹತ್ವವನ್ನು ಕೊಟ್ಟಿದೆ. ಈ ಉದ್ದೇಶಕ್ಕನುಗುಣವಾಗಿ ಭಾರತ ಸರ್ಕಾರವು "ಜವಾಹರ್ ನವೋದಯ ವಿದ್ಯಾಲಯ (ಜನವಿ)"ಗಳನ್ನು ಪ್ರಾರಂಭಿಸಿತು. ಈ ಯೋಜನೆಯಡಿಯಲ್ಲಿ ೧೯೮೫-೮೬ರಲ್ಲಿ ಮೊಟ್ಟಮೊದಲು ಎರಡು ನವೋದಯ ವಿದ್ಯಾಲಯಗಳನ್ನು ಪ್ರಾರಂಭಿಸಲಾಯಿತು. ಒಂದು ಹರಿಯಾಣದ ರೋಹತಕ್ ಜಿಲ್ಲೆಯ ಝುಝುರ್‌ದಲ್ಲಿ, ಇನ್ನೊಂದು ಮಹಾರಾಷ್ಟ್ರದ ಅಮರಾವತಿಯಲ್ಲಿ. ನವೋದಯ ವಿದ್ಯಾಲಯ ಸಮಿತಿಯು ಒಂದು ಸ್ವಯಂ ನಿಯಂತ್ರಿತ ಸಂಘ. ಇದರ ಆಶ್ರಯದಲ್ಲಿ ಪ್ರತಿಯೊಂದು ಜಿಲ್ಲೆಗೆ ಒಂದೊಂದು ನವೋದಯ ವಿದ್ಯಾಲಯ ನಿರ್ಮಾಣ. ಏಳನೇಯ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಪೂರ್ಣಗೊಳಿಸುವ ಉದ್ದೇಶ ಹೊಂದಿದೆ.

ಯೋಜನೆಯ ಉದ್ದೇಶಗಳು

೧. ಎಳೆಯರಲ್ಲಿರುವ ಪ್ರತಿಭೆಗೆ ಸಮಾನವಕಾಶ. "ವಿದ್ಯಾರ್ಥಿಗಳ ವಿಶೇಷ ವಲಸೆ" ನೀತಿಯ ಮುಖಾಂತರ.

೨. ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವುದು.

೩. ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸಮಾಜದ ಹಿಂದುಳಿದ ವರ್ಗಗಳಲ್ಲಿನ ಪ್ರತಿಭೆಯನ್ನು ಗುರುತಿಸಿ ಪೋಷಿಸುವುದು.

೪. ಪ್ರತಿಭಾವಂತ ಮಕ್ಕಳಿಗೆ ಅವರ ಸರ್ವಾಂಗೀಣ ಬೆಳವಣಿಗೆಗೆ ಉತ್ತಮ ಶಿಕ್ಷಣ ಗುಣಮಟ್ಟದ ಶಿಕ್ಷಣ ದೊರಕುವಂತೆ ಮಾಡುವುದು.

೫. ಸುತ್ತಮುತ್ತಲಿನ ಶಾಲೆಗಳಿಗೆ ಮಾರ್ಗದರ್ಶನ ನೀಡುವ ಮತ್ತು ಶ್ರೇಷ್ಠತೆಯನ್ನು ಸಾಧಿಸಲು ಪ್ರಚೋದಕ ಮಾದರಿಗಳಾಗಿರುವ ಉತ್ತಮ ಗುಣಮಟ್ಟದ ಶಾಲೆಗಳನ್ನು ಸ್ಥಾಪಿಸುವುದು.

೬. ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ, ನೈತಿಕತೆ, ಪರಿಸರ ಪ್ರಜ್ಞೆ, ಸಾಹಸ ಮನೋಭಾವಗಳ ಬೆಳವಣಿಗೆ, ಯೋಗ್ಯವಾದ ಶಾರೀರಿಕ ಶಿಕ್ಷಣ ಮತ್ತು ಆಧುನಿಕ ಶಿಕ್ಷಣ ಸೌಲಭ್ಯಗಳನ್ನು ಕೊಡುವುದು.

೭. ತ್ರಿಭಾಷಾ ಸೂತ್ರದನ್ವಯ ಸ್ಥಳೀಯ ಭಾಷೆ, ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಸಾಕಷ್ಟು ಪಾಂಡಿತ್ಯ ಉಂಟುಮಾಡುವುದು.

ನವೋದಯದ ವೈಶಿಷ್ಟ್ಯಗಳು

ಈ ವಿದ್ಯಾಲಯಗಳು ಹಳ್ಳಿಯ ಪರಿಸರದಲ್ಲಿ ಹುಟ್ಟಿ ಹಳ್ಳಿಯಲ್ಲಿ ಬೆಳೆಯುತ್ತಿರುವ ಪ್ರತಿಭಾವಂತ ಮಕ್ಕಳನ್ನು ಹಳ್ಳಿಯ ವಾತಾವರಣ ಮೈಗೂಡಿಸಿಕೊಂಡಿರುವ ಅಧ್ಯಾಪಕರುಗಳಿಂದಲೇ ತಿದ್ದುವಂತೆ ಮಾಡುತ್ತಾ, ಹಳ್ಳಿಯ ಪರಿಸರದಲ್ಲಿ ವಿಲೀನ ಹೊಂದುವಂತೆ ಮಾಡುವುದರಿಂದ ಮಕ್ಕಳಲ್ಲಿ ಶ್ರೀಮಂತಿಕೆ ಮತ್ತು ಡಂಬಾಚಾರಗಳಿಗೆ ಅವಕಾಶವಿರುವುದಿಲ್ಲ. ನವೋದಯ ವಿದ್ಯಾಲಯಗಳಲ್ಲಿ ಎಲ್ಲ ಶಾಲೆಗಳಲ್ಲಿ ಕಂಡುಬರುವ ನೀತಿ ನಿಯಮಗಳೊಂದಿಗೆ, ಇನ್ನಿತರ ವಿಶೇಷತೆಗಳೂ ಇವೆ. ಅವು ಯಾವುವೆಂದರೇ

ಅ. ದೇಶದ ವಿವಿಧ ಮೂಲೆಗಳ ವಿದ್ಯಾರ್ಥಿಗಳು ಒಟ್ಟಿಗೆ ವಾಸಿಸುವುದು ಹಾಗೂ ಅಭ್ಯಸಿಸುವುದು.

ಆ. ಹಳ್ಳಿಗಳಿಂದ ಬಂದ ವಿದ್ಯಾರ್ಥಿಗಳೇ ಅಧಿಕವಾಗಿರುವುದು.

ಇ. ಪ್ರವೇಶವು ಪ್ರತಿಭೆಯ ಆಧಾರಿತವಾಗಿದೆ. ಅಲ್ಲದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಇರುವುದು.

ಈ. ಸರ್ಕಾರದಿಂದ ಸಂಪೂರ್ಣ ಆರ್ಥಿಕ ಬೆಂಬಲವಿರುವುದು.

ಉ. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅವಕಾಶವಿರುವ ವಸತಿ ಶಾಲೆ.

ಊ. ರಾಷ್ಟ್ರೀಯ ಭಾವೈಕ್ಯತೆ ಮತ್ತು ಭಾರತೀಯತೆಗೆ ಒತ್ತು ಕೊಟ್ಟಿರುವುದು.

ಋ. ತ್ರಿಭಾಷೆಗಳ ಅಭ್ಯಾಸ.

ಎ. ಉತ್ತಮ ಗುಣಮಟ್ಟದ ವಿದ್ಯಾಭ್ಯಾಸ ಕೊಡುವುದು.

ಏ. ಕೆಲಸದ ಬಗ್ಗೆ ಗೌರವ ಮತ್ತು ಪರಿಸರ ಪ್ರಜ್ಞೆಯನ್ನು ಮೂಡಿಸುವುದು.

ಐ. ಸಂಶೋಧನೆ ಮತ್ತು ಪ್ರಯೋಗಗಳಿಗೆ ಆಸ್ಪದ ಮಾಡಿಕೊಡುವುದು.

ಇದುವರೆಗೆ ಕರ್ನಾಟಕದಲ್ಲಿ ೨೦ ಜಿಲ್ಲೆಗಳಲ್ಲಿ

ನವೋದಯ ವಿದ್ಯಾಲಯಗಳು ಪ್ರಾರಂಭ ಆಗಿವೆ. ಈ ವಿದ್ಯಾಲಯಗಳಲ್ಲಿ ೬ನೇ ತರಗತಿಯಿಂದ ೧೨ನೇ ತರಗತಿವರೆಗೆ (೧೦+೨) ವಿದ್ಯಾಭ್ಯಾಸ ಮಾಡಲು ಅವಕಾಶವಿದೆ.

ಪ್ರವೇಶ ಪಡೆಯುವುದು ಹೇಗೆ?

ನವೋದಯ ವಿದ್ಯಾಲಯ ಸಮಿತಿಯ ನೆರವಿನಲ್ಲಿ ರಾಷ್ಟ್ರೀಯ ಅನುಸಂಧಾನ ಮತ್ತು ಶೈಕ್ಷಣಿಕ ತರಬೇತಿ ಸಂಸ್ಥೆಯು (NCERT) ಅಖಿಲ ಭಾರತ ಮಟ್ಟದಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತದೆ. ಸಾಮಾನ್ಯವಾಗಿ ಈ ಪ್ರವೇಶ ಪರೀಕ್ಷೆಯು ಕ್ಷೇತ್ರ ಶಿಕ್ಷಣಾಧಿಕಾರಿಯವರ ಉಸ್ತುವಾರಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ನಡೆಯುತ್ತದೆ. ೧೯೯೬ರ ವರೆಗೆ ಕರ್ನಾಟಕದಲ್ಲಿ ಪರೀಕ್ಷೆ ನಡೆದ ಒಟ್ಟು ಕೇಂದ್ರಗಳ ಸಂಖ್ಯೆ ೧೯೨.

ಪ್ರತಿ ಜಿಲ್ಲೆಯ ನವೋದಯ ವಿದ್ಯಾಲಯದಲ್ಲಿ ಪ್ರತಿವರ್ಷ ಗರಿಷ್ಠ ೮೦ ಅರ್ಹ ವಿದ್ಯಾರ್ಥಿಗಳಿಗೆ ೬ನೇ ತರಗತಿಗೆ ಪ್ರವೇಶ ನೀಡಲಾಗುತ್ತದೆ.

ಅರ್ಜಿಗಳನ್ನು ಪಡೆಯುವ ಬಗೆ

ಪ್ರವೇಶ ಪರೀಕ್ಷೆಗೆ ನಿಗದಿಗೊಳಿಸಿದ ನಮೂನೆಯಲ್ಲೇ ಅರ್ಜಿಗಳನ್ನು ಸಲ್ಲಿಸಬೇಕು. ಈ ಅರ್ಜಿ ನಮೂನೆಯನ್ನು ಲಗತ್ತಿಸಲಾದ ವಿವರಣಾ ಪತ್ರವನ್ನು ಪ್ರವೇಶ ಬಯಸುವ ಹಿಂದಿನ ವರ್ಷದ ನವೆಂಬರ್ ೧೬ರ ವರೆಗೆ ಈ ಕೆಳಕಂಡವರಿಂದ ಉಚಿತವಾಗಿ ಪಡೆಯಬಹುದು.

೧. ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು
೨. ಕ್ಷೇತ್ರ ಶಿಕ್ಷಣಾಧಿಕಾರಿಗಳು
೩. ಆ ಜಿಲ್ಲೆಯ ಐದನೇ ತರಗತಿಯುಳ್ಳ ಹಾಗೂ ಮಾನ್ಯತೆ ಪಡೆದ ಯಾವುದೇ ಶಾಲೆಯ ಮುಖ್ಯೋಪಾಧ್ಯಾಯರು
೪. ನವೋದಯ ವಿದ್ಯಾಲಯದ ಪ್ರಾಚಾರ್ಯರು.

ಅರ್ಜಿ ಸಲ್ಲಿಸುವುದು ಹೇಗೆ?

ಮಾನ್ಯತೆ ಪಡೆದ ಶಾಲೆಯಲ್ಲಿ ಐದನೇ ತರಗತಿಯಲ್ಲಿ ಓದುತ್ತಿರುವ ಹಾಗೂ ಪ್ರವೇಶ ಪರೀಕ್ಷೆ ತೆಗೆದುಕೊಳ್ಳಬಯಸುವ ವಿದ್ಯಾರ್ಥಿಗಳು ಸೂಕ್ತವಾಗಿ ಭರ್ತಿ ಮಾಡಿದ ಅರ್ಜಿಗಳನ್ನು ತಾವು ಓದುತ್ತಿರುವ ಶಾಲೆಯ ಮುಖ್ಯೋಪಾಧ್ಯಾಯರ ಸಹಿಯೊಂದಿಗೆ ಪ್ರವೇಶ ಬಯಸುವ ವರ್ಷದ ಹಿಂದಿನ ವರ್ಷ ನವಂಬರ್ ೧೬ರಂದು ಅಥವಾ ಮುಂಚೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಲುಪುವಂತೆ ಕಳಿಸುವುದು.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ''ಸ್ವೀಕೃತಿ''ಯನ್ನು ಪಡೆಯಬೇಕು.

ಪ್ರವೇಶಪತ್ರ ನೀಡಿಕೆ

ಜನವಿ ಪ್ರಾಚಾರ್ಯರಿಂದ ಸಿದ್ಧಪಡಿಸಲಾದ ಪ್ರವೇಶ ಪತ್ರಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಮೂಲಕ ಅಭ್ಯರ್ಥಿಗಳಿಗೆ ನೀಡಲಾಗುವುದು. ಪರೀಕ್ಷೆಗೆ ಒಂದು ವಾರ ಮೊದಲು ಪ್ರವೇಶ ಪತ್ರಗಳು ಕೈಸೇರದೇ ಇದ್ದಲ್ಲಿ ವಿದ್ಯಾರ್ಥಿಗಳು ಜನವಿ ಪ್ರಾಚಾರ್ಯರನ್ನಾಗಲೀ, ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನಾಗಲಿ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರನ್ನಾಗಲಿ ಸಂಪರ್ಕಿಸಬೇಕು.

ತಮ್ಮ ಮಕ್ಕಳಿಗೇನೇ ಸೀಟು ಸಿಕ್ಕಲಿ ಎಂದು ಬಯಸುವ ಒಂದು ವಿಶಿಷ್ಟ ವರ್ಗದ ಪ್ರಜ್ಞಾವಂತ ಜನ ಪ್ರತಿಸ್ಪರ್ಧಿಗಳ ಸಂಖ್ಯೆ ಕಡಿಮೆಯಾಗಲಿ ಎಂಬ ಧೂರ್ತತನದಿಂದ 'ಜನವಿ' ಪ್ರವೇಶ ಪರೀಕ್ಷೆಗೆ ಪ್ರಾಮಾಣಿಕವಾದ ಹಾಗು ವ್ಯಾಪಕವಾದ ಪ್ರಚಾರವನ್ನು ನೀಡುತ್ತಿಲ್ಲ.

ಅರ್ಹತೆ


ಜವಾಹರ ನವೋದಯ ವಿದ್ಯಾಲಯ (ಜನವಿ)ಗಳಿಗೆ ಈ ಕೆಳಗೆ ಕೊಟ್ಟಿರುವ ಅರ್ಹತೆಗಳ ಆಧಾರದ ಮೇಲಿಂದ ಪ್ರವೇಶವನ್ನು ಕೊಡಲಾಗುವುದು.

I. ಎಲ್ಲ ಅಭ್ಯರ್ಥಿಗಳಿಗೆ

ಅ. ಯಾವ ಜಿಲ್ಲೆಯಲ್ಲಿ ಜನವಿ ಸ್ಥಾಪಿಸಲ್ಪಟ್ಟಿದೆಯೋ ಆ ಜಿಲ್ಲೆಯ ಅಭ್ಯರ್ಥಿಗಳು ಮಾತ್ರ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹರು.

ಆ. ಆಯ್ಕೆ ಪರೀಕ್ಷೆಯ ಆಧಾರದ ಮೇಲೆ ಆರನೇ ತರಗತಿಗೆ ಪ್ರವೇಶ ನೀಡಲಾಗುವುದು.

ಇ. ಅಭ್ಯರ್ಥಿಗಳು ಯಾವ ಜಿಲ್ಲೆಯ ಜನವಿದಲ್ಲಿ ೧೯೯೮-೯೯ರ ಶೈಕ್ಷಣಿಕ ವರ್ಷದಲ್ಲಿ ಪ್ರವೇಶ ಪಡೆಯಲು ಇಚ್ಛಿಸುತ್ತಾರೋ ಅವರು ಅದೇ ಜಿಲ್ಲೆಯ ಯಾವುದಾದರೊಂದು ಸರ್ಕಾರಿ ಶಾಲೆ ಅಥವಾ ಸರ್ಕಾರದಿಂದ ಅನುದಾನ



ಅಥವಾ ಮಾನ್ಯತೆ ಪಡೆದ ಶಾಲೆಯಲ್ಲಿ ೧೯೯೭-೯೮ರ ಪೂರ್ಣ ಶೈಕ್ಷಣಿಕ ವರ್ಷದಲ್ಲಿ ಐದನೇ ತರಗತಿಯನ್ನು ಓದುತ್ತಿರಬೇಕು. ಅಂತಿಮವಾಗಿ ನವೋದಯ ಶಾಲೆಯ ೧೯೯೮-೯೯ರ ಆರನೇ ತರಗತಿಯಲ್ಲಿ ಪ್ರವೇಶ ದೊರೆಯಬೇಕಾದರೆ ಅಭ್ಯರ್ಥಿಯು ೫ನೇ ತರಗತಿಯಿಂದ ತೇರ್ಗಡೆ ಹೊಂದಿರಲೇಬೇಕು.

ಈ. ಪ್ರವೇಶ ಪಡೆಯಲು ಇಚ್ಛಿಸುವ ಅಭ್ಯರ್ಥಿಯು ೦೧-೦೫-೮೫ಕ್ಕಿಂತ ಮೊದಲು ಮತ್ತು ೩೦-೪-೧೯೮೯ರ ನಂತರ ಜನಿಸಿರಬಾರದು. ಇದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ (SC/ST) ಒಳಗೊಂಡಂತೆ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಯ ವಯಸ್ಸು ಮೀರಿದೆ ಎಂದು ಅನುಮಾನವಿದ್ದರೆ ಅದನ್ನು ಖಚಿತಪಡಿಸಿಕೊಳ್ಳಲು ವೈದ್ಯಕೀಯ ಮಂಡಳಿಗೆ ನಿರ್ದೇಶಿಸಬಹುದು. ವೈದ್ಯಕೀಯ ಮಂಡಳಿ ತೀರ್ಮಾನವೇ ಅಂತಿಮವಾದುದು.

ಉ. (i) ಅಭ್ಯರ್ಥಿಯು ಮಾನ್ಯತೆ ಪಡೆದ ಶಾಲೆಯಲ್ಲಿ ೩, ೪ ಹಾಗೂ ೫ನೇ ತರಗತಿಗಳನ್ನು ೯೫-೯೬, ೯೬-೯೭, ೯೭-೯೮ರ ಶೈಕ್ಷಣಿಕ ವರ್ಷಗಳಲ್ಲಿ ಅನುಕ್ರಮವಾಗಿ ಔಪಚಾರಿಕ ಶಿಕ್ಷಣವನ್ನು ಪಡೆದಿರಬೇಕು. ಅಂದರೆ ಯಾವುದೇ ತರಗತಿಯಲ್ಲಿ ಅನುತ್ತೀರ್ಣನಾಗಿರಬಾರದು ಹಾಗೂ ಹಾಜರಾತಿಯಲ್ಲಿ ತಡೆಯಿರಬಾರದು.

(ii) ಯಾವುದೇ ಸಂದರ್ಭದಲ್ಲಿಯೂ ಅಭ್ಯರ್ಥಿಗೆ ಎರಡನೇ ಬಾರಿ ಆಯ್ಕೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅವಕಾಶ ಇರುವುದಿಲ್ಲ.

II. ಗ್ರಾಮೀಣ ಅಭ್ಯರ್ಥಿಗಳಿಗಾಗಿ

ಅ. ಪ್ರತಿಯೊಂದು ಜಿಲ್ಲೆಯಲ್ಲೂ ಕನಿಷ್ಠ ಪಕ್ಷ ಶೇಕಡಾ ೭೫ ಸ್ಥಾನಗಳನ್ನು ಗ್ರಾಮೀಣ ಕ್ಷೇತ್ರಗಳಿಂದ ಆಯ್ಕೆ ಮಾಡಲಾದ ಅಭ್ಯರ್ಥಿಗಳಿಂದಲೂ ಮತ್ತು ಉಳಿದ ಸ್ಥಾನಗಳನ್ನು ಜಿಲ್ಲೆಯ ನಗರ ಕ್ಷೇತ್ರಗಳಿಂದ ಆಯ್ಕೆಯಾದ ಅಭ್ಯರ್ಥಿಗಳನ್ನು ತುಂಬಲಾಗುವುದು.

ಆ. ಗ್ರಾಮೀಣ ಕ್ಷೇತ್ರದಿಂದ ಆಯ್ಕೆ ಪಡೆಯಲು ಇಚ್ಛಿಸುವ ಅಭ್ಯರ್ಥಿಯು ಗ್ರಾಮೀಣ ಪ್ರದೇಶದಲ್ಲಿನ ಮಾನ್ಯತೆ ಪಡೆದ ಶಾಲೆಯಲ್ಲಿ ೩, ೪ ಹಾಗೂ ೫ನೇ ತರಗತಿಯಲ್ಲಿ ಪ್ರತಿಯೊಂದರಲ್ಲಿ ಪೂರ್ಣ ಶೈಕ್ಷಣಿಕ ವರ್ಷದಲ್ಲಿ ಯಾವುದೇ ಅಡೆ-ತಡೆಯಿಲ್ಲದೆ ಶಿಕ್ಷಣವನ್ನು ಪಡೆದಿರಬೇಕು.

III. ನಗರ ಪ್ರದೇಶದ ಅಭ್ಯರ್ಥಿಗಳಿಗೆ

ಒಬ್ಬ ಅಭ್ಯರ್ಥಿಯು ನಗರಕ್ಷೇತ್ರದಲ್ಲಿ ಸ್ಥಾಪಿತವಾಗಿರುವ ಶಾಲೆಯ ೩, ೪ ಹಾಗೂ ೫ನೇ ತರಗತಿಗಳಲ್ಲಿ ಯಾವುದಾದರೂ ಶೈಕ್ಷಣಿಕ ವರ್ಷದಲ್ಲಿ ಒಂದೇ ಒಂದು ದಿವಸ ಓದಿದ್ದರೂ ಅಂತಹ ಅಭ್ಯರ್ಥಿಯನ್ನು ನಗರ ಕ್ಷೇತ್ರದ ಅಭ್ಯರ್ಥಿ ಎಂದು ಪರಿಗಣಿಸಲಾಗುವುದು. ೧೯೯೧ರ ಜನಗಣತಿಯ ಪ್ರಕಾರ ಅಥವಾ ತರುವಾಯ ಸರ್ಕಾರದ ಅಧಿಸೂಚನೆಯ ಮೇರೆಗೆ ಘೋಷಿಸಲಾದ ನಗರಪ್ರದೇಶಗಳನ್ನು ಮಾತ್ರ ನಗರ ಪ್ರದೇಶಗಳೆಂದು ಪರಿಗಣಿಸಲಾಗುವುದು.

IV. ಮೀಸಲಾತಿ

ಅ. ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿಯ ಅವಕಾಶವಿದೆ.

ಆ. ಬಾಲಕಿಯರಿಗೂ ಮೀಸಲಾತಿಯ ಅವಕಾಶವಿದೆ.

ಇ. ಇತರ ಹಿಂದುಳಿದ ವರ್ಗಗಳ (OBC) ಅಭ್ಯರ್ಥಿಗಳಿಗೆ ಮೀಸಲಾತಿಯ ಅವಕಾಶ ವಿಲ್ಲ.

ನೆನಪಿನಲ್ಲಿಡಿ

ಜನವಿ ಪ್ರಾಂಶುಪಾಲರಿಂದ ಅಭ್ಯರ್ಥಿಯ ಎಲ್ಲಾ ದಾಖಲೆ ಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸುವವರೆಗೆ ಪ್ರವೇಶವು ತಾತ್ಕಾಲಿಕ ಮಾತ್ರವೆಂದು ನೆನಪಿಡಬೇಕು.

ಪರೀಕ್ಷೆಯ ಬಗ್ಗೆ

ಪ್ರತಿಯೊಬ್ಬ ಅಭ್ಯರ್ಥಿಯು ಪ್ರವೇಶ ಪತ್ರದಲ್ಲಿ ಸೂಚಿಸಿದಂತೆ ಅವನಿಗೆ ನೀಡಲಾದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ತೆಗೆದುಕೊಳ್ಳಬೇಕು. ಪರೀಕ್ಷಾ ಕೇಂದ್ರದ ಬದಲಾವಣೆಗಾಗಿ ಬರುವ ಯಾವುದೇ ಕೋರಿಕೆಯನ್ನು ಗಮನಿಸುವುದಿಲ್ಲ. ಸೂಕ್ತ ಪ್ರವೇಶ ಪತ್ರವಿಲ್ಲದೇ ಯಾವುದೇ ಅಭ್ಯರ್ಥಿಯು ಪರೀಕ್ಷೆಗೆ ಕೂಡುವಂತಿಲ್ಲ. ಪ್ರವೇಶ ಪತ್ರಗಳನ್ನು ನೀಡುವ ಯೋಗ್ಯ ಅಧಿಕಾರಿಗಳೆಂದರೆ ಜನವಿದ ಪ್ರಾಚಾರ್ಯರು.

ಪರೀಕ್ಷಾ ಮಾಧ್ಯಮ

ಅಭ್ಯರ್ಥಿಯು ೫ನೇ ತರಗತಿಯಲ್ಲಿ ಯಾವ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆಯುತ್ತಿರುತ್ತಾನೆಯೋ ಅದೇ ಭಾಷಾ ಮಾಧ್ಯಮದಲ್ಲಿ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು.

ಪ್ರಶ್ನೆಪತ್ರಿಕೆಯ ಸ್ವರೂಪ

ಈ ವಿದ್ಯಾಲಯದ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆಗಾಗಿ ನಡೆಯುವ ಪರೀಕ್ಷೆಗಳಲ್ಲಿ ಮೂರು ಭಾಗಗಳಿವೆ. ಪ್ರವೇಶ ಪರೀಕ್ಷೆಯು ಒಟ್ಟು ಎರಡು ಗಂಟೆಯ ಅವಧಿಯದಾಗಿರುತ್ತದೆ. ಅದರಲ್ಲಿ ಕೇವಲ ವಸ್ತುನಿಷ್ಠ ಪ್ರಶ್ನೆಗಳು ಮಾತ್ರ ಇರುತ್ತವೆ. ಪ್ರತಿಯೊಂದು ಪ್ರಶ್ನೆಗೂ ಒಂದೊಂದು ಅಂಕದಂತೆ ಒಟ್ಟು ೧೦೦ ಅಂಕಗಳ ೧೦೦ ಪ್ರಶ್ನೆಗಳಿರುತ್ತವೆ.

ವಿಭಾಗ	ಒಟ್ಟು ಪ್ರಶ್ನೆಗಳು	ಅಂಕಗಳು	ಸಮಯ
೧. ಮಾನಸಿಕ ಸಾಮರ್ಥ್ಯ ಪರೀಕ್ಷೆ	೬೦	೬೦	೬೦ನಿಮಿಷಗಳು
೨. ಗಣಿತ ಪರೀಕ್ಷೆ	೨೦	೨೦	೩೦ ನಿಮಿಷಗಳು
೩. ಭಾಷಾ ಪರೀಕ್ಷೆ	೨೦	೨೦	೩೦ ನಿಮಿಷಗಳು
ಒಟ್ಟು	೧೦೦	೧೦೦	ಎರಡು ಘಂಟೆಗಳು

ಪ್ರತಿ ಅಭ್ಯರ್ಥಿಗೂ ೩ ವಿಭಾಗಗಳನ್ನೊಳಗೊಂಡ ಒಂದು ಪ್ರಶ್ನೆಪತ್ರಿಕೆ ಪುಸ್ತಕವನ್ನು ಕೊಡಲಾಗುತ್ತದೆ. ಅದಕ್ಕೆ ಬೇರೆ ಯಾವ ಉತ್ತರ ಪತ್ರಿಕೆಯನ್ನು ಕೊಡಲಾಗುವುದಿಲ್ಲ. ಈ ಪ್ರಶ್ನೆಪತ್ರಿಕೆಯು ನಮ್ಮ ದೇಶದ ಲಿಪಿಯನ್ನು ಹೊಂದಿರುವ ಬಹುತೇಕ ಎಲ್ಲ ಭಾಷೆಗಳಲ್ಲಿಯೂ ಪ್ರಕಟವಾಗುತ್ತದೆ.

ಅಭ್ಯರ್ಥಿಗಳು ತಮ್ಮ ಉತ್ತರವನ್ನು ಪ್ರಶ್ನೆಪತ್ರಿಕೆಯ ಪುಸ್ತಕದಲ್ಲಿಯೇ ನಮೂದಿಸಬೇಕು. ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳಿರುತ್ತವೆ. ಸರಿಯಾದ ಉತ್ತರವನ್ನು ಕಂಡುಹಿಡಿದು ಅದರ ಸಂಖ್ಯೆಯನ್ನು ದುಂಡು ಸುತ್ತುವುದರ ಮೂಲಕ ಉತ್ತರವನ್ನು ಪ್ರಶ್ನೆಪುಸ್ತಕದಲ್ಲಿಯೇ ಸೂಚಿಸಬೇಕು. ಉತ್ತರವನ್ನು ಬದಲಾಯಿಸ ಬಯಸಿದರೆ ಮೊದಲು ದುಂಡು ಸುತ್ತಿದ ಸಂಖ್ಯೆಗೆ ಕತ್ತರಿಯ ಗುರುತನ್ನು ಹಾಕಿ ಸರಿಯಾದ ಉತ್ತರ ಸಂಖ್ಯೆಗೆ ದುಂಡು ಸುತ್ತಬೇಕು. ತಪ್ಪು ಉತ್ತರಕ್ಕಾಗಿ ಅಂಕಗಳನ್ನು ಕಳೆಯುವ ವಿಧಾನವಿಲ್ಲ.

ಪರೀಕ್ಷೆಯ ಸ್ವಭಾವವೇನು?

೧. ಮಾನಸಿಕ ಸಾಮರ್ಥ್ಯ ಪರೀಕ್ಷೆ : ಅಭ್ಯರ್ಥಿಯಲ್ಲಿ ಅಡಗಿದ ಕೆಲವು ಮಾನಸಿಕ ಸಾಮರ್ಥ್ಯವನ್ನು ಅಳೆಯುವುದೇ ಈ ಪರೀಕ್ಷೆಯ ಮುಖ್ಯ ಉದ್ದೇಶ. ಈ ಪರೀಕ್ಷೆಯ ಶಬ್ದರಹಿತ ಪರೀಕ್ಷೆಯಾಗಿರುತ್ತದೆ. ಇದರಲ್ಲಿ ಪ್ರಶ್ನೆಗಳು ಕೇವಲ ಆಕೃತಿ ಮತ್ತು ಚಿತ್ರಗಳನ್ನೇ ಆಧರಿಸಿವೆ. ಈ ವಿಭಾಗವನ್ನು ೪ ಉಪವಿಭಾಗಗಳಾಗಿ ವಿಂಗಡಿಸಲಾಗಿದೆ. ಪ್ರತಿ ಉಪವಿಭಾಗದಲ್ಲಿ ೧೫ ಪ್ರಶ್ನೆಗಳಿರುತ್ತವೆ.

೨. ಗಣಿತ ಪರೀಕ್ಷೆ : ಗಣಿತದಲ್ಲಿ ಅಭ್ಯರ್ಥಿಯ ಮೂಲಭೂತ ಸಾಮರ್ಥ್ಯಗಳನ್ನು ಅಳೆಯುವುದೇ ಈ ಪರೀಕ್ಷೆಯ ಉದ್ದೇಶ. ಅಭ್ಯರ್ಥಿಗಳು ಪರೀಕ್ಷಾ ಪ್ರಶ್ನೆಪುಸ್ತಕದಲ್ಲಿ ಕೊಟ್ಟಿರುವ ಜಾಗವನ್ನು ಕಚ್ಚಾಕೆಲಸಕ್ಕಾಗಿ ಉಪಯೋಗಿಸಬಹುದು.

೩. ಭಾಷಾ ಪರೀಕ್ಷೆ : ಅಭ್ಯರ್ಥಿಗಳ ಓದಿನ ಗ್ರಹಿಕೆಯನ್ನು ಅಳೆಯುವುದೇ ಈ ಪರೀಕ್ಷೆಯ ಉದ್ದೇಶ. ಈ ಪರೀಕ್ಷೆಯಲ್ಲಿ ೪ ವಾಕ್ಯಾವಳಿಗಳಿವೆ. ಪ್ರತಿ ವಾಕ್ಯಾವಳಿಯ ನಂತರ ವಾಕ್ಯಾವಳಿಗೆ ಸಂಬಂಧಿಸಿದ ೫ ಪ್ರಶ್ನೆಗಳಿವೆ. ಅಭ್ಯರ್ಥಿಗಳು ಪ್ರತಿಯೊಂದು ವಾಕ್ಯಾವಳಿಯನ್ನು ಗಮನವಿಟ್ಟು ಓದಿ ಸಂಬಂಧಿಸಿದ ಪ್ರಶ್ನೆಗಳನ್ನು ಉತ್ತರಿಸಬೇಕು.

ಪ್ರವೇಶ ಪರೀಕ್ಷೆಯ ಫಲಿತಾಂಶ

ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಪರೀಕ್ಷೆ ನಡೆದ ವರ್ಷದ ಜೂನ್ ತಿಂಗಳ ಹೊತ್ತಿಗೆ ಈ ಕೆಳಕಂಡ ಕಾರ್ಯಾಲಯಗಳಲ್ಲಿ ಪ್ರಕಟಿಸಲಾಗುವುದು.

೧. ಜವಾಹರ್ ನವೋದಯ ವಿದ್ಯಾಲಯ
೨. ಜಿಲ್ಲಾ ಶಿಕ್ಷಣಾಧಿಕಾರಿಗಳು
೩. ಜಿಲ್ಲಾಧಿಕಾರಿಗಳು
೪. ಉಪನಿರ್ದೇಶಕರು, ವಲಯದ ನವೋದಯ ವಿದ್ಯಾಲಯ ಸಮಿತಿ.

ಸಂಬಂಧಪಟ್ಟ ಜನವಿ ಪ್ರಾಚಾರ್ಯರು ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ ನೊಂದಾವಣೆ ಅಂಚೆಯ ಮೂಲಕ ವಿಷಯ ತಿಳಿಸುತ್ತಾರೆ.

ಭಾರತ ಸರ್ಕಾರವು ಜವಾಹರ್ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸುವುದರ ಮೂಲಕ ಗ್ರಾಮೀಣ ಪ್ರತಿಭೆಗಳಿಗೆ, ಅವಕಾಶ ವಂಚಿತರಿಗೆ +೨ ಹಂತದವರೆಗೆ (ಪಿ.ಯು.ಸಿ. ಶಿಕ್ಷಣ) ಉತ್ತಮ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿ ಹೆಜ್ಜೆ ಇಡುತ್ತಾಸಾಗಿದೆ. ತದನಂತರ ಹೊರಬರುವ ವಿದ್ಯಾರ್ಥಿಯು ನೀರಿನಿಂದ ಹೊರಬಿದ್ದ ಮೀನಿ

ನಂತೆ ಅನಾಥವಾಗುವುದರಿಂದ ಜೀವನದ ಗುರಿಯ ಬಗ್ಗೆ ತನಗಿರುವ ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತಾನೆ. ಈ ಅನಾಥ ಪ್ರಜ್ಞೆಯನ್ನು ತಪ್ಪಿಸಲು ಬಡಕುಟುಂಬದ ಬುದ್ಧಿವಂತ ವಿದ್ಯಾರ್ಥಿಗೆ ಪದವಿ ಶಿಕ್ಷಣದವರೆಗೆ ಮಾರ್ಗ ದರ್ಶನ ಮಾಡಿ ಜೀವನೋಪಾಯಕ್ಕೆ ಒಂದು ಮಾರ್ಗೋಪಾಯವನ್ನು ಮಾಡಿಕೊಡಬೇಕು. ಈ ಸೌಲಭ್ಯವೂ ಹೊಸದಾಗಿ ಘೋಷಿಸಲ್ಪಟ್ಟ ಜಿಲ್ಲೆಗಳಿಗೂ ವ್ಯಾಪಿಸಲಿ ಮತ್ತು ವಿದ್ಯಾ ಪ್ರಸಾರಕ್ಕೆ ಮುಂದಾಗಲಿ.

ವಿವಿಧ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರು ಹಾಗೂ ನವೋದಯ ಶಾಲೆಗಳ ಪ್ರಾಂಶುಪಾಲರು ಹೆಣಗಿದಾಗ್ಯೂ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಯ ಕೆಳಗಿರುವ ಅಜ್ಞಾನದಲ್ಲಿ ಮುಳುಗಿರುವ ಮುಗ್ಧ ಪಾಲಕರುಗಳಿಗೆ ಜನವಿಗಳ ಇರುವಿಕೆ ಅರಿವು ಈವರೆಗೂ ಉಂಟಾಗಿಲ್ಲ.

ತಮ್ಮ ಮಕ್ಕಳಿಗೇನೇ ಸೀಟು ಸಿಕ್ಕಲಿ ಎಂದು ಬಯಸುವ ಒಂದು ವಿಶಿಷ್ಟ ವರ್ಗದ ಪ್ರಜ್ಞಾವಂತ ಜನ ಪ್ರತಿಸ್ಪರ್ಧಿಗಳ ಸಂಖ್ಯೆ ಕಡಿಮೆಯಾಗಲಿ ಎಂಬ ಧೂರ್ತತನದಿಂದ 'ಜನವಿ' ಪ್ರವೇಶ ಪರೀಕ್ಷೆಗೆ ಪ್ರಾಮಾಣಿಕವಾದ ಹಾಗು ವ್ಯಾಪಕವಾದ ಪ್ರಚಾರ ವನ್ನು ನೀಡುತ್ತಿಲ್ಲ. ಕೈ ಬೆರಳೆಣಿಕೆಯಷ್ಟು ಜನ ಸ್ವ ಇಚ್ಛೆಯಿಂದ ಪರೀಕ್ಷೆ ಕಟ್ಟಿದರೂ ಅಂತಹ ಮಕ್ಕಳಿಗೆ ಸೂಕ್ತ ಮಾರ್ಗದರ್ಶನವಿಲ್ಲದೆ ಮಾನಸಿಕ ಸಾಮರ್ಥ್ಯ ಪರೀಕ್ಷೆಯಲ್ಲಿಯ ಚಿತ್ರ-ವಿಚಿತ್ರ ವಾಗಿರುವ ಚಿತ್ರಗಳನ್ನು ಎಲ್ಲೆಲ್ಲೋ ಗುರುತು ಹಾಕಿ ಗೊಂದಲದ ಗೂಡಿನಲ್ಲಿ ಅವಿತು ಪ್ರವೇಶ ಪರೀಕ್ಷೆಯಲ್ಲಿ ನಿರೀಕ್ಷೆಮಟ್ಟ ತಲುಪಲು ವಿಫಲ ವಾಗುತ್ತವೆ. ಈ ದಿಸೆಯಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗ ಪದವೀಧರ ಯುವಕರು ಮನಸ್ಸು ಮಾಡಿದರೆ ಗ್ರಾಮೀಣ ಪ್ರತಿಭೆಗೆ ಮೀಸಲಿರುವ ಶೇಕಡ ೭೫ರಷ್ಟು ಸೀಟುಗಳನ್ನು ಸಲೀಸಾಗಿ ಪಡೆಯಬಹುದು. ಇದಕ್ಕಾಗಿ ಯುವಕರು ಮಾಡಬೇಕಾದುದು ಇಷ್ಟೆ. ತಮ್ಮ ಊರಲ್ಲಿ ಐದನೇ ತರಗತಿ ಓದುತ್ತಿರುವ ಹಾಗು ವಯಸ್ಸಿನ ಮಿತಿಯಲ್ಲಿ ಬರುವ ಎಲ್ಲ ವಿದ್ಯಾರ್ಥಿಗಳಿಗೂ ನವೋದಯ ಪರೀಕ್ಷೆ ಫಾರ್ಮ್ ತುಂಬಿಸಿ ಒಂದು ತಿಂಗಳ ಕಾಲ ಮಾನಸಿಕ ಸಾಮರ್ಥ್ಯ ಪರೀಕ್ಷೆ, ಭಾಷೆ ಹಾಗು ಗಣಿತ ವಿಷಯಗಳಲ್ಲಿ ಸ್ವಲ್ಪವೇ ಆಸಕ್ತಿಯಿಂದ ತರಬೇತಿ ನೀಡಿದರೂ ಸಾಕು- ಜಿಲ್ಲೆಯ ವಿವಿಧ ಮೂಲೆಗಳಲ್ಲಿ ಅವಿತಿರುವ ಅವಕಾಶ ವಂಚಿತ ಪ್ರತಿಭೆಗಳಿಗೆ ಜೀವನದಲ್ಲಿ ಮುನ್ನಡೆಯುವ ಮಾರ್ಗ ತೋರಿದಂತಾಗುತ್ತದೆ. ●

ಕಂಪ್ಯೂಟರ್ ತರಬೇತಿ

ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಅಭಿವೃದ್ಧಿ ನಿಗಮ ಅಂಗವಿಕಲರಿಗಾಗಿ ಮೈಸೂರು, ಮಂಗಳೂರು, ರಾಯಚೂರು, ಕೊಡಗು ಮತ್ತು ಬಿಜಾಪುರದಲ್ಲಿ ಕಂಪ್ಯೂಟರ್ ತರಬೇತಿ ನೀಡಲಿದೆ.

ಯಾವುದೇ ರೀತಿಯ ಅಂಗವಿಕಲತೆ, ಕಿವುಡು, ಭಾಗಶಃ ಕುರುಡು ಹಾಗೂ ಮಾತು ಬಾರದೆ ಇರುವವರಿಗೆ ವಿಂಡೋಸ್, ಡಿ.ಟಿ.ಪಿ. ಹಾಗೂ ಡಾಟಾ ಎಂಟ್ರಿ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಆಸಕ್ತರು ಆಯಾ ಜಿಲ್ಲೆಗಳ ಕಿಯೋನಿಕ್ಸ್ ತರಬೇತಿ ಕೇಂದ್ರಗಳಿಂದ ನಿಗದಿತ ಅರ್ಜಿ ಫಾರಂ ಪಡೆದು ಜ.೨೪ ರೊಳಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ.

ಲಿಂಗಾಯತ ವಿದ್ಯಾರ್ಥಿಗಳಿಗೆ ಐಎಫ್‌ಎಸ್ ಪೂರ್ವಭಾವಿ ಲಿಖಿತ ಪರೀಕ್ಷೆ : ಅರ್ಜಿ ಆಹ್ವಾನ

ಕೇಂದ್ರ ಲೋಕ ಸೇವಾ ಆಯೋಗ ೧೯೯೮ನೇ ಸಾಲಿನಲ್ಲಿ ನಡೆಸಲಿರುವ ಐ.ಎಫ್.ಎಸ್. (ಭಾರತೀಯ ಅರಣ್ಯ ಸೇವೆ) ಹಾಗೂ ಬ್ಯಾಂಕ್ ಅಧಿಕಾರಿಗಳ ಸೇವೆಗಳಿಗೆ ಸಂಬಂಧಿಸಿದಂತೆ ಪೂರ್ವಭಾವಿ ಲಿಖಿತ ಪರೀಕ್ಷೆಗೆ ಹಾಜರಾಗುವ ಅರ್ಹ ವೀರಶೈವ ಅಭ್ಯರ್ಥಿಗಳಿಂದ ಜೆ.ಎಸ್.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳ ಸಂಸ್ಥೆ ಅರ್ಜಿಯನ್ನು ಆಹ್ವಾನಿಸಿದೆ.


ಅರ್ಹ ಅಭ್ಯರ್ಥಿಗಳು ಹೆಚ್ಚಿನ ವಿವರಗಳನ್ನು, ಜೆ.ಎಸ್.ಎಸ್. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆ, ಜೆ.ಎಸ್.ಎಸ್. ಕಾಲೇಜು ಆವರಣ, ೩೮ನೇ ಅಡ್ಡರಸ್ತೆ, ೧ನೇ ಮುಖ್ಯ ರಸ್ತೆ, ೮ನೇ ಬ್ಲಾಕ್, ಜಯನಗರ, ಬೆಂಗಳೂರು-೮೨- ಈ ವಿಳಾಸದಲ್ಲಿ ಪಡೆಯಬಹುದು.

ಸಬ್ ಇನ್ಸ್‌ಪೆಕ್ಟರ್ : ದೇಹದಾರ್ಢ್ಯ ಪರೀಕ್ಷೆ ಮುಂದಕ್ಕೆ

ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಯ ಅರ್ಹ ಅಭ್ಯರ್ಥಿಗಳಿಗೆ ಏರ್ಪಡಿಸಿದ್ದ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ಮುಂದೂಡಲಾಗಿದೆ.

ಲೋಕಸಭಾ ಚುನಾವಣೆ ಪ್ರಯುಕ್ತ ಚುನಾವಣಾ ಆಯೋಗ ನೀಡಿರುವ ನಿರ್ದೇಶನ ದಂತೆ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ಪಿ.ಎಸ್.ಐ. ನೇಮಕಾತಿ ಸಮಿತಿ ತಿಳಿಸಿದೆ.


ಪರೀಕ್ಷೆಯ ಮುಂದಿನ ದಿನಾಂಕವನ್ನು ಅಭ್ಯರ್ಥಿಗಳಿಗೆ ತಿಳಿಸುವುದಾಗಿ ಪ್ರಕಟಣೆ ತಿಳಿಸಿದೆ.



ಮೃತ್ಯುಂಜಯ ಸಾರಂಗಮಠ ಸಾಹಿತ್ಯ ಪ್ರಶಸ್ತಿ - ೧೯೯೭

ಪ್ರಶಸ್ತಿಯು ರೂ. ೧೦೦೦ ಹಾಗೂ ಸತ್ಕಾರವನ್ನೊಳಗೊಂಡಿದೆ. ಗದ್ಯ ಹಾಗೂ ಪದ್ಯ ಎರಡು ವಿಭಾಗಗಳಲ್ಲಿ ಇದ್ದು, ಮಾರ್ಚ್ ೧೧ರಂದು ಪ್ರಶಸ್ತಿ ವಿತರಿಸಲಾಗುವುದು. ಅಕಾಡೆಮಿ ಪ್ರಶಸ್ತಿ ಪಡೆದ, ನಾಟಕ, ಸಂಪಾದನೆ ಕೃತಿಗಳಿಗೆ ಅವಕಾಶವಿಲ್ಲ. ಆಸಕ್ತರು ತಮ್ಮ ಕೃತಿಯ ಮೂರು ಪ್ರತಿಗಳನ್ನು ಫೆಬ್ರವರಿ ೮ರೊಳಗೆ ಸಂಗು ಮಠ ಕಾರ್ಯದರ್ಶಿ ಲಾಯನ್ಸ್ ಕಾನ್ವೆಂಟ್‌ಸ್ಕೂಲ್ ನ್ಯಾಯಾಲಯ ರಸ್ತೆ, ಹುನಗುಂದ - ೫೮೭ ೧೧೮ ಬಾಗಲಕೋಟೆ ಜಿಲ್ಲೆ ಇವರಿಗೆ ಕಳಿಸಬೇಕು.

ಚಿತ್ರ: ವಸಂತ್ ಮಾಲವಿ



ಗಣಿಗಾರಿಕೆಯ ಧೂಳಿನಿಂದ ದ್ಯುತಿ ಸಂಶ್ಲೇಷಣೆ ಕ್ರಿಯೆ ಇಲ್ಲದಂತಾಗಿ ಮರಗಳು ಒಣಗಿರುವುದು.

ಬಳ್ಳಾರಿ

ಗಣಿಗಳ ನಾಡು ಬವಣೆಯ ಬೀಡು

ಒಟ್ಟಾರೆ ಇಂದು ಬಳ್ಳಾರಿ ಜಿಲ್ಲೆಯು ಔದ್ಯಮಿಕವಾಗಿ ಬೆಳೆಯುತ್ತಿದೆ. ಔದ್ಯಮೀಕರಣ, ಗಣಿಗಾರಿಕೆ ವಿಸ್ತರಣೆ, ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆ, ಪೂರಕ ಉದ್ದಿಮೆಗಳ ಬೆಳವಣಿಗೆ ಮುಂತಾದವು ಬಳ್ಳಾರಿ ಜಿಲ್ಲೆಯ ಜನತೆಯ ಬದುಕಿನ ಭಾಗ್ಯದ ಬಾಗಿಲನ್ನು ತೆರೆಯುತ್ತವೆ ಎಂದು ನಂಬಲಾಗಿದೆ. ಆದರೆ ಅವು ಸೃಷ್ಟಿಸಲಿರುವ ಅನಿಷ್ಟಗಳು, ಅನಾಹುತಗಳು, ಅವಗಡಗಳು, ಒತ್ತಡಗಳು ಮತ್ತು ದುಷ್ಪರಿಣಾಮಗಳು ಸಾಪೇಕ್ಷವಾಗಿ ಅಧಿಕವಾಗಿರುತ್ತವೆ.

○ ಡಾ. ಬಿ. ಶೇಷಾದ್ರಿ
○ ಟಿ.ಆರ್. ಚಂದ್ರಶೇಖರ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

'ಬಳ್ಳಾರಿ ಜಿಲ್ಲೆಗೆ ಹಂಪೆಯೊಂದು ಪ್ರಾಚೀನವಾದರೆ ತುಂಗಭದ್ರಾ ಜಲಾಶಯವೊಂದು ಪ್ರಾರಬ್ಧ' ಎಂದು ಪ್ರಸಿದ್ಧ ನ್ಯಾಯವಾದಿ ಬೂದಿಹಾಳು ಅನಂತಾಚಾರ್ ವಿಷಾದದಿಂದ ನುಡಿಯುತ್ತಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ 'ಬೇಸಿಗೆ ಮತ್ತು ಕಡು ಬೇಸಿಗೆ' ಎಂಬ ಎರಡೇ ಕಾಲ ಇರುವುದು ಎಂದು ಬೀಚಿ ನಗಾಡುತ್ತಿದ್ದರು. ಹಂಪಿ ಮತ್ತು ತುಂಗಭದ್ರಾ ಜಲಾಶಯಗಳ ಜೊತೆಗೆ ಸೇರಿಕೊಳ್ಳುತ್ತಿರುವ ಮೂರನೆಯ ಸಂಗತಿಯೆಂದರೆ ಸಧ್ಯ ನಿರ್ಮಾಣವಾಗುತ್ತಿರುವ ಉಕ್ಕು ಉದ್ದಿಮೆಗಳ ಸಾಮ್ರಾಜ್ಯ. ಜಿಲ್ಲೆಯ ಜನತೆ ೭೦ ಮತ್ತು ೮೦ರ ದಶಕಗಳಲ್ಲಿ ಒಂದು ಉಕ್ಕು ಉದ್ದಿಮೆಗಾಗಿ ಕೂಗಿಡುತ್ತಿದ್ದರು. ಈಗ ಹತ್ತಾರು ಉಕ್ಕು ಉದ್ದಿಮೆಗಳು ಜಿಲ್ಲೆಯನ್ನು ಪ್ರವೇಶಿಸಿವೆ. ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಔದ್ಯಮಿಕ ಜಿಲ್ಲೆಯಾಗಿ ಬಳ್ಳಾರಿ ಮೆರೆಯುವ ದಿನ ದೂರವಿಲ್ಲ.

ಜಿಲ್ಲೆಯಲ್ಲಿ ಉಕ್ಕು ಮತ್ತು ಇತರೆ ಉದ್ದಿಮೆಗಳ ಮೇಲೆ ಮತ್ತು ಅವುಗಳ ಪೂರಕ ಲಘು ಘಟಕಗಳ ಮೇಲೆ ಈಗಾಗಲೇ ನಡೆದಿರುವುದನ್ನೂ ಸೇರಿಸಿಕೊಂಡು ಮುಂದಿನ ೮-೧೦ ವರ್ಷಗಳ ಅವಧಿಯಲ್ಲಿ ೧೫ರಿಂದ ೨೦ ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡಿಕೆಯಾಗುತ್ತದೆ ಎಂದು ನಿರೀಕ್ಷಿಸಲಾಗಿದೆ. ಈಗಿರುವ ಗಣಿಗಾರಿಕೆ ವಿಸ್ತರಣೆಯಾಗಲಿದೆ. ಏಕೆಂದರೆ ಕಬ್ಬಿಣದ ಅದಿರಿಗೆ ಬೇಡಿಕೆ ಅಧಿಕವಾಗುತ್ತಿದೆ. ದೇಶೀಯ ಮತ್ತು ಸ್ಥಳೀಯ ಉಕ್ಕು ಉದ್ದಿಮೆಗಳಿಗೆ ಕಬ್ಬಿಣದ ಅದಿರನ್ನು ಸರಬರಾಜು ಮಾಡುವ ಪ್ರಮೇಯ ಬಂದಿದೆ. ಗೋವಾದ ಕಬ್ಬಿಣ ಅದಿರಿನ ಗಣಿಗಳು ಬರಿದಾಗುತ್ತಿವೆ. ಅಲ್ಲಿನ ಕಂಪನಿಗಳು ಮತ್ತು ವಿದೇಶಿ ಕಂಪನಿಗಳು ಬಳ್ಳಾರಿ ಜಿಲ್ಲೆಯ ಗಣಿಗಳ ಮೇಲೆ ಕಣ್ಣು ಹಾಯಿಸುತ್ತಿವೆ.

ಒಟ್ಟಾರೆ ಇಂದು ಬಳ್ಳಾರಿ ಜಿಲ್ಲೆಯು ಔದ್ಯಮಿಕವಾಗಿ ಬೆಳೆಯುತ್ತಿದೆ. ಈ ಔದ್ಯಮೀಕರಣ, ಈ ಗಣಿಗಾರಿಕೆ ವಿಸ್ತರಣೆ, ಈ ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆ, ಪೂರಕ ಉದ್ದಿಮೆಗಳ ಬೆಳವಣಿಗೆ ಮುಂತಾದವು ಬಳ್ಳಾರಿ ಜಿಲ್ಲೆಯ ಜನತೆಯ ಬದುಕಿನ ಭಾಗ್ಯದ-ಸೌಭಾಗ್ಯದ ಬಾಗಿಲನ್ನು ತೆರೆಯುತ್ತವೆ ಎಂದು ನಂಬಲಾಗಿದೆ. ಆದರೆ ಇವು ಹಡೆಯಲಿರುವ ಫಲಗಳು, ಅನುಕೂಲಗಳು, ಪ್ರಯೋಜನಗಳು ಮುಂತಾದವುಗಳಿಗಿಂತ ಅವು ಸೃಷ್ಟಿಸಲಿರುವ ಅನಿಷ್ಟಗಳು, ಅನಾಹುತಗಳು, ಅವಗಡಗಳು, ಒತ್ತಡಗಳು ಮತ್ತು ದುಷ್ಪರಿಣಾಮಗಳು ಸಾಪೇಕ್ಷವಾಗಿ ಅಧಿಕವಾಗಿರುತ್ತವೆ. ನರಕ ಸದೃಶವಾಗಿರುತ್ತವೆ ಎಂಬ ಸಂಗತಿ ಕಡೆ ಅನೇಕ ಅಧ್ಯಯನಗಳು ಬೆರಳು ತೋರಿಸುತ್ತಿವೆ. (ವಿವರಗಳಿಗೆ ನೋಡಿ: ಅಬ್ದುಲ್ ಅಜೀಜ್ (ಸಂ) 'Industrialisation, Socio-Economic Externalities and State Policy' Concept Pub Ltd., New Delhi, 1997 ಮತ್ತು ಬಿ. ಶೇಷಾದ್ರಿ ಮತ್ತು ಟಿ.ಆರ್. ಚಂದ್ರಶೇಖರ್ 'ಬಳ್ಳಾರಿ ಜಿಲ್ಲೆಯಲ್ಲಿ ಔದ್ಯಮೀಕರಣ ಮತ್ತು ಜನಾಂದೋಳನ' ಅರಿವು-ಬರಹ. ಸಂ. ೧೩. ಪು: ೫೧-೮೩). ಈ ಅಭಿಪ್ರಾಯದ ನೆಲೆ-ಬೆಲೆಗಳನ್ನು ಚರ್ಚಿಸುವುದು ಪ್ರಸ್ತುತ ಬರಹದ ಉದ್ದೇಶವಾಗಿದೆ.

ಜಿಲ್ಲೆಯ ಖನಿಜ ಸಂಪತ್ತು

ಬಳ್ಳಾರಿ ಜಿಲ್ಲೆಯು ಅಪಾರ ಪ್ರಮಾಣದ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ನಿಕ್ಷೇಪ ಹೊಂದಿದೆ. (ಪಟ್ಟಿಕೆ-೧) ಬಳ್ಳಾರಿ ಜಿಲ್ಲೆಯಲ್ಲಿರುವ ೮ ತಾಲ್ಲೂಕುಗಳಲ್ಲಿ ಕೇವಲ ಸಂಡೂರು, ಹೊಸಪೇಟೆ ಮತ್ತು ಬಳ್ಳಾರಿ ತಾಲ್ಲೂಕುಗಳಲ್ಲಿ ಮಾತ್ರ ಗಣಿಗಳು ನೆಲೆಗೊಂಡಿವೆ. ಜಿಲ್ಲೆಯಲ್ಲಿರುವ ಗಣಿ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಖಾಸಗಿ ಕಂಪೆನಿಗಳಿಗೆ ಗುತ್ತಿಗೆ (Lease) ನೀಡುವ ಪದ್ಧತಿ ಜಾರಿಯಲ್ಲಿದೆ. ಪ್ರಸ್ತುತ ಸುಮಾರು ೯೦ಕ್ಕೂ ಮಿಕ್ಕು ಕಂಪೆನಿಗಳು ಲೀಸ್ ಪಡೆದಿವೆ. ಖಾಸಗಿ ಕಂಪೆನಿಗಳ ಜೊತೆಯಲ್ಲಿ ಕೇಂದ್ರ ಸರ್ಕಾರ ಸ್ವಾಮ್ಯದ ಎನ್‌ಎಂಡಿಸಿ (ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ) ಮತ್ತು ರಾಜ್ಯ ಸರ್ಕಾರ ಸ್ವಾಮ್ಯದ ಎಂಎಂಎಲ್ (ಮೈಸೂರು ಮಿನರಲ್ಸ್ ಲಿಮಿಟೆಡ್) ಗಳೂ ಗಣಿಗಾರಿಕೆಯಲ್ಲಿ ತೊಡಗಿವೆ.

ಮೀಸಲು ಗಣಿ ಪ್ರದೇಶ

'ಸಂಡೂರು-ಹೊಸಪೇಟೆ' ವಲಯದಲ್ಲಿ ಎರಡು ಕಡೆ ರಾಜ್ಯ ಸರ್ಕಾರವು ತಾನೇ ಅಭಿವೃದ್ಧಿ ಪಡಿಸಲಿಕ್ಕಾಗಿ ಬೃಹತ್ ಗಣಿ ಪ್ರದೇಶವನ್ನು 'ಮೀಸಲುಗಣಿ ಪ್ರದೇಶ'ವೆಂದು ಘೋಷಿಸಿದೆ. 'ತಿಮ್ಮಪ್ಪನ ಗುಡಿ-ದೇವದಾರಿ-ಅಪ್ಪೇನಹಳ್ಳಿ-ಕುಮಾರ ಸ್ವಾಮಿ' ಗುಡ್ಡಗಳಿಂದ ಆವೃತವಾದ ವಿಶಾಲ ಗಣಿ ಪ್ರದೇಶ ಮೊದಲು ಮೀಸಲು ಗಣಿ ಪ್ರದೇಶವಾದರೆ 'ರಾಮಗಡ' ಗುಡ್ಡ ಪ್ರದೇಶ ಎರಡನೆಯ ಮೀಸಲು ಗಣಿ ಪ್ರದೇಶವಾಗಿದೆ. ಎನ್‌ಎಂಡಿಸಿ ಮತ್ತು ಎಂಎಂಎಲ್‌ಗಳಿಗೆ ಮೊದಲ ಮೀಸಲು ಗಣಿ ಪ್ರದೇಶದಲ್ಲಿ ಗಣಿಗಾರಿಕೆಗೆ ವಿಶಾಲ ಪ್ರದೇಶವನ್ನು ನೀಡಲಾಗಿದೆ. ಎರಡನೆಯ ಮೀಸಲು ಗಣಿ ಪ್ರದೇಶದಲ್ಲಿ ಘೋರ್ಪಡೆ ಕಂಪೆನಿ ಗಣಿಗಾರಿಕೆ ನಡೆಸಿದೆ.


ವಿಚಿತ್ರವಾದ ಸಂಗತಿಯೆಂದರೆ ಸರ್ಕಾರ ತಾನು ಅಭಿವೃದ್ಧಿಪಡಿಸಲಿಕ್ಕಾಗಿ ಮೀಸಲಿಟ್ಟಿರುವ ಗಣಿ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಕೆಲವು ಖಾಸಗಿ ಕಂಪನಿಗಳಿಗೆ ಪರವಾನಿಗಿ ನೀಡಿದೆ. ಸುಮಾರು ೧೫ಕ್ಕೂ ಮಿಕ್ಕು ಖಾಸಗಿ ಕಂಪನಿಗಳು ಮೀಸಲು ಗಣಿ ಪ್ರದೇಶಗಳಲ್ಲಿ ಗಣಿಗಾರಿಕೆ ನಡೆಸಿವೆ.

ಜಿಂದಲ್ ಕಂಪನಿಗೆ ಗಣಿಗಳು

ಮೊದಲ ಮೀಸಲು ಗಣಿ ಪ್ರದೇಶದಲ್ಲಿರುವ ತಿಮ್ಮಪ್ಪನ ಗುಡಿ ಹಾಗೂ ಕುಮಾರ ಸ್ವಾಮಿ ಗುಡ್ಡ ಪ್ರದೇಶಗಳನ್ನು ಜಿಂದಲ್ ಕಂಪನಿಗೆ ಗಣಿಗಾರಿಕೆ ನಡೆಸಲು ನೀಡುವ ಮಾತುಕತೆ ಸರ್ಕಾರದೊಂದಿಗೆ ನಡೆದಿದೆ ಎಂಬ ಸುದ್ದಿ ಇದೆ. ಸರ್ಕಾರವು ತಾನು ಅಭಿವೃದ್ಧಿಪಡಿಸಲಿಕ್ಕಾಗಿ ಮೀಸಲಿರಿಸಿಕೊಂಡಿರುವ ಗಣಿ ಪ್ರದೇಶವನ್ನು ಖಾಸಗಿ ಕಂಪನಿಗೆ ಗುತ್ತಿಗೆ ನೀಡುವುದರ ಹಿಂದಿನ 'ವಿವೇಕ' ನಮಗೆ ಅರ್ಥವಾಗುತ್ತಿಲ್ಲ. ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿ ಅಥವಾ ಎಂಎಂಎಲ್‌ಗಳೇ ಅದಿರನ್ನು ಜಿಂದಲ್‌ಗೆ ಸರಬರಾಜು ಮಾಡಬಹುದು. ಆದರೆ ಜಿಂದಲ್ ಕಂಪನಿಯು ಗಣಿಗಳನ್ನು ಗುತ್ತಿಗೆಗೆ ಪಡೆಯಲು ತೀವ್ರ ಪ್ರಯತ್ನ ನಡೆಸಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳ ಕಾರ್ಯಕ್ಷಮತೆ, ನಿಯಮಿತ-ನಿರಂತರ ಅದಿರು ಸರಬರಾಜು, ಕಾಲಬದ್ಧ ಉತ್ಪಾದನೆ ಮುಂತಾದವುಗಳ ಬಗ್ಗೆ ಜಿಂದಲ್‌ಗೆ ಅನುಮಾನವಿದೆ. ಜಿಂದಲ್‌ನ ಒತ್ತಡಕ್ಕೆ ಮಣಿದು ಸರ್ಕಾರವು ಗಣಿಗಳನ್ನು ಜಿಂದಲ್‌ಗೆ ನೀಡುವುದರಲ್ಲಿ ವಿವೇಕವಿದೆ ಎನ್ನಿಸುವುದಿಲ್ಲ. ಜಿಂದಲ್‌ಗೆ ಅದಿರನ್ನು ಸರಬರಾಜು ಮಾಡುವ ನಿಬಂಧನೆ ಮೇಲೆ ಸರ್ಕಾರವೇ ಮುಂದೆ ನಿಂತುಕೊಂಡು



ಗಣಿಗಾರಿಕೆ ಕೈಗೊಳ್ಳುವ ಮೊದಲು ಚಿತ್ರ : ಗಣೇಶ ಯಾಜಿ



ಗಣಿಗಾರಿಕೆ ನಡೆದಿರುವ ಸ್ಥಳ ಚಿತ್ರ : ಗಣೇಶ ಯಾಜಿ



ಆಧುನಿಕ ಯಂತ್ರಗಳಿಂದ ಬಿರುಸಾಗಿ ಸಾಗಿರುವ ಗಣಿಗಾರಿಕೆ ಚಿತ್ರ : ವಸಂತ್ ಮಾಲವಿ



ಜಿಂದಲ್ : ಜನರಿಗೆ ಮೂರು ನಾಮ!

ಎನ್‌ಎಂಡಿಸಿ ಅಥವಾ ಎಂಎಂಎಲ್ ಮತ್ತು ಜಿಂದಲ್‌ಗಳ ನಡುವೆ ಒಪ್ಪಂದವೇರ್ಪಡುವಂತೆ ಮಾಡಬಹುದು.

ಔದ್ಯಮೀಕರಣ ಮತ್ತು ಉದ್ಯೋಗಾವಕಾಶ

ಜಿಲ್ಲೆಯಲ್ಲಿ ಪ್ರಸ್ತುತ ನಡೆದಿರುವ ಬಂಡವಾಳದ ಹೂಡಿಕೆ, ಗಣಿಗಾರಿಕೆ ವಿಸ್ತರಣೆ ಹಾಗೂ ಔದ್ಯಮೀಕರಣಗಳಿಂದ ಜಿಲ್ಲೆಯ ಜನತೆಗೆ ಅಪಾರ ಅವಕಾಶಗಳು ದೊರೆತು ಅವರ ಬದುಕು ಉತ್ತಮಗೊಳ್ಳುತ್ತದೆ ಎಂದು ನಂಬಲಾಗಿದೆ. ನಿಜ, ಇವೆಲ್ಲಾ ಅಭಿವೃದ್ಧಿಯ ಅವಕಾಶಗಳನ್ನು ಅಪಾರವಾಗಿ ಸೃಷ್ಟಿಸುತ್ತವೆ. ಉದ್ಯೋಗಾವಕಾಶಗಳೂ ಹೆಚ್ಚಾಗಬಹುದು.

ಆದರೆ ನಾವು ಪ್ರಸ್ತುತ ಅಧ್ಯಯನಕ್ಕಾಗಿ ಗಣಿಗಾರಿಕೆ ಕಂಪನಿಗಳ ಮಾಲೀಕರ ಜೊತೆ, ಉದ್ಯಮಪತಿಗಳ ಜೊತೆ, ನಂದಿಹಳ್ಳಿಯಲ್ಲಿ ಭೂವಿಜ್ಞಾನದ ಪ್ರಾಧ್ಯಾಪಕರುಗಳ ಜೊತೆ ನಡೆಸಿದ ಚರ್ಚೆಯಲ್ಲಿ ಜಿಲ್ಲೆಯಲ್ಲಿ ಉದ್ಯೋಗಾವಕಾಶಗಳು ಅಧಿಕವಾಗುವುದರ ಬಗ್ಗೆ ಅನುಮಾನ ವ್ಯಕ್ತವಾಯಿತು. ೧೯೯೦ಕ್ಕೆ ಮುಂಚೆ ೪೦೦-೫೦೦ ಕಾರ್ಮಿಕರಿಂದ ಗಣಿಗಾರಿಕೆ ನಡೆಸುತ್ತಿದ್ದ ಕಂಪನಿಗಳು ಇಂದು ಅದೇ ಕೆಲಸವನ್ನು ಕೇವಲ ೨೦೦-೩೦೦ ಕಾರ್ಮಿಕರಿಂದ ನಡೆಸಬಲ್ಲವಾಗಿವೆ. ಈ ಅಂಶವನ್ನು ಗಣಿಗಾರಿಕೆ ಕಂಪನಿ ಮಾಲೀಕರೇ ಒಪ್ಪಿಕೊಳ್ಳುತ್ತಾರೆ. ಹಿಂದೆ ೬೦-೭೦ರ ದಶಕಗಳಲ್ಲಿ ಘೋರ್ಪಡೆ ಕಂಪನಿಯಲ್ಲಿ ೮ರಿಂದ ೧೦ ಸಾವಿರ ಕಾರ್ಮಿಕರಿರುತ್ತಿದ್ದರು. ಇಂದು ಅಲ್ಲಿ ಕೇವಲ ೨ರಿಂದ ೩ ಸಾವಿರ ಕಾರ್ಮಿಕರಿದ್ದಾರೆ. ಜಿಂದಲ್ ವಿಜಯನಗರ ಉಕ್ಕು ಉದ್ದಿಮೆ ನಿರ್ಮಾಣ ಕಾರ್ಯ ಮುಗಿದ ಮೇಲೆ ಅಲ್ಲಿನ ಅಂತಿಮ ಕಾರ್ಮಿಕ ಸಾಮರ್ಥ್ಯ ೨೫೦೦ ಮೀರುವುದಿಲ್ಲ ಎಂದು ಅದರ ಮಹಾ ನಿರ್ದೇಶಕರೇ ಹೇಳುತ್ತಾರೆ. ಯಾಕೆ ಹೀಗೆ? ಗಣಿಗಾರಿಕೆ ಕಂಪನಿಗಳು ಇಂದು ಬೃಹತ್ ಗಾತ್ರದ ಭಾರಿ ಯಂತ್ರಗಳನ್ನು ಬಳಸತೊಡಗಿವೆ. ಹಿಂದೆ ಗಣಿಯಿಂದ ಹೊರ ತೆಗೆದ ಅದಿರನ್ನು ವರ್ಗೀಕರಿಸುವುದಕ್ಕೆ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಈಗ ಇದಕ್ಕೆ ಯಂತ್ರಗಳು ಬಂದಿವೆ. ಉಕ್ಕು ಉದ್ದಿಮೆಗಳು 'ಬಂಡವಾಳ ಸಾಂದ್ರ' ತಂತ್ರಜ್ಞಾನ-ಉತ್ಪಾದನಾ ವಿಧಾನವನ್ನು ಅಳವಡಿಸಿಕೊಳ್ಳುತ್ತಿವೆ. ಅಂದ ಮೇಲೆ ಜಿಲ್ಲೆಯಲ್ಲಿ ಗಣಿಗಾರಿಕೆ-ಔದ್ಯಮೀಕರಣಗಳಿಂದಾಗಿ ಉದ್ಯೋಗಾವಕಾಶಗಳು ಅಪಾರ ಸಂಖ್ಯೆಯಲ್ಲಿ ಸೃಷ್ಟಿಯಾಗುವುದಿಲ್ಲ. ಮುಖ್ಯವಾಗಿ ಜಿಲ್ಲೆಯ ದುಡಿಯುವ ವರ್ಗಕ್ಕೆ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಆದರೆ ಗಣಿಗಾರಿಕೆ ಕಂಪನಿಗಳ ಲಾಭ ಮಾತ್ರ ಅಧಿಕಗೊಳ್ಳುತ್ತದೆ. ಸಧ್ಯ ವಾರ್ಷಿಕ ಜಿಲ್ಲೆಯಲ್ಲಿ ಗಣಿಗಾರಿಕೆ ಕಂಪೆನಿಗಳು ೧೨ ಕೋಟಿ ರೂಪಾಯಿಯಷ್ಟು ಲಾಭ ಗಳಿಸುತ್ತಿವೆ. ಮುಂದೆ ಅದಿರಿನ ಉತ್ಪಾದನೆ ಅಧಿಕಗೊಂಡಂತೆ ಲಾಭದ ಪ್ರಮಾಣವೂ ಅಧಿಕವಾಗಬಹುದು. (ನೋಡಿ : ಪಟ್ಟಿಕೆ -೨)

ಕಾರ್ಮಿಕ ಕಲ್ಯಾಣ

ಕಾರ್ಮಿಕ ಕಲ್ಯಾಣ ಸರ್ಕಾರದ ಜವಾಬ್ದಾರಿಯೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಖಾಸಗಿ ಕಂಪನಿಗಳು ಈ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಉದಾಹರಣೆಗೆ ಜಿಂದಲ್ ವಿಜಯನಗರ ಉಕ್ಕು ಕಾರ್ಖಾನೆಯಲ್ಲಿನ 'ಸುರಕ್ಷಾ ವ್ಯವಸ್ಥೆ' ಹೇಳಿಕೊಳ್ಳುವಂಥ ಸ್ಥಿತಿಯಲ್ಲಿಲ್ಲ. ಇಂದು ಖಾಸಗಿ ಕಂಪನಿಗಳು ಖಾಯಂ ಆಗಿ ಕಾರ್ಮಿಕರನ್ನು ನೇಮಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಗುತ್ತಿಗೆ ಮೇಲೆ ಕೆಲಸವನ್ನು ನೀಡುತ್ತಿವೆ. ಈ ದಿಶೆಯಲ್ಲಿ

ಪಟ್ಟಿಕೆ – ೧

ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತು ನಿಕ್ಷೇಪ ಮತ್ತು ಉತ್ಪಾದನೆ

ಇತ್ತೀಚೆಗಿನ ಅಂದಾಜಿನ ಪ್ರಕಾರ ಜಿಲ್ಲೆಯ ಗಣಿಗಳ ಗರ್ಭದಲ್ಲಿ ಅಡಗಿರುವ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ನಿಕ್ಷೇಪ ಮತ್ತು ವಾರ್ಷಿಕ ಉತ್ಪಾದನೆಗಳನ್ನು ಕೆಳಗೆ ತೋರಿಸಿದೆ.

ವಿವರ	ನಿಕ್ಷೇಪ (ದಶಲಕ್ಷ ಟನ್‌ಗಳಲ್ಲಿ)	ವಾರ್ಷಿಕ ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)
ಕಬ್ಬಿಣ ಅದಿರು	೧೦೩.೨	೪೫
ಮ್ಯಾಂಗನೀಸ್ ಅದಿರು	೧೮.೮೧	೩.೨

ಘೋರ್ಪಡೆಯವರ ಕಂಪನಿ ಮಾತ್ರ ಅಪವಾದದಂತಿದೆ. ನಾವು ಆ ಕಂಪನಿಯ ಹಿರಿಯ ಅಧಿಕಾರಿಗಳನ್ನು ದೇವಗಿರಿಯಲ್ಲಿ ಸಂದರ್ಶಿಸಿದಾಗ ತಮ್ಮ ಕಂಪನಿಯ ಕಾರ್ಮಿಕ ಕಲ್ಯಾಣದ ಬಗ್ಗೆ ನಮ್ಮ ತಲೆ ಚಿಟ್ಟು ಹಿಡಿಸಿಬಿಟ್ಟರು. ನಾವು ಯಾವುದೇ ಪ್ರಶ್ನೆ ಕೇಳಿದರೂ ಅವರು ತಾವು ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯ-ಸವಲತ್ತುಗಳ ಬಗ್ಗೆ ತಮ್ಮ ಪರಿಸರ ಕಾಳಜಿ ಬಗ್ಗೆ ಭಾಷಣ ಬಿಗಿದರು. ಅವರ ಮಾತುಗಳಲ್ಲಿ ನಿಜಾಂಶವಿತ್ತು. ೧೯೭೦ರ ಬೆಲೆಯಲ್ಲಿ ಕಾರ್ಮಿಕರಿಗೆ ಆಹಾರ ಧಾನ್ಯವನ್ನು ಇಂದು ಕಂಪನಿ ಒದಗಿಸುತ್ತಿದೆ. ಕಾರ್ಮಿಕರ ಮಕ್ಕಳ ಉನ್ನತ ಶಿಕ್ಷಣದ ಖರ್ಚನ್ನು ಕಂಪನಿ ಭರಿಸುತ್ತದೆ. ಕರಕುಶಲ ಕೆಲಸಗಾರರಿಗೆ ಪುನರ್ವಸತಿ ಒದಗಿಸಿದೆ. ಕಾರ್ಮಿಕ ಕುಟುಂಬಗಳಿಗೆ ಸಬ್ಸಿಡಿಯಲ್ಲಿ ಅಡಿಗೆ ಅನಿಲ ಒದಗಿಸುತ್ತಿದೆ. ಆದರೆ ಘೋರ್ಪಡೆಯವರು ಒಂದನ್ನು ತಿಳಿದುಕೊಳ್ಳಬೇಕು. ಅವರ ಕಂಪನಿಗಳ ಕಾರ್ಮಿಕ ವರ್ಗದಲ್ಲಿ ಉನ್ನತ ಸ್ಥಾನದಲ್ಲಿರುವವರಿಗೆ ಹಾಗೂ ಅಧಿಕಾರಿ ವರ್ಗಕ್ಕೆ ಅಧಿಕಾಧಿಕ ಸೌಲಭ್ಯ ದೊರೆಯುತ್ತಿದೆ ವಿನಾ ಕೆಳಸ್ತರದಲ್ಲಿರುವ ಕಾರ್ಮಿಕ ವರ್ಗಕ್ಕಲ್ಲ.

ಸಂಘಟಿತ ವರ್ಗದ ಹಾಗೂ ಖಾಯಂ ಉದ್ಯೋಗದಲ್ಲಿರುವ ಕಾರ್ಮಿಕ ವರ್ಗದ ಹಿತ ರಕ್ಷಣೆ ಸಾಕಷ್ಟು ಮಟ್ಟಿಗೆ ನಡೆದಿದೆ. ಆದರೆ ಹಂಗಾಮಿ ಹಾಗೂ ಅಸಂಘಟಿತ ವರ್ಗದ ನೌಕರರ ಹಿತರಕ್ಷಣೆ ನಡೆದಿಲ್ಲ. ಉದಾಹರಣೆಗೆ ಗಣಿಗಾರಿಕೆಯಲ್ಲಿ ಅದಿರನ್ನು ಲಾರಿಗೆ ಲೋಡ್ ಮಾಡುವ, ಅದಿರನ್ನು ಸಾಗಾಟ ಮಾಡುವ, ಸಣ್ಣ-ಪುಟ್ಟ ಕಂಪನಿಗಳಲ್ಲಿ ಅದಿರನ್ನು ವರ್ಗೀಕರಿಸುವ ಕೆಲಸಗಳನ್ನು ಗುತ್ತಿಗೆ ಕೆಲಸಗಾರರು ಮಾಡುತ್ತಾರೆ. ಇಲ್ಲಿ ಅಧಿಕ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಚಿಕ್ಕ ವಯಸ್ಸಿನ ಹುಡುಗರು ಮತ್ತು ಹುಡುಗಿಯರೂ ಇರುತ್ತಾರೆ. ಈ ವರ್ಗ

ಪಟ್ಟಿಕೆ - ೨

ಗಣಿಗಾರಿಕೆ ಮತ್ತು ಆದಾಯ - ವೆಚ್ಚ ಅನುಪಾತ

ಗಣಿಗಾರಿಕೆಯಿಂದ ಒದಗುವ ಲಾಭದ ವಿವರವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಿದೆ. ಗಣಿಯಿಂದ ಒಂದು ಟನ್ ಕಬ್ಬಿಣದ ಅದಿರನ್ನು ಹೊರತೆಗೆದು, ಸಂಸ್ಕರಿಸಿ, ಸಾಗಾಟ ಮಾಡಿ, ಮಾರಾಟ ಮಾಡುವ ಚಟುವಟಿಕೆಗಳಿಗೆ ತಗುಲುವ ಖರ್ಚು-ವೆಚ್ಚ, ಅದರಿಂದ ಬರುವ ಆದಾಯ ಹಾಗೂ ಲಾಭದ ವಿವರ ಇಲ್ಲಿದೆ.

ವೆಚ್ಚ: (ಪ್ರತಿ ಟನ್‌ಗೆ)		ಆದಾಯ-ಲಾಭ: (ಪ್ರತಿ ಟನ್‌ಗೆ)	
೧. ಸಾರಿಗೆ ವೆಚ್ಚ	ರೂ. ೮೦.೦೦	ಸರಾಸರಿ ಮಾರಾಟದ ಬೆಲೆ ಪ್ರತಿ ಟನ್‌ಗೆ	ರೂ. ೧೮೦.೦೦
೨. ಅದಿರನ್ನು ಗಣಿಯಿಂದ ಹೊರ ತೆಗೆಯುವ ಕೆಲಸ	ರೂ. ೧೫.೦೦	ಲಾಭ: (೧೮೦-೧೫೦)	ರೂ. ೩೦.೦೦
೩. ಅದಿರಿನ ವರ್ಗೀಕರಣ ಮತ್ತು ಸಂಸ್ಕರಣೆ	ರೂ. ೨೫.೦೦	ಜಿಲ್ಲೆಯಲ್ಲಿ ಕಬ್ಬಿಣ ಅದಿರಿನ ವಾರ್ಷಿಕ ಉತ್ಪಾದನೆ	೪೦ ಲಕ್ಷ ಟನ್‌ಗಳು
೪. ಪರವಾನಿಗಿ ಮತ್ತು ರಾಯಧನ	ರೂ. ೨೫.೦೦	ಒಟ್ಟು ವಾರ್ಷಿಕ ಲಾಭ (೪೦ ಲಕ್ಷ ಟನ್ X ೩೦ ರೂಪಾಯಿ)	ರೂ. ೧,೨೦೦ ಲಕ್ಷ
೫. ಇತರೆ	ರೂ. ೫.೦೦		
ಒಟ್ಟು	ರೂ. ೧೫೦.೦೦		

ಟಿಪ್ಪಣಿ : ಗಣಿಗಾರಿಕೆ ಕಂಪನಿಗಳು ವಿವಿಧ ಗುಣಮಟ್ಟದ ಹಾಗೂ ವಿವಿಧ ಗಾತ್ರದ ಅದಿರನ್ನು ತಯಾರಿಸುತ್ತವೆ. ಅವುಗಳ ಉತ್ಪಾದನಾ ವೆಚ್ಚ ಹಾಗೂ ಮಾರಾಟದ ಬೆಲೆ ಬೇರೆ ಬೇರೆಯಾಗಿರುತ್ತದೆ. ಸದ್ಯ ಉಕ್ಕು ಉದ್ದಿಮೆಗಳು ನಿರ್ದಿಷ್ಟ ಗಾತ್ರದ ಅದಿರನ್ನು ಕೇಳುತ್ತಿವೆ. ಅಂಥ ನಿರ್ದಿಷ್ಟ ಗಾತ್ರದ ಅದಿರಿನ ಬೆಲೆ ಟನ್‌ಗೆ ೩೦೦ ರೂಪಾಯಿವರೆಗಿರುತ್ತದೆ. ನಮ್ಮ ಕೋಷ್ಟಕದಲ್ಲಿ ಸರಾಸರಿ ವೆಚ್ಚ ಸರಾಸರಿ ಬೆಲೆ ಹಾಗೂ ಸರಾಸರಿ ಗುಣಮಟ್ಟವನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಪಟ್ಟಿಕೆ : ೫

ತುಂಗಭದ್ರಾ ಜಲಾಶಯದ ನೀರಿಗಾಗಿ ರೈತರು-ಉದ್ಯಮಗಳ ನಡುವೆ ಘರ್ಷಣೆ?

ಉಕ್ಕು ಉದ್ದಿಮೆಗಳು 'ಜಲ ಸಾಂದ್ರ' ಉದ್ದಿಮೆಗಳಾಗಿವೆ. ಔದ್ಯಮೀಕರಣದಿಂದಾಗಿ ನಿರ್ಮಾಣವಾಗಲಿರುವ ನಗರ-ಉಪನಗರ-ಬಡಾವಣೆ-ವಸತಿ ಸಮುಚ್ಚಯಗಳಿಂದಾಗಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಬೇಡಿಕೆ ಸಹ ಅಧಿಕವಾಗುತ್ತದೆ. ಹೀಗೆ ಔದ್ಯಮಿಕ ಹಾಗೂ ನಾಗರಿಕ ಬಳಕೆಗೆ ಅಗತ್ಯವಾದ ನೀರನ್ನು ಜಿಲ್ಲೆಯಲ್ಲಿ ತುಂಗಭದ್ರಾ ಜಲಾಶಯವೇ ಭರಿಸಬೇಕಾಗುತ್ತದೆ. ಒಂದು ಅಂದಾಜಿನ ಪ್ರಕಾರ ನಿರೀಕ್ಷಿತ ೬.೬ ದಶಲಕ್ಷ ಟನ್ ಉಕ್ಕು ಉತ್ಪಾದನೆಗೆ ಅಗತ್ಯವಾದ ನೀರಿನ ಪ್ರಮಾಣ ಪ್ರತಿನಿತ್ಯ ೨೩೬.೬ ದಶಲಕ್ಷ ಲೀಟರ್‌ಗಳು.

೧೯೫೩ರಲ್ಲಿ ತುಂಗಭದ್ರಾ ಜಲಾಶಯ ಪೂರ್ಣವಾಗಿ ನಿರ್ಮಾಣವಾದ ಸಂದರ್ಭದಲ್ಲಿ ಅದರ ನೀರು ಸಂಗ್ರಹಣಾ ಸಾಮರ್ಥ್ಯ ೧೩೩ ಟಿ.ಎಂ.ಸಿ.ಯಾಗಿತ್ತು. ಇತ್ತೀಚಿಗೆ ಜಲಾಶಯದ ತಾಂತ್ರಿಕ ವಿಭಾಗ ನಡೆಸಿದ ಅಧ್ಯಯನದಿಂದ ೧೯೮೫ರಲ್ಲಿ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವು ೧೧೧ ಟಿ.ಎಂ.ಸಿ.ಗೆ ಕುಸಿದದ್ದು ಬೆಳಕಿಗೆ ಬಂತು. ಇಂದು ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವು ೧೦೦ ಟಿ.ಎಂ.ಸಿ.ಯಾಗಿರಬಹುದು. ಜಲಾಶಯದಲ್ಲಿ ಹೂಳು ತುಂಬಿಕೊಳ್ಳುತ್ತಿರುವುದರಿಂದ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುತ್ತಾ ನಡೆದಿದೆ. ಹೊಸದಾಗಿ ನಿರ್ಮಾಣವಾಗುತ್ತಿರುವ ಉಕ್ಕು ಉದ್ದಿಮೆಗಳಿಗೆ ಸುಮಾರು ೧೦ ಟಿಎಂಸಿ ನೀರನ್ನು ಜಲಾಶಯದಿಂದಲೇ ಒದಗಿಸಬೇಕಾಗುತ್ತದೆ. ಜಿಂದಲ್ ಕಂಪನಿ ಈಗಾಗಲೇ ಜಲಾಶಯದ ಬಳಿಯಿಂದ ಕಾರ್ಖಾನೆವರೆಗೆ ದೊಡ್ಡ ಗಾತ್ರದ ಕೊಳವೆ ಮಾರ್ಗವನ್ನು ನಿರ್ಮಿಸಿದೆ. ಕಿರ್ಲೋಸ್ಕರ್, ಕಲ್ಯಾಣಿ, ಮುಕುಂದ್ ಕಂಪನಿಗಳಿಗೂ ನೀರನ್ನು ಜಲಾಶಯದಿಂದ ಒದಗಿಸಬೇಕಾಗುತ್ತದೆ. ಇದರಿಂದಾಗಿ ಮುಂದೆ ನೀರಾವರಿಗೆ ಜಲಾಶಯದಲ್ಲಿ ಉಳಿಯುವ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಇದು ಬಳ್ಳಾರಿ ಜಿಲ್ಲೆಯಲ್ಲಿ ಉದ್ದಿಮೆಗಳು ಹಾಗೂ ಕೃಷಿಕರ ನಡುವೆ ಘರ್ಷಣೆಗೆ ಕಾರಣವಾಗಬಹುದು. ಈ ಬಗ್ಗೆ ಸರ್ಕಾರ ಯೋಚಿಸಿದೆಯೆ?



ಕಬ್ಬಿಣ ಅದಿರಿನ ವರ್ಗೀಕರಣದಲ್ಲಿ ನಿರತ ಮಹಿಳಾ ಕಾರ್ಮಿಕರು ಚಿತ್ರ : ಗಣೇಶ ಯಾಜಿ



ಕ್ರಮೇಣ ನೆಲಸಮವಾಗುತ್ತಿರುವ ಬೃಹತ್ ಗುಡ್ಡಗಳು ಚಿತ್ರ : ವಸಂತ್ ಮಾಲವಿ



ತುಂಗಭದ್ರಾ ಜಲಾಶಯದಿಂದ ಜಿಂದಲ್‌ಗೆ ಕೊಳಾಯಿ ಮಾರ್ಗ ಚಿತ್ರ : ಗಣೇಶ ಯಾಜಿ

ಶೋಷಣೆಗೆ ಗುರಿಯಾಗಿದೆ. ಸರ್ಕಾರವೇನೋ ಕುಶಲರಲ್ಲದ ಕಾರ್ಮಿಕರಿಗೆ ೪೦ ರೂಪಾಯಿ, ಅರೆಕುಶಲ ಕಾರ್ಮಿಕರಿಗೆ ೪೮ ರೂಪಾಯಿ ಹಾಗೂ ಕುಶಲ ಕಾರ್ಮಿಕರಿಗೆ ೬೦ ರೂಪಾಯಿ ಕನಿಷ್ಠ ವೇತನ ನಿಗದಿಪಡಿಸಿದೆ. ಆದರೆ ಗುತ್ತಿಗೆ ಕೆಲಸಗಳಲ್ಲಿ ಕನಿಷ್ಠ ವೇತನಕ್ಕೆ ಅರ್ಥವೇ ಇಲ್ಲ.

ಗಣಿಗಾರಿಕೆ ಮತ್ತು ಪರಿಸರ

ಗಣಿಗಾರಿಕೆ ವಿಸ್ತರಣೆಗೊಂಡಂತೆ ಜಿಲ್ಲೆಯ ಹವಾಮಾನ, ಪರಿಸರ-ಸಂಪನ್ಮೂಲಗಳಿಗೆ ಅಪಾಯ ತಪ್ಪಿದ್ದಲ್ಲ. ಗಣಿಗಾರಿಕೆಗಾಗಿ ಭೂಮಿಯನ್ನು ಅಗೆಯಲಾಗುತ್ತದೆ. ಒಂದು ಟನ್ ಕಬ್ಬಿಣದ ಅದಿರು ಪಡೆಯಲು ಸುಮಾರು ೨-೩ ಟನ್ ಮಣ್ಣನ್ನು ಗಣಿಯಿಂದ ಹೊರತೆಗೆಯಬೇಕಾಗುತ್ತದೆ. ಹೀಗಾಗಿ ವರ್ಷದಲ್ಲಿ ಜಿಲ್ಲೆಯಲ್ಲಿ ೪೦ ಲಕ್ಷ ಟನ್ ಕಬ್ಬಿಣದ ಅದಿರನ್ನು ಉತ್ಪಾದಿಸಲು ೮೦ರಿಂದ ೧೦೦ ಲಕ್ಷ ಟನ್ ಮಣ್ಣನ್ನು ಗಣಿಯಿಂದ ಹೊರತೆಗೆಯಲಾಗುತ್ತದೆ. ಈ ಮಣ್ಣು, ಧೂಳು, ಕಲ್ಲು ಎಲ್ಲಿ ಹೋಗುತ್ತದೆ? ಮಳೆ ಬಂದಾಗ ಮಣ್ಣು ಕೊಚ್ಚಿಕೊಂಡು ಹಳ್ಳ-ಕೊಳ್ಳ, ನದಿ-ನಾಲೆಗಳನ್ನು ಸೇರುತ್ತದೆ. ಸಣ್ಣ ಧೂಳು ಹಾರಿ ಹೋಗಿ ಗಿಡ-ಮರ, ಸಸಿ-ಸಸ್ಯಗಳ ಮೇಲೆ ಕೂಡುತ್ತದೆ. ಇದರಿಂದಾಗಿ ಹೂಳು ತುಂಬಿಕೊಂಡು ನದಿ-ನಾಲೆಗಳು ಮತ್ತು ಹಳ್ಳ-ಕೊಳ್ಳಗಳು ಸತ್ತು ಹೋಗುತ್ತವೆ. ಗಿಡಮರಗಳು ಮತ್ತು ಸಸಿ-ಸಸ್ಯಗಳು ಉಸಿರಾಡಲಾಗದೆ ಬಿದ್ದು ಹೋಗುತ್ತವೆ. ಕಬ್ಬಿಣದ ಅದಿರು ಬರಿದಾಗುವ ಸಂಪನ್ಮೂಲ. ಗಣಿಗಾರಿಕೆ ಕಂಪನಿಗಳು ಭೂಗರ್ಭವನ್ನು ಸಿಗಿದು ಅಲ್ಲಿಂದ ಕಬ್ಬಿಣದ ಅದಿರನ್ನು ತೆಗೆಯುತ್ತವೆ. ಹೀಗೆ ಅದಿರೆಲ್ಲಾ ಮುಗಿದ ಮೇಲೆ ಭೂಗರ್ಭ ಖಾಲಿಯಾಗಿ ಭೂಮಿತಾಯಿ ಬಂಜೆಯಾಗಿಬಿಡುತ್ತಾಳೆ. ಗುಂಡಿ-ಗೊಟರುಗಳು ಮತ್ತು ಕೊರಕಲು-ಕುಳಿಗಳು ಉಳಿದುಕೊಂಡುಬಿಡುತ್ತವೆ.

ಪರಿಸರದ ಬಗೆಗಿನ ಕಾಳಜಿಯನ್ನು 'ಉಳ್ಳವರ ವಿಲಾಸಿ ತೀಟೆ' ಎಂದು ಟೀಕಿಸುವುದುಂಟು. ಆದರೆ ಬಳ್ಳಾರಿ ಜಿಲ್ಲೆಯ ನಿದರ್ಶನ ನಮಗೆ ತೋರಿಸಿಕೊಡುವುದೇನೆಂದರೆ ಗಣಿಗಾರಿಕೆ ಹಾಗೂ ಔದ್ಯಮೀಕರಣಗಳು ಜಿಲ್ಲೆಯ ಜನತೆಗೆ, ಮುಖ್ಯವಾಗಿ ಕೆಳವರ್ಗದ-ಕೆಳಜಾತಿಯ ಜನವರ್ಗಕ್ಕೆ ಯಾವುದೇ ರೀತಿಯ ಸೌಲಭ್ಯ-ಸವಲತ್ತು, ಫಲಗಳನ್ನು ಒದಗಿಸದೆ ಅರಣ್ಯನಾಶ, ಭೂಸವಕಳಿ, ನದಿ-ನಾಲೆ-ಹಳ್ಳ-ಕೊಳ್ಳಗಳ ನಾಶ, ಸಂಪನ್ಮೂಲಗಳ ಲೂಟಿ ಮುಂತಾದವುಗಳ ಮೂಲಕ ಅವರ ಬದುಕನ್ನು ನರಕವನ್ನಾಗಿಸುತ್ತಿದೆ. ಪರಿಸರ ಕಾಳಜಿ ಬಳ್ಳಾರಿ ಜಿಲ್ಲೆಯ ಸಂದರ್ಭದಲ್ಲಿ 'ಉಳ್ಳವರ ವಿಲಾಸಿ ತೀಟೆ' ಯಾಗುವುದು

ಸಾಧ್ಯವಿಲ್ಲ. ಪ್ರತಿಯಾಗಿ ಅದು ದೀನರ-ದಲಿತರ ಅಳಿವು-ಉಳಿವಿನ ಸಂಗತಿಯಾಗಿದೆ. ಗಣಿಗಾರಿಕೆ ಮತ್ತು ಔದ್ಯಮೀಕರಣಗಳು ಉಂಟುಮಾಡುವ ಪರಿಸರ ಸಂಬಂಧಿ ಅನಾಹುತ-ಅನಿಷ್ಟಗಳು ನೇರವಾಗಿ ತಟ್ಟುವುದು ಜಿಲ್ಲೆಯ ಕೆಳವರ್ಗದ-ಕೆಳಜಾತಿಯ ಜನವರ್ಗವನ್ನು ಎಂಬುದು ಸ್ಪಷ್ಟ. ಪರಿಸರ ರಕ್ಷಣೆ, ಅರಣ್ಯ ಬೆಳೆಸುವುದು, ಗಣಿ ಪ್ರದೇಶವನ್ನು ಸಮತಟ್ಟು ಮಾಡುವುದು ಮುಂತಾದವುಗಳ ಬಗ್ಗೆ ಗಣಿಗಾರಿಕೆ ಕಂಪನಿಗಳು, ಉದ್ದಿಮೆಗಳು, ಸರ್ಕಾರ, ಅರಣ್ಯ ಇಲಾಖೆಗಳೆಲ್ಲಾ ದಿವ್ಯ ನಿರ್ಲಕ್ಷ್ಯ ತಳೆದಿವೆ. (ನೋಡಿ: ಪಟ್ಟಿಕೆ-೩)

ಪಶ್ಚಿಮ ತಾಲ್ಲೂಕುಗಳ ಪಾಡು

ಬಳ್ಳಾರಿ ಜಿಲ್ಲೆಯಲ್ಲಿ ಎಂಟು ತಾಲೂಕುಗಳಿವೆ. ಇವುಗಳನ್ನು ಪೂರ್ವಭಾಗದ ತಾಲೂಕುಗಳು ಮತ್ತು ಪಶ್ಚಿಮ ಭಾಗದ ತಾಲೂಕುಗಳು ಎಂದು ವಿಭಜಿಸುವುದು ವಾಡಿಕೆ. (ನೋಡಿ: ಪಟ್ಟಿಕೆ-೪) ಹರಪನಹಳ್ಳಿ ತಾಲೂಕನ್ನು ಹೊಸದಾಗಿ ರೂಪುಗೊಂಡ ದಾವಣಗೆರೆ ಜಿಲ್ಲೆಗೆ ಸೇರಿಸಲಾಗಿದ್ದರೂ ಇಲ್ಲಿ ಅದನ್ನು ಬಳ್ಳಾರಿ ಜಿಲ್ಲೆಯ ಭಾಗವಾಗೇ ಪರಿಗಣಿಸಲಾಗಿದೆ.

ಪ್ರಾಕೃತಿಕವಾಗಿ ಮತ್ತು ಆರ್ಥಿಕವಾಗಿ ಜಿಲ್ಲೆಯ ಪೂರ್ವ ಭಾಗ ಸಮೃದ್ಧವಾಗಿದ್ದರೆ ಪಶ್ಚಿಮ ಭಾಗ ಅಭಾವದ ಪ್ರದೇಶವಾಗಿದೆ. ದೊಡ್ಡ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳೆಲ್ಲಾ ಜಿಲ್ಲೆಯ ಪೂರ್ವಭಾಗದ ತಾಲೂಕುಗಳಲ್ಲೇ ಸ್ಥಾಪನೆಗೊಂಡಿವೆ. ವಾರ್ಷಿಕ ವಿದ್ಯುತ್ ಬಳಕೆಯಲ್ಲಿ ಪೂರ್ವಭಾಗದ ಎರಡು ತಾಲೂಕುಗಳಾದ ಬಳ್ಳಾರಿ ಮತ್ತು ಹೊಸಪೇಟೆಗಳೇ ಶೇ. ೯೮.೭೨ರಷ್ಟನ್ನು ಅನುಭೋಗಿಸುತ್ತಿವೆ. ಜಿಲ್ಲೆಯಲ್ಲಿರುವ ಒಟ್ಟು ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಶೇ. ೫೩.೫೨ರಷ್ಟು ಪೂರ್ವಭಾಗದಲ್ಲಿದ್ದರೆ ಶೇ. ೪೬.೪೮ರಷ್ಟು ಪಶ್ಚಿಮ ಭಾಗದಲ್ಲಿದೆ. ಪೂರ್ವಭಾಗದ ತಾಲೂಕುಗಳಲ್ಲಿ ಸರಾಸರಿ ವಾರ್ಷಿಕ ಮಳೆ ಪ್ರಮಾಣ ೮೨೫ ಮಿ.ಮೀ.ಗಳಾದರೆ ಪಶ್ಚಿಮದ ತಾಲೂಕುಗಳಲ್ಲಿ ಅದು ಕೇವಲ ೫೯೫ ಮಿ.ಮೀ.

ಬಳ್ಳಾರಿ ಜಿಲ್ಲೆಯ ಪಶ್ಚಿಮ ಭಾಗದ ತಾಲೂಕುಗಳಾದ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ ಮತ್ತು ಹಡಗಲಿ ತಾಲೂಕುಗಳು ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣದ ದೃಷ್ಟಿಯಿಂದ ಇಡೀ ರಾಜ್ಯದಲ್ಲಿ ಕ್ರಮವಾಗಿ ಮೊದಲನೆಯ (ಶೇ. ೯೩.೪೪), ಎರಡನೆಯ (ಶೇ. ೮೬.೩೫) ಮತ್ತು ಮೂರನೆಯ (ಶೇ. ೮೫.೧೧) ಸ್ಥಾನಗಳನ್ನು ಪಡೆದಿವೆ. ಅಂದರೆ ಜಿಲ್ಲೆಯ ಪಶ್ಚಿಮ ಭಾಗದ ತಾಲೂಕುಗಳಲ್ಲಿ ಕೃಷಿಯೇತರ ಚಟುವಟಿಕೆಗಳು ಸುತರಾಂ ಇಲ್ಲವೇ ಇಲ್ಲ. ಈಗ ಜಿಲ್ಲೆಯಲ್ಲಿ ನಡೆದಿರುವ ಔದ್ಯಮೀಕರಣ ಪ್ರಕ್ರಿಯೆಯಿಂದಲೂ ಸಹ ಪಶ್ಚಿಮ ಭಾಗದ ತಾಲ್ಲೂಕುಗಳಿಗೆ ರವಷ್ಟೂ ಲಾಭವಿಲ್ಲ.

ಅಭಿವೃದ್ಧಿ ಪ್ರಕ್ರಿಯೆಗೆ ಸಂಬಂಧಿಸಿದ ಇಂತಹ ವಿಕೃತಿ ಬಗ್ಗೆ, ಸಂಕೀರ್ಣತೆ ಬಗ್ಗೆ, ಪ್ರಾದೇಶಿಕ ಸ್ವರೂಪದ ಬಗ್ಗೆ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ ಹಾಗೂ ಜಿಲ್ಲೆಯ ಉಸ್ತುವಾರಿ ಸಚಿವರೂ ರಾಜ್ಯದ ಪ್ರಮುಖ ರಾಜಕೀಯ ಧುರೀಣರೂ ಆಗಿರುವ ಮಾನ್ಯ ಎಂ.ಪಿ. ಪ್ರಕಾಶ್‌ರವರು ಗಮನ ನೀಡಬೇಕಾದುದು ಅತ್ಯಂತ ಅವಶ್ಯಕ.


ಉಪಸಂಹಾರ

ಬಳ್ಳಾರಿ ಜಿಲ್ಲೆಯ ಜನತೆಯ ಬದುಕು ಹೊರಳು ದಾರಿಯಲ್ಲಿದೆ. ಒಂದು ಕಡೆ

ಪಟ್ಟಿಕೆ - ೩

ಜಿಲ್ಲೆಯ ಅರಣ್ಯ ಪ್ರದೇಶ

ಬಳ್ಳಾರಿ ಜಿಲ್ಲೆಯು ಭಾರತದ 'Semi arid' ವಲಯದ ದಕ್ಷಿಣ ತುದಿಯಾಗಿದೆ. ಜಿಲ್ಲೆಯಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ೧.೧೯ ಲಕ್ಷ ಹೆಕ್ಟೇರುಗಳು. ಒಟ್ಟು ಜಿಲ್ಲೆಯ ಭೂ ಪ್ರದೇಶದಲ್ಲಿ ಶೇ. ೧೨.೪೭ರಷ್ಟು ಅರಣ್ಯ ಪ್ರದೇಶವಿದೆ. ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ಪ್ರಮಾಣ ಶೇ. ೧೬.೧೦ ಉಷ್ಣವಲಯ ಪ್ರದೇಶದಲ್ಲಿ ಕನಿಷ್ಟ ಶೇ. ೩೩ರಷ್ಟು ಅರಣ್ಯವಿರಬೇಕು ಎಂಬ ನಿಯಮವಿದೆ. ಈ ಅಗತ್ಯ ಪ್ರಮಾಣದ ಅರ್ಧದಷ್ಟು ಅರಣ್ಯವೂ ಜಿಲ್ಲೆಯಲ್ಲಿಲ್ಲ.



ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ಅರಣ್ಯ ಪ್ರದೇಶದಲ್ಲಿ ಶೇ. ೭೦ರಷ್ಟು (೮೨,೭೪೯ ಹೆಕ್ಟೇರುಗಳು) ಅರಣ್ಯ 'ಹೊಸಪೇಟೆ-ಸಂಡೂರು-ಕೂಡ್ಲಿಗಿ' ವಲಯದಲ್ಲಿದೆ. ಈ ಹಸಿರಿನ ಮಡಿಲಿಗೆ ಗಣಿಗಾರಿಕೆ ಮತ್ತು ಔದ್ಯಮೀಕರಣ ಮುತ್ತಿಗೆ ಹಾಕಿವೆ. ಗಣಿಗಾರಿಕೆ ಕಂಪನಿಗಳು ಗಣಿಗಾರಿಕೆಗಾಗಿ ಎಷ್ಟು ಪ್ರದೇಶದಲ್ಲಿ ಭೂಮಿಯನ್ನು ಅಗೆಯಲಾಗುತ್ತದೊ ಅದಕ್ಕೆ ಸಮನಾದ ಭೂಪ್ರದೇಶದಲ್ಲಿ ಅರಣ್ಯ ಬೆಳೆಸಬೇಕು ಎಂಬ ಕಾನೂನಿದೆ. ಸರ್ಕಾರದ ನಿಯಮವಿರುವುದೇ ಉಲ್ಲಂಘಿಸುವುದಕ್ಕೆ ಎನ್ನುವ ರೀತಿಯಲ್ಲಿ ನಿಯಮವನ್ನು ಗಾಳಿಗೆ ತೂರಲಾಗುತ್ತಿದೆ. ಘೋರ್ಪಡೆಯವರ ಕಂಪನಿ ಹಾಗೂ ಎನ್‌ಎಂಡಿಸಿಗಳು ಮಾತ್ರ ಅರಣ್ಯ ಬೆಳೆಸುವ ಕಾರ್ಯವನ್ನು ತಕ್ಕಮಟ್ಟಿಗೆ ಕೈಗೊಂಡಿವೆ. ಉಳಿದ ಯಾವ ಗಣಿಗಾರಿಕೆ ಕಂಪನಿಯೂ ಅರಣ್ಯ ಬೆಳೆಸುವ ಕಾರ್ಯವನ್ನು ಸಾಮಾಜಿಕ ಕಾಳಜಿಯಿಂದ ಕೈಗೊಂಡಿದ್ದು ಕಾಣುವುದಿಲ್ಲ. ಬರಿದಾದ ಗಣಿಗಳು, ಗುಂಡಿ-ಕೊರಕಲುಗಳು ಅಸ್ಥಿಪಂಜರದಂತೆ ನಮ್ಮನ್ನು ನೋಡಿ ಅಟ್ಟಹಾಸಗೈಯುತ್ತಿವೆ. ಜಿಲ್ಲೆಯಲ್ಲಿರುವುದೇ ಕೌಪೀನದಷ್ಟು ಅರಣ್ಯ. ಅದನ್ನೂ ಗಣಿಗಾರಿಕೆ ಹಾಗೂ ಔದ್ಯಮೀಕರಣಗಳು ನುಂಗಿಹಾಕುತ್ತಿವೆ. ಜಿಂದಲ್ ಕಂಪನಿ ಕಾರ್ಖಾನೆ ನಿರ್ಮಿಸಲು ಪ್ರಾರಂಭವಾಗಿ ನಾಲ್ಕು ವರ್ಷಗಳಾಗಿವೆ. ಈವರೆಗೆ ಅದು ಪರಿಸರದ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಒಂದು ವೇಳೆ ಜಿಲ್ಲೆಯಲ್ಲಿರುವ ಕೌಪೀನದಷ್ಟು ಅರಣ್ಯವೂ ನಾಶವಾಗಿಬಿಟ್ಟರೆ ಬಳ್ಳಾರಿ ಜಿಲ್ಲೆಯಲ್ಲಿ ೨೧ನೇ ಶತಮಾನಕ್ಕೆ ಉಳಿಯುವುದು ಕೇವಲ 'ಕಡು ಬೇಸಿಗೆ'.

ಸಾಂಪ್ರದಾಯಿಕತೆಯಲ್ಲಿ ಮುಳುಗಿರುವ; ಕೃಷಿ, ಹೈನುಗಾರಿಕೆ, ಬೇಟೆಗಳಲ್ಲಿ ನಿರತರಾಗಿರುವ ಗ್ರಾಮವಾಸಿಗಳು ಮತ್ತು ಇನ್ನೊಂದು ಕಡೆ ಕಂಪ್ಯೂಟರ್, ಸೆಟಲೈಟ್ ಟಿ.ವಿ. ಮಾಹಿತಿ ಕ್ರಾಂತಿಯಲ್ಲಿ ಮುಳುಗಿರುವ ನಗರವಾಸಿಗಳ ಬದುಕು-ಸಂಸ್ಕೃತಿಗಳ ನಡುವೆ ಶತಮಾನಗಳಷ್ಟು ಅಂತರ-ಅಸಂಗತತೆ ಇದೆ. ಪ್ರಸಿದ್ಧ ಸಮಾಜ ವಿಜ್ಞಾನಿ ರಿಚರ್ಡ್ ಲೆನಾಯ್ ಹೇಳುವಂತೆ ಬಳ್ಳಾರಿ ಜಿಲ್ಲೆಯು ಅನೇಕ ಶತಮಾನಗಳನ್ನು ಏಕಕಾಲದಲ್ಲಿ ಬದುಕುತ್ತಿದೆ. ಇಂತಹ ಸಂಕರಣ ಸೃಷ್ಟಿ ಮಾಡಲಿರುವ ತಲ್ಲಣಗಳನ್ನು, ಆತಂಕಗಳನ್ನು, ದಿಗ್ಭ್ರಮೆಗಳನ್ನು ಊಹಿಸಿಕೊಳ್ಳುವುದು ಅಸಾಧ್ಯ. ಇಂತಹ ಒಂದು ಮಹಾ ಸಂಕೀರ್ಣ ಪ್ರಕ್ರಿಯೆಯಲ್ಲಿ ಬಳ್ಳಾರಿ ಜಿಲ್ಲೆಯ ಸಮಾಜೋ-ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕು ಹಾದುಹೋಗುತ್ತಿದೆ. ಆ ಪ್ರಕ್ರಿಯೆಯ ಕೆಲವು ಎಳೆಗಳನ್ನು ತುಣುಕುಗಳನ್ನು ಪ್ರಸ್ತುತ ಲೇಖನದಲ್ಲಿ ಮಂಡಿಸಲು ನಾವು ಪ್ರಯತ್ನಿಸಿದ್ದೇವೆ. ●

ಪಟ್ಟಿಕೆ : ೪

ಸಮೃದ್ಧಿ ಮತ್ತು ಅಭಾವ

ಕ್ರ. ಸಂ.	ವಿವರಗಳು	ಪೂರ್ವಭಾಗದ ತಾಲೂಕುಗಳು [ಶಿರಗುಪ್ಪ, ಬಳ್ಳಾರಿ ಸಂಡೂರು ಮತ್ತು ಹೊಸಪೇಟೆ]	ಪಶ್ಚಿಮದ ತಾಲೂಕುಗಳು [ಹಡಗಲಿ, ಹರಪನಹಳ್ಳಿ, ಹಗರಿ ಬೊಮ್ಮನಹಳ್ಳಿ, ಕೂಡ್ಲಿಗಿ]	ಒಟ್ಟು ಜಿಲ್ಲೆ
೧.	ದೊಡ್ಡ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳು	೧೯	೧	೨೦
೨.	ಕೈಗಾರಿಕಾ ಕಾರ್ಮಿಕರು (ಸಂಖ್ಯೆ)	೧೦,೬೧೮ (ಶೇ. ೯೯.೩೯)	೬೫ (ಶೇ. ೦.೬೧)	೧೦,೬೮೩ (೧೦೦.೦೦)
೩.	ಗಣಿಗಾರಿಕೆ ಚಟುವಟಿಕೆ	ಇವೆ	ಇಲ್ಲ	-
೪.	ಮಳೆಯ ಪ್ರಮಾಣ (ವಾರ್ಷಿಕ ವಾಸ್ತವಿಕ ೧೯೯೩-೯೪)	೮೨೫ ಮಿ.ಮೀ.	೫೯೫ ಮಿ.ಮೀ.	೭೧೦ ಮಿ.ಮೀ.
೫.	ವಿದ್ಯುತ್ ಬಳಕೆ (ಮಿಲಿಯನ್ ಯುನಿಟ್‌ಗಳು)	೩೯೦೭.೭೩ ಮಿ.ಯು (ಶೇ. ೯೯.೩೮)	೨೪.೧೨ ಮಿ.ಯು. (ಶೇ. ೦.೬೨)	೩೯೩೧.೮೫ ಮಿ.ಯು. (ಶೇ. ೧೦೦.೦೦)
೬.	ಪ್ರತಿ ವೈದ್ಯಕೀಯ ಸಂಸ್ಥೆ (ಸರ್ಕಾರಿ) ಸೇವೆ ಸಲ್ಲಿಸುತ್ತಿರುವ ಸರಾಸರಿ ಜನರ ಸಂಖ್ಯೆ	೨೨,೯೪೩	೨೪,೦೭೨	೨೩,೫೦೯
೭.	ಪ್ರತಿ ಲಕ್ಷ ಜನರಿಗೆ ಇರುವ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ	೩೨೮ (ಶೇ. ೮೦.೩೯)	೮೦ (ಶೇ. ೧೯.೬೧)	೪೦೮ (೧೦೦.೦೦)
೮.	ಒಟ್ಟು ಶ್ರಮಶಕ್ತಿಯಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ	ಶೇ. ೬೪.೬೮	ಶೇ. ೮೬.೨೫	ಶೇ. ೭೫.೪೬
೯.	ಪ್ರಾಥಮಿಕ ಆರೋಗ್ಯಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳು	೩೮ (ಶೇ. ೫೩.೫೨)	೩೩ (ಶೇ. ೪೬.೪೮)	೭೧ (೧೦೦.೦೦)

ಔಷಧಿಯುಕ್ತ ರುಚಿಕರ ದಾಳಿಂಬೆ

ದಾಳಿಂಬಕ್ಕೆ ದಾಳಿಂಬರಗೆ, ದಾಡಿಮ, ದಂತಬೀಜ, ಲೋಹಿತಪುಷ್ಪಕವೆಂದು ಸಂಸ್ಕೃತದಲ್ಲಿ ಅನಾರ್-ದಾಡಿಮ ಎಂದು ಹಿಂದಿಯಲ್ಲಿ, ಪೊಮಗ್ರನೆಟ್ (Pomegranate) ಎಂದು ಇಂಗ್ಲಿಷ್‌ನಲ್ಲಿ ಕರೆಯುವರು. ಅಫಘಾನಿಸ್ತಾನ, ಬಲೂಚಿಸ್ತಾನ, ಇರಾಣಗಳಲ್ಲಿ ವಿಪುಲವಾಗಿ ಬೆಳೆಯುವ ದಾಳಿಂಬೆ ಭಾರತದಲ್ಲೂ ಈಗ ಸಾಕಷ್ಟು ಬೆಳೆಯುತ್ತಿದೆ. ಸುಂದರ ದಂತಪಂಕ್ತಿಯನ್ನು ದಾಳಿಂಬೆ ಬೀಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

ದಾಳಿಂಬೆಯು ಆಮ್ಲವೂ, ತುಸು ಒಗರೂ, ಮಧುರವೂ, ವಾತನಾಶಕವೂ, ಗ್ರಾಹಿಯೂ, ದೀಪನವೂ ಸ್ನಿಗ್ಧವೂ, ಉಷ್ಣವೀರ್ಯವೂ, ಹೃದ್ಯವೂ ಆಗಿರುತ್ತದೆ. ಅಲ್ಲದೇ ಕಫ ಮತ್ತು ಪಿತ್ತದ ನಿವಾರಣೆಯನ್ನುಂಟುಮಾಡುತ್ತದೆ. ದಾಳಿಂಬೆಯಲ್ಲಿ ಹುಳಿ ಮತ್ತು ಸಿಹಿಗಳೆಂಬ ಎರಡು ಪ್ರಕಾರಗಳು. ಹುಳಿದಾಳಿಂಬೆಯು ರುಚಿಯಾಗಿದ್ದರೂ ಪಿತ್ತ ಮತ್ತು ವಾತಗಳ ಪ್ರಕೋಪವನ್ನುಂಟುಮಾಡುತ್ತದೆ. ಆದರೆ ಅದು ನೇತ್ರದೋಷಕ್ಕೆ ಅತಿ ಶ್ರೇಷ್ಠವಾಗಿದೆ. ಸಿಹಿ ದಾಳಿಂಬೆಯು ಪಿತ್ತನಾಶಕವಾಗಿದ್ದು ಉತ್ತಮವಾಗಿದೆ. ಪಾಚಕ, ಕ್ಷುಧಾಜನಕ, ತ್ರಿದೋಷ ನಾಶಕವೆಂದು ಆಯುರ್ವೇದದಲ್ಲಿ ತಿಳಿಸಲಾಗಿದೆ.

ದಾಳಿಂಬೆಯಲ್ಲಿ ಪ್ರೊಟೀನ್ ೧.೬, ಕಾರ್ಬೋಹೈಡ್ರೇಟ್ ೧೪.೫, ಕ್ಯಾಲ್ಸಿಯಂ ೧೦, ಮೆಗ್ನೇಶಿಯಮ್ ೧೨, ಆಕ್ಸಲಿನ್ ಆಮ್ಲ ೧೪, ಪಾಸ್ಪರಸ್ ೭೦, ಪೋಟ್ಯಾಶಿಯಂ ೧೩೩, ಗಂಧಕ ೧೨, ಕ್ಲೋರಿನ್ ೨, ವಿಟಾಮಿನ್ ೧೪ ಮಿಲಿಗ್ರಾಂ ಅಲ್ಲದೇ ನೀರಿನ ಅಂಶ ೭೮% ಹಾಗೂ ಇನ್ನಿತರ ಅಂಶಗಳು ಕಡಿಮೆ ಪ್ರಮಾಣದಲ್ಲಿಯೂ ಪ್ರತಿಶತ ಮಿಲಿಗ್ರಾಂಗಳಲ್ಲಿ ಇರುತ್ತದೆಯೆಂದು ತಿಳಿದು ಬಂದಿದೆ.

ಉಪಯೋಗಗಳು:

೧. ಕಫರಹಿತವಾದ ಕೆಮ್ಮಿಗೆ ದಾಳಿಂಬೆ ಹೂಗಳನ್ನು ಒಣಗಿಸಿದ ಪುಡಿಯನ್ನು ಜೇನುತುಪ್ಪದೊಡನೆ ನಾಲ್ಕಾರು ಸಲ ೫ ಗುಂಜಿ ಕಲಸಿ ನೆಕ್ಕಬೇಕು.

೨. ದಾಳಿಂಬೆ ಹೂವಿನ ಮೊಗ್ಗನ್ನು ಅರೆದು ಮುದ್ದೆಮಾಡಿ, ದಿನಕ್ಕೆರಡು ಬಾರಿ ೫ ಗುಂಜಿಯಷ್ಟು ನುಂಗಿ ಬಿಸಿನೀರುಕುಡಿದರೆ ತಲೆತಿರುಗುವುದು, ಓಕರಿಕೆ, ಎದೆಯಲ್ಲಿ ಹುಳಿಸುಡುವಿಕೆಗಳು (ಪಿತ್ತವಿಕಾರಗಳು) ಕಡಿಮೆಯಾಗುವುದು. ಪಾಚಕ ಶಕ್ತಿಯೂ ಹೆಚ್ಚುವುದು.

೩. ಮಲವಿಸರ್ಜನವಾದ ನಂತರ ರಕ್ತಸ್ರಾವವಾಗುತ್ತಿದ್ದರೆ ದಾಳಿಂಬೆಹೂಗಳನ್ನು ಮಜ್ಜಿಗೆಯಲ್ಲಿ ರುಬ್ಬಿದ ಮಿಶ್ರಣವನ್ನು ನಿತ್ಯ ನಾಲ್ಕು ಸಾರೆ ಕೊಡುವುದರಿಂದ ಗುಣವಾಗುವುದು. ಪಾಚಕಾಂಗ ಉರಿಯೂ ಶಮನವಾಗುವುದು. ಇದು ಮೊಳಕೆಮೂಲವ್ಯಾಧಿಗೆ ಪ್ರಯೋಜನಕಾರಿಯಲ್ಲ.


೪. ಮೂಗು, ಬಾಯಿ, ವಸಡುಗಳಿಂದ ರಕ್ತಸ್ರಾವವಾಗುತ್ತಿದ್ದರೆ ನಿತ್ಯವೂ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಔನ್ಸ್ ದಾಳಿಂಬೆರಸಕ್ಕೆ ಸ್ವಲ್ಪಬಿಳಿಕಲ್ಲು ಸಕ್ಕರೆ ಬೆರೆಸಿ ಕುಡಿದರೆ ಶಮನವಾಗುವುದು.

೫. ದಂತಬೀಜ ಹಣ್ಣಿನ ರಸ ೫ ತೊಲೆ, ಲವಂಗಪುಡಿ ೨೦ ಗುಂಜ, ದಾಲ್ಚಿನ್ನಿ ೧೦ ಗುಂಜಿಯನ್ನು ನೀರಿನೊಂದಿಗೆ ಕಾಯಿಸಿ ಸೋಸಿಕೊಂಡು ದಿನಾಲೂ ಮೂರುಸಾರೆ ಒಂದೆರಡು ಔನ್ಸ್‌ನವರೆಗೆ ಸೇವಿಸಿದರೆ ಆಮಾಂಶ ಮತ್ತು ಅತಿಸಾರದ ರೋಗವು ಶಮನಗೊಳ್ಳುತ್ತದೆ. ಅಥವಾ ಹಣ್ಣಿನ ತೊಗಟೆ ಸೇರಿಸಿ ಮೇಲೆ ಹೇಳಿದಂತೆ ರಸಮಾಡಿಯೂ ಬಳಸಬಹುದು.

೬. ಲೋಹಿತ ಪುಷ್ಪದ ಬೇರಿನ ತೊಗಟೆ ತೆಗೆದು ಸ್ವಲ್ಪ ನೀರಿನೊಡನೆ ರುಬ್ಬಿ ರಸತೆಗೆದು, ಜೇನುತುಪ್ಪ ಹಾಗೂ ನೀರನ್ನು ಬೆರೆಸಿ, ದಿನಾಲೂ ನಾಲ್ಕು ಸಾರೆ ಹೊತ್ತಿಗೆ ಎರಡು ಔನ್ಸ್‌ನಂತೆ ಕುಡಿಯಬೇಕು. ಮಲಗುವಾಗ ಎರಡು ಚಮಚ ಔಡಲೆಣ್ಣೆಯನ್ನು ಬಿಸಿನೀರಿನೊಡನೆ ಬೆರೆಸಿ ನಾಲ್ಕಾರುದಿನ ಕುಡಿಯುತ್ತಿದ್ದರೆ ಟೇಪ್‌ವರ್ಮ್ ಹುಳ ಹೊರಗೆ ಬೀಳುವುದು.

ಮಸ್ತಿಕ ದೌರ್ಬಲ್ಯ ಮತ್ತು ಅದರಿಂದುಟಾಗುವ ವಿಕಾರಗಳಿಗೆ ದಾಡಿಮಫಲವು ಉಪಯೋಗಿ. ಹೃದ್ರೋಗ, ರಕ್ತಪಿತ್ತ, ರಕ್ತಾಲ್ಪತಾ, ರಕ್ತವಿಕಾರಗಳ ಮೇಲೆಯೂ ಇದು ಪ್ರಯೋಜನಕಾರಿ. ಮೂತ್ರವಹಸಂಸ್ಥಾನ, ಪ್ರಜನನಸಂಸ್ಥಾನ (ಶುಕ್ರದೌರ್ಬಲ್ಯ) ಜ್ವರ ಉಪದ್ರವಕ್ಕಾಗಿ ಮತ್ತು ಬಲವೃದ್ಧಿಗಾಗಿ ಹೀಗೆ ಹಲವಾರು ವಿಧ ಔಷಧವಾಗಿ ಆಯುರ್ವೇದೀಯ ತಜ್ಞವೈದ್ಯರು ಇದನ್ನು ಉಪಯೋಗಿಸಬಹುದಾಗಿದೆ. ಸುಂದರ ಬೀಜಗಳಿಂದ ಕೂಡಿದ ಹಣ್ಣು ತಿನ್ನಲು ಬಲು ರುಚಿ. ಹಣ್ಣಿನ ಹೊರಗಿನ ಸಿಪ್ಪೆಯನ್ನು, ಹೂವನ್ನು, ತೊಗಟೆ, ಎಲೆಗಳನ್ನು ಔಷಧವಾಗಿ ಬಳಸಬಹುದು. ದಾಳಿಂಬೆಯು ಒಗರಾದ್ದರಿಂದ ಹಣ್ಣಿನ ಹೊರತಾಗಿ ಉಳಿದವುಗಳನ್ನೆಲ್ಲ ಔಷಧ ರೂಪವಾಗಿ ಬಳಸಬಹುದಾಗಿದೆ. ಬಹುವಾಗಿ ಉಪಯೋಗಿ, ಔಷಧಯುಕ್ತ, ಬಲವರ್ಧಕವಾದ ರುಚಿಯಾದ ಹಣ್ಣು ದಾಳಿಂಬೆ. ಈಗ ಸೀಡ್‌ಲೆಸ್ ತಳಿಯನ್ನು ಅಭಿವೃದ್ಧಿಪಡಿಸಿರುವುದರಿಂದ ತಿನ್ನಲು ಇನ್ನೂ ಸುಲಭವಾಗಿದೆ. ಈ ಆಕರ್ಷಕ ಹಣ್ಣು ಹೆಚ್ಚಾಗಿ ಮಳೆಗಾಲದ ಪ್ರಾರಂಭದಲ್ಲಿ ಹೂ-ಹಣ್ಣುಗಳಿಂದ ಕಂಗೊಳಿಸುತ್ತದೆ.

○ ಚಂದ್ರಕಾಂತ ಎಸ್. ಭಟ್



ಸತಿಪೀಡಿತ ಪುರುಷರ ಸಂಘ !

ಸ್ತ್ರೀ-ಪುರುಷರಿಬ್ಬರೂ ಸಮಾನತೆ ಹೊಂದಿರಬೇಕೆಂಬುದನ್ನು ಎತ್ತಿ ತೋರಿಸುವ ಸಂಘವು ಸ್ತ್ರೀ ಪಕ್ಷಪಾತವನ್ನು ಸವಾಲಾಗಿ ಸ್ವೀಕರಿಸುವುದು ಶ್ಲಾಘನೀಯವಾದ ಅಂಶವೆಂದು ಘಂಟಾಘೋಷವಾಗಿ ಹೇಳುತ್ತಾರೆ. ಸಂಘದ ಸೂತ್ರಧಾರಿ ರಾಧಿಕಾನಾಥ್ ಮಲ್ಲಿಕ್.

ಪುರುಷನ ಪರವಾಗಿ ಪಕ್ಷಪಾತ ಸಂಘಗಳಲ್ಲಿ ಎಂದೂ ಕಂಡುಬಂದಿಲ್ಲ. ಸ್ತ್ರೀ ತಾನು ಪತಿಯಿಂದ ನಾನಾ ಕಷ್ಟಕ್ಕೆ ಗುರಿಯಾಗಿದ್ದೇನೆಂದರೆ ಸೂಕ್ತ ಕ್ರಮ ಕೈಗೊಳ್ಳಲು ಮುಂದಾಗುವ ಸಂಘವು, ಸತಿಪೀಡಿತ ಪುರುಷರನ್ನು ಕಂಡು ನಗುವುದು ಸರಿಯಲ್ಲ. ಪ್ರತಿಯೊಂದೂ ಸ್ತ್ರೀಯನ್ನೇ ಸಮರ್ಥಿಸುವಾಗ, ಪುರುಷನು ಪ್ರತಿಯೊಂದು ಒತ್ತಡಕ್ಕೂ ಮಣಿಯಲೇಬೇಕಾಗುವುದು. ಸ್ತ್ರೀ ಸುಳ್ಳು ನುಡಿದರೂ ಪುರುಷನು ಶಿಕ್ಷೆಗೆ ಗುರಿಯಾಗುತ್ತಿದ್ದಾನೆ. ಮಲ್ಲಿಕ್ ಅವರು ತನ್ನಲ್ಲಿದ್ದ ಆವೇದನೆಯನ್ನು ಹೊರಸೂಸಿದರು.


೧೯೯೨ರಲ್ಲಿ ಈ ಸಂಘವನ್ನು ಸ್ಥಾಪಿಸಿದ ಮಲ್ಲಿಕ್ ಅವರು, ಗಯ್ಯಾಳಿ ಹೆಂಡತಿ, ಅತ್ತೆ ಮಾವನವರು ಕೊಡುವ ಕಿರುಕುಳ, ದೌರ್ಜನ್ಯಗಳ ಕಾರಣಗಳಿಂದ, ಮಾನಸಿಕವಾಗಿ ಶಾರೀರಿಕವಾಗಿ ಕ್ಷೋಭೆಗೊಳಗಾಗುವ ಪುರುಷರಿಗೆ, ಸಹಾಯವಾಗುವ ರೀತಿಯಲ್ಲಿ ಹೋರಾಟ ನಡೆಸುವ ಧ್ಯೇಯದೊಂದಿಗೆ ಈ ಸಂಸ್ಥೆ ಸ್ಥಾಪಿಸಿದೆ ಎನ್ನುವ ಮಲ್ಲಿಕ್ ಈ ಸಂಘದ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಸುಳ್ಳಿಗೆ ಜೈಜೈ

ಆದಿಯಿಂದಲೂ ಲೋಕದಲ್ಲಿ ಸ್ತ್ರೀಯರಿಗೇ ಜಯಭೇರಿ ಕಹಳೆ ಕಟ್ಟಿಟ್ಟ ಬುತ್ತಿಯಾಗಿದೆ. ನಮ್ಮ ಕೋರ್ಟು, ಕಾನೂನು ಎಲ್ಲವೂ ಸ್ತ್ರೀ ಹೇಳುವ ಸುಳ್ಳಿಗೂ ಜೈಜೈ ಎನ್ನುವ ರೀತಿಯಲ್ಲಿ ರೂಪಿಸಲ್ಪಟ್ಟಿವೆ. ಉದಾಹರಣೆಗೆ, ನಮ್ಮ ನ್ಯಾಯಶಾಸ್ತ್ರದ ಪ್ರಕಾರ ಸ್ತ್ರೀ ತನ್ನನ್ನು ಮಾನಸಿಕವಾಗಿ ಗಂಡ ಪೀಡಿಸುತ್ತಿದ್ದಾನೆಂದರೆ ಸಾಕು. ಅದು ನಿಜವೋ-ಸುಳ್ಳೋ ಒಟ್ಟಿನಲ್ಲಿ ಪೊಲೀಸರು ಆ ಪುರುಷನನ್ನು ನಾನ್‌ಬೆಯಿಲ್ ವಾರೆಂಟ್ಮೇಲೆ ಅರೆಸ್ಟ್ ಮಾಡುವುದಂತೂ ಖಂಡಿತ. ಗಂಡನಿಂದ ಮಕ್ಕಳಾಗುವ ಸಾಧ್ಯತೆಯಿಲ್ಲದಿರುವಾಗ ಹೆಂಡತಿ ಗಂಡನಿಂದ ಡೈವರ್ಸ್ ಮಾಡಬಹುದು. ಅದೇ ಹೆಂಡತಿ ಸಂತಾನವತಿಯಾಗಲಾರಳೆಂಬ ವಿಷಯ ತಿಳಿದು ಗಂಡ ಡೈವರ್ಸ್ ಮಾಡುವ ಕಾನೂನು-ಕಟ್ಟಳೆ ಯಾವುದೂ ಇಲ್ಲ. ಇದು ಶಿಕ್ಷಾರ್ಹವಾದ ಮಾತೆಂದು ಪರಿಗಣಿಸುತ್ತದೆ. ನಮ್ಮ ಕೋರ್ಟು 'ಇದೇನಾ ಸಮಾನತೆ?' ಎಂದು ಪ್ರಶ್ನಿಸುತ್ತಾರೆ ಮಲ್ಲಿಕ್.

ಅಕ್ರಮ ಸಂಬಂಧಗಳ ವಿಷಯದಲ್ಲೂ ನ್ಯಾಯಶಾಸ್ತ್ರ ಪುರುಷರನ್ನೇ ಶಿಕ್ಷಾರ್ಹರನ್ನಾಗಿ ಪರಿಗಣಿಸುತ್ತದೆ. ಡೈವರ್ಸ್ ಆದ ಮೇಲೂ ಸ್ತ್ರೀ ತನ್ನ ಮಾಜಿ ಗಂಡನಿಂದ ಜೀವನಾಧಾರ ನಿಧಿಯನ್ನು ಕೇಳಬಹುದು. ಮತ್ತೆ ವಿವಾಹವಾಗಲೂಬಹುದು. ಹೀಗೆ ಎಷ್ಟು ಬಾರಿಯಾದರೂ ಕೋರ್ಟು ಅಂಗೀಕರಿಸುತ್ತದೆ. ವಿಚಿತ್ರ ವಿಷಯವೆಂದರೆ ಮಾಜಿ ಗಂಡನು ನಿರುದ್ಯೋಗಿಯಾದರೂ ಅವನಿಂದ ಆ ನಿಧಿಯನ್ನು ಪಡೆಯಬಹುದೆಂಬುದು ಎಂತಹ ಕೋರ್ಟು? ಎಂತಹ ಕಾನೂನು? ಎನ್ನುತ್ತಾ ಕಿಡಿಕಾರುವ ಮಲ್ಲಿಕ್, ಸ್ತ್ರೀಯರ ಮಾತನ್ನೇ ನಂಬುವ ಕೋರ್ಟಿಗೆ ''ಸ್ತ್ರೀಯರು ಸುಳ್ಳನ್ನು ಹೇಳುವುದಿಲ್ಲ'' ಎಂಬ ಗ್ಯಾರಂಟಿ ಏನಿದೆಯೆಂದೂ ಪ್ರಶ್ನಿಸುತ್ತಾರೆ.

ಈ 'ಸತಿಪೀಡಿತ ಪುರುಷರ ಸಂಘ'ದಲ್ಲಿ ಹೆಂಡತಿಯಿಂದ ಏಟು ತಿಂದು ಬಂದ ಪುರುಷರಿಲ್ಲದಿದ್ದರೂ, ಸ್ತ್ರೀ ಪಕ್ಷಪಾತದಿಂದ ಪುರುಷನ ಪ್ರಾಥಮಿಕ ಹಕ್ಕುಗಳನ್ನು ಮೊಟಕುಗೊಳಿಸುತ್ತಿರುವ ಇಂದಿನ ಕೋರ್ಟು ಕಾನೂನು ಕುರಿತೋ, ಒಂದೆಡೆ ಸಮಾನತೆ ಹೆಸರಲ್ಲಿ ರಿಸರ್‌ವೇಷನ್ ಹಾಗೂ ಪ್ರತ್ಯೇಕ ಹಕ್ಕುಗಳನ್ನು ಮತ್ತೊಂದೆಡೆ ಕೋರುವ ಮಹಿಳಾ ಸಂಘಗಳ ಕುರಿತೊ, ಒಟ್ಟಿನಲ್ಲಿ ಈ ಸಂಸ್ಥೆಯಲ್ಲಿ ಆಗಾಗ ಸೆಮಿನಾರ್ ನಡೆಯುತ್ತಿರುತ್ತದೆ. ಇದೊಂದು ಸ್ತ್ರೀದ್ವೇಷ ಸಮಾನವೆಂದು, ಮಹಿಳಾ ವ್ಯತಿರೇಕ ಸದಸ್ಸಿದೆಂದು ಹುಬ್ಬು ಮೇಲೇರಿಸುವ ಅವಸರವಿಲ್ಲ. ಏಕೆಂದರೆ ಸ್ತ್ರೀಪಕ್ಷಪಾತವನ್ನು ಖಂಡಿಸುವ ಆ ಸಂಸ್ಥೆ ಸದಸ್ಯರಲ್ಲಿ ಎಷ್ಟೋ ಜನ ಸ್ತ್ರೀಯರೂ ಇದ್ದಾರೆ.



ಸಂಘದ ಸದಸ್ಯರೊಂದಿಗೆ ಚರ್ಚಿಸುತ್ತಿರುವ ಸಂಘದ ಸೂತ್ರಧಾರಿ ರಾಧಿಕಾನಾಥ್ ಮಲ್ಲಿಕ್

ಕಲ್ಕತ್ತದಲ್ಲಿನ ರಾಜಾ ಬಜೇಂದ್ರನಾಥ್
ಬೀದಿಯಲ್ಲಿ ಹೊಸಬರು ಹೊರಟರೆ,
೧೨-ಸಿ ಮನೆ ಬಳಿ ಬರೆದಿರುವ ಬೆಂಗಾಲಿ
ಅಕ್ಷರಗಳು ಆಕರ್ಷಿಸದಿರುವುದಿಲ್ಲ.
''ಸತಿಪೀಡಿತ ಪುರುಷರ ಸಂಘ''
ಬೋರ್ಡನ್ನು ನೋಡಿ,
ಸತೀಮಣಿಯರು ಕೊಡುವ ಕಷ್ಟಗಳನ್ನು
ತಾಳಲಾಗದ ಮಹಾಪುರುಷರು
ಇಲ್ಲಿ ಸಂಘವನ್ನು ಸ್ಥಾಪಿಸಿರಬಹುದೆಂದು
ಒಳಹೊಕ್ಕರೆ, ಅಲ್ಲಿನ ದೃಶ್ಯ
ಬಹುಭಿನ್ನವಾಗಿತ್ತು!

ಸಮಾನತೆ ಜೊತೆಗೆ ಪ್ರತ್ಯೇಕತೆ ಬೇಕು

ಕೆಲವು ಮಹಿಳಾ ಸಂಘಗಳು ''ಲಿಂಗಭೇದ ನಶಿಸಬೇಕು, ಪುರುಷರೊಂದಿಗೆ ನಮಗೂ ಸಮಾನತೆ ನೀಡಬೇಕು'' ಎಂಬ ನಿನಾದಗಳಿಗೆ ಲೆಕ್ಕವಿಲ್ಲ. ಆದರೂ ಅವರಿಗೆ ಪ್ರತ್ಯೇಕ ಹಕ್ಕುಗಳೂ ಬೇಕೆಂಬುದು ಮತ್ತೊಂದು ವಿನೋದವೆಂಬುದು ಈ ಸಂಘದ ಸಂಯುಕ್ತ ಕಾರ್ಯದರ್ಶಿ ಶಿವಶಂಕರ್ ಬಾಸಕ್‌ರ ವಾದ.

ಸ್ತ್ರೀ ಒಂದು ಕಡೆ ಗಂಡನ ಆಸ್ತಿ ಮೇಲೆ ಹಕ್ಕು ಚಲಾಯಿಸುತ್ತಾ ಮತ್ತೊಂದು ಕಡೆ ತಂದೆಯ ಆಸ್ತಿ ಮೇಲೂ ಹಕ್ಕಿದೆಯೆಂದೂ ಕೂಗಾಡುವುದು ದುರಾಸೆಯ ಪ್ರತೀಕ. ಹೀಗಾದಲ್ಲಿ ನಾವೂ ಸಹ ಮಾವನ ಆಸ್ತಿ ಮೇಲೆ ಹಕ್ಕಿದೆಯೆಂದು ಅಧಿಕಾರ ಚಲಾಯಿಸಬಹುದಲ್ಲವೆ? ಎನ್ನುವ ಬಾಸಕ್ ಅವರು, ಸ್ತ್ರೀ ಗರ್ಭವತಿಯಾದಾಗ 'ಮೆಟರ್ನಿಟಿ ಲೀವ್' ಹೆಸರಲ್ಲಿ ಮೂರು ತಿಂಗಳು ರಜಾ ನೀಡುವಂತೆ, ಹೆಂಡತಿ ಗರ್ಭವತಿಯಾದಾಗ ಆ ಪುರುಷನಿಗೂ ಮೂರು ತಿಂಗಳ ಕಾಲ ರಜಾ ನೀಡ ಬೇಕೆಂಬುದೂ ಹೇಳಿದರು. ಏಕೆಂದರೆ, ಹೆಂಡತಿ ಗರ್ಭವತಿಯಾದಾಗ ಆ ಪುರುಷನಿಗೆ ಎಷ್ಟು ಕರ್ತವ್ಯಪಾಲನೆ ಮಾಡಬೇಕಾಗುತ್ತೋ ಎಲ್ಲರಿಗೂ ಗೊತ್ತು. ಮಗು ಹುಟ್ಟಿದ ಕೆಲವು ತಿಂಗಳುಗಳವರೆಗೂ ಹೆಂಡತಿ ಕೆಲಸವೆಲ್ಲಾ ಇವರೇ ಮಾಡಬೇಕಾಗುವುದಲ್ಲವೆ? ಇಲ್ಲವೆನ್ನ ಲಿಕ್ಕಾಗುವುದಿಲ್ಲ.

ಹೀಗೆ ಪ್ರತ್ಯೇಕ ಹಕ್ಕುಗಳು ಪಡೆಯುತ್ತಿರುವಾಗಲೂ, ಸ್ತ್ರೀಯರು ''ಪುರುಷಾಧಿಕಾರ ನಶಿಸಬೇಕು'' ಎಂಬ ಆವೇಶಭರಿತ ತತ್ವವನ್ನು ಮಾರ್ಪಡಿಸಬೇಕು ಎಂದು ತರ್ಕಬದ್ಧವಾಗಿ ಹೇಳುತ್ತಾರೆ ಬಾಸಕ್.

ಸಂಘದ ಗುರಿ ಸಮ ಸಮಾಜ

ಸ್ತ್ರೀ ಪುರುಷರೆಂಬ ಭೇದವಿಲ್ಲದ 'ಸಮ ಸಮಾಜ' ಜಾರಿಗೆ ಬರಬೇಕೆಂಬುದೇ ನಮ್ಮ ಸಂಘದ ಗುರಿ ಎನ್ನುವ ರಾಧಿಕಾನಾಥ್ ಮಲ್ಲಿಕ್ ಅವರು ಈ ರೀತಿ ವಾದಿಸುವುದು ಅರ್ಥ ರಹಿತವಾದದ್ದೇನೊ ಎಂಬ ಭಾವನೆಯನ್ನು ವ್ಯಕ್ತ ಪಡಿಸಿದರು. ಏಕೆಂದರೆ, ಶಾರೀರಿಕವಾಗಿ, ಮಾನಸಿಕವಾಗಿ ಸ್ತ್ರೀ ಪುರುಷರ ಮಧ್ಯೆ ತುಂಬಾ ಬದಲಾವಣೆಯಿರುವುದರಿಂದ, ಇದು ಅವರ ಜೀವನ ಶೈಲಿಯಲ್ಲೂ ಪ್ರತಿಬಿಂಬಿಸುವುದು ಸಹಜವೇ ಸರಿ ಎನ್ನುತ್ತಾ, ಸ್ತ್ರೀ ವ್ಯತಿರೇಕ ಭಾವನೆಗಳನ್ನು ತಪ್ಪೆಂದು ಬಗೆಯುವುದು ಈ ಸಂಸ್ಥೆಯ ಆಶಯ ವಲ್ಲ. ಸ್ತ್ರೀ ಸ್ವೇಚ್ಛೆಗೆ ವ್ಯತಿರೇಕ ಶಕ್ತಿಯೂ ಅಲ್ಲ. ಸ್ತ್ರೀಯನ್ನು ತಂಗಿ-ತಾಯಿಯಂತೆ ಭಾವಿಸುವ ನಾವು ಹಕ್ಕುಗಳ ವಿಷಯದಲ್ಲಿ, ಸಮಾನತೆ ಗೋಸ್ಕರ ಹೋರಾಟ ಮುಂದುವರೆಸುತ್ತೇವೆ ಎಂದು ದೃಢವಾಗಿ ಹೇಳುತ್ತಾರೆ ರಾಧಿಕಾನಾಥ್ ಮಲ್ಲಿಕ್.



''ಸತಿಪೀಡಿತ ಪುರುಷರ ಸಂಘ''ಕ್ಕೆ ಒತ್ತು ನೀಡುತ್ತಿರುವ ಕೆಲವು ಮಹಿಳಾ ಸದಸ್ಯರು

ಥೆರೆಸಾ

ಆಕೆಯ ಒಲುಮೆ
ಆಸೆಯ ಚಿಲುಮೆ
ಕಣ್ಮನ ತಣಿಸುವ
ಸುಂದರ ಪ್ರತಿಮೆ

– ಕೆ. ಅರುಣ್ ಕುಮಾರ್
ಬೆಂಗಳೂರು

ಟೈಲರ್ ಒಬ್ಬರ ಸೇವಾನ್ಯೂನತೆಗೆ ನ್ಯಾಯಾಲಯದ ದಂಡ

ಶಿಕಾರಿಪುರದ ಮಕ್ಕಳ ತಜ್ಞರು ಹಾಗೂ ಶಿರಾಳಕೊಪ್ಪ ಬಳಕೆದಾರರ ವೇದಿಕೆಯ (ಗ್ರಾಹಕರ ಹಕ್ಕು ಮತ್ತು ಶಿಕ್ಷಣ ಸಂಸ್ಥೆ) ಉಪಾಧ್ಯಕ್ಷರೂ ಆಗಿ ಕೆಲಸ ನಿರ್ವಹಿಸುತ್ತಿರುವ ಡಾ। ಕೊಟ್ಟೂರೇಶ್ ಇವರು ದಿನಾಂಕ ೧೬-೪-೯೪ರಂದು ಬೆಂಗಳೂರಿನ ಪ್ರಖ್ಯಾತ ಟೈಲರ್ ಒಬ್ಬರಿಗೆ ೨ ಪ್ಯಾಂಟ್ ೨ ಶರ್ಟ್ ಹೊಲಿಯಲು ಕೊಟ್ಟಿದ್ದರು.

ದಿನಾಂಕ ೨-೫-೯೪ರಂದು ಟೈಲರ್‌ರವರಿಂದ ಹೊಲಿದ ಬಟ್ಟೆಯನ್ನು ತೆಗೆದುಕೊಂಡು ಬಂದು ಉಪಯೋಗಿಸುವ ಸಂದರ್ಭದಲ್ಲಿ ಅವರಿಗೆ ಆಘಾತವೊಂದು ಕಾದಿತ್ತು. ಅಂದರೆ ಅವರು ಕೊಟ್ಟ ಅಳತೆಗೆ ವ್ಯತಿರಿಕ್ತವಾಗಿ ಬಟ್ಟೆ ಹೊಲಿಯಲಾಗಿತ್ತು. ಡಾಕ್ಟರ್‌ರವರ ಅಳತೆಗೆ ಬದಲಾಗಿ ಬೇರೊಬ್ಬರ ಅಳತೆಗೆ ಬಟ್ಟೆ ಹೊಲಿದಿದ್ದು ವಿವಾದಕ್ಕೆ ಕಾರಣವಾಯಿತು.

ಈ ಬಗ್ಗೆ ತಮಗಾದ ನಷ್ಟ, ತೊಂದರೆ ಹಾಗೂ ಮಾನಸಿಕ ಹಿಂಸೆಗೆ ಒಟ್ಟು ೪೨೯೩ ರೂಪಾಯಿ ಪರಿಹಾರ ಕೋರಿ ವೈದ್ಯರು ಶಿವಮೊಗ್ಗದ ಜಿಲ್ಲಾ ಗ್ರಾಹಕರ ನ್ಯಾಯಾಲಯದಲ್ಲಿ ಅಧ್ಯಕ್ಷರ ವಿಶೇಷ ಅನುಮತಿಯ ಮೇರೆಗೆ ದೂರು ದಾಖಲಿಸಿ, ಈ ಕೆಳಕಂಡ ಆರೋಪಗಳನ್ನು ಟೈಲರ್ ವಿರುದ್ಧ ಹೊರಿಸಿದ್ದರು.

೧. ಟೈಲರ್ ತನ್ನ ಬಟ್ಟೆಯನ್ನು ನಿಗದಿತ ಸಮಯಕ್ಕೆ ಕೊಡದಿರುವುದು.

೨. ಬಟ್ಟೆ ಹೊಲಿಯುವಾಗ ಬಟ್ಟೆಗೆ ಸರಿಹೊಂದುವಂತಹ ದಾರವನ್ನು ಬಳಸದಿರುವುದು.

೩. ಶರ್ಟ್‌ನ ಅಳತೆಯಲ್ಲಿ ವ್ಯತ್ಯಾಸ ಮಾಡಿ ಹೊಲಿದಿರುವುದು.

೪. ವ್ಯತ್ಯಾಸ ಮಾಡಿ ಹೊಲಿದ ಬಟ್ಟೆಯನ್ನು ಸರಿಪಡಿಸಿಕೊಡಲು ನಿರಾಕರಿಸಿರುವುದು.

ದಿನಾಂಕ ೩೦-೫-೯೫ರಂದು ಈ ದೂರನ್ನು ಪರಿಶೀಲಿಸಿದ ಜಿಲ್ಲಾ ವೇದಿಕೆಯು ಪರಸ್ಪರ ಹೇಳಿಕೆ ಹಾಗೂ ಸಾಕ್ಷಿಗಳನ್ನು ಪಡೆಯಲು ವಿರುದ್ಧದಾರರಿಗೆ ಹಲವಾರು ನೋಟೀಸ್ ನೀಡಿದರೂ ವಿರುದ್ಧದಾರರು ವೇದಿಕೆಗೆ ಹಾಜರಾಗಲಿಲ್ಲ ಕಾರಣವಾಗಿ ವೈದ್ಯರ ಹೇಳಿಕೆ ಪಡೆದು ಈ ಪ್ರಕರಣವನ್ನು ಎಕ್ಸ್‌ಪಾರ್ಟೆ ತೀರ್ಮಾನವನ್ನಾಗಿ ಮಾಡಿ ಟೈಲರ್ ತನ್ನ ಸೇವಾ ನ್ಯೂನತೆ ಹಾಗೂ ಈ ಬಗ್ಗೆ ವೈದ್ಯರಿಗಾದ ನಷ್ಟವನ್ನು ತೊಂದರೆ ಮತ್ತು ವೇದಿಕೆಯ ವೆಚ್ಚವೆಂದು ಪರಿಹಾರ ರೂಪವಾಗಿ ಒಟ್ಟು ರೂ. ೨೨೬ಗಳನ್ನು, ಡಾ। ಹೆಚ್.ವಿ. ಕೊಟ್ಟೂರೇಶರವರಿಗೆ ನೀಡಬೇಕೆಂದು ಆದೇಶಿಸಿತು. ಧಾರವಾಡ ಆಕಾಶವಾಣಿ ನಿಲಯ ಈ ಪ್ರಕರಣವನ್ನು ಅತ್ಯಂತ ಸ್ವಾರಸ್ಯಕರವಾಗಿ ಬಿತ್ತರಿಸಿತು.

ಈ ಆದೇಶದ ವಿರುದ್ಧ ಬೆಂಗಳೂರಿನ ''ರಾಜ್ಯ ಗ್ರಾಹಕರ ಆಯೋಗಕ್ಕೆ'' ಮೇಲ್ಮನವಿ ಸಲ್ಲಿಸಿದ ಟೈಲರ್ ವಿಚಾರಣೆ ಸಂದರ್ಭದಲ್ಲಿ ತನ್ನ ತಪ್ಪನ್ನು ಸಮರ್ಥಿಸಿಕೊಳ್ಳಲು ವಿಫಲರಾದಾಗ ಬಟ್ಟೆ ಹೊಲಿಯುವಾಗ ತೋರಿದ ನಿರ್ಲಕ್ಷ್ಯ ಹಾಗೂ ಸೇವಾ ನ್ಯೂನತೆಗೆ ಪರಿಹಾರ ರೂಪವಾಗಿ ರೂಪಾಯಿ ೫೦೦-೦೦ಗಳನ್ನು ಡಾ. ಕೊಟ್ಟೂರೇಶ್‌ರವರಿಗೆ ನೀಡಬೇಕೆಂದು ದಿನಾಂಕ ೨೮-೩-೯೬ರಲ್ಲಿ ತೀರ್ಪು ನೀಡಿತು.

ಈ ತೀರ್ಪು ಶಿವಮೊಗ್ಗದ ಜಿಲ್ಲಾ ಗ್ರಾಹಕರ ವೇದಿಕೆ ಜಾರಿಗೊಳಿಸಬೇಕಿತ್ತು. ಆದರೆ ಇಲ್ಲಿ ಅಧ್ಯಕ್ಷರ ನೇಮಕಾತಿಯಲ್ಲಿ ೧ ವರ್ಷ ವಿಳಂಬವಾಗಿ ಈ ಪ್ರಕರಣ ದೂಳು ತಿನ್ನುತ್ತಿತ್ತು. ಆದರೆ, ಇತ್ತೀಚೆಗೆ ನೇಮಕವಾಗಿರುವ ಅಧ್ಯಕ್ಷರು ಈ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಂಡು ರಾಜ್ಯ ಆಯೋಗದ ತೀರ್ಪಿನಂತೆ ರೂ. ೫೦೦-೦೦ಗಳ ಡಿ.ಡಿ. ಯನ್ನು ಟೈಲರ್‌ರಿಂದ ತರಿಸಿ ಡಾ। ಕೊಟ್ಟೂರೇಶ್‌ರವರಿಗೆ ಶಿರಾಳ ಕೊಪ್ಪದ ಬಳಕೆದಾರರ ವೇದಿಕೆಯ ವಿಳಾಸಕ್ಕೆ ಕಳುಹಿಸುವಂತೆ ದಿನಾಂಕ ೨೬-೯-೯೭ರಂದು ಆದೇಶಿಸಿದರು.

ಈ ಪ್ರಕರಣದಲ್ಲಿ ಡಾ। ಕೊಟ್ಟೂರೇಶ್‌ರವರು ಶಿರಾಳಕೊಪ್ಪದ ಬಳಕೆದಾರರ ವೇದಿಕೆಯ ಬೆಂಬಲದೊಂದಿಗೆ ಗ್ರಾಹಕರ ನ್ಯಾಯಾಲಯದಲ್ಲಿ ತಾವೇ ವಾದಿಸಿದ್ದರು. ಇವರು ಟೈಲರ್‌ರವರಿಂದ ಪಡೆದ ಪರಿಹಾರದ ಮೊತ್ತಕ್ಕಿಂತಲೂ ತಮ್ಮ ವೈದ್ಯಕೀಯ ವೃತ್ತಿ ಜೀವನದಲ್ಲಿ ಬಿಡುವಿಲ್ಲದಿದ್ದರೂ ಜಿಲ್ಲಾ ಗ್ರಾಹಕರ ನ್ಯಾಯಾಲಯ ಹಾಗೂ ರಾಜ್ಯ ಆಯೋಗಕ್ಕೆ ಹಾಜರಾಗಿ ತಮ್ಮ ಹಕ್ಕನ್ನು ಪ್ರತಿಪಾದಿಸುವಲ್ಲಿ ಯಶಸ್ವಿಯಾಗಿರುವುದು ಗಣನೀಯ ಅಂಶವಾಗಿದೆ.

ಕೃಪೆ : ''ಬಳಕೆದಾರರ ಶಿಕ್ಷಣ'' ಪಾಕ್ಷಿಕ

ಗ್ರಾಹಕರ ಮಾಹಿತಿ

ಸೌಲಭ್ಯಗಳಿಲ್ಲದ ಕಾಲೇಜಿನ ವಿದ್ಯಾರ್ಥಿ ಏನು ಮಾಡಬೇಕು?

ನಾನು ಸರಕಾರಿ ಕಾಲೇಜಿನ ವಿದ್ಯಾರ್ಥಿ. ಕಾಲೇಜಿಗೆ ಸರಿಯಾದ ಫೀಸನ್ನು ಪಾವತಿಸಿರುತ್ತೇನೆ. ಆದರೆ, ಈ ಕಾಲೇಜಿನಲ್ಲಿ ಪ್ರಾಥಮಿಕ ಸೌಲಭ್ಯಗಳೇ ಇಲ್ಲ. ಕೆಲವು ವಿಷಯಗಳನ್ನು ಬೋಧಿಸಲು ಉಪನ್ಯಾಸಕರಿಲ್ಲ. ಉಪನ್ಯಾಸಕರನ್ನು ಒದಗಿಸಲು ನಾವು ಯಾರಲ್ಲಿ ಒತ್ತಾಯಿಸಬೇಕು. ಇಲ್ಲಿ ಬಳಕೆದಾರರು ಯಾರು? ಪೂರೈಕೆದಾರರು ಯಾರು? ದಯವಿಟ್ಟು ವಿವರಿಸುವಿರಾ?

– ಇಬ್ರಾಹಿಂ ಬೆಳ್ಳಾರೆ

ವೇದಿಕೆಯ ಉತ್ತರ

ಕಾಲೇಜಿಗೆ ಫೀಸನ್ನು ಪಾವತಿಸಿದ ಯಾವುದೇ ವಿದ್ಯಾರ್ಥಿಗೆ ಸರಿಯಾದ ಶಿಕ್ಷಣ ಪಡೆಯುವ ಹಕ್ಕು ಇದೆ. ಸರಕಾರಿ ವಿದ್ಯಾಸಂಸ್ಥೆಗಳು ಪ್ರಜಾಜನರ ತೆರಿಗೆಯ ಹಣದಿಂದಲೇ ನಡೆಯುವುದರಿಂದ (ಇಲ್ಲಿ ಪ್ರಜೆಗಳು ತಾವು ಪಡೆಯುವ ಸೇವೆಗೆ ಪರೋಕ್ಷವಾಗಿ ಹಣ ನೀಡುತ್ತಾರೆ.) ಒಂದು ವೇಳೆ ವಿದ್ಯಾರ್ಥಿಯೊಬ್ಬ ಫೀಸನ್ನು ಕೊಡದಿದ್ದರೂ (ಉದಾ: ಸ್ಕಾಲರ್‌ಶಿಪ್ ಅಥವಾ ಫ್ರೀಶಿಪ್ ಪಡೆದ ವಿದ್ಯಾರ್ಥಿ) ಅವನಿಗೆ ಸರಿಯಾದ ಶಿಕ್ಷಣ ಪಡೆಯುವ ಹಕ್ಕು ಇದೆ. ಆದುದರಿಂದ ಯಾವುದೇ ಸಂಸ್ಥೆಯಿಂದ ವಿದ್ಯೆಯನ್ನು ಪಡೆಯುವ ವಿದ್ಯಾರ್ಥಿ ಬಳಕೆದಾರನೆನಿಸಿಕೊಳ್ಳುತ್ತಾನೆ. ವಿದ್ಯೆ ನೀಡುವ ಸಂಸ್ಥೆ ಪೂರೈಕೆದಾರರೆನಿಸಿಕೊಳ್ಳುತ್ತದೆ. ಒಂದು ವೇಳೆ ಈ ಸಂಸ್ಥೆ ಸರಕಾರಿ ಸಂಸ್ಥೆಯಾಗಿದ್ದಲ್ಲಿ ವಿದ್ಯಾ ಇಲಾಖೆ ಪೂರೈಕೆದಾರನಾಗಿರುತ್ತದೆ.

ನಿಮ್ಮೂರಿನ ಕಾಲೇಜಿನಲ್ಲಿ ಸರಿಯಾದ ಶಿಕ್ಷಣ ಪಡೆಯಲು ಅಸಾಧ್ಯವಾಗಿದ್ದಲ್ಲಿ ನೀವು ಉನ್ನತ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿಗಳೊಂದಿಗೆ ವ್ಯವಹರಿಸಬೇಕು. ಮೊದಲು ನಿಮ್ಮ ಜಿಲ್ಲೆಯ ಇಲಾಖೆಯ ಅಧಿಕಾರಿಯೊಂದಿಗೆ ವ್ಯವಹರಿಸಿರಿ.

ಇಂತಹ ಪ್ರಕರಣಗಳನ್ನು ಕೈಗೆತ್ತಿಕೊಳ್ಳುವಾಗ ಒಬ್ಬರು ಅಥವಾ ಇಬ್ಬರು ವಿದ್ಯಾರ್ಥಿಗಳಿಂದ ಈ ಕೆಲಸವಾಗುವುದಿಲ್ಲ. ನಿಮ್ಮ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳನ್ನೂ ಅವರ ಹೆತ್ತವರನ್ನೂ ಸೇರಿಸಿ ಸಾಮೂಹಿಕವಾಗಿ ಹೋರಾಟ ನಡೆಸಬೇಕಾದೀತು.

ನಿಮ್ಮೂರಿನ ಹತ್ತಿರವೇ ಇರುವ ಬಳಕೆದಾರರ ಸಂಘಟನೆಗಳ ನೆರವನ್ನು ಪಡೆದರೆ ನಿಮ್ಮ ಕೆಲಸ ಸುಲಭವಾಗಬಹುದು. ನೀವು ಜಯಗಳಿಸುವ ಸಾಧ್ಯತೆ ಹೆಚ್ಚಬಹುದು.

ಕ್ವಿಜ್ - ೭ರ ಸರಿಯುತ್ತರ


೧. ಜೈನ್ ಆಯೋಗ
೨. ಕೈಯಾರ ಕಿಞ್ಞಣ್ಣರೈ
೩. ಸೌರವ ಗಂಗೂಲಿ
೪. ಜನವರಿ
೫. ದಾವಣಗೆರೆ

ಕ್ವಿಜ್-೭ ಬಹುಮಾನ ವಿಜೇತರು

ಪ್ರಥಮ ಬಹುಮಾನ
ರೂ. ೫೦೦-೦೦

ಎಸ್. ಮಹಾಬಳೇಶ್ವರ
S/o ನಾರಾಯಣಪ್ಪ,
ಬಳಿಗಾರ ಓಣಿ, ನೀಲಕಂಠೇಶ್ವರ ಕ್ಯಾಂಪ್,
ಗಂಗಾವತಿ - ೫೮೩ ೨೨೭ ಕೊಪ್ಪಳ ಜಿಲ್ಲೆ

ದ್ವಿತಿಯ ಬಹುಮಾನ
ರೂ. ೨೦೦-೦೦



ನಯನಾ ಆರ್.ಭಟ್
C/o ಡಾ. ಆರ್.ಬಿ.ಭಟ್,
ಶಿವಾನುಗ್ರಹ ಹಾಸ್ಪಿಟಲ್, ನಾಡಿಗ ಗಲ್ಲಿ,
ಶಿರಸಿ - ೫೮೧ ೪೦೧ ಉ.ಕ.ಜಿಲ್ಲೆ

ಸಮಾಧಾನಕರ ಬಹುಮಾನ
ತಲಾ ರೂ. ೧೦೦/-

ಪ್ರಕಾಶ ಜಿ. ಜನ್ನು
ಹಳೆಪೇಟೆ
ಅಂಚೆ : ಕೆರೂರು - ೫೮೭ ೨೦೬
ತಾ. ಬಾದಾಮಿ ಬಾಗಲಕೋಟೆ ಜಿಲ್ಲೆ

ಶಶಿಕಾಂತ ಸಹದೇವಪ್ಪ ಜೋಗೇರ
ಸಾ:ಹೊಸಕಟ್ಟಿ, ಅಂಚೆ:ರಾಮನಕೊಪ್ಪ-೫೮೧ ೨೦೨
ತಾ. ಕುಂದಗೋಳ ಧಾರವಾಡ ಜಿಲ್ಲೆ

ಲೀಲಾಧರ ಭಂಡಾರಿ
C/o ಮಾಣಿಕಪ್ಪ ಭಂಡಾರಿ ಎಸ್.ಬಿ.ನಾಯಕ್
ಕರಮರಕರ್ ಲೇ ಔಟ್, ಹಳಿಯಾಳ ರಸ್ತೆ,
ಧಾರವಾಡ - ೫೮೦ ೦೦೮

ಕ್ವಿಜ್ ೮ರ ವಿವರ :

- ಕೆಳಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯಾ ಪ್ರಶ್ನೆಯ ಕೆಳಗೆ ನೀಡಲಾದ ಸ್ಥಳದಲ್ಲಿ ಬರೆಯಿರಿ.
- ಒಬ್ಬರು ಎಷ್ಟು ಪ್ರವೇಶ ಪತ್ರಗಳನ್ನಾದರೂ ಕಳಿಸಬಹುದು. ಮುದ್ರಿತ ಕೂಪನ್ನ್ನೇ ಬಳಸಬೇಕು. ಜೆರಾಕ್ಸ್ ಪ್ರತಿ ಪರಿಗಣಿಸುವುದಿಲ್ಲ.
- ಪ್ರಥಮ-ದ್ವಿತೀಯ ಬಹುಮಾನ ಪಡೆದವರ ಭಾವಚಿತ್ರ ಪ್ರಕಟಿಸಲಾಗುವುದು. ಕೂಪನ್ ಜೊತೆಗೆ ಭಾವಚಿತ್ರ ಕಳಿಸಬೇಡಿ. ಬಹುಮಾನಿತರನ್ನು ಸಂಪರ್ಕಿಸಿ ಭಾವಚಿತ್ರ ತರಿಸಿ ಕೊಳ್ಳಲಾಗುವುದು.
- ಸರಿಯುತ್ತರಗಳ ಪ್ರವೇಶ ಪತ್ರಗಳನ್ನೆಲ್ಲಾ ಸೇರಿಸಿ ಲಾಟರಿ ಮೂಲಕ ಬಹುಮಾನಗಳನ್ನು ನಿರ್ಧರಿಸಲಾಗುವುದು.
- ಪ್ರವೇಶ ಪತ್ರ ತಲುಪಲು ಅಂತಿಮ ದಿನಾಂಕ ೧-೨-೧೯೯೮

ಕ್ವಿಜ್ - ೮

೧. ಸೋನಿಯಾ ಗಾಂಧಿ ಅವರ ತವರು ದೇಶ ಯಾವುದು?

....

೨. ಕದಂಬರ ರಾಜಧಾನಿ ಯಾವುದು?

....

೩. ಪ್ರಸಿದ್ಧ ಕನ್ನಡ ಕಾದಂಬರಿ 'ರೂಪದರ್ಶಿ' ಯನ್ನು ಬರೆದವರು ಯಾರು?

....

೪. 'ಅಂಡಮಾನ್' ಚಿತ್ರದ ಹೀರೋ ಹೆಸರೇನು?


....

೫. ಆರನೇ ಮಹಿಳಾ ವಿಶ್ವಕಪ್ ಗೆದ್ದುಕೊಂಡ ಕ್ರಿಕೆಟ್ ತಂಡ ಯಾವುದು?

....

ಹೆಸರು...
ವಿಳಾಸ..
....
....
ಪಿನ್ ಕೋಡ್............................ ದೂರವಾಣಿ.........................
ಪ್ರವೇಶ ಪತ್ರಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, ಬಿಸಿಲ ಬದುಕು, ಅಂಚೆ ಪೆಟ್ಟಿಗೆ ೭೯೫೧, ಬಸವೇಶ್ವರ ನಗರ, ಬೆಂಗಳೂರು-೭೯.

ಶಿವರಾಮ ಕಾರಂತರು!



○ ಎನ್. ಕೆ. ಕುಲಕರ್ಣಿ
''ಪರಿಮಳ''
ರೇಲ್ವೆಗೂಡ್ಸ್ ಶೆಡ್ ಬಳಿ,
ಧಾರವಾಡ - ೭

ಕಾರಂತರ ನಿರ್ಭಯ, ನಿರ್ಭಿಡೆಯ ಮನೋವೃತ್ತಿ ಎಲ್ಲರಿಗೂ ಬರಲಾರದು. ಸ್ವಾರ್ಥ, ಸ್ವಪ್ರತಿಷ್ಠೆ, ಪ್ರಸಿದ್ಧಿ-ಪ್ರಶಸ್ತಿಗಳಿಗಾಗಿ ಹಪಹಪಿಸುವ ನಮಗೆ ಕಾರಂತರ ಗೊಮ್ಮಟತನ ನಿಲುಕೀತೆ?


ಮಾತು ಖಾರ ಆದರೆ ಖರೇ! ಮುಖ್ಯಮಂತ್ರಿಯಾಗಲಿ, ಅ-ಮುಖ್ಯಮಂತ್ರಿಯಾಗಲಿ ಯಾರಿಗೇ ಆಗಲಿ ಕಾರಂತರು ಹೇಳುತ್ತಿದ್ದುದು ಒಂದೇ ಮಾತು - ಅದು ಖರೇ ಮಾತು, ನೇರ ಮಾತು. ಸರಕಾರ ಎಂದರೆ ದರಕಾರವಿರಲಿಲ್ಲ ಅವರ್ಗೆ-ಅನಿಸಿದ ಮಾತನ್ನು ಹಸಿಗೋಡೆಯಲ್ಲಿ ಹಳ್ಳುನಡುವಂತೆ ಹೇಳುವ ಗಟ್ಟಿ ಗಂಡಸು. ''ಸ್ವಾತಂತ್ರ್ಯಕ್ಕೆ ಧಕ್ಕೆಯಾದರೆ, ಸ್ವಾತಂತ್ರ್ಯವನ್ನು ಹತ್ತಿಕ್ಕಿದರೆ ನಾನೇ ಪ್ರಥಮ ವಿರೋಧಿಯಾಗಿ ಹೋರಾಡುತ್ತೇನೆ'' ಎಂದು ನುಡಿದಂತೆಯೆ ನಡೆದರು ೧೯೭೬ರಲ್ಲಿ! 'ಎಮರ್ಜನ್ಸಿ ಬಂತು'! ಅದು 'ಅನುಶಾಸನ ಪರ್ವ' ಎಂದು ಕರೆದರು ವಿನೋಬಾಜಿ. ಕಾರಂತಜೀ ಮಾತ್ರ ತಮ್ಮ 'ಪದ್ಮಭೂಷಣ' ಪ್ರಶಸ್ತಿಯನ್ನು ಹಿಂದಕ್ಕೆ ತೂರಿದರು-'ಹರಕೊಳ್ಳೊ ನಿನ್ನ ಗುಳದಾಳಿ' ಎಂಬ ಜಾನಪದದ ಗರತಿಯು ಗಂಡನನ್ನು ಆತನ ಭಂಡತನಕ್ಕಾಗಿ ಪ್ರತಿಭಟಿಸುವಂತೆ.


ಅರುವತ್ತು ವರ್ಷಗಳ ಹಿಂದೆ! ಎಂದರೆ ೧೯೩೦ರಲ್ಲಿ ಕಾರಂತರನ್ನು ಪ್ರಥಮ ಸಲ ಕಂಡೆ. ನನ್ನ ಮಿತ್ರ ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ ಅವರ ಅತಿಥಿಯಾಗಿ ಬಂದಿದ್ದರು. ಶ್ರೀನಿವಾಸ ಕುಲಕರ್ಣಿ ಪಂ. ತಾರಾನಾಥರ ''ಪ್ರೇಮ'' ಪತ್ರಿಕೆಯನ್ನು ತಾವು ಕೊಂಡು ಕೊಂಡು ನಡೆಸುತ್ತಿದ್ದರು. ಈ ಮೂಲಕ ಕಾರಂತರೊಡನೆ ನಿಕಟ ಸಂಬಂಧ ನಾಟ್ಯಾಚಾರ್ಯರಿಗೆ. ಕಾರಂತರೂ ಒಂದು ರೀತಿ ನಾಟ್ಯಾಚಾರ್ಯರೆ. ಯಕ್ಷಗಾನ ರಂಗದ ಮೇಲೆ ಕಾರಂತರ ಕುಣಿತ ನೋಡಿಯೆ ವಿ.ಸೀ. ಅವರು 'ಕುಣಿಯುತಾನೇ' ಎಂಬ ಕವನ ರಚಿಸಿದರು. ಕಾರಂತರ ಹವ್ಯಾಸಗಳು ಹದಿನೆಂಟು ತರಹ!

ಅಂದು ಶ್ರೀನಿವಾಸ ಕುಲಕರ್ಣಿ ಅವರ ಮನೆಗೆ ಬಂದ-ನಾನು ಪ್ರಥಮ ಸಲ ಕಂಡ-ಕಾರಂತರ ವ್ಯಕ್ತಿ ಚಿತ್ರ ಇದು-ತೊಟ್ಟದ್ದೊಂದು ಲಂಡ ಅಂಗಿ, ಉಟ್ಟದ್ದೊಂದು ಲಂಡ ಲುಂಗಿ! ಹೆಗಲಿಗೊಂದು ಚೀಲ - ಅದರಲ್ಲೊಂದು ಕ್ಯಾಮರಾ. ಬರಿಗಾಲಿನಿಂದಲೆ ಓಡಾಟ.

ಅವರ ಪ್ರಥಮ ವಿಡಂಬನ ಕಾದಂಬರಿ 'ನರಲೋಕದಲ್ಲಿ ನಾರದರು'! ನಾರದರು ಹೋಟಲಿಗೋ, ನಾಟಕಕ್ಕೊ ಹೋದರೆ ಏನೊಂದು ವಿರೋಧಾಭಾಸದ ವಿನೋದ ವೈವಿಧ್ಯ! ಇದು ಕಾರಂತರ ವಿಡಂಬನೆಯ ವಿಡಾಯ.

೧೯೫೦ರಲ್ಲಿ ನಾನು ಗದಗಿನಿಂದ 'ವಸಂತ' ಎಂಬ ಮಾಸ ಪತ್ರಿಕೆಯೊಂದನ್ನು ಹೊರಡಿಸುತ್ತಿದ್ದೆ. ಕಾರಂತರಿಗೆ ಒಂದು ಹಾಸ್ಯ ಲೇಖನಕ್ಕಾಗಿ ಭಿನ್ನವಿಸಿ ಒಂದು ಪತ್ರ ಬರೆದು ಬೇಡಿಕೊಂಡೆ. 'ಹಿಂದುಸ್ಥಾನದಲ್ಲಿ ನರಭಕ್ಷಕ





ಮನುಷ್ಯರು' ಅಪರೂಪದ ವಿಡಂಬನೆಯೊಂದನ್ನು ಬರೆದು ಕಳಿಸಿ, ಜೊತೆಗೊಂದು ಉಪದೇಶಪರ ಪತ್ರವನ್ನೂ ಬರೆದರು: "ನಾನೂ ವಸಂತ ಎಂಬ ಮಾಸ ಪತ್ರಿಕೆ ಹೊರಡಿಸಿ ಕೈಸುಟ್ಟುಕೊಂಡಿದ್ದೇನೆ. ನೀವು ಇದೇ ಹೆಸರಿನ ಪತ್ರಿಕೆಗೆ ಕೈಹಾಕಿದ್ದೀರಿ. ನಿಮ್ಮ 'ವಸಂತ' ವಾದರೂ ಚಿಗುರಲಿ. ಏಕೆಂದರೆ ಮಾಸಿಕಗಳು ಬಲವಾಗಿರಲಾರದೆ 'ವೀಕ್ಲಿ' (Weakly) ಗಳಾಗಿ ಬಿಡುತ್ತಿವೆ....." ಎಂದೆಲ್ಲಾ.

ಕಾರಂತರು ಕಳಿಸಿದ ವಿಡಂಬನದ ಲೇಖನದ ಒಳಅರ್ಥ ಒಮ್ಮೆಲೆ ನನಗೆ ಹೊಳೆಯಲಿಲ್ಲ. ಅವರು ಬರೆದಿದ್ದರು: "ನಮ್ಮ ಊರಿಗೆ ಸಮೀಪದಲ್ಲಿ ಗುರುವಾಯ್ಯನ ಕೆರೆ ಎಂಬ ಒಂದೂರು. ಅಲ್ಲಿ ಹಲ ವರ್ಷಗಳ ಹಿಂದೆ ಒಂದು ಚಿರತೆಯು ಮನುಷ್ಯ ರಕ್ತದ ಸ್ಯಾಂಪಲ್ ನೋಡಿತು." ಮನುಷ್ಯ ರಕ್ತದ ರುಚಿ ಹತ್ತಿದ ಚಿರತೆಗೆ ದನ-ಹುಲ್ಲೆಗಳ ರಕ್ತ-ಮಾಂಸ ಬೇಡವಾಯ್ತು. ಮನುಷ್ಯ ರಕ್ತದ ರುಚಿ ಹತ್ತಿ ಮನುಷ್ಯರನ್ನೇ ಹೀರತೊಡಗಿತು- ಎಂದೆಲ್ಲ ಹೇಳಿ ನಮ್ಮ ಸಮಾಜದಲ್ಲಿ ವಿವಿಧ ರಂಗಗಳಲ್ಲಿ ಮನುಷ್ಯ ರಕ್ತ ಹೀರುವ ದೇಶಾವರಿ-ದಕ್ಷಿಣೆ ಬ್ರಾಹ್ಮಣರು; ಬೇರೆ ಬೇರೆ ವೃತ್ತಿಯ ದುಡ್ಡಿನ ದಾಸರು, ಇಷ್ಟೇ ಅಲ್ಲ, ಸ್ವತಃ ಅವರ (ಕಾರಂತರ) '5th form ಓ 6th form ಓ - Cattle form ಓ" ಕ್ಲಾಸಿನ ಮಾಸ್ತರರು ಈ ಶಿಷ್ಯ (ಕಾರಂತರ) ಪಾಲಿಗೆ ಜಿಗಳೆಯಂತೆ ಅವರ ಬ್ರೇನ್ ರಕ್ತವನ್ನೇ ಶೋಷಿಸಿ ನರಸತ್ವವನನ್ನು ಮಾಡಿಬಿಟ್ಟರಂತೆ. ಹೀಗೆ ತನ್ನ ಮೆದುಳಿನ ಸತ್ವವನ್ನು ಶೋಷಿಸಿದ ನರಭಕ್ಷಕರೇ ತಮ್ಮ ಕ್ಲಾಸ್ ಟೀಚರ್‌ಉ!- ಎಂದು ತಮ್ಮ ಗುರು ಬ್ರಹ್ಮರಿಗೆ ಮಂಗಳಾರತಿ ಮಾಡಿದರಂತೆ! ಮುಂದೆ ಕಾಲೇಜ್‌ಕಟ್ಟೆ ಹತ್ತಿ, ಕೆಳಗಿಳಿದು ಬಿಟ್ಟರು. ಇಂದಿನ ಸಂದರ್ಭದಲ್ಲಾದರೂ ಸಾಮಾಜಿಕ, ರಾಜಕೀಯ ನರಭಕ್ಷಕರ ಸಂಖ್ಯೆ ವೈವಿಧ್ಯ ಇನ್ನೂ ಹೆಚ್ಚು.

ಬೆಟ್ಟದಂತಹ ತಲೆ ಕಡ್ಡಿಯಂತಹ ಕೈಕಾಲು ತಯಾರಿಸುವ ಇಂದಿನ ಶಿಕ್ಷಣ ಯಂತ್ರಗಳು ಕಾರಂತರಿಗೆ ಬೇಡವೆನಿಸಿ ಹೇಗೋ ಮ್ಯಾಟ್ರಿಕ್ ಪಾಸಾಗಿ ಕಾಲೇಜ್ ಒಂದು ವರ್ಷ ಕಲಿಯುವ ಮಟ್ಟಿಗೆ ಅವರಿಗೆ ನಾಲ್ಕು ಗೋಡೆಗಳ ನಡುವಿನ ಬ್ರೇನ್ ವಾಶಿಂಗ್ ಶಿಕ್ಷಣ ಬೇಡವಾಯಿತು. (ಹೀಗೆ ಬ್ರೇನ್ ಫೀಡ್ ಮಾಡುವ ಶಿಕ್ಷಣದಿಂದ ರವೀಂದ್ರರು, ಡಿ.ವಿ.ಜಿ., ಅ.ನ.ಕೃ. ಮೊದಲಾದವರು ತಂತಮ್ಮ ಪಾಡಿಗೆ ಒಬ್ಬೊಬ್ಬರೂ ಬೃಹಸ್ಪತಿಯಂತೆ ಜ್ಞಾನದ ಭಂಡಾರಿಗಳಾದರು.)

ಇಂದಿನ ಶಿಕ್ಷಣದ ಗುರಿ, ಇಂದಿನ ಶಿಕ್ಷಣದ ವ್ಯಾಪಾರೀ ವೃತ್ತಿ, ಸರಸ್ವತಿಯ ವ್ಯಭಿಚಾರ ನಡೆಯುವ ವ್ಯಾಸಂಗ ಕಾರಂತರ ವಾಗ್ಬಾಣಗಳಿಗೆ ಗುರಿ. ಇಂದಿನ ಶಿಕ್ಷಣ ಕಾರಖಾನೆಗಳು, ಇಂದಿನ ಡ್ಯಾಮುವ್ವನ ಡೆಮಾಕ್ರಸಿ, ಇಂದಿನ ಪರಿಸರದ ಶೋಚನೀಯ ಪರಿಸ್ಥಿತಿ, ಅರಣ್ಯ ಸಂಪತ್ತನ್ನು ಹಾಳು ಮಾಡಿ ವಿದ್ಯುತ್ ಯಂತ್ರಾಗಾರ ನಿರ್ಮಿಸುವ ಸರಕಾರೀ ಧೋರಣೆಗಳು ಇವೆಲ್ಲಾ ಕಾರಂತರ ವಾಗ್ಬಾಣದ ಲಕ್ಷ್ಯಗಳಾಗಿದ್ದವು.

ಕಾರಂತರ ವ್ಯಕ್ತಿತ್ವ ಹೇಗಿತ್ತೆಂದರೆ ಅವರ ಫ್ಯಾನ್ (Fan)ಗಳು ಅವರನ್ನು ಆಮಂತ್ರಿಸಿ, ಸತ್ಕರಿಸಿ ಆಮೇಲೆ ಅವರಿಂದಲೇ ಮಂಗಳಾರತಿ, ಪುಷ್ಪಾರ್ಚನೆ ಮಾಡಿಸಿಕೊಳ್ಳುತ್ತಿದ್ದರು. ಕಾರಂತರಿಗೇನು, ತನ್ನ ಸತ್ಕಾರ ಮಾಡುತ್ತಾರೆಂದು ಸತ್ಕಾರ ಮಾಡುವವರು ತಪ್ಪಿತಸ್ಥರಾಗಿದ್ದರೆ ಅವರನ್ನೂ spare ಮಾಡುತ್ತಿರಲಿಲ್ಲ. ಆದರೆ ಹಾಗೆಂದರೂ ಅವರು ಬಿರುಸಿನ ಆವರಣದ ಹಿಂದೆ ಮಿದುವಾದ ಹೃದಯದ ಹೂರಣವುಳ್ಳವರಾಗಿದ್ದರು. ಕಾರಂತರ ನಡೆ ಕಾರಂತರದೇ ಆಗಿತ್ತು. ಕಾರಂತರ ನುಡಿ ಖಾರಂತರದೇ ಆಗಿತ್ತು.

ಒಮ್ಮೆ ಆಕಾಶವಾಣಿಯವರು ಯಕ್ಷಗಾನ ಪುರಸ್ಕೃತ ಕಾರಂತರಿಗೆ, 'ಜಪಾನೀ ಪದ್ಧತಿಯ ಭತ್ತದ ನಾಟಿವಳಿ' (Japanese method of rice cultivation) ಬಗ್ಗೆ ಒಂದು ಯಕ್ಷಗಾನ ಪ್ರಸಂಗ ರಚಿಸಲಿಕ್ಕೆ ಕೇಳಿದಾಗ ಕಾರಂತರಿಂದ ಖಾರವಾಗಿ ಬಂತು ಪ್ರತಿಕ್ರಿಯೆ. ಇದು ಯಕ್ಷಗಾನ ಕಲೆಯನ್ನ ಪ್ರಚಾರಕ್ಕಾಗಿ ವ್ಯಭಿಚಾರಕ್ಕಿಳಿಸಿದ ಹಾಗೆ ಅಂತ ತಮ್ಮ ತೀವ್ರ ಪ್ರತಿಕ್ರಿಯೆ ವ್ಯಕ್ತಮಾಡಿದರು. "ನಾನು ರಚಿಸೋದಿಲ್ಲ. ಇನ್ನಾರಾದರೂ ಇಂಥಾ ವ್ಯಭಿಚಾರಕ್ಕೆ ಕೈ ಹಾಕಿದರೆ ನಾನು ಮನೆಮನೆಯ ಮಾಳಿಗೆಯಿಂದ ಕೂಗಿಕೊಳ್ಳುತ್ತೀನಿ" ಅಂತ ಎಚ್ಚರಿಕೆ ಕೊಟ್ಟರು. ಆಕಾಶವಾಣಿ ಮುಂದರಿಯದೆ ಮೌನವಾಗಿ ಉಳಿಯಿತು.

ಕಾರಂತರು ಪರಿಸರ ರಕ್ಷಣೆಗಾಗಿ ಒಂಟಿ ಸಲಗದಂತೆ ಹೋರಾಟ ನಡೆಸಿದರು. 'ಕೈಗಾ'ದ ವಿರುದ್ಧ ಅವರು ನಡೆಸಿದ ಹೋರಾಟ ಅವರಿಗೆ ಯಶಸ್ಸು ತರದಿದ್ದರೂ ಅವರು ಮಾತ್ರ 'ಹೋರಾಡಿ ಗೆದ್ದ ಹುಂಜ'ದಂತೆಯೇ ಧೀರ ಗಂಭೀರವಾಗಿದ್ದರು.

ಕಾರಂತರ ನಿರ್ಮಮ, ನಿರ್ಭಿಡೆಯ ಮನೋವೃತ್ತಿ ಎಲ್ಲರಿಗೂ ಬರಲಾರದು. ಸ್ವಾರ್ಥ, ಸ್ವಪ್ರತಿಷ್ಠೆ, ಪ್ರಸಿದ್ಧಿ-ಪ್ರಶಸ್ತಿಗಳಿಗಾಗಿ ಹಪಹಪಿಸುವ ನಮಗೆ ಕಾರಂತರ ಗೊಮ್ಮಟತನ ನಿಲುಕೀತೆ?

ತಮ್ಮ ಬರವಣಿಗೆಗಳನ್ನೆಲ್ಲಾ ಕಾರಂತರು ತಾವೇ ಪ್ರಕಟಿಸುತ್ತಿದ್ದರು, 'ಹರ್ಷ' ಪ್ರಕಾಶನದಡಿ. ಪ್ರಕಾಶಕರ ಮರ್ಜಿ ಹಿಡಿಯ ಹೋಗಲಿಲ್ಲ, ಪ್ರಕಾಶಕರನ್ನು ನೆಚ್ಚಲಿಲ್ಲ. ಧಾರವಾಡದ ಮಿತ್ರ, ಗ್ರಂಥಮಾಲೆಯ ಸಂಪಾದಕರಿಗೆ ಕೀಟಲೆ ಮಾಡುತ್ತ- "ಏನಯ್ಯ ಏನಂತದೆ ನಿನ್ನ ಗಂಡಮಾಲೆ?" ಎಂದು ನುಡಿದಾಗ ಸಂಪಾದಕರ ಮುಗುಳ್ನಗೆ, ಮೌನ.

"ಕೀರ್ತನ ಕೇಸರಿ" ಎಂದು ಬಿರುದಾಂಕಿತ ಹರಿಕಥಾಕಾರ ಲೇಖಕರೊಬ್ಬರಿಗೆ ಇವರು ಸಾಹಿತ್ಯಕ್ಕೆಂತ 'ಕೀರ್ತನಕೇಸರಿ' ಎಂದು ಉಡುಗೊರೆ ಕೊಟ್ಟಿದ್ದರು. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿಗೆ ಆಯ್ಕೆ ಆಗಿ "ನಮ್ಮನ್ನಾಳುವ (ಮೈಸೂರು) ದೊರೆಗಳು" ಎಂಬ ಪರಂಪರೆಯ ಗುಲಾಮಗಿರಿಯನ್ನು ತಪ್ಪಿಸಿದ ಶ್ರೇಯಸ್ಸು ಕಾರಂತರದು.

ಕಾರಂತರ ಬದುಕು ಹೋರಾಟ, ಪ್ರತಿಭಟನೆ, ಬಂಡಾಯಗಳ ಯಾತ್ರೆ. ಚೋಮನೆಂಬ ದಲಿತ ಅಸ್ಪೃಶ್ಯ ಗೇಣಿ ಭೂಮಿ ಪಡೆದು ಸಾಗುಮಾಡಬೇಕೆಂದು ಸಾಯುವ ತನಕ ಹೋರಾಡಿದರೂ ಕೈಗೆಟುಕದೆ ತನ್ನ 'ದುಡಿ'ಯನ್ನು ಬಾರಿಸುತ್ತಲೆ ಮಡಿದ 'ಚೋಮನ ದುಡಿ' ಅರುವತ್ತು ವರ್ಷ ಪೂರ್ವದಲ್ಲಿ ಕಾರಂತರ ಲೇಖನಿಯಿಂದ ಕಾದಂಬರಿ ರೂಪದಲ್ಲಿ ಬಂದದ್ದು-ಈಗಿನ Pro ದಲಿತ, ಬಂಡಾಯಗಳಿಗೆಲ್ಲ ಮುಂಚೂಣಿಯ ಹರಿಕಾರನಂತೆ.

ಕಾರಂತರಿಗೆ ಮಾನವತೆ ಮುಖ್ಯ. ಮಾನವನ ಜಾತಿ-ಭಾಷೆ ಕುಲಗೋತ್ರಗಳು ಅಮುಖ್ಯವಾಗಿದ್ದವು. "ಮಾನವ ಮೊದಲು ಮಾತು ಮತ್ತೆ" ಎಂಬ ಅವರ ಒಂದು ರೇಡಿಯೋ ನಾಟಕದ ಜೀವಾಳದ ಧ್ವನಿ ಇದೇ ಆಗಿತ್ತು. ●

ಕಿಲ ಕಿಲ
ಕೂಪನ್ - ೮

ಹೆಸರು..

ತರಗತಿ..

ವಯಸ್ಸು..

ತಂದೆ..

ತಾಯಿ..

ವಿಳಾಸ..

....

....

....

ಕಿಲ ಕಿಲ - ೮

ಹತ್ತು ಸಾವಿರ ರೂಪಾಯಿ ಸಿಕ್ಕರೆ...

ಮಕ್ಕಳೇ,

ನೀವು ಶಾಲೆಗೆ ಹೋಗುವಾಗ ದಾರಿಯಲ್ಲಿ ಹತ್ತು ಸಾವಿರ ರೂಪಾಯಿ ಸಿಕ್ಕರೆ ಏನು ಮಾಡುವಿರಿ? ಈ ಬಗ್ಗೆ ಮೌನವಾಗಿ ಕುಳಿತು ಯೋಚನೆ ಮಾಡಿರಿ. ನಂತರ ನಿಮಗೆ ಏನು ಅನ್ನಿಸುತ್ತದೆಯೋ ಅದನ್ನು ಪ್ರಾಮಾಣಿಕವಾಗಿ ಬರೆಯಿರಿ. ಉತ್ತಮ ಬರಹಗಳು ಮುಂದಿನ ತಿಂಗಳು ಪ್ರಕಟವಾಗುತ್ತವೆ.

ವಿಶೇಷ ಸೂಚನೆ :

- ನಿಮ್ಮ ವಯಸ್ಸು ೧೫ ವರ್ಷ ಮೀರಿರಬಾರದು.
- ನಿಮ್ಮ ಅನಿಸಿಕೆಯನ್ನು ಬಿಳಿ ಹಾಳೆಯಲ್ಲಿ ಬರೆದು ಪಕ್ಕದಲ್ಲಿರುವ ಕಿಲಕಿಲ ಕೂಪನ್-೮ನ್ನು ಲಗತ್ತಿಸಿ ಈ ಕೆಳಗಿನ ವಿಳಾಸಕ್ಕೆ ಅಂಚೆಯಲ್ಲಿ ಕಳಿಸಿ.
- ನಿಮ್ಮ ಬರಹ ನಮಗೆ ತಲುಪಲು ಕೊನೆಯ ದಿನಾಂಕ: ೧-೨-೧೯೯೮.


ವಿಳಾಸ :
ಸಂಪಾದಕರು, **ಬಿಸಿಲ ಬದುಕು** ಅಂಚೆ ಪೆಟ್ಟಿಗೆ ೭೯೫೧,
ಬಸವೇಶ್ವರನಗರ, ಬೆಂಗಳೂರು-೭೯.

ಮನೆ ಎಂದರೆ ಏನು?

ಹಲವು ತಿಂಗಳಿಂದ ಓದುಗರ ಕುತೂಹಲ ಕೆರಳಿಸಿದ್ದ ಈ ಪ್ರಶ್ನೆಗೆ ಕೊನೆಗೂ ಸರಿಯುತ್ತರ ಬಂದಿದೆ!

ರೂ. ೫೦೦ ಬಹುಮಾನ ಗೆದ್ದ
"ಆ ವ್ಯಕ್ತಿ"ಗೆ
ಅಭಿನಂದನೆಗಳು!

ಆ ಉತ್ತರ ಯಾವುದು? ಬಹುಮಾನ ಗೆದ್ದ 'ಆ ವ್ಯಕ್ತಿ' ಯಾರು? ಎಂದು ತಿಳಿಯಲು ನೀವು ತುದಿಗಾಲ ಮೇಲೆ ನಿಂತಿದ್ದೀರಿ ಎಂಬುದು ನಮಗೆ ಗೊತ್ತು. ಅಂದ ಹಾಗೆ ಆ ಬಹುಮನ ಪಡೆದ "ಅದೃಷ್ಟವಂತ ವ್ಯಕ್ತಿ" ನೀವೇ ಯಾಕಾಗಿರಬಾರದು? ನಿಮ್ಮ ಬಹುದಿನದ ನಿರೀಕ್ಷೆಯ ಫಲಿತಾಂಶ ಮುಂದಿನ ತಿಂಗಳು ಪ್ರಕಟವಾಗಲಿದೆ. ಹಾಗೆಯೇ ಬಹುಮಾನ ಗೆಲ್ಲಲು ವಿಫಲರಾದರೂ ಅತ್ಯಂತ ಆಕರ್ಷಕವಾಗಿ, ವಿಶಿಷ್ಟವಾಗಿ 'ಮನೆ'ಯನ್ನು ವರ್ಣಿಸಿದವರ ಹೆಸರುಗಳನ್ನು ನಮ್ಮ ಮುಂಬರುವ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಮುಂದಿನ ಸಂಚಿಕೆ ನಿರೀಕ್ಷಿಸಿ!



ಹೆಜ್ಜೆ - ೭

ವ್ಯಕ್ತಿತ್ವ ರೂಪಿಸುವಲ್ಲಿ ಅಭ್ಯಾಸಗಳ ಪಾತ್ರದ ಬಗೆಗೆ ಹಿಂದಿನ ಸಲ ಸ್ಥೂಲವಾಗಿ ತಿಳಿದುಕೊಂಡೆವು. ಹಲವು ಅಭ್ಯಾಸಗಳ ಕುರಿತು ಇನ್ನೂ ಸ್ವಲ್ಪ ಚಿಂತಿಸುವುದು ಲಾಭಕರ. ಇಂದಿನ ಪಯಣದಲ್ಲಿ ಅತ್ತಕಡೆ ಲಕ್ಷ್ಯ ಹರಿಬಿಡೋಣ.

ನಿಮ್ಮ ಅಭ್ಯಾಸಗಳು ಬದಲಾದರೆ ನೀವೂ ಬದಲಾಗುವಿರಿ

○ 'ಕೃಶಾಂಗ'

ಯಾವುದೇ ಅಭ್ಯಾಸದ ಲಾಭವೇನು? ಚಟುವಟಿಕೆಯನ್ನು ಅಂತಃಪ್ರಜ್ಞೆಯಿಂದ ನಿಯಂತ್ರಿಸುವ ಮೂಲಕ ನಿರಾಯಾಸವಾದ ವೇಗಪೂರ್ಣ ನಿಖರತೆಯನ್ನು ಸಾಧಿಸುವದು. ಇದರ ಪ್ರಾರಂಭಿಕ ಲಾಭ ಕಾರ್ಯಕ್ಷಮತೆಯಾದರೆ, ಪರಾಕಾಷ್ಠೆಯು ಪ್ರಾವೀಣ್ಯ.

ಚಟುವಟಿಕೆಯನ್ನು ರೂಢಿಸಿಕೊಳ್ಳಲು ಪ್ರಾರಂಭಿಸಿದ ದಿನ ಆಯಾಸ, ಬೇಸರ ಉಂಟಾಗುವದು ಸಹಜ. ಏಕೆಂದರೆ ಆಗ ನಮ್ಮ ಸಂಪೂರ್ಣ ಲಕ್ಷ್ಯ ಈ ಚಟುವಟಿಕೆಯ ಮೇಲೆ ಕೇಂದ್ರೀಕೃತವಾಗಬೇಕು. ಆದರೆ ರೂಢಿ ರಕ್ತಗತವಾಗುತ್ತಿದ್ದಂತೆ ಬೇಸರ ನೀಗತೊಡಗುತ್ತದೆ. ಆಗ ಸ್ವಲ್ಪ ಸ್ವಲ್ಪವಾಗಿ ಲಕ್ಷ್ಯವನ್ನು ಬೇರೆಡೆಗೆ ತಿರುಗಿಸುವದು ಸಾಧ್ಯವಾಗುತ್ತದೆ. ಸಂಪೂರ್ಣವಾಗಿ ಅಭ್ಯಾಸ ಕರಗತವಾದಾಗ ನಿಮ್ಮ ಚಟುವಟಿಕೆಯ ಕಡೆಗೆ ನೀವು ಲಕ್ಷ್ಯವನ್ನೇ ಪೂರೈಸದಿರುವದು ಇತರರಿಗೆ ಬೆರಗನ್ನು ಉಂಟು ಮಾಡುತ್ತದೆ. 'ಕ್ಲಿಷ್ಟವಾದುದರ ಸರಳೀಕರಣದ ಕಲೆ' ಎಂದರೆ ಇದೇ. ಇದಕ್ಕೊಂದೆರಡು ನಿದರ್ಶನ ನೋಡೋಣ.

ಕವಿತೆಯೆಂಬ ಆಧುನಿಕ ಯುವತಿಗೆ ಯಾರೋ ಆರತಿ ಎತ್ತಲು ಹೇಳಿದರು. ಇದೇನು ಮಹಾ ಎಂದು ತಿಳಿದ ಆಕೆ ಗಂಟೆ ಬಾರಿಸುತ್ತಾ ಆರತಿ ಬೆಳಗಲು ಪ್ರಯತ್ನಿಸಿದಾಗ ಆದುದೇನು? ಗಂಟೆ ಬಾರಿಸುತ್ತಿರುವಾಗ ಆರತಿ ತಟ್ಟೆ ಸುತ್ತುವದು ನಿಲ್ಲುತ್ತದೆ; ಆರತಿ ಸುತ್ತುವಾಗ ಗಂಟೆ ಬಾರಿಸುವದು ನಿಲ್ಲುತ್ತದೆ! ಲಕ್ಷ್ಯವು ಎರಡೂ ಕ್ರಿಯೆಗಳ ನಡುವೆ ಸಮನಾಗಿ ಹಂಚದೇ ಹೋಗುವದು, ಹಾಗೂ ಇದನ್ನು ರೂಢಿಸಿಕೊಳ್ಳದೇ ಇದ್ದುದು ಹೀಗಾಗಲು ಕಾರಣ ಎಂದು ತಿಳಿಯದ ಪೆಚ್ಚು ಮುಖದ ಬೇಸತ್ತ ಕವಿತೆ ಆರತಿ ತಟ್ಟೆಯನ್ನು ಕೆಳಗೆ ಕುಕ್ಕಿಬಿಟ್ಟಳು!

ಸತ್ಯ ಸೈಕಲ್ ಕಲಿಯುವ ಹೊಸದರಲ್ಲಿ ಏನಾಯಿತು? ಹಲವರು ನೆಲಕ್ಕುರುಳಿದರು; ಕೆಲವರ ಕಾಲು ಮುರಿಯಿತು; ಸತ್ಯನಂತೂ ಮೊದಲ ದಿನವೇ ಗಾಯಗೊಂಡ. ಕಾಲುಗಳಿಂದ 'ಪೆಡಲ್' ತುಳಿಯುವಿಕೆ ಹಾಗೂ ಕೈಯಿಂದ ಸಮತೋಲನ ಕಾಯ್ದುಕೊಳ್ಳುವಿಕೆ ಎರಡೂ ಒಮ್ಮೆಲೇ ಸಾಧ್ಯವಾಗಬೇಕು. ಹೆದರದೇ, ಬೇಸರಿಸದೇ ಇದನ್ನು ಪುನರಾವರ್ತಿಸಿದ ನಂತರ ಈಗ ಅವನಿಗೆ ಅದು ರೂಢಿಯಾಗಿದೆ. ಅಂದರೆ? ನಿರಾಯಾಸವಾಗಿ, ಪಕ್ಕದಲ್ಲಿದ್ದವರೊಡನೆ ಮಾತನಾಡುತ್ತ, ದೂರದ ಹುಡುಗಿಯರ ಸೌಂದರ್ಯ ಸವಿಯುತ್ತಾ, ವೇಗವಾಗಿ ನೈಪುಣ್ಯದಿಂದ ಆತ ಸೈಕಲ್ ಸವಾರಿ ಮಾಡುತ್ತಾನೆ. ಲಕ್ಷ್ಯ ಕೇಂದ್ರೀಕರಿಸುವದು ಕಡಿಮೆಯಾದಂತೆ ನೈಪುಣ್ಯ ಹೆಚ್ಚುತ್ತದೆ. ಉಪಪ್ರಜ್ಞೆಯ ನಿಯಂತ್ರಣ ಕೈಗೂಡಿದೆ. ಇದನ್ನೇ ಹೊಂದಾಣಿಕೆ ಎನ್ನುತ್ತೇವೆ. ಹೊಂದಾಣಿಕೆ ವರ್ಧಿಸಿದಂತೆ ಆಯಾಸ ಕುಗ್ಗುತ್ತದೆ.

ಶಾಲೆಯಲ್ಲಿ ಚಿಕ್ಕನಿಗೆ ಮಾಸ್ತರರು ವೇಗವಾಗಿ 'ಕಚ್ಚಾ ಪಪ್ಪಾಯಿ; ಪಕ್ಕಾ ಪಪ್ಪಾಯಿ' ಎನ್ನಲು ಹೇಳಿದರು. ತಪ್ಪದೆ ಹೇಳಿದರೆ ಲೇಖನಿ ಉಡುಗೊರೆ ಎಂದರು. ಪ್ರಯತ್ನಿಸಿದ ಹುಡುಗರು ಸುಸ್ತಾದರು. 'ಕಚ್ಚಾ ಚಪ್ಪಾಯಿ, ಪಚ್ಚಾ ಕಪ್ಪಾಯಿ' ಆಗತೊಡಗಿತು! ವೇಗವಾಗಿ ಅನ್ನುವಾಗ ನಿಶ್ಚಿತ ತಪ್ಪಾಗುತ್ತಿದ್ದರೆ, ಸರಿಯಾಗಿ ಅನ್ನಲು ಬಹಳ ವೇಳೆ, ಲಕ್ಷ್ಯ ತಗಲುತ್ತಿದ್ದವು. ಲೇಖನಿ ಯಾರಿಗೂ ಸಿಗಲಿಲ್ಲ. ಅಭ್ಯಾಸವಾಗದೇ ಯಾವ ನೈಪುಣ್ಯ ಸಾಧ್ಯವಿಲ್ಲವೆಂಬುದು ಈಗಾಲಾದರೂ ತಿಳಿಯಿತಲ್ಲ?

ಪುನರಾವರ್ತನೆ ಮತ್ತು ಪರಿಪೂರ್ಣತೆ

ಯಾವದೊಂದು ಚಟುವಟಿಕೆಯನ್ನು ರೂಢಿಸಿಕೊಳ್ಳುವ ಕ್ರಿಯೆ ಪರಿಪೂರ್ಣತೆಯಲ್ಲಿ ಪರ್ಯವಸಾನವಾಗುವದು ಯಾವಾಗ? ಸರಿಯಾದ ಕೌಶಲ್ಯದ ರೂಢಿ ಉಚಿತ ಮಾರ್ಗದಲ್ಲಿ ಸೂಕ್ತ ಶ್ರದ್ಧೆಯೊಂದಿಗೆ ನಡೆದಾಗ ಮಾತ್ರ. ಅಭ್ಯಾಸದ ಪರಿಪೂರ್ಣತೆ ಚಟುವಟಿಕೆಯ ಔಚಿತ್ಯವನ್ನವಲಂಬಿಸಿರುತ್ತದೆ. ಆದರೆ ಪುನರಾವರ್ತಿತ ಕ್ರಿಯೆಗಳೆಲ್ಲವೂ ಸರ್ವಗ್ರಾಹ್ಯವೂ ಪರಿಪೂರ್ಣವೂ ಆಗಿರಲೇಬೇಕಿಲ್ಲ. ನಿಮ್ಮ ನಾಯಿಗೆ ಅಪರಿಚಿತರನ್ನು ಕಚ್ಚುವ ರೂಢಿ ಮಾಡಿಸಿದ್ದೀರೆಂದುಕೊಳ್ಳಿ. ನಿಮ್ಮ ಗೆಳತಿಯನ್ನು ಅದು ಕಚ್ಚಬಾರದು. ಆದರೆ (ನಿಮ್ಮಂತೆ) ನಿಮ್ಮ ಗೆಳತಿಯ ಮೇಲೆ ಕಣ್ಣಿರಿಸಿದ ಪ್ರತಿಸ್ಪರ್ಧಿಯನ್ನು ಅದು ಕಚ್ಚಿದರೆ ಅಡ್ಡಿಯಿಲ್ಲ ಎಂದು ನೀವು ಇಚ್ಛಿಸಬಹುದು. ದುರ್ದೈವವೆಂದರೆ ಈ ವಿಷಯ ನಿಮ್ಮ ನಾಯಿಗೆ ತಿಳಿದಿಲ್ಲದಿರುವದು! ಅದಕ್ಕೆ ಅಭ್ಯಾಸ ಮಾತ್ರ ಮುಖ್ಯ.

ನೆನಪು ಅಸಾಧ್ಯ

ಹೌದು. ಏಕೆಂದರೆ ತಮ್ಮಷ್ಟಕ್ಕೆ ತಾವೇ ನಡೆಯುವ ಈ ಕೆಲಸಗಳನ್ನು ಮಾಡುವಾಗ ನೀವು ಲಕ್ಷ್ಯ ಪೂರೈಸಿಲ್ಲ. ಆದುದರಿಂದ ಅವುಗಳನ್ನು ನೀವು ನೆನಪು ಮಾಡಿಕೊಳ್ಳಲಾರಿರಿ. ಅದೇ ಚಟುವಟಿಕೆಗಳನ್ನು ಪ್ರಜ್ಞಾಪೂರ್ವಕವಾಗಿ ನೀವು ಮಾಡಿದರೆ ಅಭ್ಯಾಸದ ಮುಖ್ಯ ಲಾಭ-ತನ್ನಷ್ಟಕ್ಕೆ ತಾನೇ ಮಾಡಲ್ಪಡುವದು-ಕಳೆದುಹೋಗಿ ಬಿಡುತ್ತದೆ. ಮನೆ ಬಿಡುವಾಗ ಬೀಗ ಹಾಕುವದು; ವಾಹನವನ್ನು ನಿಲ್ಲಿಸಿದಾಗ (ಅದರಲ್ಲೂ ಇಳಿಜಾರಿನಲ್ಲಿ) ತಡೆ ಉಪಕರಣ ಉಪಯೋಗಿಸುವದು-ಇವು ಅಭ್ಯಾಸಪೂರ್ವಕ ಜರುಗುವ ಕ್ರಿಯೆಗಳು. 'ಬೀಗ ಹಾಕಿದೆನೋ ಇಲ್ಲವೋ? ತಡೆ ಉಪಕರಣ ಉಪಯೋಗಿಸಿದೆನೋ ಇಲ್ಲವೋ?' ಎಂದು ನೀವು ಸಂದೇಹಿಸತೊಡಗಿದರೆ ಮನೆ, ವಾಹನಗಳಿಗೇ ಪುನಃ ಪುನಃ ಹಿಂದುರುಗುತ್ತಲೇ ಇರಬೇಕಾಗುತ್ತದೆ!

ವ್ಯಕ್ತಿತ್ವ ವಿಕಾಸ

ಸತ್ಯ ಸೈಕಲ್ ಕಲಿಯುವ ಹೊಸದರಲ್ಲಿ ಏನಾಯಿತು?

ಪರಿಣಾಮಗಳು

ಪರಿಪೂರ್ಣವಾಗಿ ಅಭ್ಯಾಸವಾಗಿರುವ ಯಾವದೇ ಚಟುವಟಿಕೆಯನ್ನು ಪ್ರಜ್ಞಾಪೂರ್ವಕ ಪರಿಶೀಲನೆಗೆ ಒಳಪಡಿಸಿದರೆ ನೀವು ಪೆಚ್ಚಾಗುವದು ಖಚಿತ. ಉದಾಹರಣೆಗೆ, ನಿಮ್ಮ ನಡಿಗೆಯ ಶೈಲಿಯನ್ನು 'ನೀವೇ' ಗಮನಿಸತೊಡಗಿದಾಗ ಮುಜುಗರವಾಗುತ್ತದಲ್ಲವೇ? ನಟನಾವೀರ ಚಾರ್ಲಿ ಚಾಪ್ಲಿನ್‌ಗೆ ನಟನೆ ಮೀನಿಗೆ ಈಜಿನಂತೆ. ಆದರೆ, ಆತನ ನಟನೆಯನ್ನು ಅನುಕರಿಸುವ ಸ್ಪರ್ಧೆಯಲ್ಲಿ ಸ್ವತಃ ಆತನಿಗೇ ದ್ವಿತೀಯ ಬಹುಮಾನ ಬಂದಿತೆಂದರೆ ಪ್ರಜ್ಞಾಪೂರ್ವಕ ಪರಿಶೀಲನೆಯ ಆವಾಂತರ ಅರ್ಥವಾಗಬಹುದು. ಕಮಲೆಯು ತನ್ನ ಇಂಗ್ಲೀಷ್ ಉಪನ್ಯಾಸಕರ ಸಮ್ಮುಖದಲ್ಲಿರುವಳೆಂದು ತಿಳಿಯಿರಿ. ಅವರ ಇಂಗ್ಲೀಷ್ ಭಾಷೆಯ ಪ್ರಭುತ್ವ ಅಗಾಧವಾಗಿರುವದನ್ನವಳು ಬಲ್ಲಳು. ಆಗ ತಾನಾಡುವ ಪ್ರತಿಯೊಂದು ಶಬ್ದವನ್ನೂ ಆಕೆ ಗಮನಿಸಲಾರಂಭಿಸಿದರೆ ಬಾಯಿಯನ್ನೇ ಮುಚ್ಚಬೇಕಾದ ಪ್ರಸಂಗ ಬಂದೀತು. ಮಾತುಗಂಟಿ ಕಮಲೆ ಮೂಕಿಯೇಕಾದಳು ತಿಳಿಯಿತಲ್ಲವೇ?'' ನಿನ್ನ ಹಾವ-ಭಾವ ಹಾಗೂ ನಡಿಗೆಯ ಮೇಲೆ ಕಣ್ಣಿರಿಸು'' ಎಂದು ಮೋಹನನಿಗೆ ತಿಳಿಹೇಳಿದರೆ ಅದರ ಅರ್ಥ, ''ಒಳ್ಳೆಯ ನಡಿಗೆಯ ಶೈಲಿಯನ್ನೂ ರೂಢಿಸಿಕೋ'' ಎಂದೇ ವಿನಹ ''ಪ್ರತಿ ಸಲ ನಡೆಯುವಾಗ ನಡಿಗೆಯ ಶೈಲಿಯನ್ನು ಗಮನಿಸು'' ಎಂದಲ್ಲ.


ಇಂದ್ರಿಯಜನ್ಯ ಅಭ್ಯಾಸಗಳು

ಹಸಿವೆ, ನೀರಡಿಕೆ, ನಿದ್ರೆ, ಲೈಂಗಿಕ ಬಯಕೆಗಳು ಇಂದ್ರಿಯಜನ್ಯವೆಂಬುದು ನಮಗೆ ಗೊತ್ತಿದೆ. ಈ ಬಯಕೆಗಳನ್ನು ಯಾವಾಗ ಮತ್ತು ಹೇಗೆ ಸಂತೃಪ್ತಿಗೊಳಿಸಿಕೊಳ್ಳಬೇಕೆಂಬುದು ಅಭ್ಯಾಸಕ್ಕೆ ಒಳಪಟ್ಟಿದೆ. ಒಂದೇ ಪ್ರಮಾಣದ ಒಂದೇ ಗುಣಮಟ್ಟದ ಆಹಾರ ಸೇವಿಸುವವರೆಲ್ಲರಿಗೂ ಒಂದೇ ತೆರನಾದ ಪೋಷಣೆ ಸಿಗುತ್ತದೆಂದಲ್ಲ. ಅಂದಮೇಲೆ ವ್ಯಕ್ತಿಗಳ ಆಕಾರ, ತೂಕಗಳಿಗೂ ಅವರು ತಿನ್ನುವ ಆಹಾರದ ಪ್ರಮಾಣಕ್ಕೂ ವೈಜ್ಞಾನಿಕ ಸಂಬಂಧವಿರಲೇಬೇಕೆಂದು ವಾದಿಸುವಂತಿಲ್ಲ. ಅಭ್ಯಾಸ ಬಲದಿಂದ ನಾವು ಅವಶ್ಯಕತೆಗಿಂತ ಹೆಚ್ಚಾಗಿ ತಿನ್ನುತ್ತೇವೆಂಬುದೂ ನಿಜ. ನಿದ್ರೆ ಆಂಗಿಕ ಆವಶ್ಯಕತೆಯಿದ್ದಂತೆಯೇ ಅಭ್ಯಾಸದ ಪರಿಣಾಮ ಕೂಡ. ಅದು ಹೇಗೆ? ನಿಮ್ಮ ದೈಹಿಕ ಶಕ್ತಿ ಹ್ರಾಸಗೊಂಡುದರಿಂದ ನೀವು ದಣಿದು ಇನ್ನೇನು ಮಲಗಿಕೊಳ್ಳುವವರಿದ್ದೀರಿ ಎಂದು ತಿಳಿಯಿರಿ. ಅಷ್ಟರಲ್ಲಿ ನಿಮ್ಮ ನೆರೆಮನೆಯಲ್ಲಿರುವವರೊಬ್ಬರಿಗೆ ಅಪಘಾತವಾದ ವರ್ತಮಾನ ಕೇಳುತ್ತೀರಿ; ನೀವು ಉದ್ರೇಕಿತರಾದಿರಿ; ನಿಮ್ಮ ನಿದ್ರೆ ಪಲಾಯನಗೈದಿತು! ತದ್ವಿರುದ್ಧವಾಗಿ, ನೀವು ಎಷ್ಟೇ ಲವಲವಿಕೆಯುಳ್ಳವರಾಗಿದ್ದರೂ ಸಹ ಪರಿಸರ ನಿಮ್ಮನ್ನು ಅತೀವ ಬೇಸರಕ್ಕೀಡು ಮಾಡುವಂತಿದ್ದರೆ ನೀವು ತೂಕಡಿಕೆಯ ವಶವಾಗುವದು ಸಹಜ! ಮಾದಕ ದ್ರವ್ಯ ಮತ್ತು ಮಾದಕ ಪದಾರ್ಥಗಳ ಸೇವನೆಯ ಪರಿಣಾಮ ಹಸಿವೆಯ ಹೆಚ್ಚಳದ ರೂಪದಲ್ಲಿ ಕಂಡುಬರಬಹುದಾದರೂ ಬಹಳ ಮಂದಿಯ ಗಮನ ಇತ್ತ ಹೋಗದು. ಈ ಹೆಚ್ಚಳ ಕೆಲವರಲ್ಲಿ ಕಾಣದೆಯೂ ಇರಬಹುದು; ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನಪ್ರಮಾಣದಲ್ಲಿಯೂ ತೋರಬಹುದು. ಆದರೆ ಈ ಪರಿಣಾಮಗಳನ್ನಪೇಕ್ಷಿಸಿ ಇವುಗಳ ಸೇವನೆಯಲ್ಲಿ ತೊಡಗುವವರು ವ್ಯಸನಾಧೀನರಾಗಿ ತಮ್ಮ ಕುಟುಂಬಕ್ಕೆ ಹೊರೆಯಾಗುವದಂತೂ ಖಂಡಿತ. ತಮ್ಮ ದೇಹ, ಮನಸ್ಸುಗಳ ಮೇಲೆ ನಿಯಂತ್ರಣ ಕಳೆದುಕೊಂಡ ಇಂಥ ವ್ಯಸನಿಗಳು ಆ ಪದಾರ್ಥಗಳನ್ನೂ ಹೇಗಾದರೂ ಪಡೆಯಬಯಸುತ್ತ ತಮ್ಮ ಸಾಮಾಜಿಕ ಮೌಲ್ಯ ಹಾಗೂ ಅವಕಾಶಗಳನ್ನು ಬಲಿಗೊಡುತ್ತಾರೆ. ಇಂಥವರು ಬಂಧು-ಬಳಗದ, ಸಹೋದ್ಯೋಗಿಗಳ ವಿಶ್ವಾಸ ಕಳೆದುಕೊಳ್ಳುತ್ತಾರೆ. ಅವರನ್ನು ಯಾರೂ ನಂಬುವದೂ ಇಲ್ಲ. ದೇಹದ ಶಕ್ತಿಯೂ ಕುಂದುತ್ತಾ ನಡೆದು ಅವರ ಕೊನೆ ಅತ್ಯಂತ ಶೋಚನೀಯವಾಗುತ್ತದೆ. ಒಟ್ಟಿನಲ್ಲಿ ತುಂಬಲಾರದ ಹಾನಿ ಅವರ ವ್ಯಕ್ತಿತ್ವಕ್ಕಾಗುತ್ತದೆ.

ಲೈಂಗಿಕ ಉದ್ರೇಕದ ಬಯಕೆಯೂ ಸಹ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಕಠಿಣ ದೈಹಿಕ ಶ್ರಮ, ಅನಾರೋಗ್ಯ, ಚಿಂತೆ ಮುಂತಾದವು ಈ ಬಯಕೆಯನ್ನು ಕುಗ್ಗಿಸಿದರೆ, ಊಟದ ಸಮಯದ ನೃತ್ಯ, ಸಂತೋಷ ಕೂಟಗಳು, ಪ್ರೇಮ ಸಲ್ಲಾಪ, ಲೈಂಗಿಕ ಪ್ರಚೋದನೆಯ ಚಲನಚಿತ್ರ ವೀಕ್ಷಣೆ ಮುಂತಾದವು ಬಯಕೆಯನ್ನೂ ಹೆಚ್ಚಿಸಬಹುದು. ಕೆಲವರ ದೃಷ್ಟಿಯಲ್ಲಿ ಲೈಂಗಿಕ ಸುಖದ ಸ್ವಾತಂತ್ರ್ಯ ಪ್ರೋತ್ಸಾಹಾರ್ಹವಾಗಿರಬಹುದು. ಆದರೆ, ಮೇಲೆ ಚರ್ಚಿಸಿದ ಇತರ ವ್ಯಸನಗಳಂತೆ ಮಿತಿಮೀರಿದ ಲೈಂಗಿಕ ಸುಖಾನುಭವವೂ ಸಹ ವ್ಯಕ್ತಿತ್ವದ ದೈಹಿಕ, ಮಾನಸಿಕ ಪೈಲುಗಳನ್ನು ಅಶಕ್ತಗೊಳಿಸುತ್ತದೆ. ಇಂಥ ವ್ಯಕ್ತಿಯ ಸಂಗವನ್ನೂ ಇತರರು ತ್ಯಜಿಸಬಹುದು. ಗೌರವಾನ್ವಿತರ ದೃಷ್ಟಿಯಲ್ಲಿ ಇದೊಂದು ದುರಭ್ಯಾಸ. ಅವರು ತಮ್ಮನ್ನು ಇಂಥ ದುರಭ್ಯಾಸಿಗಳೊಡನೆ ಸಮೀಕರಿಸಬಾರದೆಂದು ಇಚ್ಛೆಪಡುವದು ಸಹಜ.

ಭಾವನಾತ್ಮಕ ಅಭ್ಯಾಸಗಳು

ನಮ್ಮ ಸುತ್ತಮುತ್ತಲೂ ಜರುಗುವ ಘಟನೆಗಳು ನಮ್ಮ ಕ್ಷೇಮಕ್ಕೆ ಎಷ್ಟರಮಟ್ಟಿಗೆ ಮತ್ತು ಹೇಗೆ



ಸಂಬಂಧಿಸಿವೆ ಎಂಬ ಅರಿವು, ನಾವು ಆ ಘಟನೆಗಳಿಗೆ ಪ್ರತಿಕ್ರಿಯೆಯಾಗಿ ವ್ಯಕ್ತಪಡಿಸುವ ಭಾವನೆಗಳಿಗೆ ಇಂಬುಗೊಡುತ್ತವೆ. ಭಯ, ದುಃಖ, ಹರ್ಷ, ಕೋಪಗಳು ಹೇಗೆ ರೂಪುಗೊಳ್ಳುತ್ತವೆಂಬುದನ್ನು ಹಿಂದೆಯೇ ತಿಳಿದಿದ್ದೇವೆ. ಸ್ವಯಂ ನಿಯಂತ್ರಿತ ನರಜಾಲ ಪ್ರಜ್ಞೆಯ ನೇರ ನಿಯಂತ್ರಣದಲ್ಲಿರದಿದ್ದರೂ ಸಹ ಪರೋಕ್ಷವಾಗಿ ಪ್ರಜ್ಞೆಯು ನಮ್ಮಲ್ಲಿ ಭಾವೋದ್ದೀಪನಗೊಳಿಸಲು ಸಮರ್ಥವಾಗಿದೆ. ಘಟನೆಗಳ ಪರಿಣಾಮಗಳನ್ನು ಒಂದೇ ತೆರನಾಗಿ ವಿಶ್ಲೇಷಿಸುತ್ತಿದ್ದರೆ ಅದೇ ಅಭ್ಯಾಸವಾಗಿಬಿಡುತ್ತದೆ. ವಿಮಾನ ಪ್ರಯಾಣದ ಚರ್ಚೆಯು ಅಪಘಾತ ಭಯ ಮೂಡಿಸುವದು ಪುನರಾವರ್ತಿತವಾದರೆ, ಅಂಥ ಪ್ರಯಾಣ ನಿಮಗೆ ತ್ಯಾಜ್ಯವಾಗಬಹುದು. ಅಭ್ಯಾಸದ ಫಲವಾದ ಭಾವನಾತ್ಮಕ ಪ್ರತಿಕ್ರಿಯೆಯ ಪುನರಾವರ್ತನೆ ಅಪ್ರಯತ್ನಪೂರ್ವಕವಾಗಿ ಕಾಣುತ್ತದೆ. ಆಗ ಮನಸ್ಸೂ ಸಹ ಭಾವನೆಗಳನ್ನು ನಿಯಂತ್ರಿಸಲಾರದು. 'ಸಿಟ್ಟಿನ ಕೈಯಲ್ಲಿ ಬುದ್ಧಿ ಕೊಟ್ಟ ಆತ ಅನುಚಿತವಾಗಿ ವರ್ತಿಸಿದ' ಎನ್ನುತ್ತೇವೆ. ನಿಜವಾಗಿ ಆದದ್ದು; ಆತ ಸಿಟ್ಟಿನ ಕೈಯಲ್ಲಿ ಕೊಟ್ಟದ್ದು ಬುದ್ಧಿಯನ್ನಲ್ಲ, ತನ್ನನ್ನೇ. ಆದುದರಿಂದ ತನ್ನನ್ನೇ ನಿಯಂತ್ರಿಸದಾದ. ಕೆಲವೇ ಕೆಲವರು ತಮ್ಮ ಕ್ರೋಧ ಜ್ವಾಲೆಯನ್ನು ನುಂಗಬಹುದು; ತಮ್ಮ ಖ್ಯಾತಿಯನ್ನು ಕಾಪಾಡಿಕೊಳ್ಳಬಹುದು. ಆದರೆ ಹಾಗೆ ನುಂಗಿದ ಕ್ರೋಧ ಅವರನ್ನೇ ಸುಡುವದು ನಿಶ್ಚಿತ.

ಅಡುಗೆಯ ಮನೆಯಲ್ಲಿ ಗೃಹಿಣಿಯೊಬ್ಬಳು ಬಿಸಿ ಪಾತ್ರೆಯನ್ನು ಅರಿಯದೇ ಮುಟ್ಟಿ ಬೆರಳು ಸುಟ್ಟಿದುದಕ್ಕಾಗಿ ಆ ಪಾತ್ರೆಯನ್ನೇ ಬೀಸಬಹುದು. ಕೈಯಲ್ಲಿದ್ದ ತಟ್ಟೆ ಕಾಲಮೇಲೆ ಬಿದ್ದು ನೋವುಂಡವ ತಟ್ಟೆಯ ಆಕಾರಗೆಡಿಸಬಹುದು. ಇವು ಅಭ್ಯಾಸದ ಉದಾಹರಣೆಗಳೇ. ಒಳ್ಳೆಯ ಸಾಮಾಜಿಕ ನಡತೆಯನ್ನು ಮೈಗೂಡಿಸಿಕೊಂಡವರೆದುರು ನೀವು ಹೀಗೆ 'ಹುಚ್ಚುಚ್ಚಾಗಿ' ವರ್ತಿಸುತ್ತಿದ್ದರೆ ನಿಮ್ಮ ಅಶಕ್ತ ವ್ಯಕ್ತಿತ್ವದ ಅತ್ಯುತ್ತಮ ಜಾಹೀರಾತು ನೀವೇ! ಆಶಾವಾದಿತ್ವ ಹಾಗೂ ನಿರಾಶಾವಾದಿತ್ವಗಳು ಸಹ ಅಭ್ಯಾಸಗಳ ಫಲಗಳೇ ಎಂಬುದು ನೆನಪಿರಲಿ.

ಭಾವನೆಗಳ ಶಕ್ತಿ ಮತ್ತು ಅವು ನಮ್ಮನ್ನಾಳುವ ಅವಧಿ ಅವುಗಳ ಪರಿಣಾಮ ಸಾರುತ್ತವೆ. ನಮ್ಮ ದೇಹದ ಪಚನ ಸಂಸ್ಥೆ ಹಾಗೂ ರಕ್ತ ಸಂಚಾರದ ಮೇಲೆ ಅವು ಪರಿಣಾಮ ಬೀರುತ್ತವೆ. ಯಾವುದೋ ಅನಪೇಕ್ಷಣೀಯ ಭಾವೋದ್ದೀಪನಕ್ಕೆ ಕಾರಣವಾದ ಘಟನೆಯನ್ನು ನೀವು ಪುನಃ ಪುನಃ ನೆನಪಿಸಿಕೊಳ್ಳುತ್ತಿದ್ದರೆ ಅದು ನಿಮ್ಮನ್ನು ಅಶಕ್ತರನ್ನಾಗಿಸುತ್ತದಲ್ಲದೆ ನಿಮ್ಮ ವ್ಯಕ್ತಿತ್ವಕ್ಕೂ ಹಾನಿಯನ್ನುಂಟುಮಾಡುತ್ತದೆ.

ವ್ಯಕ್ತಿತ್ವ ವಿಕಾಸ

ಲೈಂಗಿಕ ಉದ್ರೇಕದ ಬಯಕೆಯೂ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.

ನಿಮ್ಮ ಭಾವನಾತ್ಮಕ ಅಭ್ಯಾಸಗಳು ನಿಮ್ಮನ್ನು ಕಡಿಮೆ ಜನಪ್ರಿಯ ಮತ್ತು ಅಸಹಕಾರ ಮನೋವೃತ್ತಿಯವರನ್ನಾಗಿಸಿದ್ದರೆ ಅಂಥವುಗಳನ್ನು ಮಾರ್ಪಡಿಸಿಕೊಳ್ಳಲು ಪ್ರಯತ್ನಿಸಿ. ನಿಮ್ಮ ಅಭ್ಯಾಸಗಳ ಮೂಲಕ ನೀವು ಬೇರೆಯವರಿಗೆ ಹೆಚ್ಚು ಪ್ರಿಯರಾಗಿದ್ದರೆ ಅಂತಹವುಗಳನ್ನು ನಿಮ್ಮಲ್ಲೂ ಬೇರೆಯವರಲ್ಲೂ ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿ.

ಇತ್ತೀಚೆಗೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ೩೭ನೇ ಅಖಿಲ ಭಾರತ ಸೀನಿಯರ್ ಅಥ್ಲೆಟಿಕ್ ಚಾಂಪಿಯನ್‌ಶಿಪ್ಸ್ ಕರ್ನಾಟಕದವರ, ಅದರಲ್ಲೂ ಉತ್ತರ ಕರ್ನಾಟಕದವರ ಪಾಲಿಗೆ ಸದಾ ನೆನಪಿನಲ್ಲಿರಿಸುವಂತಹುದು. ಅದಕ್ಕೆ ಕಾರಣ ಅಚ್ಚ ಕನ್ನಡತಿ, ಧಾರವಾಡದ ಹದಿನೇಳರ ಬಾಲೆ ರೇಣುಕಾ ಹೇಡೆಯ ಮೈನವಿರೇಳಿಸುವ ಸಾಧನೆ.

ಮೊದಲ ದಿನ ೩೮ ನಿಮಿಷ ೪೪.೬೫ ಸೆಕೆಂಡುಗಳಲ್ಲಿ ಮಹಿಳೆಯರ ೧೦,೦೦೦ ಮೀಟರ್ ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡ ರೇಣುಕಾ ಕೊನೆಯ ದಿನ ೧೮ ನಿಮಿಷ ೩೬.೯೩ ಸೆಕೆಂಡುಗಳಲ್ಲಿ ಮತ್ತೆ ೫,೦೦೦ ಮೀಟರ್ ಹೊನ್ನಿಗೆ ಲಗ್ಗೆ ಹಾಕಿದಳು. ಸಾಕಷ್ಟು ಅನುಕೂಲ, ಸೌಲಭ್ಯಗಳು ಇಲ್ಲದ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದವರು ರಾಜ್ಯ ತಂಡಕ್ಕೆ ಆಯ್ಕೆಯಾಗುವುದು ಸಧ್ಯಕ್ಕೆ ದೂರವಾದ ವಿಷಯವಾಗಿರುವಾಗ, ತಾನು ಪಾಲ್ಗೊಂಡ ಮೊಟ್ಟ ಮೊದಲ ರಾಷ್ಟ್ರೀಯ ಕೂಟದಲ್ಲೇ ಎರಡೆರಡು ಚಿನ್ನದ ಪದಕ ಬಾಚಿಕೊಂಡ ಈ 'ರಾಣಿ'ಯ (ಮನೆಯಲ್ಲಿ ಆಕೆಯನ್ನು ಪ್ರೀತಿಯಿಂದ ಕರೆಯುವುದೇ ಹಾಗೆ) ಅದ್ಭುತ ಸಾಧನೆಗೆ ಏನೆನ್ನೋಣ? ಶಬ್ದಗಳೇ ಕಡಿಮೆ ಬೀಳುತ್ತವೆ!!

ಉಜ್ವಲ ಭವಿಷ್ಯ

ರೇಣುಕಾ ಈ ಸಾಧನೆಗೈದಿದ್ದು 'ಸ್ಪೈಕ್ಸ್' (Spikes) ಧರಿಸಿ. ಒಂದೊಮ್ಮೆ ಬರಿಗಾಲಲ್ಲೇನಾದರೂ ಓಡಿದ್ದಾದರೆ ಎರಡರಲ್ಲೂ ಹೊಸ ರಾಷ್ಟ್ರೀಯ ದಾಖಲೆಯನ್ನೇ ಬರೆದುಬಿಡುತ್ತಿದ್ದಳೇನೋ ಈ ಹುಡಿಗಿ! ಆದರೆ ಬಹುಶಃ ಆ ದಿನವೂ ದೂರವಿದ್ದಂತಿಲ್ಲ. ಕೂಟದಿಂದ ಕೂಟಕ್ಕೆ ಸಾಧನೆಯನ್ನು ಉತ್ತಮ ಪಡಿಸಿಕೊಳ್ಳುತ್ತ ನಡೆದಿರುವ ರೇಣುಕಾ ಸೂಕ್ತ ಮಾರ್ಗದರ್ಶನ, ತರಬೇತಿ ದೊರೆತಿದ್ದಾದರೆ ಒಂದೋ, ಹೆಚ್ಚೆಂದರೆ ಎರಡೋ ವರ್ಷಗಳೊಳಗೇ ಅಂತಾರಾಷ್ಟ್ರೀಯ ಮಟ್ಟದಲ್ಲೂ ತ್ರಿವರ್ಣಧ್ವಜ ಹಾರಿಸಬಲ್ಲ ಸರ್ವಸಾಮರ್ಥ್ಯಗಳನ್ನೂ ಅವಳು ಮೈಗೂಡಿಸಿಕೊಂಡಿದ್ದಾಳೆ.

ಧಾರವಾಡದ ಚಿನ್ನದ ಜಿಂಕೆ

ರೇಣುಕಾ ಹೇಡೆ



ತಂದೆ ತಾಯಿ ಜೊತೆಗೆ ರೇಣುಕಾ

ರೇಣುಕಾ ಟ್ರ್ಯಾಕ್‌ಗಳಿಗಿಳಿದಿದ್ದು ಸಪ್ತಾಪುರದ ಶಾರದಾ ಬಾಲಕಿಯರ ಪ್ರೌಢಶಾಲೆಯಲ್ಲಿ ಆರನೇ ತರಗತಿಯಲ್ಲಿ ಓದುತ್ತಿದ್ದಾಗ. ಚಿಗರೆಯಂತೆ ಓಡಿದ ಆಕೆಗೆ ಯಾವ ಸ್ಪರ್ಧೆಯೂ ಸಮಸ್ಯೆಯೆನಿಸಲೇ ಇಲ್ಲ. ಓಡಿದ್ದನ್ನೆಲ್ಲವನ್ನೂ ಗೆದ್ದುಕೊಳ್ಳುತ್ತಲೇ ನಡೆದಳು ಈ 'ರಾಣಿ'. ಅಂದಿನಿಂದ ಓಡುವುದು, ಪ್ರಶಸ್ತಿ ಬಾಚಿಕೊಳ್ಳುವುದು ಆಕೆಯ ಪಾಲಿಗೆ ಹವ್ಯಾಸವಾಗಿಬಿಟ್ಟಿತು.

ಒಳ್ಳೇ ಗುರು ದೊರೆತರೆ ಅರ್ಧ ಗುರಿ ಸಾಧಿಸಿದಂತೇ ಅನ್ನುವುದು ತಪ್ಪಲ್ಲ. ರೇಣುಕಾ ಪಾಲಿಗಾದದ್ದೂ ಅಷ್ಟೇ. ಪೊಲೀಸ್ ಇಲಾಖೆಯ ಮಾಜಿ ಉದ್ಯೋಗಿ ರಾಯಕರ ಮಾರ್ಗದರ್ಶಕರಾಗಿ ಆಕೆಗೆ ದೊರೆತರು. ತಮ್ಮ ಮಗಳನ್ನು ಓಟಗಾರ್ತಿಯನ್ನಾಗಿ ಮಾಡುವ ಗುರಿಯೊಂದಿಗೆ ಮೈದಾನಕ್ಕೆ ಬರುತ್ತಿದ್ದ ರಾಯಕರರಿಂದ ಅಕರ್ಷಿತರಾದ ಹಲವು ಹುಡುಗಿಯರ ಪೈಕಿ ರೇಣುಕಾ ಒಬ್ಬಳು. ಮುಂದೆ ಅವರ ಮಗಳಿಗೆ ಎಂಜಿನಿಯರಿಂಗ್ ಸೀಟು ದೊರೆತು ಆಕೆ ಟ್ರ್ಯಾಕ್‌ಗೆ ವಿದಾಯ ಹೇಳಿದಾಗ ಈ 'ರಾಣಿ' ಅವರ ನೆಚ್ಚಿನ ಶಿಷ್ಯೆಯಾದಳು. ದಿನಕ್ಕೆ ಕನಿಷ್ಠ ಆರೇಳು ತಾಸು ಕಠಿಣ ಅಭ್ಯಾಸ ನಡೆಸುವ ರೇಣುಕಾಗೆ ಮೊನ್ನೆ ಬೆಂಗಳೂರಿನಲ್ಲಿ ಓಡಿದ್ದು, ಚಿನ್ನ ಗೆದ್ದಿದ್ದು ದೊಡ್ಡದೆನಿಸೇ ಇಲ್ಲ. ''ದಿನಾ ಐವತ್ತ ರೌಂಡ್ ಓಡತೇನ್ರೀ ಹತ್ತ ಸಾವಿರ ಮೀಟರ್ ತ್ರಾಸ್ ಅನಸ್ಲೇ ಇಲ್ಲ''. ನಿಜ ಕರ್ನಾಟಕ ಕಾಲೇಜಿನ ೪೧೦ ಮೀಟರ್ ಟ್ರ್ಯಾಕ್‌ನಲ್ಲಿ ೫೦ ಸುತ್ತು ಓಟವೆಂದರೆ ೨೦,೦೦೦ ಮೀಟರ್ ಆಗುತ್ತದೆ. ಹೀಗಿದ್ದಾಗ ೧೦,೦೦೦ ಮೀಟರ್ 'ರಾಣಿ' ಪಾಲಿಗೆ ಕಷ್ಟದ್ದಾಗಲೇ ಇಲ್ಲ!

ಯಶಸ್ಸಿನ ಹಾದಿ

ಈ 'ರಾಣಿ' ಕಂಡ ಮೊಟ್ಟಮೊದಲ ಯಶಸ್ಸು ನಾಲ್ಕೇ ವರ್ಷಗಳ ಹಿಂದೆ. ೧೯೯೪ರಲ್ಲಿ ವಿಜಾಪುರದಲ್ಲಿ ನಡೆದ ಬೆಳಗಾವಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟದ ೪೦೦ ಮೀಟರ್ ಓಟದಲ್ಲಿ ಎರಡನೇ ಸ್ಥಾನ ಪಡೆದ ನಂತರ ಆಕೆ ಹಿಂದೆ ನೋಡಿಲ್ಲ. ಮರು ವರ್ಷವೇ ಅದೇ ಕೂಟದಲ್ಲಿ ರೇಣುಕಾ ೪೦೦ ಹಾಗೂ ೮೦೦ ಮೀಟರ್ ಓಟಗಳೆರಡರಲ್ಲೂ ಮೊದಲಿಗರಾಗಿ ಗುರಿ ತಲುಪಿ ೧೫೦೦ ಮೀಟರ್ ಓಟದಲ್ಲೂ ಎರಡನೇ ಸ್ಥಾನ ಪಡೆದು ಕೂಟದ ವೈಯಕ್ತಿಕ ಪ್ರಶಸ್ತಿಯ ಮೇಲೆ ತಮ್ಮ ಹೆಸರು ಬರೆಯಿಸಿಕೊಂಡಾಗಲೇ ಮುಂಬರುವ ದಿನಗಳಲ್ಲಿ ಆಕೆ ಸಾಧಿಸಬಹುದಾದ್ದರ ಸೂಚನೆ ಸಿಕ್ಕಿತ್ತು.

೧೯೯೫ರ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ಹಾಗೂ ೧೯ನೇ ರಾಜ್ಯ ಮಟ್ಟದ ಮಹಿಳಾ ಕ್ರೀಡಾಕೂಟಗಳೆರಡರಲ್ಲೂ ೧೫೦೦ ಮೀಟರ್

ಓಟದಲ್ಲಿ ಚಿನ್ನದ ಪದಕ ಗೆದ್ದ ರೇಣುಕಾ, ನವಂಬರ್‌ನಲ್ಲಿ ಬಿಹಾರ್‌ದಲ್ಲಿ ನಡೆದ ೨೦ನೇ ಮಹಿಳಾ ರಾಷ್ಟ್ರೀಯ ಕ್ರೀಡಾಕೂಟದ ೧,೫೦೦ ಮೀಟರ್ ಓಟದಲ್ಲಿ ನಾಲ್ಕನೇ ಸ್ಥಾನ ಗಿಟ್ಟಿಸಿದಾಗ ಆಕೆಗಿನ್ನೂ ಹದಿಮೂರು ವರ್ಷ ವಯಸ್ಸು!

೧೯೯೬ ಅವಳ ಓಟಕ್ಕೆ 'ಪಕ್ವತೆ' ನೀಡಿದ ವರ್ಷ. ಮೊದಲು ವಿಜಾಪುರದಲ್ಲಿ ನಡೆದ ಬೆಳಗಾವಿ ವಿಭಾಗ ಮಟ್ಟದ ದಸರಾ ಕ್ರೀಡಾಕೂಟ ಹಾಗೂ ನಂತರ ಚಿತ್ರದುರ್ಗದಲ್ಲಿ ನಡೆದ ೨೦ನೇ ರಾಜ್ಯಮಟ್ಟದ ಮಹಿಳಾ ಕ್ರೀಡಾಕೂಟಗಳೆರಡರಲ್ಲೂ ಆಕೆಗೆ ೮೦೦, ೧೫೦೦ ಹಾಗೂ ೩,೦೦೦ ಮೀಟರ್‌ಗಳೆಲ್ಲದರಲ್ಲೂ ಚಿನ್ನದ ಪದಕ. ಅಷ್ಟೇ ಅಲ್ಲ, ಎರಡೂ ಕೂಟಗಳಲ್ಲಿ ಆಕೆಯೇ ವೈಯಕ್ತಿಕ ಚಾಂಪಿಯನ್.

ಕರ್ನಾಟಕ ಆರ್ಟ್ಸ್ ಕಾಲೇಜಿನಲ್ಲಿ ಪಿ.ಯು.ಸಿ. ಪ್ರಥಮ ವರ್ಷ ಓದುತ್ತಿದ್ದ ರೇಣುಕಾ, ತಾನು ಪಾಲ್ಗೊಂಡ ಮೊಟ್ಟಮೊದಲ ಅಂತರ ಕಾಲೇಜು ಅಥ್ಲೆಟಿಕ್ ಕೂಟದಲ್ಲಿಯೇ ೫,೦೦೦ ಮೀಟರ್ ಓಟದಲ್ಲಿ ೧೮ ನಿಮಿಷ ೩೮.೪೯ ಸೆಕೆಂಡುಗಳ ಹೊಸ ಕರ್ನಾಟಕ ವಿಶ್ವವಿದ್ಯಾಲಯ ದಾಖಲೆ ಬರೆದ ಸಾಧನೆ ಗೈದರು. ಈ ವರ್ಷವೂ ಅದೇ ಕಾಲೇಜಿನಲ್ಲಿ ಓದು ಮುಂದುವರೆಸಿ ಮತ್ತೆ ಅಂತರ ಕಾಲೇಜು ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದೇ ಆದರೆ ಇನ್ನೆರಡು ಮೂರು ದಾಖಲೆಗಳು ಮೂಲೆಗುಂಪಾಗುತ್ತಿದ್ದುದರಲ್ಲಿ ಎರಡು ಮಾತಿಲ್ಲ. ಆದರೆ ಕೆಲವು ವೈಯಕ್ತಿಕ ಕಾರಣಗಳಿಗಾಗಿ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯವೊಂದಕ್ಕೆ ಪ್ರವೇಶ ದೊರಕಿಸಿಕೊಂಡಿದ್ದರಿಂದ ಈ ಅವಕಾಶ ಕೈತಪ್ಪಿತು.

ಕಳೆದ ವರ್ಷದ ಫೆಬ್ರವರಿಯಲ್ಲಿ ಕಲಬುರ್ಗಿಯಲ್ಲಿ ನಡೆದ ಕರ್ನಾಟಕ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಶಿಪ್ಸ್‌ನ ೬ ಕಿ.ಮೀ. ಓಟದ ಸ್ಪರ್ಧೆಯಲ್ಲಿ ಎರಡನೇ ಸ್ಥಾನ ಸಂಪಾದಿಸಿದ ರೇಣುಕಾ ಬಿಹಾರ್‌ನ ಬುದ್ಧಗಯಾದಲ್ಲಿ ನಡೆದ ದ್ವಿತೀಯ ಫೆಡರೇಷನ್ ಕಪ್ ರಾಷ್ಟ್ರೀಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್ಸ್‌ನಲ್ಲಿ ಐದನೇ ಸ್ಥಾನ ಗಿಟ್ಟಿಸಿದಳು. ಅಲ್ಲಿಯ ಸಾಧನೆಯ ಆಧಾರದ ಮೇಲೆ ಇಟಲಿಯ ಟ್ಯೂರಿನ್‌ನಲ್ಲಿ ನಡೆದ ಐ.ಎ.ಎ.ಎಫ್. ವಿಶ್ವ ಕ್ರಾಸ್ ಕಂಟ್ರಿ ಚಾಂಪಿಯನ್ ಶಿಪ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಅವಕಾಶ. ವಿಶ್ವದ ಪ್ರಮುಖ ೫೦೦ ಸ್ಪರ್ಧಿಗಳೊಂದಿಗೆ ಸೆಣಸಬೇಕಾದ ರೇಣುಕಾಗೆ ದೊರೆತಿದ್ದು ೧೨೦ನೇ ಸ್ಥಾನ. ಈ ಸಾಧನೆಯೂ ಕಡಿಮೆಯದೇನಲ್ಲ.

ರಾಜ್ಯದ ಪ್ರತಿನಿಧಿ

ರೇಣುಕಾ ಇದೇ ಮೇ-ಜೂನ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ೪ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಐದು ಸಾವಿರ ಮೀಟರ್ ಓಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿದಳು. ಪದಕ ದೊರಕದಿದ್ದರೂ ಅಲ್ಲಿ ಆಕೆ ಪಡೆದ ಅನುಭವ ಅಪಾರ ಅದರ ಫಲವೇ ಮೊನ್ನೆ ಅದೇ ಟ್ರ್ಯಾಕ್‌ಗಳಲ್ಲಿ ದೊರಕಿದ ಎರಡು ಹೊನ್ನಿನ ಪದಕಗಳೆಂದರೆ ಅಚ್ಚರಿಪಡಬೇಕಿಲ್ಲ.

ಕರ್ನಾಟಕ ರಾಜ್ಯ ಅಮೆಚೂರ್ ಅಥ್ಲೆಟಿಕ್ಸ್ ಸಂಸ್ಥೆ ೧೮ಕ್ಕಿಂತ ಕಿರಿಯರ ೧೫೦೦ ಹಾಗೂ ೩,೦೦೦ ಮೀಟರ್ ಓಟಗಳೆರಡರಲ್ಲೂ ಪ್ರಥಮ ಸ್ಥಾನ ಗಿಟ್ಟಿಸಿದ 'ರಾಣಿ' ೨೦ಕ್ಕಿಂತ ಕಿರಿಯರ ೫೦೦೦ ಮೀ. ಓಟದಲ್ಲಿ ಎರಡನೇಯವಳಾದಳು. ಈ ಸಲದ ದಸರಾ ವಿಭಾಗೀಯ ಕೂಟದಲ್ಲೂ ಮಹಿಳೆಯರ ವೈಯಕ್ತಿಕ ಪ್ರಶಸ್ತಿ ಆಕೆಗೇ ಕಟ್ಟಿಟ್ಟ ಬುತ್ತಿ ಎಂದು ಬೇರೆ ಹೇಳಬೇಕಿಲ್ಲ ತಾನೇ? ರೇಣುಕಾ ೮೦೦, ೧೫೦೦ ಹಾಗೂ ೩,೦೦೦ ಮೀಟರ್ ಓಟಗಳೆಲ್ಲದರಲ್ಲೂ ಮೊದಲಿಗಳಾದಳು. ನಂತರ ಮೈಸೂರಿನಲ್ಲಿ ನಡೆದ ದಸರಾ ರಾಜ್ಯ ಮಟ್ಟದ ಸ್ಪರ್ಧೆಯಲ್ಲೂ ಈ 'ರಾಣಿ'ಗೇ ವೈಯಕ್ತಿಕ ಪಟ್ಟ. ಆ ಮೂರೂ ಸ್ಪರ್ಧೆಗಳಲ್ಲೂ ಆಕೆಯದೇ ದರಬಾರು.

ನಂತರ ಕಲಬುರ್ಗಿಯಲ್ಲಿ ನಡೆದ ರಾಜ್ಯ ಮಟ್ಟದ ಮಹಿಳಾ ಕ್ರೀಡಾಕೂಟದ ೧೫೦೦ ಹಾಗೂ ೩,೦೦೦ ಮೀಟರ್ ಓಟಗಳೆರಡರಲ್ಲೂ ಮೊದಲಿಗಳಾಗಿ ಗುರಿ ತಲುಪಿದ ರೇಣುಕಾ ೮೦೦ರಲ್ಲಿ ಎರಡನೇಯವಳಾದಳು. ಆದರೆ ಆಕೆಯ ಅಥ್ಲೆಟಿಕ್ ಜೀವನಕ್ಕೆ ಮಹತ್ವದ ತಿರುವು ನೀಡಿದ್ದು ಪುತ್ತೂರಿನಲ್ಲಿ ನಡೆದ ರಾಜ್ಯ ಅಥ್ಲೆಟಿಕ್



ಚಾಂಪಿಯನ್‌ಶಿಪ್ಸ್. ೫೦೦೦ ಹಾಗೂ ೧೦,೦೦೦ ಮೀಟರ್ ಓಟಗಳೆರಡರಲ್ಲೂ ಚಿನ್ನದ ಪದಕ ಬಾಚಿಕೊಂಡ ರೇಣುಕಾ ಅವೆರಡೂ ಸ್ಪರ್ಧೆಗಳಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಅರ್ಹತೆ ಸಂಪಾದಿಸಿಕೊಂಡಳು. ಅನಂತರ ಬೆಂಗಳೂರಿನಲ್ಲಿ ನಡೆದಿದ್ದು ಈಗ ಇತಿಹಾಸದ ಪುಟ ಸೇರಿದ ವಿಷಯವಾದರೂ, ಉತ್ತರ ಕರ್ನಾಟಕದವರಿಗೆಲ್ಲ ಮೈನವಿರೇಳಿಸಿದ ವಿಷಯ.

ಇತ್ತೀಚೆಗಷ್ಟೇ ಹುಬ್ಬಳ್ಳಿಯಲ್ಲಿ ನಡೆದ ಧಾರವಾಡ-ಹುಬ್ಬಳ್ಳಿ ಮಹಾನಗರಪಾಲಿಕೆ ಕ್ರೀಡಾಕೂಟದ ಕಾಲೇಜು ವಿಭಾಗದಲ್ಲಿ ೨೦೦, ೪೦೦ ಹಾಗೂ ೮೦೦ ಮೀಟರ್ ಓಟಗಳೆಲ್ಲದರಲ್ಲೂ ಚಿನ್ನದ ಪದಕ ಬಾಚಿಕೊಂಡ ರೇಣುಕಾ ಆ ಪೈಕಿ ಎರಡರಲ್ಲಿ ಹೊಸ ದಾಖಲೆ ಬರೆದಳು.

ಇಷ್ಟೆಲ್ಲ ಪದಕ-ಪ್ರಶಸ್ತಿ ಬಂದರೂ 'ರಾಣಿ'ಗೆ ಅಹಂಭಾವ ಇಲ್ಲ. ಮಾತಂತೂ ತೀರ ಕಡಿಮೆ. ಆಕೆಯ ಈ ಗುಣವನ್ನೇ ತಪ್ಪಾಗಿ ಅರ್ಥಮಾಡಿಕೊಂಡವರ ಸಂಖ್ಯೆ ಕಡಿಮೆಯೇನಿಲ್ಲ. ಮನಬಿಚ್ಚಿ ಮಾತನಾಡಿದಾಗ ಇಷ್ಟೆಲ್ಲ ಸಾಧನೆಗೈದವಳು ಈಕೆಯೇ ಎಂದೆನಿಸದೇ ಇರದು.


ಇದೇ ಎಪ್ರಿಲ್‌ನಲ್ಲಿ ಪಿ.ಯು.ಸಿ. ದ್ವಿತೀಯ ವರ್ಷದ ಪರೀಕ್ಷೆ ತೆಗೆದುಕೊಳ್ಳಲಿರುವ ರೇಣುಕಾಗೆ ಸದ್ಯ 'ಟ್ರ್ಯಾಕ್'ನಲ್ಲಿ ಅದಕ್ಕೂ ದೊಡ್ಡ ಪರೀಕ್ಷೆ. ಆಕೆಯ ಅಥ್ಲೆಟಿಕ್ ಭವಿಷ್ಯವನ್ನು ನಿರ್ಧರಿಸಲಿರುವ ಮಹತ್ವದ ಸಮಯವಿದು. ಅಪರಿಮಿತ ಪ್ರತಿಭೆ, ಸಾಮರ್ಥ್ಯ ಹೊಂದಿರುವ ಈ ಹದಿವಯದ ಬಾಲೆಗೆ ಅದೃಷ್ಟಲಕ್ಷ್ಮಿಯೂ ಬೆಂಬಲ ನೀಡಿದ್ದೇ ಆದರೆ ಸನಿಹದಲ್ಲೇ ಆಕೆ ದೇಶದ ಮನೆಮನೆ ಮಾತಾಗಬಲ್ಲಳು!

○ ವಸಂತ ಮುರ್ಡೇಶ್ವರ

ಮನೆಯ ಹಿನ್ನೆಲೆ

'ರಾಣಿ'ಗೆ ಮನೆಯಲ್ಲಿ ಪಾಲಕರಿಂದ ಪೂರ್ತಿ ಪ್ರೋತ್ಸಾಹ. ಸುಮಾರು ಎರಡು ದಶಕಗಳ ಕಾಲ ನ್ಯಾಯಾಲಯದಲ್ಲಿ ಟೈಪಿಸ್ಟ್ ಆಗಿ ಸೇವೆ ಸಲ್ಲಿಸಿದ್ದ ತಂದೆ ಮಸನಪ್ಪ ಹೇಡೆ ಈಗ ಆ ಕೆಲಸಕ್ಕೆ ವಿದಾಯ ಹೇಳಿ ಜ್ಯೋತಿಷ್ಯಾಸ್ತ್ರ ಕೈಗೆತ್ತಿಕೊಂಡಿದ್ದಾರೆ. ಅದರಲ್ಲಿ ಒಳ್ಳೇ ಹೆಸರನ್ನು ಗಳಿಸಿದ್ದಾರೆ. ತಾಯಿ ಚನ್ನಮ್ಮ ಸನಿಹದ ಅಮ್ಮಿನಭಾವಿ ಶಾಲೆಯಲ್ಲಿ ಶಾರೀರಿಕ ಶಿಕ್ಷಕಿ. ತಮ್ಮ ಶಾಲಾ ದಿನಗಳಲ್ಲಿ ಕ್ರೀಡೆಯಲ್ಲಿ ಸಾಕಷ್ಟು ಯಶಸ್ಸು ಕಂಡಿದ್ದ ಅವರ ಹಾದಿಯಲ್ಲೇ ಪ್ರಾರಂಭಿಸಿದರೂ ರೇಣುಕಾ ಅವರಿಗಿಂತ ಸಾಕಷ್ಟು ದೂರ ಕ್ರಮಿಸಿದ್ದು ಅವರ ಪಾಲಿಗಂತೂ ಹೆಮ್ಮೆಯ ವಿಷಯ. ರೇಣುಕಾ ಸಹೋದರ ಶರಣಕುಮಾರ ಸಹ ಶಾಲಾ ದಿನಗಳಲ್ಲಿ ಉತ್ತಮ ಕ್ರೀಡಾಪಟು. ಸದ್ಯ ಹಂಪಿ ವಿಶ್ವವಿದ್ಯಾಲಯದಲ್ಲಿ ಶಿಲ್ಪಶಾಸ್ತ್ರದಲ್ಲಿ ಎರಡನೇ ವರ್ಷದಲ್ಲಿ ಓದುತ್ತಿದ್ದಾನೆ.

ಪದಬಂಧ - ೨



ಪದಬಂಧ ೧ರ ಸರಿಯುತ್ತರ

ಎಡದಿಂದ ಬಲಕ್ಕೆ:

೧. ರಂಗನಾಯಕಿ, ೪. ಅಮರದೀಪ, ೭. ಯರಕ, ೯. ವರಾಹ, ೧೦. ಶಕ, ೧೧. ರಜೆ ದಿವಸ, ೧೪. ಬ್ಬದಿ, ೧೬. ಕಸ, ೧೮. ಮಡಿವಂತಿಕೆ, ೨೧. ಲವ, ೨೨. ಹಜಾರ, ೨೩. ಸರಕು, ೨೪. ಧನ ಸೌಲಭ್ಯ, ೨೫. ರಂಗನತಿಟ್ಟು

ಮೇಲಿನಿಂದ ಕೆಳಕ್ಕೆ :

೨. ಗಣನಾಯಕ, ೩. ಯಮಕಿಂಕರ, ೫. ಮರುದಿವಸ, ೬. ದೀಪದ ಹಬ್ಬ, ೮. ನದಿ, ೧೦. ಶತಕ, ೧೨. ಜೆರುಂಡಿ, ೧೩. ವಸತಿ, ೧೫. ದಿರವ, ೧೭. ಸಹಭೋಜನ, ೧೮. ವರಣಕಾಲ, ೧೯. ವಂಶ, ೨೦. ಕೆಸರು ಜಾಗ, ೨೧. ಲಕುಮಿಪತಿ.

ಎಡದಿಂದ ಬಲಕ್ಕೆ

೧. ಸರ್ಪದ ರೋಷವನ್ನು ತಮ್ಮ ನಟನೆಯ ಮೂಲಕ ತೋರಿಸಿದ ವಿಷ್ಣುವರ್ಧನರ ಪ್ರಥಮ ಚಿತ್ರ .... (೫)
೪. ಕಾರ್ಮೋಡವಿಲ್ಲದಿದ್ದರೂ ಬಿಸಿಲಿನಲ್ಲಿ ಮಳೆ ಬಂದಾಗ, ದಿಗಂತದಲ್ಲಿ ಮೂಡಿದ ಏಳು ಬಣ್ಣಗಳ ಸುಂದರ ಚಿತ್ರ .... (೫)
೭. ಪ್ರಿಯತಮನ ಮನ ತಣಿಸಲು ಗರಿ ಬಿಚ್ಚಿ ಕುಣಿದ ಹೆಣ್ಣು ನವಿಲು (೩)
೯. ಅಡುಗೆ ಮಾಡಲು ಬಳಸಿದ ಮಣ್ಣಿನ ಮಡಕೆ .... (೩)
೧೦. ಆಲೆಮನೆಯಲ್ಲಿ ಕಬ್ಬು ತಿನ್ನಲು ಅವಸರದಿಂದ ಬಂದ ಗಜ ...... (೨)
೧೧. ಸುರಲೋಕವನ್ನು ಮೀರಿಸುವಂತದ್ದು ಅತ್ಯಂತ ಅಂದವಾಗಿದೆ... (೫)
೧೪. ಹತ್ತಿಯಿಂದ ಹೊಸೆದು ದೀಪ ಹಚ್ಚುವ ನೂಲಿನಂತದ್ದು ತಿರುಗಿದೆ.. (೨)
೧೬. ಅವಸರದಲ್ಲಿ ತಾಳಿ ಕಟ್ಟಲು ನಿಂತ ಮದುವೆ ಗಂಡು ತಿರುಗಿದ್ದಾನೆ. (೨)
೧೮. ನೀರಿನಲ್ಲಿಯೇ ಹುಟ್ಟು ಪಡೆದ ವಿಜ್ಞಾನಕ್ಕೆ ಬೇಕಾದ ರಾಸಾಯನಿಕ ವಸ್ತು.. (೫)
೨೧. ಕುಂಡಲಿ ಬರೆಯುವಾಗ ಮಂಗಳ ಗ್ರಹ ತಿರುಗಿದೆ.............. (೨)
೨೨. ವಿನಯಶೀಲತೆಯಿಂದ ನೋಡಿದ ಕಣ್ಣು .... (೩)
೨೩. ಮನಪೂರ್ವಕವಾಗಿ ಮಾಡಿದ ನಮಸ್ಕಾರ .... (೩)
೨೪. ಯುದ್ಧ ಭೂಮಿಯಲ್ಲಿ ಶಬ್ದ ಮೊಳಗಿಸಿದ ತುತ್ತೂರಿ............ (೫)
೨೫. ಅಸುರರಿಗೂ ತಲೆದೋರಿಸಿದ ಸ್ಥಾನಮಾನಗಳ ವೈಶಮ್ಯ........ (೫)

ಮೇಲಿನಿಂದ ಕೆಳಕ್ಕೆ

೨. ಸುಣ್ಣ, ಬೆಲ್ಲ, ಉಸುಕು ಗಾರೆಯಲ್ಲಿ ಅರೆದು ಕಟ್ಟಿದ ಗೃಹ.... (೫)
೩. ಹಾಡಲು ಬಂದವನಿಗೆ ಬಾಯ್ತುಂಬ ಹೊಗಳಿ ಕೊಂಡಾಡು.. (೫)
೫. ಮರೆಯಲಾರದ ಅತೀ ದೊಡ್ಡ ಶಹರ...................... (೫)
೬. ಬಿಂಕದಿಂದ ಮೈಮನ ಕುಣಿಸುತ್ತ ಅತ್ತಿತ್ತ ನಲೆದಾಡಿದ ರಮಣಿ.. (೫)
೮. ಸುಖ-ದುಃಖ ಹೇಳಿದರೂ, ವಸೂಲಿ ಮಾಡಿದ ಕರ ತಿರುಗಿದೆ.. (೨)
೧೦. ತನ್ನ ತಪ್ಪು ಮುಚ್ಚಿಟ್ಟು, ಕಾಟಾಚಾರ ತಪ್ಪಿಸಿಕೊಳ್ಳಲು ಮತ್ತೊಬ್ಬರಿಗೆ ಹೇಳಿದ ಬುದ್ಧಿ .... (೩)
೧೨. ಜ್ಯೋತಿಷ್ಯಗಾರನು ಕರಗತ ಮಾಡಿಕೊಂಡ ಇದು ಒಂದು ಶಾಸ್ತ್ರ.. (೩)
೧೩. ಧಗಧಗಿಸುವ ಬೆಂಕಿಯಲ್ಲಿ ಮನೆ ಸುಟ್ಟಿದ್ದು.................... (೩)
೧೫. ಬಸವಳಿದರೂ ಬಿಡದೇ ನಡೆಸಿದ ಜೀವನ .... (೩)
೧೭. ಮಾನವನು ಮಾಡಿದ ಕಾಡು ಪ್ರಯಾಣ.................... (೫)
೧೮. ಜಾತ್ರೆಯಲ್ಲಿ ಕೂಡಿದ ಮನುಜರ ಗುಂಪು.................... (೫)
೧೯. ಅಂಜಲಿ ತರಲು ಹೋದ ನೀರು.............................. (೨)
೨೦. ಕೊನೆಗೂ ಕಿಂಡಿಯಲ್ಲಿ ಕೃಷ್ಣನನ್ನು ನೋಡಿದ ದಾಸವರೇಣ್ಯ.. (೫)
೨೧. ಜಗಳ ಗದ್ದಲದಿಂದ ಕುಂಠಿತಗೊಂಡ ಮಾನವರ ಬದುಕು ... (೫)

○ ಜವಳಿ ವೀರಣ್ಣ

(ಉತ್ತರ : ಮುಂದಿನ ಸಂಚಿಕೆಯಲ್ಲಿ)

ಕಿಲಕಿಲ



ವೈರಿ

ಕೀಟದ ವೈರಿ
ಆದರ ಹೆಸರು ಹೇಳ್ರಿ?
ಹಳ್ಳದೆಡೆಗೆ ನಡಿರಿ
ಕಣ್ಣೀಲಿ ನೀವೇ ನೋಡ್ರಿ
ಕಪ್ಪೆಯ ವೈರಿ
ಆದರ ಹೆಸರು ಹೇಳ್ರಿ?
ಹಳ್ಳದೆಡೆಗೆ ನಡಿರಿ
ಕಣ್ಣೀಲಿ ನೀವೇ ನೋಡ್ರಿ
ಹಾವಿನ ವೈರಿ
ಆದರ ಹೆಸರು ಹೇಳ್ರಿ?
ಕಾಡಿನೆಡೆಗೆ ನಡಿರಿ
ಕಣ್ಣೀಲಿ ನೀವೇ ನೋಡ್ರಿ
ನವಿಲಿನ ವೈರಿ
ಆವನ ಹೆಸರು ಹೇಳ್ರಿ?
ಕಾಡಿನೆಡೆಗೆ ನಡಿರಿ
ಕಣ್ಣೀಲಿ ನೀವೇ ನೋಡ್ರಿ.

[**ಉತ್ತರ**: ಕಪ್ಪೆ, ಹಾವು, ನವಿಲು, ಬೇಟೆಗಾರ]

- ಅಮೃತ ಎಸ್. ಕುಂಬಾರ, ನಿರ್ಣಾ

ಮಗ್ಗಿ ಸ್ಪರ್ಧೆ

1	2	3	4	5	6	7	8	9	10
2	4	6	8	10	12	14	16	18	20
3	6	9	12	15	18	21	24	27	30
4	8	12	16	20	24	28	32	36	40
5	10	15	20	25	30	35	40	45	50
6	12	18	24	30	36	42	48	54	60
7	14	21	28	35	42	49	56	63	70
8	16	24	32	40	48	56	64	72	80
9	18	27	36	45	54	63	72	81	90
10	20	30	40	50	60	70	80	90	100

ಇದೊಂದು ವಿನೂತನ ಸ್ಪರ್ಧೆ. ಗಣಿತದ ಆಧಾರಸ್ತಂಭವಾದ ಮಗ್ಗಿ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸುವುದು ಈ ಸ್ಪರ್ಧೆಯ ಉದ್ದೇಶ. ❐ ೧೫ ವರ್ಷದೊಳಗಿನ ಎಲ್ಲಾ ಮಕ್ಕಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ❐ ಮೇಲೆ ನೀಡಿರುವ ೧ರಿಂದ ೧೦ರ ವರೆಗಿನ ಮಗ್ಗಿಯನ್ನು ನೀವು ಕಲಿತರೆ ಸಾಕು. ನಿಮಗೆ ಒಂದು ತಿಂಗಳು 'ಬಿಸಿಲ ಬದುಕು' ಮಾಸಪತ್ರಿಕೆಯನ್ನು ಬಹುಮಾನವಾಗಿ ಕಳಿಸಲಾಗುವುದು. ❐ ನೀವು ೧ರಿಂದ ೧೦ರ ವರೆಗೆ ಮಗ್ಗಿ ಕಲಿತ ಬಗ್ಗೆ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಂದ ಶಿಫಾರಸು ಪತ್ರ ಪಡೆದು ನಮಗೆ ಕಳಿಸಿ.

ಸಾಗರ



ಆಹಾ! ಸಾಗರ
ಎಂಥ ಸುಂದರ
ನೀ ತೂಗುವ ತೆರೆ
ನೀಡುವುದು ಜನರಿಗೆ ಕರೆ
ನಿನ್ನಲ್ಲಿ ಸಿಗುವುದು ಮುತ್ತು
ಜನರು ಕಳೆಯುವರು ಹೊತ್ತು
ನಿನ್ನಲ್ಲಿ ಸಿಗುವುದು ಉಪ್ಪು
ಜನರು ಬಳಸುತ್ತಾರೆ ಕಪ್ಪೆ ಚಿಪ್ಪು
ನಿನ್ನಲ್ಲಿ ಎಷ್ಟು ಶಾಂತಿ
ಜನರಿಗೆ ಅಷ್ಟು ವಿಶ್ರಾಂತಿ
ಕವಿಗಳು ಇಲ್ಲಿಗೆ ಬರುವರು
ನಿನ್ನ ನೋಡಿ ರಸಿಕರಾಗುವರು

- ಸವಿತಾ ಹೂಗಾರ
(ಪ್ರಥಮ ಪಿ.ಯು.ಸಿ.)

ಹೊಸ ವರ್ಷಕ್ಕೆ ಸ್ವಾಗತ

ಕಳೆದ ತಿಂಗಳು ''ಹೊಸ ವರ್ಷಕ್ಕೆ ಸ್ವಾಗತ'' ಕೋರಿದ ರೀತಿಯನ್ನು ಬರೆದು ಕಳಿಸಲು ಮಕ್ಕಳಿಗೆ ಸೂಚಿಸಿದ್ದೆವು. ಸಾಕಷ್ಟು ಸಂಖ್ಯೆಯಲ್ಲಿ ಮಕ್ಕಳು ಈ ಬಗ್ಗೆ ಬರೆದಿದ್ದಾರೆ. ಕೆಲವು ಆಯ್ದ ಬರಹಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಈ ಬಾರಿಯ ವಿಷಯ ಹಾಗೂ ವಿವರಗಳಿಗೆ ಇದೇ ಸಂಚಿಕೆಯ ೬೮ನೇ ಪುಟ ನೋಡಿ.

ಮಕ್ಕಳ ಕಥೆ ಬರೆಯುವೆ

ಹೊಸ ವರ್ಷದ ಮಾರ್ಚ್ ಹೊತ್ತಿಗೆ ಆಗುವ ಪ್ರಳಯ(?)ವನ್ನು ಇದಿರು ನೋಡುತ್ತಿದ್ದೇನೆ. ಈ ಕುರಿತು ಪತ್ರಿಕೆಗಳಲ್ಲಿ ಬಂದ ಲೇಖನಗಳನ್ನೆಲ್ಲ ಜೋಡಿಸಿ ಅಚ್ಚುಕಟ್ಟಾದ ಫೈಲ್ ಮಾಡುವೆ. ನೂತನ ವರ್ಷದಲ್ಲಿ ಮಕ್ಕಳ ಕಥೆಗಳನ್ನು ಬರೆಯ ಬೇಕೆಂದಿರುವೆ. ಈಗಾಗಲೇ ಕವಿತೆ ಬರೆದಿದ್ದೇನೆ. ಇತ್ತೀಚೆಗೆ ಜರುಗಿದ ವಿಜಾಪೂರ ಜಿಲ್ಲಾ ಮಕ್ಕಳ ಮೇಳದಲ್ಲಿ ಕವಿತೆ ವಾಚಿಸಿ ಪ್ರಶಸ್ತಿ ಫಲಕ ಹಾಗೂ ಹಿರಿಯರ ಮೆಚ್ಚುಗೆ ಪಡೆದಿರುತ್ತೇನೆ. ಫೆಬ್ರವರಿಯಲ್ಲಿ ಮನೆಯವರೊಂದಿಗೆ ರಾಜ್ಯ ಪ್ರವಾಸ ಮಾಡಬೇಕೆಂಬ ವಿಚಾರವಿದೆ.

- ಕೈಲಾಸಯ್ಯ ಹಿರೇಮಠ (೭ನೇ ತರಗತಿ)
ಕಡಣಿ

ಕಂದೀಲು ಬೆಳಕಲ್ಲಿ ಓದು

೧೯೯೮ ಹೊಸ ವರ್ಷದಲ್ಲಿ ನಾನು ಚೆನ್ನಾಗಿ ಅಭ್ಯಾಸ ಮಾಡಿ ಮಾರ್ಚ್‌ದಲ್ಲಿ ನಡೆಯುವ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾಗಬೇಕೆಂದು ಮಾಡಿದ್ದೇನೆ. ರಜೆಯಲ್ಲಿ ಚಾರಣ ಶಿಬಿರಕ್ಕೆ ಸೇರಬೇಕೆಂದು ಮಾಡಿದ್ದೇನೆ. ಚಾರಣ ಶಿಬಿರದಲ್ಲಿ ದಿನಾ ನಾನು ನೋಡಿದ್ದನ್ನು, ಮಾಡಿದ್ದನ್ನು ಡೈರಿಯಲ್ಲಿ ಬರೆಯುತ್ತೇನೆ. ಮುಂದಿನ ತರಗತಿಯ ಕೆಲವು ಪುಸ್ತಕವನ್ನು ಒಯ್ದು ರಾತ್ರಿ ಕಂದೀಲು ದೀಪದ ಬೆಳಕಿನಲ್ಲಿ ಓದುತ್ತೇನೆ. ಹರಟೆ, ವಿಚಾರ ವಿಮರ್ಶೆ ಸ್ಪರ್ಧೆ (ಕ್ವಿಜ್) ಯಲ್ಲಿ ಭಾಗವಹಿಸುತ್ತೇನೆ.

- ಬಸವರಾಜಗೌಡ ಪಾಟೀಲ (೭ನೇ ತರಗತಿ)
ಬಲಕುಂದಿ

ಪ್ರಳಯ ಭೀತಿ ತೊಲಗಲಿ

ಹೊಸ ವರುಷ ಸರ್ವರಿಗೂ ಸುಖ-ಶಾಂತಿ ನೆಮ್ಮದಿ ನೀಡಲಿ ಎಂದು ಆಶಿಸುತ್ತೇನೆ. ಜನರಲ್ಲಿ ಭೂಕಂಪ, ಪ್ರಳಯ, ಯುದ್ಧ, ಅಸೂಯೆ ಇವುಗಳ ಭೀತಿ ತೊಲಗಲಿ. ಹೊಸ ವರ್ಷಕ್ಕೆ ಹೊಸ ಚೈತನ್ಯ ನೀಡಲಿ. ಹೊಸ ಸರಕಾರ ಬಲು ಬೇಗನೆ ದೇಶ ಸುಭಿಕ್ಷವಾಗಲಿ ಎಂದು ಹಾರೈಸುವೆ.

ತಾಯಿ-ತಂದೆಯರ ಸೇವೆಗಾಗಿ ನಾನು ದೃಢ ಸಂಕಲ್ಪ ಮಾಡುವೆ. ಲೋಕಕಲ್ಯಾಣಕ್ಕಾಗಿ ಏರ್ಪಡಿಸಿರುವ ಗಾಯತ್ರಿ ಹೋಮಕ್ಕಾಗಿ ನನ್ನ ಕೈಲಾದ ಕಾಣಿಕೆ ಅರ್ಪಿಸುವೆ. ಅಂಗವಿಕಲ ಮಕ್ಕಳಿಗಾಗಿ ಮಿತಿಮೀರಿ ಶ್ರಮಿಸಲಾರಂಭಿಸುವೆ. ಭಗಿನಿಯರ ಕಂಡರೆ ಮಮತೆ ತೋರಿ ನನ್ನ ಹೃದಯಪೂರ್ವಕ ಸಹಾಯ ಮಾಡಲು ಪ್ರಯತ್ನಿಸುವೆ. ಬಡವರ ಸೇವೆ-ಜನಾರ್ಧನ ಸೇವೆಯಲ್ಲವೇ ಇಹ-ಪರದಲ್ಲೂ ಮೋಕ್ಷವಿಲ್ಲವೇ?

- ಎಸ್. ರಮೇಶ್ (೧೦ನೇ ತರಗತಿ)
ಮದ್ದೂರು

ಹೆಚ್ಚು ಅಂಕ

ಹೊಸ ವರ್ಷದಲ್ಲಿ ಶಾಲೆಯ ಪುಸ್ತಕಗಳನ್ನು ಮತ್ತೊಮ್ಮೆ ಮನನ ಮಾಡಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಪ್ರಯತ್ನಿಸುವೆ.

- ಎಚ್.ಎಸ್. ಪ್ರವೀಣಕುಮಾರ
(೬ನೇ ತರಗತಿ), ಕರಜಗಿ

ಹಿರಿಯರಿಗೆ ವಿಧೇಯಳು

ಹೊಸ ವರುಷ ಮನೆಯನ್ನು ಶುಚಿಗೊಳಿಸಿ ಅಲಂಕಾರಗೊಳಿಸುತ್ತೇನೆ. ಚೆನ್ನಾಗಿ ಓದಿ ಎಲ್ಲರೊಂದಿಗೆ ಸ್ನೇಹದಿಂದ ಬೆರೆತು, ಗುರು ಹಿರಿಯರಿಗೆ ವಿಧೇಯಳಾಗಿ ಆದರ್ಶ ಹುಡುಗಿಯಾಗಿ ಬಾಳಲು ಇಚ್ಛಿಸುತ್ತೇನೆ. ಮುಂದೆ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿ ಒಳ್ಳೆಯ ಪ್ರಾಮಾಣಿಕ ಅಧಿಕಾರಿಯಾಗಲು ಇಷ್ಟಪಡುತ್ತೇನೆ.

- ವಿಮಲಾ ಎಂ.ಎನ್. (೯ನೇ ತರಗತಿ)
ಆವಿನಹಳ್ಳಿ

ಇದು ನಮ್ಮೂರ ರೀತಿ

ನಮ್ಮೂರಲ್ಲಿ ಪ್ರತಿ ವರ್ಷ ಅಜ್ಜನ ಗೊಂಬೆಯನ್ನು ಮಾಡಿ ಅದರೊಳಗೆ ಸ್ಫೋಟಕ ವಸ್ತುಗಳನ್ನಿಟ್ಟು ಹೊಸವರ್ಷ ಸಮೀಪಿಸುತ್ತಿದ್ದಂತೆ ಅದನ್ನು ಸಿಡಿಸಿ ಆ ಇಡೀ ರಾತ್ರಿ ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮವನ್ನು ಮಾಡುತ್ತಾ ಸಂತೋಷದಿಂದ ಕುಣಿದು ಕುಪ್ಪಳಿಸುತ್ತಿದ್ದೆವು. ಆದರೆ ಈ ವರ್ಷ ಊರಿನ ಜನತೆ ಎಲ್ಲಾ ಕೂಡಿ ಹೊಸ ವರ್ಷವನ್ನು ಹೊಸ ರೀತಿಯಿಂದ ಸ್ವಾಗತಿಸಲು ನಿರ್ಧರಿಸಿದ್ದೇವೆ. ಅದೇನೆಂದರೆ ಕೆಡುತ್ತಿರುವ ಪರಿಸರದ ಬಗ್ಗೆ ಜನಜಾಗ್ರತೆ ಮೂಡಿಸಲು ಪ್ರತಿಯೊಬ್ಬರೂ ಮನೆಯಲ್ಲಿ ಒಂದೊಂದು ಕಲ್ಪವೃಕ್ಷ ಹಾಗೂ ಇತರ ಗಿಡಗಳನ್ನು ನೆಡೆವುದು ಅಲ್ಲದೆ ನಾವು ಗೆಳೆಯರೆಲ್ಲಾ ಕೂಡಿ ಊರ ವಿದ್ಯಾವಂತ ಹಿರಿಯರ ಪ್ರೋತ್ಸಾಹದಿಂದ ''ನಿಸರ್ಗ ದೇವತೆ'' ಎಂಬ ನಾಟಕವನ್ನು ಮಾಡಬೇಕೆಂದಿದ್ದೇವೆ.

ನಮ್ಮೂರು ಇತರ ಊರುಗಳಿಗೆ ಮಾದರಿಯಾಗಿರಬೇಕೆಂಬುದೇ ನಮ್ಮ ಒಕ್ಕೊರಲಿನ ನಿರ್ಧಾರ. ಹೊಸವರ್ಷಕ್ಕಾಗಿ ನನ್ನ ಯೋಜನೆ: ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಬೇಕು. ಸಮಾಜಕ್ಕೆ ನನ್ನಿಂದ ಸಾಧ್ಯವಾದಷ್ಟು ಸೇವೆ ಸಲ್ಲಿಸಬೇಕು. ಕಲಿಯುತ್ತಿರುವ ಶಾಲೆಗೂ ನನ್ನ ಊರಿಗೂ ಹೆಸರು ತರಬೇಕು.

- ಎನ್.ಬಿ. ಮಹೇಶ್ ಪೂಜಾರಿ (೯ನೇ ತರಗತಿ)
ಆನಗೋಡು (ದ.ಕ.)

ಹೊಸ ವರುಷ ಎನಿಸುತ್ತಿಲ್ಲ!

೧೯೯೭ನೇ ಇಸವಿ ಮುಗಿದು ೧೯೯೮ನೇ ಇಸವಿ ಬಂದಿದೆ. ಆದರೆ ನನಗೆ ಇದು ಹೊಸ

ವರುಷ ಎನಿಸುತ್ತಿಲ್ಲ. ಏಕೆಂದರೆ ಯುಗಾದಿಯಲ್ಲಿ ಹಣ್ಣೆಲೆಗಳು ಉದುರಿ ಹಸಿರು ಎಲೆಗಳು ಹುಟ್ಟುತ್ತದೆ ಹಾಗೂ ಪ್ರಕೃತಿಯಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ. ಹೀಗಾಗಿ ನನಗೆ ಇದು ಹೊಸ ವರುಷ ಎನ್ನಿಸುತ್ತಿಲ್ಲ. ಯುಗಾದಿಯೇ ಹೊಸ ವರುಷ ಎನ್ನಿಸುತ್ತದೆ.

- ಬಿ.ಆರ್. ರಶ್ಮಿ (೭ನೇ ತರಗತಿ)
ಬೆಂಗಳೂರು

ಅನಕ್ಷರತೆ ತೊಲಗಿಸುವೆ

ಹೊಸ ವರ್ಷವನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ಈ ವರ್ಷದಲ್ಲಿ ನಾನು ಸ್ವಯಂ ಸೇವಕನಾಗಿ ಅನಕ್ಷರತೆಯನ್ನು ತೊಲಗಿಸುವೆ.

- ಎಂ. ವೀರೇಶ (೮ನೇ ತರಗತಿ)
ಹೊಸ ಮೋಕಾ

ಶಾಲೆಗೆ ಚಕ್ಕರ್ ಇಲ್ಲ!

೧೯೯೮ನೇ ಹೊಸ ವರ್ಷವನ್ನು ತುಂಬಾ ಹರ್ಷದಿಂದ ಸ್ವಾಗತಿಸುತ್ತೇನೆ ಹಾಗೂ ಹಿಂದಿನ ೧೯೯೭ನೇ ವರ್ಷದಲ್ಲಿ ಶಾಲೆಗೆ ಕೊಟ್ಟ ಚಕ್ಕರ್‌ಗಳನ್ನು ಈ ವರ್ಷ ಕಡಿಮೆ ಮಾಡಿ ಚೆನ್ನಾಗಿ ಅಭ್ಯಾಸ ಮಾಡಿ ರ್‍ಯಾಂಕ್ ಪಡೆಯಬೇಕು ಮತ್ತು 'ಬಿಸಿಲ ಬದುಕು' ಮಾಸಪತ್ರಿಕೆಯನ್ನು ಚಾಚೂ ತಪ್ಪದೇ ಓದಿ ಜ್ಞಾನಭಂಡಾರ ಹೆಚ್ಚಿಸಿಕೊಳ್ಳಬೇಕೆಂದು ದೃಢ ಸಂಕಲ್ಪ ಮಾಡಿದ್ದೇನೆ.

- ಕೆ.ಎನ್. ರಂಗನಾಥ ಹೆಗ್ಗಡೆ
(೭ನೇ ತರಗತಿ), ಹರಪನಹಳ್ಳಿ

ಬೆಂಗಳೂರಿಗೆ ಪ್ರವಾಸ

ಹೊಸ ವರ್ಷದಲ್ಲಿ ನನಗೆ ಏಳನೇ ವರ್ಗದ ಪಬ್ಲಿಕ್ ಪರೀಕ್ಷೆಯ ಹೊಸ ಅನುಭವ. ಪ್ರಜಾರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಭಾಷಣ ಮಾಡಿ ದೇಶಭಕ್ತಿಗೀತೆಗಳನ್ನು ಹಾಡಬೇಕೆಂಬ ಲವಲವಿಕೆ. ತಂದೆಯರ ಜೊತೆಯಲ್ಲಿ ಬೆಂಗಳೂರಿಗೆ ಹೋಗುವ ಕಾರ್ಯಕ್ರಮ. ಬೆಂಗಳೂರಲ್ಲಿ ವಿಧಾನಸೌಧ, ಹೈಕೋರ್ಟ್, ಲಾಲಬಾಗ್, ಕಬ್ಬನಪಾರ್ಕ್‌ನಲ್ಲಿಯ ಪುಟಾಣಿಗಳ ರೈಲಿನಲ್ಲಿ ಕುಳಿತುಕೊಳ್ಳುವ ಅಭಿಲಾಷೆ. ಶ್ರೀ ಅಮಿತ್‌ರಾಜ್ ಅವರು ನಿರ್ಮಿಸುತ್ತಿರುವ ದೂರದರ್ಶನ ಧಾರಾವಾಹಿ 'ಟೀಚರ್' ದಲ್ಲಿ ಮಕ್ಕಳ ಪಾತ್ರದಲ್ಲಿ ಕಾಣಿಸಿಕೊಳ್ಳುವ ಅಭಿಲಾಷೆ.

- ಇಮ್ತಿಯಾಜ ಎಂ. ಕೆಸರಟ್ಟಿ (೭ನೇ ತರಗತಿ)
ಮುಧೋಳ

ಶಾಲೆಗೆ ಪ್ರಥಮ

೧. ಶಾಲೆಗೆ ಪ್ರಥಮ ಬರಬೇಕೆಂದಿದ್ದೇನೆ.
೨. 'ಬಿಸಿಲ ಬದುಕು' ಪತ್ರಿಕೆಯನ್ನು ತಪ್ಪದೆ ಓದಿ ಕ್ವಿಜ್‌ನಲ್ಲಿ ಭಾಗವಹಿಸಿ ಬಹುಮಾನ ಪಡೆಯಬೇಕೆಂದಿದ್ದೇನೆ.
೩. ಬೇಸಿಗೆ ರಜೆಯನ್ನು ತಂದೆ ತಾಯಿಗಳೊಂದಿಗೆ ಪ್ರವಾಸ ಮಾಡಬೇಕೆಂದಿದ್ದೇನೆ.
೪. ಬೇಸಿಗೆ ರಜೆಯಲ್ಲಿ ಮುಂದಿನ ತರಗತಿಯ ಪುಸ್ತಕ ಓದಿ ಮುಗಿಸಬೇಕೆಂದಿದ್ದೇನೆ.
೫. ಮನೆಗೆಲಸಗಳಲ್ಲಿ ತಂದೆ ತಾಯಿಗಳಿಗೆ ಸಹಾಯ ಮಾಡಬೇಕೆಂದಿದ್ದೇನೆ.

- ಅಜಿತ್ ಎನ್. ಹಡಪದ (೩ನೇ ತರಗತಿ)
ಬಾವೂರ

ಒಳ್ಳೆಯದನ್ನೆಲ್ಲಾ ಹುಡುಕಿ...

ಈ ಹೊಸ ವರುಷದಲ್ಲಿ ಹಿಂದಿನ ವರ್ಷ ನಡೆದು ಬಂದ ದಾರಿಯನ್ನು ಪರಿಶೀಲಿಸಿ ಹಂಸಕ್ಷೀರ ನ್ಯಾಯದಂತೆ ಕೆಟ್ಟದನ್ನು ಬಿಟ್ಟು ಒಳ್ಳೆಯದನ್ನು ಮುಂದುವರಿಸಿಕೊಂಡು ಬಂದು ಇನ್ನೂ ಒಳ್ಳೆಯದೆಷ್ಟು ಎಂತ ಹುಡುಕಿ ಅವನ್ನೂ ಜೀವನದಲ್ಲಿ ಅಳವಡಿಸಿಕೊಂಡು, ಉತ್ತಮವಾಗಿ ಅಭ್ಯಾಸ ಮಾಡಿ ೧೦ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಪಾಸಾಗಿ ನಮ್ಮ ಶಾಲೆಗೂ, ಶಿಕ್ಷಕರಿಗೂ ಹೊತ್ತು ಹೆತ್ತು ಸಲುಹಿದ ಪಾಲಕರಿಗೂ ಕೀರ್ತಿ ತರುವ ಹಾಗೂ ಶಿಸ್ತು, ಶೀಲ ಶಿಕ್ಷಣವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ, ಜಗದ ಜನತೆಗೆಲ್ಲಾ ಶುಭ ಕೋರುವ ಶುಭ ಮಾಡುವ ಶುಭ ನುಡಿವ ದಾರಿ ಹಿಡಿಯುತ್ತೇನೆ. ಈ ಅಗಾಧ ದಾರಿಗೆ ಆ ಪರಮಾತ್ಮನ ಆಶೀರ್ವಾದ ಆಶಿಸುತ್ತೇನೆ.

- ಸೀಮಾ ಹೆಗಡೆ (೧೦ನೇ ತರಗತಿ)
ಕೊಕ್ಕರ್ಣೆ

ಕ್ರಿಕೆಟ್‌ಗೆ ವಿದಾಯ

ನಾನು ಹೊಸ ವರ್ಷವನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ಇಂದಿನ ವಿದ್ಯಾರ್ಥಿಗಳು ಟಿವಿ ಮಾಧ್ಯಮದ ಮೂಲಕ ಹಾಳಾಗುತ್ತಾರೆ. (ಒಳಿತು ೩೦: ಕೆಡುಕು ೭೦). ಆದ್ದರಿಂದ ೧೯೯೮ರ ವರ್ಷದಿಂದ ಟಿವಿ ಮತ್ತು ರೇಡಿಯೋದಲ್ಲಿ ಕ್ರಿಕೆಟ್ ಎಲ್ಲೇ ನಡೆಯಲಿ ಯಾರದ್ದೇ ಆಗಿರಲಿ) ಆಟವನ್ನು ಇಡೀ ದಿನ ತೋರಿಸುವುದಾಗಲಿ, ಕಾಮಿಂಟ್ರಿ ಹೇಳುವುದಾಗಲೀ ಬೇಡ. ಕ್ರೀಡಾ ವಾರ್ತೆ ಅಂತ ದಿನದಲ್ಲಿ ಅರ್ಧ ಗಂಟೆ ಇರಲಿ. ಮುಖ್ಯಾಂಶ ಹೇಳಲಿ. ದಿನವಿಡೀ ಟಿವಿ ಮುಂದೆ ಕುಳಿತು ಶಾಲೆಗೆ ಚಕ್ಕರ್ ಹೊಡೆದು ನೋಡುವುದು ತಪ್ಪಲಿ. ನನ್ನಂತಹ ಸಾವಿರಾರು ವಿದ್ಯಾರ್ಥಿಗಳು ಟಿವಿ ನೋಡಿ ಹಾಳಾಗುವುದು ತಪ್ಪಲಿ.


ಆದ್ದರಿಂದ ನಾನು ೧೯೯೮ರಿಂದ ಟಿವಿಯಲ್ಲಿ ಕ್ರಿಕೆಟ್ ನೋಡುವುದನ್ನು ನಿಲ್ಲಿಸಲು ತೀರ್ಮಾನಿಸಿದ್ದೇನೆ. ಓದುವುದು, ದೈಹಿಕ ಆಟ ಆಡುವುದು ಮಾಡುತ್ತೇನೆ ಹಾಗೂ ೧೯೯೮ರಿಂದ ಯಾರಿಗೂ ಯಾವ ಕಾರಣಕ್ಕೂ ಸುಳ್ಳು ಹೇಳುವುದಿಲ್ಲ.

- ವಸಂತ ಕುಮಾರ ಎಮ್.ಜಿ.
(೭ನೇ ತರಗತಿ), ಮಾಸೂರು

ಹೊಸ ವರ್ಷಕ್ಕೆ ಸ್ವಾಗತ

ನಮ್ಮ ಜೀವನ ಸುಖ-ಸಂತೋಷ ಸಮೃದ್ಧಿಯಿಂದ ತುಂಬಿರಲಿ. ಹರ್ಷದ ಬನದಾಗೆ ವಸಂತ ಕಾಲದ ಹಚ್ಚು ಹಸಿರಿನ ಗಿಡಗಳಲ್ಲಿ ಗಿಳಿಯಂತೆ ನಕ್ಕು ನಲಿಯುತ ನಮ್ಮ ಬಾಳು ಚೈತನ್ಯದಿಂದಿರಲಿ ಎಂದು ಈ ೧೯೯೮ರ ಹೊಸ ವರ್ಷವನ್ನು ಹೃದಯಪೂರ್ವಕವಾಗಿಸ್ವಾಗತಿಸುತ್ತೇನೆ.

- ಗುರುನಾಥ (೯ನೇ ತರಗತಿ)
ಮ್ಯಗೇರಿ



ಭಾಷೆಗೆ ಭಾವದ ಮಾಧುರ್ಯ ತುಂಬಿಕೊಟ್ಟ ಗಾಯಕ

ಡಾ. ಪಿ.ಬಿ. ಶ್ರೀನಿವಾಸ್

ಬರಿ ಹೆಸರಾಂತ ಗಾಯಕನಾಗದೆ ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಪಿಬಿಎಸ್ ಕೈಯಾಡಿಸಿದ್ದಾರೆ. ಪ್ರತಿಭಾವಂತನೆಂದು ಗುರುತಿಸಲ್ಪಟ್ಟಿದ್ದಾರೆ.

‘ಆಡಿಸಿನೋಡು ಬೀಳಿಸಿನೋಡು ಉರುಳಿ ಹೋಗದು’ ‘ಬಿಂಕದ ಸಿಂಗಾರಿ ಮೈಡೊಂಕಿನ ವಯ್ಯಾರಿ’, ‘ಸಿರಿವಂತನಾದರೂ ಕನ್ನಡ ನಾಡಲ್ಲಿ ಮೆರೆವೆ, ಭಿಕ್ಷುಕನಾದರೂ ಕನ್ನಡನಾಡಲ್ಲಿ ಮಡಿವೆ’, ‘ಕುಲಕುಲಕುಲವೆಂದು ಹೊಡೆದಾಡದಿರಿ’, ‘ನಾವಾಡುವ ನುಡಿಯೆ ಕನ್ನಡ ನುಡಿ’, ‘ಮಲೆನಾಡ ಹೆಣ್ಣ ಮೈಬಣ್ಣ ಬಲುಚೆನ್ನ’...... ಮುಂತಾದ ಗತದಿನಗಳ ಹಾಡುಗಳನ್ನು ನೆನಪಿಸಿಕೊಂಡರೆ ಕೂಡಲೇ ಗಾನಕೋಗಿಲೆ ಡಾ. ಪಿ.ಬಿ. ಶ್ರೀನಿವಾಸ ಸಂಗೀತಪ್ರಿಯರ ಸ್ಮೃತಿಪಟಲದ ಮೇಲೆ ಸುಳಿದು ಬರುತ್ತಾರೆ. ೬೦ ಮತ್ತು ೭೦ರ ದಶಕಗಳಲ್ಲಿ ಕನ್ನಡನಾಡಿನಲ್ಲಿ ಮಾತ್ರವಲ್ಲ, ಇಡೀ ದಕ್ಷಿಣ ಭಾರತದ ಮನೆಮನೆಮಾತಾಗಿದ್ದ ಪಿ.ಬಿ. ಶ್ರೀನಿವಾಸರನ್ನು ಸಂಗೀತಪ್ರಿಯರು ‘ಪಿಬಿಎಸ್’ ಎಂದು ಆತ್ಮೀಯವಾಗಿ ಈಗಲೂ ಕೊಂಡಾಡುತ್ತಾರೆ. ಇಳಿವಯಸ್ಸಿನಲ್ಲಿರುವ ಪಿ.ಬಿ.ಶ್ರೀನಿವಾಸ್ ಈಗಿನ ಅಬ್ಬರ-ಆರ್ಭಟದ ಸಂಗೀತದಿಂದ ದೂರವಿದ್ದಾರೇನೋ ನಿಜ. ಆದರೆ, ಸದಭಿರುಚಿ ರಸಿಕರ ಒತ್ತಾಯದ ಮೇಲೆ ಚಿರಯುವಕನಂತೆ ಆಗಾಗ, ಅಲ್ಲಲ್ಲಿ ಪಿಬಿಎಸ್ ರಸ ಸಂಜೆಗಳಲ್ಲಿ ಪಾಲ್ಗೊಳ್ಳುತ್ತಾ ಮಧುರಗಾಯನ ಸುಧೆಯನ್ನು ಹರಿಸುತ್ತಾ ಅಭಿಮಾನಿಗಳನ್ನು ತಣಿಸುತ್ತಿದ್ದಾರೆ. ಹೊಸಬರಲ್ಲಿ ಸಂಗೀತದ ಕಂಪನ್ನು ಪಸರಿಸುತ್ತಿದ್ದಾರೆ. ಗತದಿನಗಳ ಗಾಯನ ಸಾಮ್ರಾಟ ಪಿ.ಬಿ.ಎಸ್. ಅವರನ್ನು ಅಕ್ಷರಗಳಲ್ಲಿ ಹಿಡಿಯುವ ಪ್ರಯತ್ನವಿಲ್ಲಿದೆ.

ಬದುಕಿರುವಾಗಲೇ ದಂತಕಥೆಯಾಗಿರುವ ಡಾ. ರಾಜ್‌ರ ಅಭಿನಯ ಬದುಕಿನಲ್ಲಿ ಅವಿಭಾಜ್ಯ ಭಾಗದಂತೆ ಡಾ. ಪಿ.ಬಿ.ಶ್ರೀನಿವಾಸ್ ಹಾಸುಹೊಕ್ಕಾಗಿದ್ದಾರೆ. ಡಾ. ರಾಜ್ ಚಲನಚಿತ್ರರಂಗಕ್ಕೆ ಪಾದಾರ್ಪಣೆಗೈದಾಗ ಘಂಟಸಾಲ, ಪಿ. ಕಾಳಿಂಗರಾವ್‌ರಂತಹ ಶ್ರೇಷ್ಠ ಹಿರಿಯ ಗಾಯಕರು ಹಿನ್ನೆಲೆ ಗಾಯಕರಾಗಿದ್ದರೂ ಡಾ. ರಾಜ್‌ರ ಧ್ವನಿಗೆ ಅವರ ಕಂಠಸಿರಿ ಅಷ್ಟೊಂದು ಹೋಲಿಕೆಯಾಗುತ್ತಿರಲಿಲ್ಲ. ‘ಜಾತಕ ಫಲ’ ಚಿತ್ರದ ಮೂಲಕ ೧೯೫೩ರಲ್ಲಿ ಕನ್ನಡ ಚಿತ್ರಗಳಲ್ಲಿ ಹಾಡಲಾರಂಭಿಸಿದ ಪಿ.ಬಿ.ಎಸ್.ರಿಂದ ಪವಾಡವೇ ಘಟಿಸಿತು! ನಟಸಾರ್ವಭೌಮನ ಧ್ವನಿ ಬೇರೆಯಲ್ಲ, ಪಿ.ಬಿ.ಎಸ್. ಕಂಠ ಬೇರೆಯಲ್ಲ ಎನ್ನುವಷ್ಟು ಸಾಮ್ಯತೆಯ ಗೋಚರ!! ಇಂತಹ ವಾಸ್ತವಾಂಶದ ಹಿನ್ನೆಲೆಯಲ್ಲಿ ನಿರ್ಮಾಪಕರು ಮತ್ತು ನಿರ್ದೇಶಕರು 'ತಮ್ಮ ಚಿತ್ರಗಳಿಗಾಗಿ ಡಾ. ರಾಜ್ ಅಭಿನಯಕ್ಕಾಗಿ ಡಾ. ಪಿ.ಬಿ. ಶ್ರೀನಿವಾಸ್‌ರನ್ನೇ ಆರಿಸಿಕೊಂಡರು. ಇದರ ಫಲಶೃತಿ ನೋಡಿ-‘ಬಾಗಿಲನು ತೆರೆದು’ (ಭಕ್ತ ಕನಕದಾಸ), ‘ಒಲವೇ ಜೀವನ ಸಾಕ್ಷಾತ್ಕಾರ’ (ಸಾಕ್ಷಾತ್ಕಾರ), ‘ಹಳ್ಳಿಯಾದರೇನು ಶಿವ’ (ಮೇಯರ್ ಮುತ್ತಣ್ಣ), ‘ನೀರ ಹೊತ್ತ ನೀರೇ ಜಾಣೆ (ಗಂಗೆ ಗೌರಿ), ‘ಆಡುತಿರುವಾ ಮೋಡಗಳೇ ಹಾರುತಿರುವಾ ಹಕ್ಕಿಗಳೆ’ (ಬೆಟ್ಟದ ಹುಲಿ), ‘ನಗುನಗುತಾ ನಲಿ ನಲಿ ಏನೇ ಆಗಲಿ’ (ಬಂಗಾರದ ಮನುಷ್ಯ), ‘ಮಾನವಾ ದೇಹವು ಮೂಳೆ ಮಾಂಸದ ಕಡಿಕೆ’ (ಭಕ್ತಕುಂಬಾರ), ‘ಯಾರೂ ಏನೂ ಮಾಡುವರು? ನನಗೇನೂ ಕೇಡುಮಾಡುವರು?’ (ಕ್ರಾಂತಿವೀರ) ಹೀಗೆ ನಟಸಾರ್ವಭೌಮರ ವೈವಿಧ್ಯಮಯ ಪಾತ್ರಗಳಿಗೆ ಪಿ.ಬಿ.ಎಸ್. ತನ್ಮಯತೆಯಿಂದ ಹಾಡಿದರೆ ಚಿತ್ರಗಳೆಲ್ಲವೂ ಅತ್ಯಂತ ಯಶಸ್ವಿಯಾದವು. ಡಾ. ರಾಜ್‌ಕುಮಾರ್ ಅಭಿನಯದಲ್ಲಿ ಏಕಮೇವಾದ್ವಿತೀಯರಾಗಿ ಬೆಳೆದರೆ, ಪಿ.ಬಿ. ಶ್ರೀನಿವಾಸ ಗಾನಸಾಮ್ರಾಟನಾಗಿ ವಿಜೃಂಭಿಸಿದರು.

○ ವೀರೇಶ್ ಯಂಗಟಿ

ಡಾ. ರಾಜ್-ಡಾ. ಪಿ.ಬಿ.ಎಸ್. ಸಂಯೋಜನೆಯ ಅಭೂತಪೂರ್ವ ಯಶಸ್ಸು ಇಡೀ ಚಿತ್ರ ಸಮೂಹವನ್ನೇ ಬೆಕ್ಕಸ ಬೆರಗಾಗಿಸಿತು. ‘‘ರಾಜ್‌ರ ಶರೀರಕ್ಕೆ ಪಿ.ಬಿ.ಎಸ್.ರ ಶಾರೀರ’’ ಎಂಬ ಹೊಗಳಿಕೆಯನ್ನು ರಾಜ್ ಮತ್ತು ಪಿ.ಬಿ.ಎಸ್. ಇವರಿಬ್ಬರೂ ಹರ್ಷಚಿತ್ತರಾಗಿ, ಸಮಚಿತ್ತದಿಂದ ಸ್ವೀಕರಿಸಿದರು. ರಾಜ್-ಪಿ.ಬಿ.ಎಸ್. ಸಂಬಂಧ ಹೇಗೆ ಬೆಳೆಯಿತೆಂದರೆ ಪಿ.ಬಿ.ಎಸ್. ರಾಜ್‌ರಿಗೆ ‘‘ಶರೀರಕ್ಕೆ ವಂದನೆಗಳು’’ ಎಂದು ಸಂಭೋದಿಸಿದರೆ ರಾಜ್ ಪಿ.ಬಿ.ಎಸ್.ರಿಗೆ ‘‘ಶಾರೀರಕ್ಕೆ ನಮಸ್ಕಾರಗಳು’’ ಎಂದು ಪ್ರತಿಯಾಗಿ ಗೌರವಿಸತೊಡಗಿದರು.

ಡಾ. ರಾಜ್ ಇಂದು ಗಾನಗಂಧರ್ವನಾಗಿಯೂ ಮನೆಮಾತಾಗುವಲ್ಲಿ ಪಿ.ಬಿ.ಎಸ್.ರೇ

ಪರೋಕ್ಷ ಕಾರಣ ಎಂದರೆ ತಪ್ಪಾಗಲಿಕ್ಕಿಲ್ಲ. ಡಾ. ರಾಜ್ ಗಾಯಕರಾಗಿ ಕುಡಿಯೊಡೆದಿದ್ದರ ಹಿನ್ನೆಲೆ ನೋಡಿದರೆ ವಾಸ್ತವದ ಅರಿವಾಗುತ್ತದೆ. 'ಸಂಪತ್ತಿಗೆ ಸವಾಲ್' ಚಿತ್ರದ ಆರಂಭದ ಹಾಡಿನ ರಿಕಾರ್ಡಿಂಗ್ ಹೊತ್ತಿಗೆ ಪಿ.ಬಿ.ಎಸ್. ಸಿಂಗಪೂರಿನಲ್ಲಿದ್ದರು. ಸಂಗೀತ ನಿರ್ದೇಶಕ ಜಿ.ಕೆ. ವೆಂಕಟೇಶ್ ರಾಜ್‌ರನ್ನು ಒತ್ತಾಯಿಸಿ ನೀವೇ ಹಾಡಿರಿ ಎಂದಾಗ ರಾಜ್ 'ಯಾರೇ ಕೂಗಾಡಲಿ ಊರೇ ಹೋರಾಡಲಿ' ಎಮ್ಮೆ ಹಾಡನ್ನು ಹಾಡಿಯೇ ಬಿಟ್ಟರು. ಹಾಡು ಕನ್ನಡನಾಡಿನ ಮೂಲೆಮೂಲೆಯಲ್ಲೂ ಮಾರ್ದನಿಸಿತು. ಮುಂದೆ ರಾಜ್ ನಿರ್ಮಾಪಕರ ಒತ್ತಡಕ್ಕೆ ಕಟ್ಟುಬಿದ್ದು ತಮ್ಮ ಪಾತ್ರಗಳಿಗೆ ತಾವೇ ಹಾಡತೊಡಗಿದರು.

ಡಾ. ರಾಜ್ ತಮ್ಮ ಚಿತ್ರಗಳಲ್ಲಿ ತಾವೇ ಹಾಡಲಾರಂಭಿಸಿದ ಮೇಲೆ ಪಿ.ಬಿ.ಎಸ್.ರಿಗೆ ಅವಕಾಶಗಳು ಕಡಿಮೆಯಾದವು ನಿಜ. ಆದರೆ ಡಾ.ರಾಜ್ ದ್ವಿಪಾತ್ರ ನಿರ್ವಹಿಸಿದಾಗ ರಾಜ್ ಮರೆಯದೇ ತಮ್ಮ ಇನ್ನೊಂದು ಪಾತ್ರದ ಹಿನ್ನೆಲೆ ಹಾಡಿಗಾಗಿ ತಮ್ಮ ಇನ್ನೊಂದು ಶಾರೀರ' ಪಿ.ಬಿ.ಎಸ್.ರನ್ನೇ ಕರೆಸಿ ಗೌರವಿಸಿದರು.

ಬಬ್ರುವಾಹನ ಚಿತ್ರದ 'ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮ' ಶಂಕರಗುರು ಚಿತ್ರದ 'ನಾ ಬೆಂಕಿಯಂತೆ ನಾ ಗಾಳಿಯಂತೆ' ಕೇರಳದ ಸಿಂಹ ಚಿತ್ರದ 'ಅಮ್ಮಾ ನೀನು ನಮಗಾಗಿ' ಅದೇ ಕಣ್ಣು ಚಿತ್ರದ 'ನಿನ್ನಿ ನಗುವೇ ಅರುಣೋದಯವು'' ಮುಂತಾದ ರಾಜ್ ದ್ವಿಪಾತ್ರ ಅಭಿನಯದ ಗೀತೆಗಳನ್ನು ರಾಜ್ ಮತ್ತು ಪಿಬಿಎಸ್ ಕೂಡಿ ಹಾಡಿದರು. ಡಾ. ರಾಜ್‌ರಿಗಾಗಿ ಪಿ.ಬಿ.ಎಸ್. ೨೦೦ಕ್ಕೂ ಹೆಚ್ಚು ಗೀತೆಗಳನ್ನು ಹಾಡಿದ್ದಾರೆ. ರಾಜ್ ಪಾತ್ರಗಳಿಗಾಗಿ ಕಂಠದಾನ ಮಾಡಿದ್ದು ತಮ್ಮ ಜೀವನದ ಸೌಭಾಗ್ಯ ಎಂದು ಪಿ.ಬಿ.ಎಸ್. ವಿನೀತರಾಗಿ ಹೇಳುತ್ತಾರೆ. ರಾಜ್‌ರಿಗಾಗಿ ತಾವು ಹಾಡಿದ ಜನಪ್ರಿಯ ಗೀತೆಗಳನ್ನು ೧೯೯೬ರಲ್ಲಿ ಸಂಗ್ರಹಿಸಿ 'ಬಂಗಾರದ ಹೂಗಳು' ಎಂಬ ಹೆಚ್.ಎಂ.ವಿ. ಸಂಸ್ಥೆಯ ಧ್ವನಿಸುರುಳಿಯನ್ನು ರಾಜ್‌ರಿಂದ ಬಿಡುಗಡೆ ಮಾಡಿಸಿ ಅವರಿಗೆ ಕೃತಜ್ಞತೆ ಸಲ್ಲಿಸಿದ ವಿಶಾಲಹೃದಯಿ ಪಿ.ಬಿ.ಎಸ್.


ಅಷ್ಟಭಾಷಾ ಗಾಯಕ

ಕನ್ನಡದ ಹೊರತಾಗಿ ತಮಿಳು, ತೆಲುಗು, ಹಿಂದಿ, ಮಲೆಯಾಳಂ, ಉರ್ದು, ಸಂಸ್ಕೃತ ಮತ್ತು ಇಂಗ್ಲೀಷ್ ಭಾಷಾ ಗೀತೆಗಳನ್ನು ಹಾಡಿ ಪಿಬಿಎಸ್ ಅಷ್ಟಭಾಷಾಗಾಯಕರೆನಿಸಿದ್ದಾರೆ. ತಮಿಳು ಚಿತ್ರರಂಗದ ದಿಗ್ಗಜರಾದ ಶಿವಾಜಿ ಗಣೇಶನ್ ಮತ್ತು ಎಮ್.ಜಿ. ರಾಮಚಂದ್ರನ್‌ರಿಗೆ ಟಿ.ಎಮ್. ಸೌಂದರರಾಜನ್ ಬಿಟ್ಟರೆ ಬೇರೆಯವರ ಧ್ವನಿ ಸರಿಹೊಂದಲಾರದೆಂಬ ಅನಿಸಿಕೆಯನ್ನು ಸುಳ್ಳಾಗಿಸಿದವರು ಪಿ.ಬಿ.ಎಸ್. ತಮಿಳಿನ ಸಂಗೀತ ನಿರ್ದೇಶಕ ಎಂ.ಎಸ್. ವಿಶ್ವನಾಥನ್ ಪಿ.ಬಿ.ಎಸ್.ರನ್ನು ಶಿವಾಜಿ ಮತ್ತು ರಾಮಚಂದ್ರನ್ ಇವರಿಬ್ಬರ ಪಾತ್ರಗಳಿಗೆ ಹಾಡಿಸಿದಾಗ ಚಿತ್ರಸಮೂಹ ಮೂಗಿನ ಮೇಲೆ ಬೆರಳಿಡುವಂತಾಯಿತು. 'ಕಾಲಂಗಳಿಲ್ ಅವಳ್ ವಸಂತಂ' ಪಾವಮ್ಮಾನಿಪ್ಪು ಚಿತ್ರದ ಈ ಗೀತೆ ಇಂದಿಗೂ ತಮಿಳಿನ ಅತ್ಯಂತ ಜನಪ್ರಿಯ ಗೀತೆಗಳಲ್ಲಿ ಒಂದೆನಿಸಿದೆ. ತೆಲುಗು ಚಿತ್ರರಂಗದಲ್ಲಿಯೂ ಸಹ ಘಂಟಸಾಲರ ಧ್ವನಿ ಮಾತ್ರ ಎನ್.ಟಿ. ರಾಮರಾವ್ ಮತ್ತು ಅಕ್ಕಿನೇನಿ ನಾಗೇಶ್ವರರಾವ್‌ರ ಪಾತ್ರಗಳಿಗೆ ಒಪ್ಪುತ್ತದೆ ಎಂಬ ಮಾತಿತ್ತು. ಇದನ್ನು ಸಹ ಪಿ.ಬಿ.ಎಸ್. ಅಳಿಸಿ ಹಾಕಿದರು. ಭಲೇ ರಾಮುಡು ಚಿತ್ರದ 'ಭಯಮೇಲಾ ಓ ಮನಸಾ' ಗೀತೆ ಭಾರೀ ಜನಮನ್ನಣೆ ಪಡೆಯಿತು. ''ಭಲೇ ರಾಮುಡು''ದಲ್ಲಿ ಎನ್‌ಟಿಆರ್ ನಾಯಕರಾಗಿದ್ದರು. ತಮಿಳು ಮತ್ತು ತೆಲುಗು ಚಿತ್ರಗಳಲ್ಲಿ ೨೦೦ಕ್ಕೂ ಹೆಚ್ಚು ಹಾಡಿರುವ ಪಿ.ಬಿ.ಎಸ್. ಮಲೆಯಾಳಂನಲ್ಲಿ ಪ್ರೇಮ್ ನಜೀರ್ ಮತ್ತು ಸತ್ಯನ್‌ರಿಗಾಗಿ ನೂರಕ್ಕೂ ಹೆಚ್ಚು ಗೀತೆಗಳನ್ನು ಹಾಡಿದ್ದಾರೆ. ೧೯೫೩ರಲ್ಲಿ ಜಾತಕ ಫಲ-ಕನ್ನಡ, ಜಾತಕ ಫಲಂ-ತೆಲುಗು ಮತ್ತು ಜಾತಗಮ್-ತಮಿಳು ಮೂರೂ ಭಾಷೆಯ ಚಿತ್ರಗಳಿಗೆ ಹಾಡಿ ದಕ್ಷಿಣ ಭಾರತದಲ್ಲಿ ಕ್ಲಿಕ್ ಆಗುವ ಮುನ್ನ ಪಿ.ಬಿ.ಎಸ್. ಹಿಂದಿಯಲ್ಲಿ ಹಾಡಿ ಹೆಸರು ಮಾಡಿದ್ದರು. ೧೯೫೨ರಲ್ಲಿ 'ಮಿಸ್ಟರ್ ಸಂಪತ್' ಚಿತ್ರಕ್ಕಾಗಿ ಮೊದಲ ಸಲ ಹಿಂದಿಯಲ್ಲಿ ಹಾಡಿದ ಪಿ.ಬಿ.ಎಸ್. ಮುಂದೆ ಲತಾ ಮಂಗೇಶ್ಕರ್‌ರೊಡನೆ ಮೈಭೀ ಲಡ್ಕೀ ಹೂಂ ಚಿತ್ರದ 'ಚಂದಾಸೆ ಹೋಗಾವೊ ಪ್ಯಾರಾ' ಗೀತೆಗೆ ಧ್ವನಿಗೂಡಿಸಿದಾಗ ಆ ಯುಗಳ ಗೀತೆ ಒಳ್ಳೆಯ ಹೆಸರು ಮಾಡಿತು.

ಬಹುಮುಖ ಪ್ರತಿಭಾವಂತ

ಬರಿ ಹೆಸರಾಂತ ಗಾಯಕನಾಗದೆ ವಿವಿಧ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಪಿಬಿಎಸ್ ಕೈಯಾಡಿಸಿದ್ದಾರೆ, ಪ್ರತಿಭಾವಂತನೆಂದು ಗುರುತಿಸಲ್ಪಟ್ಟಿದ್ದಾರೆ. ಒಳ್ಳೆಯ ಕವನಗಳನ್ನು ರಚಿಸಿದ್ದಾರೆ. ಇವರ 'ಪ್ರಾಣವಮ್' ಕವನ ಸಂಕಲನ ಎಂಟು ಭಾಷೆಗಳಲ್ಲಿ ಮರುರೂಪ ಪಡೆದಿದೆ. ಹಿಂದೂ ತತ್ವಜ್ಞಾನದ ಮೇಲೆ ಬೆಳಕು ಚೆಲ್ಲುವ 'ಟೈಮ್ ಗಾಡ್' ಗದ್ಯ ರಚಿಸಿದ್ದಾರೆ.

ದಿ। ರಫಿಯವರ ಅನುಪಮ ಅಭಿಮಾನಿಯಾದ ಪಿ.ಬಿ.ಎಸ್. ಅತ್ಯುತ್ತಮ ಗಜಲ್ ಗಾಯಕರೂ ಹೌದು. 'ದಕ್ಷಿಣ ಭಾರತದ ಶ್ರೇಷ್ಠ ಗಜಲ್ ಗಾಯಕ'ರೆಂದು ಖ್ಯಾತ ಸಂಗೀತ ಸಂಯೋಜಕ ಎಸ್. ರಾಜೇಶ್ವರರಾವ್ ಅಭಿಪ್ರಾಯಪಡುತ್ತಾರೆ.



ಪ್ರತೀಕ್ಷೆ

ಗೆಳತಿ,
ನಿನ್ನ ಪ್ರೀತಿ
ಮನದಾಳದಲಿ
ಹಳಹಳಿ
ದೂರ, ದೂರದಲ್ಲಿ
ಕೂಡಿಕೊಂಡಂತೆ
ಕಾಣುವ ನನ್ನ ಕನಸು
ರೈಲು ಹಳಿ!

– ಶಿವಕುಮಾರ ಕಲ್ಲೂರು

ವಿಶ್ವದ ಮೊದಲ ಗಗನಯಾತ್ರಿ ನೀಲ್ ಆರ್ಮಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟಾಗ ಪಿ.ಬಿ. ಶ್ರೀನಿವಾಸ್ 'ಮ್ಯಾನ್ ಟು ಮೂನ್' ಎಂಬ ಗೀತೆ ರಚಿಸಿ ಎಸ್. ಜಾನಕಿಯವರೊಡನೆ ಹಾಡಿ ಆ ಯುಗಳ ಗೀತೆಯ ಕ್ಯಾಸೆಟ್‌ನ್ನು ಆಗಿನ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್‌ರಿಗೆ ಕಳಿಸಿಕೊಟ್ಟಿದ್ದರು. ನಂತರ ಆ ಗೀತೆಗೆ 'ಮೂನ್ ಟು ಗಾಡ್' ಎಂಬ ಪೂರ್ಣತಾ ಗೀತೆಯನ್ನು ಬರೆದು ಹಾಡಿದರು. ರಾಗಗಳಿಗೆ ಸ್ವರಗಳನ್ನು ಜೋಡಿಸಲು ಅನುಕೂಲವಾಗುವಂತಹ ತಮ್ಮದೇ ಆದ ''ಡೈಮಂಡ್ ಕೀ' ಅಥವಾ ಶ್ರೀನಿವಾಸ ವ್ರಥಾ' ಸಂಗೀತ ವಿಧಾನವನ್ನು ಪಿ.ಬಿ.ಎಸ್. ರೂಪಿಸಿದ್ದಾರೆ. 'ಮಹಾಸಾಧ್ವಿ' ಕನ್ನಡ ಚಿತ್ರಕ್ಕಾಗಿ ಸಂಗೀತ ಸಂಯೋಜಕರಾಗಿಯೂ ಕಾರ್ಯ ನಿರ್ವಹಿಸಿರುವ ಮಧುರ ಗಾಯಕ 'ಕಾವ್ಯಮೇಳಾ' (ಮಲೆಯಾಳಿ) ಮತ್ತು 'ಕಾಲಮೆಲ್ಲಾಂ ಕಾದಲ್ ವಳರ್ಗ' ತಮಿಳು ಚಿತ್ರಗಳಲ್ಲಿ ಪೋಷಕ ನಟನಾಗಿ ನಟಿಸಿದ್ದಾರೆ. 'ಪ್ರೇಕ್ಷಕ ಏನು ಬಯಸುತ್ತಾನೋ ಅದನ್ನು ನಿರ್ಮಾಪಕರು ಕೊಡುತ್ತಾರೆ. ಪ್ರೇಕ್ಷಕನ ಬದಲಾಗಿರುವ ಇಮೇಜ್‌ನಿಂದಾಗಿ ಸಂಗೀತ ಮಾಧುರ್ಯ ಕಳೆದುಕೊಳ್ಳುತ್ತಿದೆ' ಈಗಿನ ಸಂಗೀತ ಗುಣಮಟ್ಟದ ಬಗ್ಗೆ ಪಿಬಿಎಸ್ ಹೀಗೆ ಅಭಿಪ್ರಾಯ ಪಡುತ್ತಾರೆ.

○ ಕೇಶವ ನಾಡಕರ್ಣಿ

ಚಿತ್ರ : ವೀರೇಶ್

ಹಂಸಲೇಖ



ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿದ ಸಿನಿಮಾ ಮಂದಿ ಇರುವುದನ್ನು ಕಳಕೊಳ್ಳುವ ಅಪಾಯವಿದೆ ಎನ್ನೋದಕ್ಕೆ ಇತ್ತೀಚಿನ ಉದಾಹರಣೆ ಹಂಸಲೇಖ. ಕಳೆದ ಸಂಕ್ರಾಂತಿಗೆ ಉಡುಗೊರೆಯಾಗಿ ಬರಬೇಕಾಗಿದ್ದ 'ಸುಗ್ಗಿ' ಚಿತ್ರ ಇನ್ನೊಂದು ಸಂಕ್ರಾಂತಿ ಬಂದರೂ ಕೊಯಿಲಿಗೆ ಸಿದ್ಧವಾಗಿಲ್ಲ. ಕಳೆದ ೧೦ ವರ್ಷಗಳಲ್ಲಿ ಸಂಗೀತ ನಿರ್ದೇಶಕರಾಗಿ ದುಡಿದಿದ್ದೆಲ್ಲವನ್ನೂ ಈ 'ಸುಗ್ಗಿ'ಯಲ್ಲಿ ಕಳಕೊಂಡಿದ್ದಾರೆ ಹಂಸ.

ರಂಗಭೂಮಿ ಹಿನ್ನೆಲೆಯಿಂದ ಚಿತ್ರರಂಗಕ್ಕೆ ಬಂದ ಹಂಸಲೇಖಾಗೆ ಕಷ್ಟ-ನಷ್ಟಗಳೇನೂ ಹೊಸದಲ್ಲ. 'ಪ್ರೇಮಲೋಕ'ಕ್ಕೆ ಮೊದಲು ಹಂಸಲೋಕ ಖಾಲಿಯಾಗಿಯೇ ಇತ್ತು. ಆದರೆ, ಅನಂತರ ಹಂಸಲೇಖಾ ಬೆಳವಣಿಗೆಯ ರಭಸ ಎಷ್ಟಿತ್ತೆಂದರೆ, ಚಿತ್ರವೊಂದಕ್ಕೆ ಅವರಿಗೆ ಮೂರು ಲಕ್ಷ ಸಂಭಾವನೆ ನೀಡಲೂ ನಿರ್ಮಾಪಕರು ಸಿದ್ಧರಾಗಿದ್ದರು. ಹಂಸ ಹೆಸರಿದ್ದರೆ ಸಾಕು, ಆ ಚಿತ್ರದ ಕ್ಯಾಸೆಟ್ ಬಿಸಿದೋಸೆಯಂತೆ ಖರ್ಚಾಗುತ್ತಿತ್ತು. ಒಂದೇ ವರ್ಷದಲ್ಲಿ ೧೮ ಚಿತ್ರಗಳಿಗೆ ಹಂಸ ಸಂಗೀತ ನೀಡಿದ್ದೂ ಉಂಟು. 'ಸುಗ್ಗಿ' ಚಿತ್ರ ಶುರುವಾಗುವ ತನಕ ಎಲ್ಲವೂ ಚೆನ್ನಾಗಿತ್ತು. ಎಂಥೆಂಥವರನ್ನೂ ಕಾಡುವ ಪುತ್ರ ವ್ಯಾಮೋಹ ಇವರನ್ನೂ ಬಿಡಲಿಲ್ಲ.

ಮಗ ನಾಯಕ, ಅಪ್ಪ ನಿರ್ಮಾಪಕ. ಆರಂಭದಿಂದಲೇ ವಿಘ್ನಗಳ ಸರಮಾಲೆ. ನಿರ್ದೇಶಕ ಮಹೇಂದರ್ ಜೊತೆ ವಿರಸ, ನಾಯಕ ಅಲಂಕಾರ್ ಎದೆಗೇಟು ಬಿದ್ದದ್ದು, ನಾಯಕಿ ಸೃಷ್ಟಿಯ ಅಪ್ಪ ಅಪಘಾತದಲ್ಲಿ ಸಾವನ್ನಪ್ಪಿದ್ದು - ಹೀಗೆ ಅವಘಡಗಳ ಸಾಂಗತ್ಯದಲ್ಲಿ ಕುಂಟುತ್ತಾ ಸಾಗಿದ 'ಸುಗ್ಗಿ' ಕಳೆದ ತಿಂಗಳಷ್ಟೇ ಚಿತ್ರೀಕರಣ ಮುಗಿಸಿದೆ. ಬಿಡುಗಡೆ ಎಂದು ಎನ್ನೋದು ಹಂಸಲೇಖಾಗೂ ಗೊತ್ತಿಲ್ಲ. ಚಿತ್ರ ಹಿಟ್ ಆದರೂ ಬಂಡವಾಳ ವಾಪಸ್ ಆಗಲಾರದು. ಈಗಾಗಲೇ ಸುಮಾರು ಒಂದೂವರೆ ಕೋಟಿ ರೂಪಾಯಿಯನ್ನು 'ಸುಗ್ಗಿ'ಗೆ ಸುರಿದಿದ್ದಾರಂತೆ ಹಂಸ. ಇನ್ನೊಂದೆಡೆ ಸಂಗೀತ ನಿರ್ದೇಶಕರಾಗಿಯೂ ಅವರಿಗೆ ಡಿಮ್ಯಾಂಡ್ ಕಡಿಮೆಯಾಗಿದೆ. ೯೭ರಲ್ಲಿ ಹಂಸ ಸಂಗೀತವಿದ್ದ ಚಿತ್ರಗಳೂ ಫ್ಲಾಪ್ ಆಗಿವೆ. ಹಂಸ ನಡಿಗೆ ಮತ್ತೆ ಮೊದಲಿಂದ ಶುರುವಾಗಬೇಕು.

ವಿಜಯಲಕ್ಷ್ಮಿ



ಅಪ್ಪಟ ಕನ್ನಡತಿಯೊಬ್ಬಳು ಕನ್ನಡ ಚಿತ್ರರಂಗಕ್ಕೆ ಉಡುಗೊರೆಯಾಗಿ ಬಂದಳು ಎಂದು ಸಮಸ್ತ ಪ್ರೇಕ್ಷಕರು ಖುಶಿಪಡುತ್ತಿದ್ದಂತೆ ವಿಜಯಲಕ್ಷ್ಮಿ ವಿವಾದದಲ್ಲಿ ಸಿಲುಕಿದ್ದಾಳೆ. ಒಂದಲ್ಲ, ಎರಡಲ್ಲ, ವಿಜಯಲಕ್ಷ್ಮಿ ನಡೆದ ಹಾದಿಯುದ್ದಕ್ಕೂ ವಿವಾದದ ಮುಳ್ಳು, ಪ್ರಶಸ್ತಿ ವಿಜೇತ 'ನಾಗಮಂಡಲ' ಚಿತ್ರದಲ್ಲಿ ಹಾವಾಗುವ ಹುಡುಗನ ಮುಂದೆ ಈ ಹೂ ಹುಡುಗಿಯ ಅಭಿನಯವನ್ನು ಮೆಚ್ಚದವರಿಲ್ಲ. ಹದಿನೇಳರ ಪೋರಿ ತನ್ನ ಮೊದಲ ಚಿತ್ರದಲ್ಲೇ ಎಷ್ಟೊಂದು ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾಳೆ ಎಂದು ಅಚ್ಚರಿಪಟ್ಟವರೂ ಇದ್ದರು. ಈಕೆಯನ್ನು 'ಕಾಲೇಜು' ಚಿತ್ರಕ್ಕೆ ಆಯ್ಕೆ ಮಾಡಿ ಅನಂತರ ವಿನಾಕಾರಣ ಗೇಟ್‌ಪಾಸ್ ಕೊಟ್ಟಿದ್ದ ರವಿಚಂದ್ರನ್ ಕೂಡಾ ಪರಿತಪ್ಪಿಸಿದ್ದುಂಟು.

ಅನಂತರ ಆದದ್ದೇ ಬೇರೆ. ಸೆಟ್‌ನಲ್ಲಿ ಸಹಾಯಕ ನಿರ್ದೇಶಕರನ್ನು ಏಕವಚನದಲ್ಲಿ ಮಾತಾಡಿಸುವಲ್ಲಿಂದ ರಾದ್ಧಾಂತ ಶುರು. 'ರಂಗಣ್ಣ' ಚಿತ್ರದಲ್ಲಿ ನಟಿಸಲಾರೆ ಎಂದು ಮೊದಲು ಗುರುಗುಟ್ಟಿದ್ದ ವಿಜಿ ಅನಂತರ ಅರೆಬರೆ ಮೈಯಲ್ಲಿ ಅದೇ ಚಿತ್ರದಲ್ಲಿ ಕಾಣಿಸಿಕೊಂಡಳು. ಎರಡು ಚಿತ್ರಗಳನ್ನು ಏಕಕಾಲದಲ್ಲಿ ಒಪ್ಪಿಕೊಂಡು ಒಂದು ಚಿತ್ರದ ಶೂಟಿಂಗ್‌ಗೆ ಹಾಜರಾಗಲೇ ಇಲ್ಲ. ಇವೆಲ್ಲದ ಕ್ಲೈಮಾಕ್ಸ್ ಎಂಬಂತೆ ಚಪ್ಪಲಿ ಹಗರಣ. 'ರಂಗಣ್ಣ' ಚಿತ್ರದ ಸಹಾಯಕ ನಿರ್ದೇಶಕನಿಗೆ ಈಕೆ ಚಪ್ಪಲಿ ತೋರಿದಳಂತೆ. ಈ ಸುದ್ದಿ ಪತ್ರಿಕೆಗಳಲ್ಲಿ ವರದಿಯಾದ ಬೆನ್ನಲ್ಲೇ ಇನ್ನೊಬ್ಬ ನಿರ್ದೇಶಕ ಆರ್ಯ ತನ್ನ 'ಪ್ರತಿಭಟನೆ' ಚಿತ್ರದಲ್ಲೂ ವಿಜಯಲಕ್ಷ್ಮಿ ಇದೇ ಆಯುಧ ಪ್ರಯೋಗಕ್ಕೆ ಹೊರಟಿದ್ದಳು ಎಂದು ದೂರಿದ್ದಾರೆ. ಅಂತೂ ಅರ್ಧ ಚಿತ್ರರಂಗವೇ ಈಕೆಯ ವಿರುದ್ಧ ತಿರುಗಿಬಿದ್ದಿದೆ.

ಈ ವಿವಾದಗಳ ಸರಮಾಲೆಯಲ್ಲಿ ವಿಜಿಯ ಪಾಲು ಏನೇ ಇರಬಹುದು. ಚಿತ್ರರಂಗದಲ್ಲಿ ನಟಿಯರನ್ನು ಬಳಸಿಕೊಳ್ಳುವ ವಿಧಾನದ ಬಗ್ಗೆ ಈಕೆ ಕೆಲವು ಪ್ರಶ್ನೆಗಳನ್ನಂತೂ ಎತ್ತಿದ್ದಾಳೆ.


ನಾಯಕ-ನಿರ್ಮಾಪಕರು ತಮಗೆ ಬೇಕೆನಿಸಿದ ನಟಿಯರನ್ನು ಬೆದರಿಕೆ ತಂತ್ರ ಬಳಸಿ ನಟಿಸುವಂತೆ ಮಾಡುತ್ತಾರೆ ಎನ್ನೋದು ಈ ಆರೋಪದ ಸಾರಾಂಶ. ಪರಭಾಷಾ ನಟಿಯರಾದರೆ ಎಲ್ಲದಕ್ಕೂ 'ಅಡ್ಜಸ್ಟ್' ಆಗ್ತಾರೆ, ಕನ್ನಡದ ಹುಡುಗಿಯರು ಇದಕ್ಕೆ ಸಿದ್ಧರಾಗಿಲ್ಲ ಎನ್ನೋ ಕಾರಣಕ್ಕೆ ಇಲ್ಲಿಯವರೆಗೆ ಅವಕಾಶ ಸಿಕ್ತಾ ಇಲ್ಲ ಎನ್ನುವ ಹಿರಿಯ ನಟಿಯ ಮಾತಲ್ಲಿ ಸತ್ಯ ಅಡಗಿದೆ.

ಸುನಿಲಕುಮಾರ ದೇಸಾಯಿ



'ಪ್ರೇಮರಾಗ ಹಾಡು ಗೆಳತಿ' ಚಿತ್ರದ ಅನಿರೀಕ್ಷಿತ ಸೋಲಿನಿಂದಾಗಿ ಸದಭಿರುಚಿಯ ವಕ್ತಾರರೆಲ್ಲಾ ಕಂಗಾಲಾಗಿದ್ದಾರೆ. ನಿನ್ನೆಯ ತನಕ ಕನ್ನಡ ಚಿತ್ರರಂಗದ ಏಕೈಕ ಜಾದೂಗಾರನಂತೆ ಕಾಣಿಸುತ್ತಿದ್ದ ಸುನಿಲ ಕುಮಾರ ದೇಸಾಯಿಯನ್ನು ಇಂದು ಎಲ್ಲರೂ ಅನುಮಾನದಿಂದ ನೋಡುತ್ತಿದ್ದಾರೆ. ದೇಸಾಯಿ ಖಾಲಿಯಾದರು ಎಂದು ಈಗಾಗಲೇ ತೀರ್ಪು ನೀಡಿದವರೂ ಇದ್ದಾರೆ. ರಮೇಶ್-ಶಿವರಾಜ್ ಕಾಂಬಿನೇಷನ್ ಇದ್ದಲ್ಲಿ ಚಿತ್ರ ಗೆಲ್ಲುವುದು ಖಾತ್ರಿ ಎಂಬ ನಂಬಿಕೆಯಲ್ಲಿ 'ಭೂತಾಯಿಯ ಚೊಚ್ಚಲ ಮಕ್ಕಳು' ಚಿತ್ರವನ್ನು ಪ್ರಕಟಿಸಿದ್ದ ರಾಜೇಂದ್ರಸಿಂಗ್ ಬಾಬು ಈಗ ಮೀನ-ಮೇಷ ಎಣಿಸುತ್ತಿದ್ದಾರೆ. ದೇಸಾಯಿಯಂತೂ ಇನ್ನು ಆರು ತಿಂಗಳ ಕಾಲ ಯಾವ ಸಿನಿಮಾನೂ ಬೇಡ ಎಂದು ವೈರಾಗ್ಯ ತಾಳಿದ್ದಾರಂತೆ. ಇತ್ತೀಚೆಗೆ ಶಿವರಾಜ್ ಅಭಿಮಾನಿಗಳೆಲ್ಲಾ 'ಪ್ರೇಮರಾಗ...'ದ ನಿರ್ಮಾಪಕಿ ಜಯಶ್ರೀ ದೇವಿ ಕಛೇರಿಗೆ ಮುತ್ತಿಗೆ ಹಾಕಿದ್ದರು. ತಮ್ಮ ಆರಾಧ್ಯ ದೈವಕ್ಕೆ ಚಿತ್ರದಲ್ಲಿ ಅನ್ಯಾಯವಾಗಿದೆ ಎನ್ನೋದು ಅವರ ಆಕ್ರೋಶ.

ರವಿಚಂದ್ರನ್



'ಡೋಂಟ್‌ಕೇರ್' ಖ್ಯಾತಿಯ ರವಿಚಂದ್ರನ್ ಇತ್ತೀಚೆಗೆ ಪಕ್ಕಾ ಪುಢಾರಿಯಂತೆ ವರ್ತಿಸೋದಕ್ಕೆ ಶುರುಮಾಡಿದ್ದಾರೆ. ಹೇಳುವುದು ಒಂದು, ಮಾಡುವುದು ಇನ್ನೊಂದು. 'ಪುಟ್ನಂಜ' ಚಿತ್ರ ಗೆದ್ದಾಗ, ಇನ್ನು ಮುಂದೆ ತನ್ನ ಚಿತ್ರದಲ್ಲಿ ಕಥೆಯೇ ಹೀರೋ, ತಾಂತ್ರಿಕ ಸರ್ಕಸ್‌ಗೆ ಎರಡನೇ ಸ್ಥಾನ ಎಂದು ಘೋಷಿಸಿದ್ದ ರವಿ ಕಥೆಯೇ ಇಲ್ಲದ 'ಕಲಾವಿದ' ನಿರ್ಮಿಸಿದರು. ಚಿತ್ರ ನೆಲ ಚುಂಬಿಸಿತು. ಇನ್ನೊಬ್ಬರು ನಿರ್ಮಿಸಿದ ಚಿತ್ರ ನಿರ್ದೇಶಿಸುವುದಿಲ್ಲ ಎಂದು ಹಳೇ ವಚನವನ್ನು ಮರೆತು 'ಮೊಮ್ಮಗ' ನಿರ್ದೇಶಿಸಿದರು. ಅದರ ನಿರ್ಮಾಪಕ ಸಂದೇಶ್ ನಾಗರಾಜ್. ಇದೀಗ ರವಿ ತಮ್ಮ ಇಲ್ಲೊಂದು ಪ್ರತಿಜ್ಞೆ ಮುರಿಯುವ ಕಾರ್ಯಕ್ಕೆ ಕೈ ಹಾಕಿದ್ದಾರೆ. 'ಕಾದಲ್ ಕೋಟ್ಟೈ'ಯ ಕನ್ನಡ ಅವತರಣಿಕೆಯಲ್ಲಿ ರವಿ ಹೀರೋ. ನಿರ್ದೇಶಕರಲ್ಲ. ಆ ಕೆಲಸವನ್ನು ಬಾಬು ನಿರ್ವಹಿಸಲಿದ್ದಾರೆ. ಇನ್ನೊಬ್ಬ ನಿರ್ದೇಶಕನ ಚಿತ್ರದಲ್ಲಿ ನಟಿಸುವುದಿಲ್ಲ ಎಂಬ ರವಿ ಪ್ರತಿಜ್ಞೆ ಮೂಲೆಗುಂಪಾಗಿದೆ. ರವಿ ಮರೆತದ್ದನ್ನು ಜನ ಕಾಣುತ್ತಾರೆ ಎನ್ನೋದು ಅವರಿಗೆ ಗೊತ್ತಾದಂತಿಲ್ಲ.


ಶ್ರುತಿ



೯೬ರ ನಾಯಕಿ ೯೭ರಲ್ಲಿ ಮಾಜಿ ನಾಯಕಿ. ಇಂಥ ಅದ್ಭುತ ಇಲ್ಲಷ್ಟೇ ನಡೆಯೋದಕ್ಕೆ ಸಾಧ್ಯ. ೯೬ರ ವಾರ್ಷಿಕ ಸಮೀಕ್ಷೆಯಲ್ಲಿ ವರ್ಷದ ತಾರೆ ಪಟ್ಟವನ್ನು ಗಳಿಸಿದ್ದ ಶ್ರುತಿ ಈ ವರ್ಷದ ಫ್ಲಾಪ್ ನಟಿ ಬಿರುದು ಗಳಿಸಿದ್ದಾರೆ. ಈಕೆ ನಟಿಸಿದ 'ಕೊಡಗಿನ ಕಾವೇರಿ', 'ತವರಿನ ತೇರು', 'ಶ್ರುತಿ ಹಾಕಿದ ಹೆಜ್ಜೆ' ಮುಂತಾದ ಚಿತ್ರಗಳು ಒಂದೊಂದು ವಾರಕ್ಕೆ ಥಿಯೇಟರ್‌ನಿಂದ ಪಲಾಯನ ಮಾಡಿವೆ.

ಕಣ್ಣೀರ ಚಿತ್ರಗಳ ಟ್ರೆಂಡ್‌ನ ಅವಸಾನವಾಗಿದ್ದೇ ಶ್ರುತಿ ಜನಪ್ರಿಯತೆ ಪಾತಾಳಕ್ಕಿಳಿಯಲು ಕಾರಣ ಎನ್ನುತ್ತಾರೆ ನಿರ್ಮಾಪಕರು. ಟ್ರೆಂಡ್‌ನಿಂದ ಸೃಷ್ಟಿಯಾಗುವ ನಟ-ನಟಿಯರಿಗೆಲ್ಲಾ ಇದೊಂದು ಪಾಠ. ಪೊಲೀಸ್-ಖಾಕಿ-ಖಾದಿ ಸಂಬಂಧದ ಚಿತ್ರಗಳಿಗೆ ಬೇಡಿಕೆ ಕುದುರಿದಾಗ ಪ್ರತ್ಯಕ್ಷರಾಗಿದ್ದ ಸಾಯಿಕುಮಾರ್ ಕೂಡಾ ಈಗ ನಾಪತ್ತೆಯಾಗಿದ್ದಾರೆ. ಅಂದ ಹಾಗೆ, ೯೬ರಲ್ಲಿ ಕನ್ನಡದಲ್ಲಿ ಮೂಲೆ ಗುಂಪಾದ ಶ್ರುತಿ ತಮಿಳಿನ 'ಕಲ್ಕಿ' ಚಿತ್ರಕ್ಕೆ ಪ್ರಶಸ್ತಿ ಪಡೆದರು. ಮಲೆಯಾಳಂನಲ್ಲಿ ಮುಮ್ಮುಟ್ಟಿಗೆ ನಾಯಕಿಯಾದರು.

ಮನೋಹರ್




೯೭ರಲ್ಲಿ ೧೬ ಚಿತ್ರಗಳಿಗೆ ಸಂಗೀತ ನೀಡಿ ಹೊಸ ದಾಖಲೆಯನ್ನೇ ನಿರ್ಮಿಸಿರುವ ವಿ. ಮನೋಹರ್‌ರ ಬ್ಯಾಂಕ್ ಬ್ಯಾಲೆನ್ಸ್ ಇನ್ನೂ ಕುಂಟುತ್ತಾ ಸಾಗಿದೆ. ಇದಕ್ಕೆ ಕಾರಣ ನಿರ್ಮಾಪಕರಲ್ಲ, ಮನೋಹರ್ ಎಂಥ ಸಂಭಾವಿತ ಅಂದರೆ ಹಣ ಸಂಭಾವನೆ ಕೇಳೋದಕ್ಕೆ ಮುಜುಗರ ಪಟ್ಟುಕೊಳ್ಳೋರು. ಇಂಥವರು ಈ ರಂಗಕ್ಕೆ ಅನ್‌ಫಿಟ್ ಎಂದು ನಿರ್ಮಾಪಕರೊಬ್ಬರು ಮೊನ್ನೆ ತಮಾಷೆಯಾಗಿ ಹೇಳುತ್ತಿದ್ದರು. ಆ ನಿರ್ಮಾಪಕರ ಚಿತ್ರ ಬಿಡುಗಡೆಯಾಗಿ ತಿಂಗಳೇ ಕಳೆದರೂ ಬಾಕಿ ಮೊತ್ತಕ್ಕಾಗಿ ಮನೋಹರ್ ಒಂದು ಫೋನ್ ಕೂಡಾ ಮಾಡಿರಲಿಲ್ಲವಂತೆ. ಕೊನೆಗೆ ಇವರೇ ಬೇಜಾರಾಗಿ ಮನೋಹರ್ ಮನೆಗೆ ಹೋಗಿ ೨೫ ಸಾವಿರ ಕೊಟ್ಟು ಬಂದರಂತೆ. ಇಷ್ಟೊಂದು ಹಣ ಒಟ್ಟಿಗೇ ನೋಡಿದ್ದು ಇದೇ ಮೊದಲು ಎಂದು ಆ ಮನುಷ್ಯ ಉದ್ಗಾರವೆತ್ತಿದ್ದನ್ನು ನಿರ್ಮಾಪಕರು ನೆನೆಸಿಕೊಳ್ಳುತ್ತಾರೆ. ಅಡ್ವಾನ್ಸ್ ಕೊಟ್ಟು ನಂತರ ಮನೋಹರ್ ಮನೆ ಕಡೆ ತಲೆ ಹಾಕದ ನಿರ್ಮಾಪಕರು ಕ್ಯಾಸೆಟ್ ಹಕ್ಕಿನ ಮಾರಾಟದಿಂದಲೇ ಲಕ್ಷಗಟ್ಟಲೆ ದುಡೀತಾರೆ, ಮನೋಹರ್ ಸಂಗೀತದ ಶಕ್ತಿಯಿಂದಾಗಿಯೇ ಕೆಲವು ಚಿತ್ರಗಳು ಜಯಭೇರಿ ಬಾರಿಸಿದ್ದೂ ಉಂಟು. ಆದರೂ ಸಂಭಾವನೆ ಎನ್ನೋದು ಬರೀ ಭಾವನೆಯಾಗಿ ಉಳಿದಿದೆ ಮನೋಹರ್ ಪಾಲಿಗೆ. ಇಷ್ಟೊಂದು ಸಜ್ಜನಿಕೆ ಆರೋಗ್ಯಕ್ಕೆ ಒಳ್ಳೇದಲ್ಲ ಎನ್ನೋದನ್ನು ಮನೋಹರ್‌ಗೆ ಹೇಳುವವರಾರು?

ಪ್ರಕಾಶ್ ರೈ



ನಾಗಮಂಡಲದ ನಾಗಪ್ಪ ಪ್ರಕಾಶ್ ರೈ ಮನೆಗೆ ರಾತ್ರೋರಾತ್ರಿ ಬರುವ ಫೋನ್ ಕಾಲ್‌ಗಳ ಸಂಖ್ಯೆ ಜಾಸ್ತಿಯಾಗುತ್ತಿದೆಯಂತೆ. ನಮ್ಮ ಚಿತ್ರದಲ್ಲಿ ನಟಿಸದಿದ್ದಲ್ಲಿ ಕಾಲ್ ಮುರೀತೇವೆ ಎನ್ನೋ ಕಾಲ್‌ಗಳು. ರೈ ಅಂಥ ಬಡಪೆಟ್ಟಿಗೆ ಬಗ್ಗುವ ಆಸಾಮಿಯಲ್ಲ. ಆದರೆ ಫೋನ್ ಪ್ರೇಮಿಗಳು ಬೇರೆಯೇ ರೀತಿಯಲ್ಲಿ ತಮ್ಮ ಚಾರಿತ್ರ್ಯದಹನ ಮಾಡಬಹುದು ಎಂಬ ಶಂಕೆ ರೈಯದ್ದು. ಉದಾಹರಣೆಗೆ ಪತ್ರಿಕೆಗಳಲ್ಲಿ ಬ್ಯಾಡ್ ಪಬ್ಲಿಸಿಟಿ ಕೊಡೋದು, ಸುಮ್ಮಸುಮ್ಮನೇ ಗಾಸಿಪ್‌ಗಳನ್ನು ಹರಡೋದು. ಇದಕ್ಕೆ ಪರಿಹಾರವೇನು? ಪತ್ರಿಕೆಯವರನ್ನು ಕರೆದು ನಿಜ ವಿಚಾರವನ್ನು ಹೇಳಿ ಬಿಡೋದು. ಮೊನ್ನೆ ರೈ ಮಾಡಿದ್ದು ಇದನ್ನೇ. ಉಚಿತ ಸಲಹೆ ನೀಡುವುದಕ್ಕೆ ಹೆಸರಾದ ಪತ್ರಕರ್ತರು ಇಂಥ ಸಂದರ್ಭವನ್ನು ಚೆನ್ನಾಗಿಯೇ ಬಳಸಿಕೊಂಡರು. ಎಲ್ಲವನ್ನು ನಿರ್ಲಕ್ಷಿಸಿ ಏನೂ ಆಗೋಲ್ಲ ಎಂದು ಹುರಿದುಂಬಿಸಿದರು. ರೈ ಮೀಸೆ ಮರೆಯಲ್ಲಿ ನಕ್ಕರು.


ಅಪರಾಧ ತಡೆ ಮಾಸ
ಏನೂಇಲ್ಲ.. ಸಾಹೇಬ್ರು 'ಅಪರಾಧ ತಡೆ ಮಾಸ'ದ ಮುಕ್ತಾಯ ಸಮಾರಂಭಕ್ಕೆ ಭಾಷಣ ಮಾಡಲು ಹೋಗಿದ್ರಂತೆ ಪಾಪ!!
!!
ಮಾದಣ್ಣ ಸಬ್ ಇನ್ಸ್‌ಪೆಕ್ಟರ್
ಅಟ್ ಲೀಸ್ಟ್.. ಈ ತಿಂಗಳಾದ್ರೂ ಏನೂ 'ತಂಟೆ' ಮಾಡ್ದಂಗೆ ಇರಬೇಕು.. ಇದು ಡಿಪಾರ್ಟ್‌ಮೆಂಟ್ ಪ್ರೆಸ್ಟೀಜ್ ಪ್ರಶ್ನೆ!!
PARK
ನಿಂಗೇ ಹೇಳ್ತಿರೋದು.. ಇದು 'ಅಪರಾಧ ತಡೆ ಮಾಸ'. ದಯಮಾಡಿ ಜೇಬಿಗೆ ಕೈ ಹಾಕಬೇಡ. ಈ ತಿಂಗಳು ಮುಗಿಯೋವರೆಗೂ
!!?

BISILA BADUKU Kannada Monthly No.MAG (2) PRB.DECL / 310 / 97-98 FEBRUARY 1998 Regd. BGW/394

